Reg. No. M. 1099.
'KODAGU' MERCARA, (Coorg).

ಕೊಡಗು

ಸಂಪಾದಕರು–ಪಿ. ಬಿ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. ೨–೦–೦.

ಸಂಪುಟ ೩೯ | ಕಾರೇಳು ೪–೮–೧೯೩೦ನೇ ಶುಕ್ರವಾರ | ಸಂಖ್ಯೆ ೯

ಶ್ರೀಮದ್ಭಗವದ್ಗೀತಾ.

॥ ಮಾನವನ ಉದ್ಧಾರ ॥

[ಶ್ರೀ ಕಾವೇರಿ ಆಶ್ರಮ ಇವರಿಂದ]

'ಉದ್ಧರೇದಾತ್ಮನಾತ್ಮಾನಂ ನಾತ್ಮಾನ ಮವಸಾದಯೇತ್'

ಮನುಷ್ಯನು ತನ್ನಿಂದಲೇ ತನ್ನನ್ನು ಉದ್ಧಾರವಾಡಿಕೊಳ್ಳಬೇಕ. ತನ್ನನ್ನು ಹಾಳುಮಾಡಿಕೊಳ್ಳಬಾರದು. ಇದು ಭಗವಂತನ ಉಪದೇಶ. ಮನುಷ್ಯನು ಉದ್ಧಾರವಾಗುವುದಕ್ಕೂ ಪಾಳಾಗುವುದಕ್ಕೂ ಅವನೇ ಕಾರಣ. ಯಾವಾಗ ಮನುಷ್ಯನು ಶರೀರ ಮತ್ತು ಆತ್ಮ ಇವುಗಳ ಧರ್ಮಗಳು ಬೇರೆ ಬೇರೆ ಎಂದು ಅರಿತಿಹೋ; ಈ ಶರೀರ ಧರ್ಮಕ್ಕೆ ಮೋಹ ಹೋಗಿ ಆದರಲ್ಲಿ ಬಿದ್ದು ಕಾಮಕ್ರೋಧಾದಿಗಳಿಗೆ ಆಹುತಿಯಾಗಿರುವೆನೆಂದೂ ಜೀವಿತನೋ ಆಗ ಇದರಿಂದ ಮುಕ್ತನಾಗುವ ಉಪಾಯವನ್ನು ಹುಡುಕಬೇಕು. ಯಾವುದು ಸತ್ಯ, ಯಾವುದು ಅಸತ್ಯ ಎನ್ನುವುದನ್ನು ವಿಚಾರ ಮಾಡಬೇಕು.

ಸತ್ಯ ಮಾರ್ಗದಲ್ಲಿ ನಡೆಯುವುದರಿಂದ ಮುಕ್ತರಾಗುತ್ತೇವು. ಸತ್ಯ ಮಾರ್ಗದಲ್ಲಿ ನಡೆಯುವುದು ಸಾಧ್ಯ; ಅದೇ ನಮ್ಮ ಸ್ವಭಾವ.

ನಿಜವಾಗಿಯೂ ಮನುಷ್ಯನು ಸತ್ಯ ವ್ಯವಹಾರದಲ್ಲಿ ನಡೆಯುವವನೇ; ಆದರೆ ಅವನಿಗೆ ಹಿಕ್ಕುವ ವಿದ್ಯೆ, ಸಹವಾಸದಲ್ಲಿರುವ ಜನ, ಮತ್ತು ಅವನಿರುವ ಸಮಾಜ ಇವುಗಳಿಂದ ಅವನ ನಿಜವಾದ ಸ್ವಭಾವ ಮರೆತು ಹೋಗಿ ಸತ್ಯ ಮತ್ತು ಅಸತ್ಯಗಳ ವ್ಯತ್ಯಾಸ ಗೊತ್ತಾಗುವುದಿಲ್ಲ.

ಹಿಂಸೆ ಮತ್ತು ಅಹಿಂಸೆಗಳ ವಿಷಯವನ್ನು ಸ್ವಲ್ಪ ವಿವರವಾಗಿ ನೋಡೋಣ. ಇಂದು ನಮ್ಮ ಸಮಾಜದಲ್ಲಿ, (ಹಿಂದೂದೇಶ ಒಂದಲ್ಲೇ ಅಲ್ಲ, ಇಡೀ ಪ್ರಪಂಚದಲ್ಲಿಯೇ) ಹಿಂಸಾಕೃತ್ಯಗಳು ಪ್ರತಿ ಇಲ್ಲದೆ ನಡೆಯುತ್ತಿದೆ. ಹಿಂಸೆಯೇ ಅಧರ್ಮ ಅಹಿಂಸೆಯೇ ಧರ್ಮ ಎನ್ನುವುದನ್ನು ನಾವೆಲ್ಲರೂ ಒಪ್ಪುತ್ತೇವೆ. ಆದರೂ ಮಹಾತ್ಮರು ಅಹಿಂಸಾ ಧರ್ಮವನ್ನು ಸಾರುವಾಗ ನಾನೇ ಅವರನ್ನು ಹಾಸ್ಯಮಾಡುತ್ತೇನೆ. 'ಇದೆಂದಾದರೂ ಸಾಧ್ಯವೇ, ಈ ಪ್ರಪಂಚದಲ್ಲಿ ಇವರು ಹೇಳಿದಂತೆ ನಡೆದರೆ ಬಾಳಿಯುವುದ ಂಟೇ, ಇದೆಲ್ಲಾ ಒಂದು ಅರ್ಥವಾದ' ಎನ್ನುತ್ತೇನೆ. ಮಹಾತ್ಮರ ಹೆಸರಿನಲ್ಲಿ ಅವರು ಉದಿದೇಶ ಮಾಡಿದ ಧರ್ಮದ ಪ್ರಕಾರವೇ ರಾಜ್ಯವನ್ನು ನಡೆಸುತ್ತೇವೆಂದು ಹೇಳುತ್ತೇವೆ. ರಾಷ್ಟ್ರಪಿತ ನೆಂದು ಅವರನ್ನು ಕರೆದು, ಅವರ ಆಸೆಯಾಯಗಳೆಂದು ಎಲ್ಲಕ್ಕೂ ಅವರ ಹೆಸರಿನ ಮುದ್ರೆ ಹಾಕುತ್ತೇವೆ. ಅವರು ಹೇಳಿದಂತೆ ಮೂರ್ತ ಅಹಿಂಸಾ ಮಾರ್ಗದಲ್ಲಿ ನಡೆಯುವದಿಲ್ಲ. ಹಾಗೆ ಮಾಡಲು ಕಷ್ಟವಾದ್ದರಿಂದ ಸಾಧ್ಯವಿಲ್ಲವೆನ್ನುತ್ತೇವೆ ನನ್ನ ರಾಷ್ಟ್ರದ ಶತ್ರು ಒಂದು ಸಣ್ಣ ಅಂಶಗಳನ್ನೂ ಹಿಂಸೆಯ ಆಧಾರದಲ್ಲಿಯೇ ಕಟ್ಟಿಬಿದ್ದ್ದೇವೆ. ಅದೇ ಸರಿ ಎಂದು ಹೇಳುತ್ತೇವೆ

ನಾವು ಸ್ವತಂತ್ರರಾಗಿರಬೇಕೆಂದೂ ಆ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳಬೇಕಾದರೆ, ಆದರ ರಕ್ಷಣೆಯೊಗಬೇಕಾದರೆ ತಕ್ಕಷ್ಟು ಸೈನ್ಯಬಲ ಬೇಕೆಂದೂ ಸೈನ್ಯವನ್ನು ಕಟ್ಟುತ್ತೇವೆ. ದೇಶದ ಅರ್ಥ ಸಂಪತ್ತನ್ನು ಈ ಸೈನ್ಯ ಕಟ್ಟುವುದರಲ್ಲಿಯೇ ವ್ಯಯಮಾಡುತ್ತೇವೆ. ಅತ್ಯಂತ ಭಯಂಕರ ಹಿಂಸಾತ್ಮಕವಾದ ಆಯುಧಗಳನ್ನು ತಯಾರಿಸುತ್ತೇವೆ. ಇಷ್ಟು ಶಕ್ತಿ ಇರುವಾಗ ಸುಮ್ಮನಿರಲಾಗುತ್ತದೆಯೇ! ಯುದ್ಧಕ್ಕೆ ಯಾರು ಬಂದಾರೆಂದು ಕಾದಿರುತ್ತೇವ. ಯುದ್ಧ ಸಂಭವವಾದರೆ ದಯೆ ಇಲ್ಲದೆ, ಯಾವನೋ ತಿಳಿಯದೇ ಇರುವ ಎದುರಾಳಿಯನ್ನು ತನಗೇನೂ ಅಪರಾಧ ಮಾಡದಿದ್ದರೂ, ಕೊಂದು ಹಾಕುತ್ತೇವೆ.

ದೇಶದಲ್ಲಿ ಜನರು ಪುಂಡುತನ ಮಾಡಿಯಾರೆಂದು ಪೊಲೀಸು ಪಡೆಯನ್ನು ಇಡುತ್ತೇವೆ. ನ್ಯಾಯಸ್ಥಾನಗಳನ್ನೂ ನಿರ್ಮಿಸುತ್ತೇವೆ. ತಪ್ಪು ಮಾಡಿರುವನೆಂದು ಪೊಲೀಸಿನವನು ಒಬ್ಬನನ್ನು ಹಿಡಿದುತಂದರೆ ಅವನನ್ನು ತಪ್ಪಿಸ್ಥನನ್ನಾಗಿ ಮಾಡಿ ಅವನಿಗೆ ಮರಣ ದಂಡನೆಯನ್ನೂ ಸಹ ವಿಧಿಸುತ್ತೇವೆ. ಇದು ನ್ಯಾಯಸ್ಥಾಪನೆಗಾಗಿ ಮಾಡುವ ಹಿಂಸೆ. ಅವನ ಕುತ್ತಿಗೆಗೆ ಹಗ್ಗ ಹಾಕಿ ಕೊಲ್ಲಲು ಇನ್ನೊಬ್ಬನನ್ನು ತಯ್ಯಾರುಮಾಡಿ ಇಟ್ಟಿರುತ್ತೇವೆ. ಅವನಪನ ಕೆಲಸವನ್ನು ಅವನು ತಪ್ಪದೆ ಮಾಡುತ್ತಾನೆ ಇದೆಲ್ಲಾ ಧರ್ಮದ ಹೆಸರಿನಲ್ಲಿಯೇ ಅನುಕ್ರಮವಾಗಿ ನಡೆಯುತ್ತದೆ. ಇದರಲ್ಲಿ ನಮಗೆ ಅಧರ್ಮವೇನೂ ತಲೆಗೇ ಬರುವುದಿಲ್ಲ. ಆದರೆ ದೇವರ ಸೃಷ್ಟಿಯಲ್ಲಿದ್ದ ಒಬ್ಬ ಮನುಷ್ಯನ ಕೊಲೆ ಆಗಿಯೇ ಹೋಗಿರುತ್ತದೆ ಹಿಂಸೆಯು ಪೂರ್ಣರೂಪದಲ್ಲಿ ನಡೆದೇ ಹೋಯಿತು. ನಾವು ಇದನ್ನು ಹಿಂಸೆಯೆಂದು ಗಣನೆಗೇ ತೆಗೆದುಕೊಳ್ಳದೆ; ಹೀಗಾಗದಿದ್ದರೆ ಪ್ರಪಂಚದಲ್ಲಿ ಧರ್ಮ ಉಳಿಯುವುದಿಲ್ಲವೆಂದು ಹೇಳುತ್ತೇವೆ.

ಯುದ್ಧ, ಮರಣ ದಂಡನೆ, ಜೀವಾವಧಿ ಕಾರಾಗೃಹವಾಸ, ಛಡಿ ಏಟು ಮೊದಲಾದುನೆಲ್ಲಾ ಹಿಂಸಾತ್ಮಕಯಾದರೂ ಅವನ್ನು ನನ್ನ ಧರ್ಮ ರಕ್ಷಣೆಯಲ್ಲಿ ಪೂರ್ಣವಾಗಿ ಉಳಿಸಿಕೊಂಡಿದ್ದೇವೆ ಮತ್ತು ಅದಿಲ್ಲದಿದ್ದರೆ ಹೇಗೆ ಸಾಧ್ಯ ಎಂದು ಹೇಳುತ್ತೇವೆ ಇದು ವಿಚಿತ್ರವಾಗಿಯೂ ಧರ್ಮವೇ, ಇದು ಮನುಷ್ಯ ವರ್ಗಕ್ಕೆ ಸ್ವಭಾವಿಕವಾದುದೇ ಎನ್ನುವುದನ್ನು ನೋಡಿದರೆ ಅದು ಖಂಡಿತ ಇಲ್ಲವೆಂದು ಸ್ಪಷ್ಟವಾಗುತ್ತದೆ. ಕಳೆದ ಯುದ್ಧವನ್ನೇ ತೆಗೆದುಕೊಂಡರೆ, ಯುದ್ಧದಲ್ಲಿ ವೀರಾವೇಶದಿಂದ ಶತ್ರುದಾಡಿದ ಒಬ್ಬ ಜರ್ಮನಿ ಸಿಪಾಯಿಯ ಎದುರಿಗೆ, ಜರ್ಮನರ ಶತ್ರುಗಳಾದ ಇಂಗ್ಲಿಷ್ ಸೈನ್ಯದ ಮತ್ತೊಬ್ಬ ಸಿಪಾಯಿಯನ್ನು ಕರೆದು ತಂದು ನಿಲ್ಲಿಸಿ. ಆಗ ಆ ಜರ್ಮನ್ ಸಿಪಾಯಿಯು ಇಂಗ್ಲಿಷ್ ಸಿಪಾಯಿಯನ್ನು ಕೊಲ್ಲುತ್ತಾನೆಯೇ; ಇಬ್ಬರೂ ಮನುಷ್ಯರೇ, ಇಬ್ಬರೂ ಒಬ್ಬ ಪರಮಾತ್ಮನ ಮಕ್ಕಳು. ಅವರಿಬ್ಬರನ್ನೇ ಬಿಡಿ, ಒಬ್ಬರಿಗೊಬ್ಬರು ಸ್ನೇಹಿತರು, ಬಿಡಿಸಿಗಳು ಇದೇ ಒಬ್ಬರು ಸಿಪಾಯಿಗಳು ಯುದ್ಧದಲ್ಲಿ ಒಬ್ಬರಿಗೆ ಎಮರು ಇನ್ನೊಬ್ಬರಿದ್ದರೆ ಕಡಿದು ಹಾಕಿಕೊಳ್ಳುತ್ತಿದ್ದರು. ತನ್ನ ಶತ್ರುವೆಂದು ಒಬ್ಬನನ್ನು ಇನ್ನೊಬ್ಬನು ತಿಳಿಯುತ್ತಿದ್ದನು.

ಸೈನ್ಯವನ್ನು ಕಟ್ಟಿ ಅಹಿಂಸಕನಾದ ಮನುಷ್ಯನನ್ನು ಹಿಂಸಾ ಮಾರ್ಗದಲ್ಲಿ ಪ್ರವರ್ತಿಸುಗುವಂತೆ ಮಾಡುತ್ತೇವೆ. ತನ್ನ ಸ್ವಭಾವವಾದ ಅಹಿಂಸೆಯನ್ನು ಬಿಟ್ಟು ದೊಡ್ಡ ವೀರನೆನ್ನಿಸಿಕೊಳ್ಳುವೆನೆಂದು ಏದುರಿಗೆ ಬರುವ ಮತ್ತೊಬ್ಬ ಅಹಿಂಸಕ ಮನುಷ್ಯನನ್ನು ದಯೆಯಿಲ್ಲದೆ ಕೊಲ್ಲಿಸುತ್ತೇವೆ. ಯುದ್ಧದಲ್ಲಿ ಕನ್ನ ನಿಜ ಸ್ವಭಾವನನ್ನೇ ಸುರಿಯುತ್ತೇವೆ. ಅದೇ ತನ್ನ ಕರ್ತವ್ಯವೆಂದು ನಂಬುತ್ತಾನೆ. ಇವನು ಇರುವ ಸೈನ್ಯಕ್ಕೆ ದೇವರ ಆಶೀರ್ವಾದವನ್ನು ಸಹ ನಾವು ಬೇಡುತ್ತೇವೆ. "ದೇಶದ ಎಲ್ಲಾ ದೇವಸ್ಥಾನಗಳಲ್ಲಿಯೂ, ಚರ್ಚುಗಳಲ್ಲಿಯೂ, ಮಸೀದಿಗಳಲ್ಲಿಯೂ ನಮ್ಮ ನಮ್ಮ ಸೈನ್ಯಗಳು ಎದುರು ಸೈನ್ಯದ ವರನ್ನು ನಿರ್ದಯೆಯಿಂದ ಕೊಂದು ಜಯವನ್ನು ಹೊಂದುವಂತೆ ಕರುಣಿಸು" ಎಂದು ಪರಮಾತ್ಮನನ್ನು ಪ್ರಾರ್ಥಿಸುತ್ತೇವೆ. ಧರ್ಮದ ಹೆಸರಿನಲ್ಲಿ, ದೇವರ ಹೆಸರಿನಲ್ಲಿ, ನೀತಿಯ ಹೆಸರಿನಲ್ಲಿ ಜವರನ್ನು ಕೊಲ್ಲುತ್ತೇವೆ.

ನ್ಯಾಯಸ್ಥಾನಗಳಿಗಾಗಿ ನ್ಯಾಯವನ್ನು ಬರೆಯುವವನೊಬ್ಬ, ಅದನ್ನು ಜಾರಿಗೆ ಮಾಡುವವನೊಬ್ಬ, ಅನ್ಯಾಯಕ್ಕನುಸಾರವಾಗಿ ಇವನು ತಪ್ಪಿತಸ್ಥನೆಂದು ತೀರ್ಪು ಕೊಡುವವನು ಮತ್ತೊಬ್ಬ. ಅವನನ್ನು ತೆಗೆದುಕೊಂಡು ಹೋಗಿ ಕುತ್ತಿಗೆಗೆ ಹಗ್ಗ ಹಾಕಿ ಸಾಯಿಸುವ ಮತ್ತೊಬ್ಬ. ಹೀಗೆ ಅಧರ್ಮವನ್ನು ಎಲ್ಲರೂ ಸ್ವಲ್ಪ ಸ್ವಲ್ಪ ಹೆಂಚಿಕೊಂಡು ಎಲ್ಲರೂ ಧರ್ಮ ಸ್ಥಾಪನೆ ಮಾಡುತ್ತಾರೆ. ಯಾವನು ನ್ಯಾಯಶಾಸ್ತ್ರವನ್ನು ಬರೆಯುತ್ತಾನೆ ಯೋ ಅವನಿಗೇ ಅದನ್ನು ಜಾರಿಯಿಸುವ ತಪ್ಪಿತಸ್ಥನೆಂದು ತೀರ್ಪು ಕೊಡುವ ಮತ್ತು ಸಾಯಿಸುವ ಕೆಲಸವನ್ನು ಮೊದಲಿನಿಂದ ಕಡೆಯವರೆಗೂ ಒಬ್ಬನಿಂದಲೇ ನಡೆಸಲು ಸಾಧ್ಯವಲ್ಲ. ಯಾವನು "ಕ್ರಿಮಿನಲ್ ಕೋಡ್" ಬರೆದನೋ ಅವನಿಗೆ ಇನ್ನೂ ಹೆಚ್ಚು ಅಧರ್ಮ ಮಾಡಲು ಸಾಧ್ಯವಿಲ್ಲ. ಅವನೇ ಒಬ್ಬ ಕೊಲೆಶಾಕಳನ್ನು ಹಿಡಿದು ತಪ್ಪಿತಸ್ಥನೆನ್ನು ನ್ಯಾಯಸ್ಥಾನದಲ್ಲಿ ತೀರ್ಪು ಕೊಟ್ಟು ತಾನೇ ಎಳೆದುಕೊಂಡು ಹೋಗಿ ಕೊಲ್ಲಲಾರ. ಅದು ಅವನಿಗೆ ಸ್ವಭಾವಿಕವಲ್ಲ. ತಪ್ಪು ತಿಳುವಳಿಕೆಯಿಂದ ಧರ್ಮವೆಂದು ಸ್ವಲ್ಪ ಅಧರ್ಮ ಮಾಡಬಲ್ಲನೇ ವಿನಹ ಅವನೇ ಕಟುಕನಾಗಲಾರ. ಧರ್ಮವನ್ನು ಬರೆಯುವವನನ್ನು, ಅದರ ಅಧಿಕಾರಿಯನ್ನು, ಒಟ್ಟ ನ್ಯಾಯಾಧೀಶನನ್ನು, ಪೋಲೀಸಿನವನನ್ನು, ಕಟುಕನನ್ನು ತಾನೇ ಆಗಿ ಮಾಡಿ ಅವರಿಗೆ ಕೊಡುವ ಕೆಲಸದಲ್ಲಿ ಅವರಿಗೆ ಆಸಕ್ತಿ ಹುಟ್ಟಿಲು ಅವರಿಗೆ ನಾನೇ ಪುರಸ್ಕಾರ ಮಾಡುತ್ತೇವೆ. ಅವರ ಅಧರ್ಮ ಪ್ರವೃತ್ತಿಯೇ ಧರ್ಮವೆಂದು ಅವನು ನಂಬುವಂತೆ ಮಾಡುತ್ತೇವೆ. ಅವರಿಂದ ಕೊಲೆ ಮಾಡಿಸುತ್ತೇವೆ. ಎಲ್ಲವೂ ಧರ್ಮವೆಂದೇ ನಂಬಿಸುತ್ತೇವೆ ಮತ್ತು ನಾವೂ ನಂಬುತ್ತೇವೆ.

ಈ ಎಲ್ಲಾ ಕೃತ್ಯಗಳ ಮೂಲವನ್ನು ಪರೀಕ್ಷೆ ಮಾಡಿದರೆ ನಮ್ಮ ಸಮಾಜವೇ ಹಿಂಸೆಯ ಪಾಯದ ಮೇಲೆ ನಿಂತಿದೆ ಎಂದು ಹೇಳಬಹುದು. ಈ ಸಮಾಜದಲ್ಲಿ ನಾವು ಬೆಳೆಯುತ್ತಿರುವಾಗ ನಿಜವಾಗಿಯೂ ನಮಗೆ "ಅಹಿಂಸೆ"ಯು ಆಚರಣೆಗೆ ಅಸಾಧ್ಯವೆಂದೇ ತೋರುತ್ತದೆ.

ಆದರೆ ಅಹಿಂಸೆಯ ಅರ್ಥವು ನಮಗೆ ಸರಿಯಾಗಿ ತಿಳಿದರೆ, ಈ ಸೈನ್ಯ, ಯುದ್ಧ, ಪೋಲೀಸು ಠಾಣೆಗಳು, ನ್ಯಾಯಸ್ಥಾನ, ಸೆರೆಮನೆ, ಗಲ್ಲಿಗೇರಿಸುವ ಕೆಲಸ ಎಲ್ಲವೂ ಅಧರ್ಮವೆಂದೇ ಮನಸ್ಸಿಗಾಗುತ್ತದೆ. ಮನುಷ್ಯ ಸಮಾಜಕ್ಕೆ ಇವೆಲ್ಲವೂ ಅವಮಾನಕರವೆಂದು ಅರಿವಾಗುತ್ತದೆ. ಅಸತ್ಯವನ್ನು ನಡೆಯದಿರುವುದು, ಪರರ ವಸ್ತುವನ್ನು ಅಪೇಕ್ಷಿಸದಿರುವುದು, ಯಾರ ಮೇಲೂ, ಯಾವ ಕಾರಣದಿಂದಲೂ ಕೋಪಿಸಿಕೊಳ್ಳದಿರುವುದು, ನಮ್ಮ ಶತ್ರುಗಳನ್ನು ಪ್ರೀತಿಸುವುದು, ನಮ್ಮವರು ಬೇರೆಯವರು ಎಂಬ ಭೇದಭಾವನೆ ಇಲ್ಲದಿರುವುದು, ದೇಶಭಕ್ತಿಯು ಹೆಸರಿನಲ್ಲಿ ಬೇರೆಯವರನ್ನು ತನ್ನ ಶತ್ರುವೆಂದು ಎಣಿಸದೆ ಮನುಷ್ಯ ವರ್ಗವೆಲ್ಲಾ ಒಂದೇ ಎಂಬ ಭಾವನೆ ಬರುವುದು, ಸ್ತ್ರೀ ವ್ಯಾಮೋಹವಿಲ್ಲದಿರುವುದು, ಇವೆಲ್ಲಾ ಧರ್ಮಗಳು ಬೇರೆ ಬೇರೆಯಾದರೂ 'ಅಹಿಂಸೆ'ಗೆ ಸಂಬಂಧಪಟ್ಟವೇ ಆಗಿರುತ್ತವೆ. ಇವುಗಳಲ್ಲಿಯೂ ಸರಿಯಾಗಿ ನಡೆಯದಿದ್ದರೆ ಹಿಂಸೆಗೆ ಕಾರಣಗಳಾಗುತ್ತವೆ.

ಈ ಧರ್ಮಗಳೆಲ್ಲಾ ಆಚರಣೆಗೆ ಸುಲಭವಾದವು. ನಾವೂ ನಮ್ಮ ಮುಂದಿನ ಜನಾಂಗಗಳೂ ಈ ಧರ್ಮವನ್ನು ಅಭ್ಯಾಸ ಮಾಡಿದ್ದೇ ಆದರೆ ಆಗಲೇ ಪ್ರಪಂಚದಲ್ಲಿ "ಶಾಂತಿ" ಸ್ಥಾಪನೆಯಾದೀತು. ಮಹಾತ್ಮರು ಅಪೇಕ್ಷೆ ಪಟ್ಟ "ರಾಮರಾಜ್ಯ"ವು ನಮಗೆ ಕಾಣಿಸೀತು. ಆ ರಾಮರಾಜ್ಯದ ಸತ್ಪ್ರಜೆಗಳಾಗಿ ನಾವು ಸುಖ ಶಾಂತಿಯಿಂದ ಬಾಳಿಯೇವು.

ಚುನಾವಣಾ ಕ್ಷೇತ್ರಗಳ ವಿಭಜನೆ.

[ಲೇ:—ಶ್ರೀ ಟಿ. ಎಸ್. ರಾಜಗೋಪಾಲಯ್ಯಂಗಾರ್, ಮೈಸೂರು]

ಸ್ವತಂತ್ರ ಭಾರತವು ತನ್ನದೇ ಆಗ ರಾಜ್ಯಾಂಗವನ್ನು ರಚಿಸಿಕೊಂಡಿದೆ. ಪ್ರತಿಯೊಬ್ಬ ಸ್ತ್ರೀ ಪುರುಷ ವಯಸ್ಕನಾದ ಭಾರತೀಯನಿಗೂ ಓಟಿನ ಅಧಿಕಾರ ದೊರೆತಿದೆ. ಹೊಸ ರಾಜ್ಯಾಂಗದ ರೀತ್ಯಾ ಭಾರತದ ಆಡಳಿತ-ಕೇಂದ್ರ ಮತ್ತು ಪ್ರಾಂತಗಳಲ್ಲಿ-ಚುನಾವಣೆಗಳು ಆತಿ ಶೀಘ್ರದಲ್ಲೇ ನಡೆಯಲಿವೆ. ರಾಜ್ಯಾಂಗದ ಒಪ್ಪಂದ ವಿಧಿಯ ಪ್ರಕಾರ ವಿಶದಾರರ ಪಟ್ಟಿ, ಚುನಾವಣಾ ಕ್ಷೇತ್ರಗಳ ವಿಂಗಡಣೆ, ಇವೇ ಮುಂತಾದುವನ್ನು ನಿರ್ಧರಿಸುವ ಅಧಿಕಾರವು ಪಾರ್ಲಿಮೆಂಟಿಗೆ ಕೊಡಲ್ಪಟ್ಟಿದೆ.

ಕೇಂದ್ರ ಶಾಸನ ಸಭೆ ಆಗಾಗಲೇ "ರಿಪ್ರೆಸೆಂಟೇಷನ್ ಆಫ್ ಪೀಪಲ್ಸ್ ಆಕ್ಟ್" ಜಾರಿಗೆ ತಂದಿದೆ. ರಾಜ್ಯಾಂಗದ ಒಪ್ಪಂದೆಯ ವಿಧಿಯ ಪ್ರಕಾರ ಚುನಾವಣಾ ಕಮಿಷನರ್ ಸಹ ನೇಮಿಸಲ್ಪಟ್ಟಿದೆ.

ಪ್ರಜಾಭಿಪ್ರಾಯವನ್ನು ತಿಳಿದುಕೊಂಡು ಚುನಾವಣಾ ಕ್ಷೇತ್ರಗಳ ಮತ್ತು ಮತ ಪದ್ಧತಿಯ ನಿರ್ಧಾರ ಮಾಡಬೇಕಾಗಿರುವುದರಿಂದ, ಮುಖ್ಯ ಚುನಾವಣಾ ಕಮಿಷನರ್ ಆನ ಶ್ರೀ ಸೇನ್‌ರವರು ಭಾರತದಾದ್ಯಂತ ಪ್ರಮುಖ ಕೈಗೊಂಡು, ವಿಭಿನ್ನ ಸರಕಾರಗಳ, ವಿವಿಧ ಪ್ರಾಂತಗಳ, ಚುನಾವಣಾ ಸಮಿತಿಗಳ, ಹಾಗೂ ಪೌರ ಅಭಿಪ್ರಾಯವನ್ನು ಪಡೆಯತಲಿದ್ದಾರೆ. ಅವರು ಮಾಡುವ ಶಿಫಾರಸಿನ ಆಧಾರದ ಮೇಲೆ ರಾಷ್ಟ್ರಪತಿಗಳು ಕೂಲಂಕಷ ಕೈಗೊಂಡು ಚುನಾವಣಾ ಕ್ಷೇತ್ರಗಳನ್ನು ಮತ್ತು ಮತ ಪದ್ಧತಿಯನ್ನೂ ನಿರ್ಧಾರ ಮಾಡಲಿದ್ದಾರೆ.

ಚುನಾವಣಾ ಕ್ಷೇತ್ರ ವಿಂಗಡಣೆ ಮತ್ತು ಪದ್ಧತಿಯ ಮಹತ್ವ

ಪ್ರಜಾಸತ್ತೆಯು ಪಕಿಯಾಗಿ ನಡೆಯುವುದು ಮುಖ್ಯ ಪ್ರಜಾಭಿಪ್ರಾಯವನ್ನು ಸರಿಯಾಗಿ ಪ್ರತಿಬಿಂಬಿಸಿ ಚುನಾಯಿತ ಪ್ರತಿನಿಧಿಗಳು ಶಾಸನ ಸಭೆಗಳಿಗೆ ಬರುವುದು, ಇವು ಚುನಾವಣಾ ಪದ್ಧತಿಯ ಸ್ವರೂಪದ ಮೇಲೆಯೇ ನಿಂತಿವೆ ವಿಷಯ ಇಷ್ಟು ಪ್ರಾಮುಖ್ಯವಾಗಿದ್ದರೂ ಜನ ಅಷ್ಟಾಗಿ ಈ ವಿಷಯದಲ್ಲಿ ಪ್ರಜಾಭಿಪ್ರಾಯ ಹೊರಗೆಡವಿದಂತೆ ಕಾಣುವುದಿಲ್ಲ. ಇದು ವಿಷಾದವೇ ಸರಿ!

ಇಂದು ನಾವು ನೋಡುತ್ತಿರುವುದು ಪ್ರಜೆಗಳಿಂದ ಚುನಾಯಿಸರಾದ ಪ್ರತಿನಿಧಿಗಳಿಂದ ಕೂಡಿದ ಸರಕಾರ ಇಂದಿನ ಸರಕಾರಕ್ಕೆ ಇನ್ನೊಂದು ವೈಶಿಷ್ಟ್ಯವೂ ಇದೆ ಅದು ಕೇವಲ "ಪೋಲಿಸ್ ಸ್ಟೇಟ್" ಆಗಿರದೆ "ವೆಲ್‌ಫೇರ್ ಸ್ಟೇಟ್" ಆಗಿರುತ್ತೆ ಅಷ್ಟು ಜವಾಬ್ದಾರಿಯನ್ನು ಹೊತ್ತ ಸರ್ಕಾರವು ಕೇವಲ ತನ್ನ ಪಕ್ಷದೆಡೆಗೆ ಮಾತ್ರ ಕಿವಿ ಕೊಡದೆ, ಶಾಸನ ಸಭೆಗಳಲ್ಲಿರುವ ಎಲ್ಲ ಪಕ್ಷಗಳ ಅಭಿಪ್ರಾಯಕ್ಕೂ ಸಹನೆಯಿಂದ ಕಿವಿ ಕೊಟ್ಟು, ಅಭಿಪ್ರಾಯ ವಿನಿಮಯ ಮಾಡಿಕೊಂಡು, ನಿರ್ಧಾರಕ್ಕೆ ಬರುವುದೇ ನಿಜವಾದ ಪ್ರಜಾ ಸರಕಾರ ಲಕ್ಷಣ ಈ ರೀತಿ ವ್ಯವಸ್ಥಿತ ಸರಕಾರ ಪಡೆಯ ಬೇಕಾದರೆ ದೇಶದಲ್ಲಿರುವ ವಿವಿಧ ಪಕ್ಷಗಳ ಜನಬಲಕ್ಕೆ ಅನುಸಾರವಾಗಿ ಪ್ರತಿನಿಧಿಗಳು ಚುನಾಯಿತರಾಗುವುದೂ ಅವಶ್ಯಕ

ಭಾರತದ ರಾಷ್ಟ್ರಪತಿಗಳ ಚುನಾವಣೆ, ಕೌನ್ಸಿಲ್ ಆಫ್ ಸ್ಟೇಟ್ ಸದಸ್ಯರ ಚುನಾವಣೆ ಮತ್ತು ಲೆಜಿಸ್ಲೆಟಿವ್ ಕೌನ್ಸಿಲ್ ಇರುವೆಡೆ ಆ ಸದಸ್ಯರ ಚುನಾವಣೆ ಹೇಗೆ ನಡೆಯಬೇಕೆಂಬುದು ರಾಜ್ಯಾಂಗದಲ್ಲಿಯೇ ಅಡಕವಾಗಿದೆ. ಇನ್ನು ಉಳಿದುದು ಕೇಂದ್ರದ "ಹೌಸ್ ಆಫ್ ಪೀಪಲ್" ಸದಸ್ಯರ ಚುನಾವಣೆ ಮತ್ತು ಪ್ರಾಂತಗಳ "ಲೆಜಿಸ್ಲೆಟಿವ್ ಅಸೆಂಬ್ಲಿ" ಸದಸ್ಯರ ಚುನಾವಣೆ

ಎರಡು ವಿಧದಲ್ಲಿ ವಿಂಗಡಣೆ

ಚುನಾವಣಾ ಕ್ಷೇತ್ರಗಳನ್ನು ಒಂದು ಪ್ರತಿನಿಧಿಯನ್ನು ಚುನಾಯಿಸುವ ಕ್ಷೇತ್ರ (ಸಿಂಗಲ್ ಮೆಂಬರ್ ಕಾನ್‌ಸ್ಟಿಟ್ಯೂಯೆನ್ಸಿ) ಆಥವಾ ಬಹು ಮಂದಿಯನ್ನು ಚುನಾಯಿಸುವ ಕ್ಷೇತ್ರ (ಮಲ್ಟಿ ಮೆಂಬರ್ ಕಾನ್‌ಸ್ಟಿಟ್ಯೂಯೆನ್ಸಿ) ಎಂಬುದಾಗಿ ವಿಂಗಡಿಸಬಹುದು. ಒಬ್ಬ ಪ್ರತಿನಿಧಿಯನ್ನು ಚುನಾಯಿಸುವ ಕ್ಷೇತ್ರಗಳು ಇಂಗ್ಲೆಂಡ್ ಮತ್ತು ಅಮೆರಿಕಾ ದೇಶಗಳಲ್ಲಿ ವಾಡಿಕೆಯಲ್ಲಿವೆ. ಬಹು ಮಂದಿಯನ್ನು ಚುನಾಯಿಸುವ ಕ್ಷೇತ್ರಗಳು ಬೆಲ್ಜಿಂಡ್ ಮತ್ತು ಇತರ ದೇಶಗಳಲ್ಲಿ ಪಾಡಿಕೆಯಲ್ಲಿವೆ ಭಾರತದಲ್ಲೂ ಕೂಡ ಒಂದೊಂದೇ ಪ್ರತಿನಿಧಿಯನ್ನು ಚುನಾಯಿಸುವ ಪ್ರತ್ಯೇಕ ಚುನಾವಣಾ ಕ್ಷೇತ್ರಗಳನ್ನು ವಿಂಗಡಿಸಿಕೊಳ್ಳುವುದು ಒಳ್ಳೆಯದೆಂದು ಅನೇಕರು ಹಾಗೂ ಕಾಂಗ್ರೆಸ್ಸಿನವರು ಅಭಿಪ್ರಾಯ ವ್ಯಕ್ತಪಡಿಸುತ್ತಿರುವುದನ್ನು ನಾವು ನೋಡುತಲಿದ್ದೇವೆ ಆದರೆ, ದೇಶದ ಹಿತದೃಷ್ಟಿಯಿಂದ ಅಂತಹ ವಿಂಗಡಣೆ ಒಳ್ಳೆಯದಲ್ಲವೆಂದು ಅಗ್ರಹಪೂರ್ವಕವಾಗಿ ಹೇಳಲಿಚ್ಛಿಸುತ್ತೇನೆ

ಒಬ್ಬೊಬ್ಬ ಚುನಾಯಿತ ಪ್ರತಿನಿಧಿಯನ್ನು ಚುನಾಯಿಸುವ ಕ್ಷೇತ್ರಗಳು ಸಾಧಾರಣವಾಗಿ ಬಹುಮತ ಬಂದವರನ್ನು ಚುನಾಯಿಸುತ್ತವೆ ಉದಾಹರಣೆಗೆ ಒಂದು ಚುನಾವಣಾ ಕ್ಷೇತ್ರದಲ್ಲಿ ಹತ್ತು ಜನ ಮತದಾರರಿದ್ದಾರೆಂದುಕೊಳ್ಳೋಣ, ಮತ್ತು ಈ ಕೆಳಗೆ ಕಂಡಂತೆ ಮತ ಪಡೆಯುವರೆಂದು ಭಾವಿಸೋಣ:—

A—೪ ಓಟುಗಳು
B—೩ ಓಟುಗಳು
C—೩ ಓಟ್ ಗಳು
D—೦ ಓಟು

A ಗೆ ಇತರರಿಗಿಂತ ಜಾಸ್ತಿ ಓಟು ಬಂದುದರಿಂದ, ಅವನೇನೋ ಚುನಾಯಿತನಾಗುತ್ತಾನೆ. ಆದರೆ ೬ ಜನ ಇವನಿಗೆ ವಿರೋಧವಾಗಿ ಓಟು ಮಾಡುತ್ತಾರೆ ಹೀಗಿದ್ದರೂ ಅವನನ್ನೆ ಚುನಾಯಿಸುವುದ. ಎಂತಹ ಪ್ರಜಾಪ್ರಭುತ್ವ?

ಇನ್ನೊಂದು ಉದಾಹರಣೆಯನ್ನು ತೆಗೆದುಕೊಳ್ಳೋಣ. ೩ ಕ್ಷೇತ್ರಗಳಲ್ಲಿ ಹತ್ತು ಹತ್ತು ಓಟುಗಳಿದ್ದಾರೆಂದು ಭಾವಿಸೋಣ ಮತ್ತು ಈ ಕೆಳಗೆ ಕಂಡಂತೆ ಓಟು ಕೊಡುತ್ತಾರೆಂದೂ ಭಾವಿಸೋಣ:—

(i) ಕಾಂಗ್ರೆಸ್ ೯, (ii) ಕಾಂಗ್ರೆಸ್ ೪, (iii) ಕಾಂಗ್ರೆಸ್ ೪ ಒಟ್ಟು ೧೭ ಓಟುಗಳು.

(i) ಸೋಷಿಯಲಿಸ್ಟ್ ೧, (ii) ಸೋಷಿಯಲಿಸ್ಟ್ ೬, (iii) ಸೋಷಿಯಲಿಸ್ಟ್ ೬. ಒಟ್ಟು ೧೩ ಓಟುಗಳು

ಹೀಗೆ ಕಾಂಗ್ರೆಸ್ಸಿನವರಿಗೆ ೧೭ ಓಟು ಬಂದರೂ ಒಂದು ಸ್ಥಾನ ಮಾತ್ರ, ಸೋಷಿಯಲಿಸ್ಟರಿಗೆ ಕೇವಲ ೧೩ ಓಟು ಬಂದರೂ ಎರಡು ಸ್ಥಾನ ಇದೆಂತಹ ವಿಚಿತ್ರ? ಇದೆಂತಹ ನ್ಯಾಯಸಮ್ಮತ ಚುನಾವಣೆ?

ಒಬ್ಬ ಪ್ರತಿನಿಧಿ ಚುನಾವಣಾ ಕ್ಷೇತ್ರಗಳ ದೋಷನಿವಾರಣೆಗೆ ಯತ್ನ

ಇಂಗ್ಲೆಂಡಿನಲ್ಲಿ 'ಒಬ್ಬ ಪ್ರತಿನಿಧಿಯ ಚುನಾವಣಾ ಕ್ಷೇತ್ರವನ್ನು ಮೂಲಭೂತ ಸಂಧಾರಣೆಗಳನ್ನಾಗಿ ತರಲು ೧೯೧೯-೧೦ ರಲ್ಲಿ ಒಂದು ರಾಯಲ್ ಕಮಿಷನ್ನನ್ನು ನಿಯಮಿಸಿದರು ಮತ್ತೆ ೧೯೧೩-೧೭ರಲ್ಲಿ ಒಂದು ಸ್ಪೀಕರ್ಸ್ ಕಾನ್‌ಫರೆನ್ಸ್ ಸಹ ಏರ್ಪಡಿಸಿದರು ಆದರೆ ಕಾರಣಾಂತರದಿಂದ ಅವರು ಮಾಡಿದ ಸಲಹೆಗಳು ಕಾರ್ಯಗತವಾಗಲಿಲ್ಲ

ಒಬ್ಬ ಪ್ರತಿನಿಧಿ ಕ್ಷೇತ್ರದಲ್ಲಿನ ದೋಷಗಳನ್ನು ಕಳ್ಳವಟ್ಟಿಗೆ ನಿವಾರಿಸಲು, "ಎರಡನೇ ಓಟು" (ಸೆಕೆಂಡ್ ಬ್ಯಾಲೆಟ್ ಮತ್ತು "ಬದಲಿ (ಆಲ್ಟರ್‌ನೆಟಿವ್) ಓಟ್" ಎಂಬ ಪದ್ಧತಿಗಳು ಜಾರಿಗೆ ಬಂದಿವೆ. "ಸೆಕೆಂಡ್ ಬ್ಯಾಲೆಟ್" ಪದ್ಧತಿಯ ಫ್ರಾನ್ಸಿನ ಕೆಲವೆಡೆಯಲ್ಲಿಯೂ "ಆಲ್ಟರ್‌ನೆಟಿವ್" ಓಟು ಪದ್ಧತಿಯು ಆಸ್ಟ್ರೇಲಿಯಾದಲ್ಲಿಯೂ ಜಾರಿಯಲ್ಲಿವೆ.

ಮುನ್ಯವಸ್ಥಿತವಾದ ಎಂದೇ ಪಕ್ಷಗಳಿರುವ ಮತ್ತು ಪ್ರಜಾಗತಿಯ ಅನುಭವನನ್ನು ಶತಮಾನಗಳಿಂದ ಪಡೆದಿರುವ ಇಂಗ್ಲೆಂಡ್ ಮತ್ತು ಅಮೇರಿಕಾಗಳಲ್ಲೇ "ಒಬ್ಬ ಪ್ರತಿನಿಧಿಯ ಕ್ಷೇತ್ರ"ಗಳು ನ್ಯಾಯಸಮ್ಮತವಾದ ಫಲಿತಾಂಶವನ್ನು ಕೊಡುವಲ್ಲಿವೆಂದ ಮೇಲೆ, ಪ್ರಜಾಸತ್ತೆಯ ಅನುಭವವಿಲ್ಲದ, ಪಕ್ಷ ಪ್ರಕಿ ಪಕ್ಷಗಳ ಅರಿವಿಲ್ಲದ ಭಾರತದ ಸ್ಥಿತಿಯೂದರೂ ಏನು? ಅತಿ ಪ್ರಬಲವಾದ ಕಾಂಗ್ರೆಸ್ ಪಕ್ಷ ಮೂಶ್ರವಿರುವದರಿಂದ, ಇತರ ಯಾವ ಪಕ್ಷವೂ ಚುನಾಯಿಸಲ್ಪಡುವ ಸಂಭವನೇ ಇರುವುದಿಲ್ಲ ಇನ್ನೊಂದು ಪಕ್ಷವಿಲ್ಲದ ರಾಜ್ಯ, ಏಕ ಪಕ್ಷದ ಸರ್ವಾಧಿಪತ್ಯಕ್ಕೆ ಒಳಪಡುವುದೇ ವಿನಾ ಎಂದಿಗೂ ಪ್ರಜಾಸತ್ತಾತ್ಮಕವೆನಿಸುವುದಿಲ್ಲ

ಬಹು ಪ್ರತಿನಿಧಿಗಳನ್ನು ಕಳಿಸುವ ಚುನಾವಣಾ ಕ್ಷೇತ್ರಗಳು ಬೇಕು

ಆದ್ದರಿಂದ ಭಾರತಕ್ಕೆ ಇಂದು ಬೇಕಾದುದು ಬಹು ಪ್ರತಿನಿಧಿಗಳನ್ನು ಕಳುಹಿಸುವ ಚುನಾವಣಾ ಕ್ಷೇತ್ರಗಳು (ಮಲ್ಟಿ ಮೆಂಬರ್ ಕಾನ್‌ಸ್ಟಿಟ್ಯುಯೆನ್ಸಿ) ಈ ವಿಧ ಚುನಾವಣಾ ಕ್ಷೇತ್ರಗಳನ್ನು ಅನುಸರಿಸಿದ ವಿವಿಧ ದೇಶಗಳಲ್ಲಿ ವಿವಿಧ ಚುನಾವಣಾ ಪದ್ಧತಿ ಜಾರಿಯಲ್ಲಿದೆ. ಉದಾಹರಣೆಗೆ; 'ಕ್ಯುಮ್ಯುಲೆಟಿವ್ ಓಟು', 'ಬ್ಲಾಕ್ ಓಟು', 'ಸ್ಕ್ರಾಟಿನ್ ಡಿ ಲಿಸ್ಟ್' ಇವೇ ಮೊದಲಾದ ಪದ್ಧತಿಗಳು ವಿವಿಧ ದೇಶಗಳಲ್ಲಿ ಆಚರಣೆಯಲ್ಲಿವೆ. ಫ್ರಾನ್ಸಿನಲ್ಲಿ ಈ ಕೊನೆಯ ಪದ್ಧತಿ ಆಚರಣೆಯಲ್ಲಿದೆ ಆ ಪ್ರಕಾರ ಓಟು ಮಾಡುವವರು ಆ ಪಾರ್ಟಿಗೆ ಮತ ಕೊಡುತ್ತಾರೆಯೇ ವಿನಾ ಪ್ರತಿಯೊಬ್ಬನಿಗೂ ಬೇರೆ ಬೇರೆ ಹೊಗಿ ಅಲ್ಲ ಇದರಿಂದ ಬಲಶಾಲಿ ಪಕ್ಷಕ್ಕೆ ಜಯವೇ ವಿನಾ ಸಣ್ಣ ಪುಟ್ಟ ಗುಂಪುಗಳಿಗೆ ಪ್ರಾತಿನಿಧ್ಯ ಇಲ್ಲ. 'ಕ್ಯುಮ್ಯುಲೆಟಿವ್' ಓಟು ಪ್ರಕಾರ ಆ ಕ್ಷೇತ್ರದಲ್ಲಿ ಎಷ್ಟು ಸ್ಥಾನಗಳಿವೆಯೋ, ಆ ಸಂಖ್ಯೆಯಷ್ಟು ಓಟನ್ನು ಒಬ್ಬ ಸದಸ್ಯನಿಗೆ ಆರೂ ಕೊಡಬಹುದು. ಆವುದರಿಂದ ವೈನಾರಿಟಿ ಪಂಗಡಗಳಿಗೆ ಚುನಾಯಿತ ಸ್ಥಾನ ಪಡೆಯಲು ಸ್ವಲ್ಪ ಅವಕಾಶ ಸಿಕ್ಕಬಹುದೆ

ಈ ಶತಮಾನದ ಬಹು ಮಂದಿ ಚುನಾವಣಾ ಕ್ಷೇತ್ರಗಳನ್ನು ಭಾರತದಲ್ಲಿಯೂ ಅಂಗೀಕರಿಸಿ, 'ಕ್ಯುಮ್ಯುಲೆಟಿವ್' ಓಟಿಂಗ್ ಪದ್ಧತಿ ಸಹ ಜಾರಿಗೆ ತರಬಹುದು ಆದರೆ, 'ಕ್ಯುಮ್ಯುಲೆಟಿವ್' ಓಟಿಂಗ್‌ನಿಂತ ಉತ್ತಮವಾದುದು "ಪ್ರೊಪೋರ್ಷನಲ್ ರೆಪ್ರೆಸೆಂಟೇಷನ್ ಬೈ ಸಿಂಗಲ್ ಟ್ರಾನ್ಸ್‌ಫರಬಲ್ ಓಟ್" ಪದ್ಧತಿ.

ನೋಲ್ಯಂಡ ಪದ್ಧತಿಯ ಪ್ರಕಾರ ಒಬ್ಬ ಉಮೇದುವಾರನು ಜಯಪ್ರದವಾಗಿ ಬೇಕಾದರೆ, ಅವನಿಗೆ ಎಲ್ಲಿಂಗಿಂತ ಜಾಸ್ತಿ ಓಟು ಬರಬೇಕಾಗಿಲ್ಲ ಆದರೆ ನಿರ್ಧಾರವಾಗಿರುವ ವಸ್ತ್ರ 'ಕೋಟಾ' ಮಾತ್ರ ಬರಬೇಕು. ಹಾಗೆ ಬರಬೇಕಾದ ಓಟು:—

ಒಟ್ಟು ಸಂಖ್ಯೆಯ ಓಟು ಕಾಟಾ
———————— + ೧
ಸೀಟುಗಳ ಸಂಖ್ಯೆ + ೧

ಈ ತೆರನಾಗಿ ಮಾಡುವುದರಿಂದ ಎಲ್ಲ ಪಂಗಡಗಳಿಗೂ ಆಯಾ ಪಂಗಡಗಳ ಸಂಖ್ಯಾಬಲಕ್ಕೆ ಅನುಗುಣವಾಗಿ ಸ್ಥಾನ ದೊರಕುತ್ತದೆ

ಈ ಪದ್ಧತಿಯಲ್ಲಿ ನ್ಯೂನತೆಗಳು ಇಲ್ಲವೇನಲ್ಲ ದೊಡ್ಡ ಚುನಾವಣಾ ಕ್ಷೇತ್ರಗಳಿರುವುದರಿಂದ ಚುನಾಯಿತ ಪ್ರತಿನಿಧಿಗೂ ವಿಶದಾರರಿಗೂ ನಿಕಟ ಸಂಬಂಧ ಸಾಧ್ಯವಾಗದಿರಬಹುದು. ಸ್ವರ್ಧಿಸುವವರ ಸಂಖ್ಯೆ ಜಾಸ್ತಿಯಾಗಬಹುದು. ಮತದಾರರಿಗೆ ಚುನಾವಣಾ ಪದ್ಧತಿ ತಾತ್ಕಾಲಿಕವಾಗಿ ಕಷ್ಟವಾಗಿ ತೋರಬಹುದು. ಪಕ್ಷಗಳ ಹಿಂದೆ ಇರುವ ಸೂತ್ರಧಾರಿಗಳ ಕೈವಾಡ ಏರಬಹುದು. ಮಂತ್ರಿ ಮಂಡಲಕ್ಕೆ ಉತ್ತೇಜನ ಸಿಗಲೂಬಹುದು. ಆದರೂ ಎಲ್ಲ ವ್ಯವಸ್ಥಿತ ಪಕ್ಷಗಳ ಪ್ರತಿನಿಧಿಗಳೂ ಆಯಾ ಪಕ್ಷಗಳ ಸಂಖ್ಯೆಗನುಗುಣವಾಗಿ ಪ್ರಾತಿನಿಧ್ಯ ದೊರಕಿಸಿಕೊಂಡು, ತಮ್ಮ ತಮ್ಮ ಅಭಿಪ್ರಾಯವನ್ನು ಶಾಸನ ಸಭೆಯಲ್ಲಿ ವ್ಯಕ್ತಪಡಿಸಿ ವಿಚಾರ ವಿನಿಮಯದಿಂದ ತೃಪ್ತಿಕರವಾದ ಒಂದು ತೀರ್ಮಾನಕ್ಕೆ ಬರುವುದು ನಿಜವಾದ ಪ್ರಜಾಪ್ರಭುತ್ವ ಕುರುಹಲ್ಲವೇ?

ಈ ಎಲ್ಲ ಕಾರಣಗಳಿಂದ ಭಾರತಕ್ಕೆ "ಬಹು ಪ್ರತಿನಿಧಿಗಳ ಚುನಾವಣಾ ಕ್ಷೇತ್ರ"ಗಳೂ ಅಂತಹ ಕ್ಷೇತ್ರಗಳಲ್ಲಿ "ಪ್ರೊಪೋರ್ಷನಲ್ ರೆಪ್ರೆಸೆಂಟೇಷನ್ ಬೈ ಸಿಂಗಲ್ ಟ್ರಾನ್ಸ್‌ಫರಬಲ್ ಓಟ್" ಪದ್ಧತಿಯೂ ಜಾಂಗೆ ಬರುವುದು ಅತ್ಯವಶ್ಯಕವೆಂದು ನಾನು ಒತ್ತಿ ಹೇಳಲು ಬಯಸುತ್ತೇನೆ

(ಇತ್ತೀಚೆಗೆ ಮೈಸೂರು ರೇಡಿಯೋವಿನಿಂದ ಮಾಡಿದ ಭಾಷಣದಿಂದ) ತಾ. ಸಾ

ಆಧುನಿಕ ಸಮರ ರಂಗ - ಕೊರಿಯಾ.

ಅಲ್ಲಿನ ಜನರು, ಸಂಸ್ಕೃತಿ ಮತ್ತು ನಾಗರೀಕತೆ.

ಲೇ:—ಸಿ ಎಸ್ ರಾಮಕೃಷ್ಣ, ಬಿ ಎಸ್ ಸಿ (ಆನರ್ಸ್) ಬಿ. ಟಿ

ಪ್ರಚಲಿತ ಅಂತರ್‌ರಾಷ್ಟ್ರೀಯ ರಂಗ ಕೀಯ ರಂಗದಲ್ಲಿ ಪ್ರಮುಖ ಸ್ಥಾನವನ್ನು ಪಡೆದಿರುವ 'ಕೊರಿಯಾ' ಎಂಬ ಭೌಗೋಳಿಕ ಪ್ರದೇಶವು ಅನೇಕರಲ್ಲಿ ಆಶ್ಚರ್ಯವನ್ನುಂಟು ಮಾಡಿರಬಹುದು. ಈ ಚಿಕ್ಕ ರಾಷ್ಟ್ರದ ಪೌರ್ವಾತ್ಯರು ಇದೇ ಜೂನ್ ೨೫ನೆಯ ದಿನ ಭೀಕರ ಸಮರಕ್ಕೆ ಸಿಲುಕಿ ಹೊಯ್ದಾಡಿದ ಸಂಗತಿಯು ಎಲ್ಲರಿಗೂ ತಿಳಿದಿರಬಹುದು. ಈ ಸಮರವು ಕೊರಿಯಾ ದೇಶದ ಉತ್ತರ ಭಾಗದಲ್ಲಿ ಪ್ರಾರಂಭವಾಗಿ ಅಲ್ಲಿಂದ ಕೆಳಗೆ ಹರಡಿ ಇಡೀ ದೇಶವನ್ನೇ ಆವರಿಸಿಕೊಂಡಿದೆ. ಈ ಸಮರದಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನವು ಕೊರಿಯಾ ದೇಶದ ದಕ್ಷಿಣ ಭಾಗದ ಪರವಾಗಿ ಹೋರಾಡುತ್ತಿದೆ. ಇದರಿಂದಾಗಿ ಕೊರಿಯಾ ದೇಶವು ಜಗತ್ತಿನ ಗಮನವನ್ನು ಸೆಳೆದಿದೆ. ಈ ಸಮರದಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನವು ಭಾಗವಹಿಸಿರುವುದರಿಂದ ಕೊರಿಯಾ ದೇಶವು ಅಮೆರಿಕನ್ನರಿಗೆ ಸ್ವಲ್ಪ ಮಟ್ಟಿಗೆ ಪರಿಚಿತವಾಗಿದೆ. ಆದರೆ ಕೊರಿಯಾ ದೇಶದ ಜನರ ಸಂಸ್ಕೃತಿ, ನಾಗರೀಕತೆ, ಇತಿಹಾಸ ಮತ್ತು ಭೌಗೋಳಿಕ ವಿಷಯಗಳ ಸಂಕ್ಷೇಪ ವಿವರಣೆಗಳನ್ನು ಓದುಗರ ಮುಂದಿಡುವುದೇ ಪ್ರಸ್ತುತ ಲೇಖನದ ಗುರಿಯಾಗಿದೆ.

ಕೊರಿಯಾದ ಜನತೆಗೆ ತನ್ನದೇ ಆದ ವಿಶಿಷ್ಟ ಸಂಸ್ಕೃತಿ ಇದೆ. ವಿಶಿಷ್ಟ ನಾಗರೀಕತೆ ಇದೆ. ಈ ಜನರ ಇತಿಹಾಸ, ನಾಗರೀಕತೆ, ಸಂಸ್ಕೃತಿ ಮುಂತಾದುವುಗಳ ಪರಿಚಯವನ್ನು ಮಾಡಿಕೊಂಡರೆ ಕೊರಿಯಾದ ರಾಷ್ಟ್ರೀಯ ಭಾವನೆಯೂ ಮತ್ತು ದ್ದೆಂದು ಊಹಿಸಲು ಸುಲಭ.

ಕೊರಿಯಾ ಜನಾಂಗದ ಉಗಮವು ಸಂದೇಹಾಸ್ಪದವಾಗಿ ಇತಿಹಾಸದ ನಿಲುವಿಗೆ ಸಿಕ್ಕದೆ ತಪ್ಪಿಹೋಗಿದೆ. ಇವರು ಚೈನೀ ಅಥವಾ ಜಪಾನೀ ಬಡಕಟ್ಟಿಗೆ ಸೇರಿದವರಲ್ಲ. ಆದರೆ ಆ ಜನರು ಉತ್ತರ ಆಸಿಯದ ತರಾವಿ ಜನರ ಬಡಕಟ್ಟಿಗೆ ಸೇರಿದವರೆಂದು ಚಿನ್ನವೇ ದೇಶದ ಪ್ರಧಾನ ಸಂಪತ್ತಾಗಿದೆ. ಭೌಗೋಳಿಕವಾಗಿ ಚೀನಾಕ್ಕೆ ಸಾಮೀಪ್ಯವಿದ್ದರೂ ಜಪಾನಿನಲ್ಲಿರುವಂತೆ ಅಗ್ನಿ ಪರ್ವತಗಳಾಗಲೀ, ಜ್ವಾಲಾಮುಖಿಗಳಾಗಲೀ ಕೊರಿಯಾದಲ್ಲಿಲ್ಲ. ಕೊರಿಯಾದ ಹವಾಗುಣವು ಸಮಶೀತೋಷ್ಣವಾಗಿದ್ದು ಹಿತದಾಯಕವಾಗಿದೆ. ಮುಂಗಾರು ಮಳೆಯು ಯೋಗ್ಯ ಪ್ರಮಾಣದಲ್ಲಿ ಬೀಳುತ್ತದೆ.

ಕೊರಿಯಾದ ಪ್ರಕೃತ ಜನಸಂಖ್ಯೆ ಕೋಟಿ ೩೦ ಲಕ್ಷ. ಚಿನ್ನ ಬೆಳೆಯುವ ದೇಶವಾದರೂ ಕೊರಿಯಾದಲ್ಲಿ ಆರ್ಥಿಕಸ್ಥಿತಿ ಬಹಳ ಹೀನ ಮಟ್ಟದಲ್ಲಿದೆ. ದಕ್ಷಿಣದ ಭಾಗದಲ್ಲಿ ಜನಸಾಂದ್ರತೆ ಅಧಿಕವಾಗಿದೆ. ಕೃಷಿಯೇ ಜನರ ಪ್ರಧಾನ ವೃತ್ತಿ. ವೈರುಪತ್ಯಗಳಿಂದ ಕಂಗೊಳಿಸುವ ಕೊರಿಯಾದ ಕೃಷಿಕ್ಷೇತ್ರಗಳು ಜನತೆಗೆ ಸಾಕಷ್ಟು ಉತ್ಪನ್ನಗಳನ್ನು ಕೊಡುತ್ತವೆ. ಅರಣ್ಯಗಳೂ ಅಭಿವೃದ್ಧಿಯಾಗಬೇಕಾಗಿದ್ದು ಹಿಂಸ್ರ ಪಶುಗಳಿಗೆ ನಿವಾಸಸ್ಥಾನವಾಗಿದೆ.

ಸಿಯೋಲ್ ನಗರವು ಇತ್ತೀಚೆಗೆ ಇನ್ನೂರಿಯಂದಲೂ ಕೊರಿಯದ ರಾಜಧಾನಿ ೨೦೦೦ ವರ್ಷಗಳಿಂದಲೇ ಇತಿಹಾಸ ಪ್ರಸಿದ್ಧವಾಗಿದೆ. ಹ್ಯಾಂಗ್‌ಯಾಂಗ್ ಎಂಬ ಉತ್ತರದ ನಗರವು ದ್ವಿತೀಯ ಪ್ರಧಾನ ನಗರವಾಗಿ ಕ್ರಿ. ಪೂ. ೧೮೩೨ ರಿಂದಲೂ ಕೊರಿಯದ ಸಾಂಸ್ಕೃತಿಕ ಕೇಂದ್ರವಾಗಿದೆ. ಕೊರಿಯಾದ ಪ್ರಮುಖ ನಗರಗಳು ಉನ್ನತ ಪ್ರಾಕಾರಗಳಿಂದ ಪ್ರಕೃತ ಸಮರಾಂಗಣವಾದ ಸಿಯೋಲ್ ನಗರದ ಕುರುಹು ಸ್ವಲ್ಪ ಮಾತ್ರ ಭಗ್ನವಾದ ಗೋಡೆ ಈಗಲೂ ಇದೆ. ಕೊರಿಯಾ ದೇಶವು ಅತ್ಯಂತವೂ ವಿಶಿಷ್ಟವಾದ ಪ್ರಾಚೀನ ವಸ್ತು ವಿಶೇಷಗಳಿಂದ ಪ್ರಸಿದ್ಧವಾಗಿದೆ. ಪುರಾತನ ಕಾಲದ ದೇವಾಲಯಗಳು, ಗೋಪುರಗಳು, ಪೇಂಟಿಕೆಗಳು, ಪ್ರತಿಮೆಗಳು ದೇಶದ ನಾನಾಭಾಗಗಳಲ್ಲಿ ಕಾಣಸಿಗುತ್ತವೆ. ಪ್ರಾಚೀನ ಸಂಸ್ಕೃತಿಯ ಅಚ್ಚಳಿಯದ ಚಿಹ್ನೆಗಳಾಗಿ ಪ್ರಕಾಶಿಸುತ್ತಿವೆ. ಬೌದ್ಧ ಮತಕ್ಕೆ ಸಂಬಂಧಿಸಿದ ಕೆತ್ತನೆಗಳು ಅನೇಕವೇ ವಿಶೇಷಗಳಲ್ಲಿ ಕಂಡು ಬರುತ್ತಿದ್ದವು. ಪೈಶಿಷ್ಟಪೂರ್ಣವಾಗಿವೆ.

ಕೊರಿಯಾ ಸಂಸ್ಕೃತಿಗೆ ಸಂಬಂಧಿಸಿದ ಒಂದು ಸ್ವಾರಸ್ಯಪೂರ್ಣ ವಿಚಿತ್ರವಿದೆ. ವಾಯುದೇವನು ಭೂವಿಯಲ್ಲಿ ಸ್ವೇಚ್ಛೆಯಿಂದ ತಿರುಗುತ್ತಿರಲು ಅವನಿಗೆ ಲಾವಣ್ಯವತಿಯಾದ ಸುಂದರಿಯೊಬ್ಬಳನ್ನು ಕಂಡು ಮೋಹಿತನಾದನು. ಆ ಲಲನೆಯಲ್ಲಿ ಟ್ಯಾಂಗನ್ ಎಂಬ ಪುತ್ರನನ್ನು ಪಡೆದು ಸಮಗ್ರ ಕೊರಿಯದ ರಾಜಾಧಿರಾಜನಾಗಿ ಕೊರಿಯ ಜನತೆಯನ್ನು ನಾಗರೀಕವನ್ನಾಗಿ ಮಾಡಿದನು ಟ್ಯಾಂಗನ್ನ ವಂಶವು ಕೊರಿಯವನ್ನು ಕ್ರಿ. ಪೂ. ೨೩೩ ರಿಂದ ೧೧೨೨ ರವರೆಗೂ ಅವ್ಯಾಹತವಾಗಿ ಆಳಿ ಇತಿಹಾಸದಿಂದ ಕಣ್ಮರೆಯಾಯಿತು. ತರುವಾಯ ಚೈನಾ ದೇಶದ ಯತಿಯೊಬ್ಬ ಕಿಜನೆಂಬವನು ಆಗಮಿಸಿ ಕ್ರಿ. ಪೂ. ೧೧೨೨ ರವರೆಗೆ ಅಳಿವು ರಾಜ್ಯವನ್ನಕ್ಕೆ ಮೂಲಪುರುಷನಾಗಿ ಸಮಗ್ರ ಕೊರಿಯವನ್ನು ಆಳಿದನು. ಇವನ ರಾಜಧಾನಿ ಉತ್ತರ ಕೊರಿಯದ ಅಧುನಿಕ ರಾಜಧಾನಿಯೂದ ಪ್ಯಾಂಗ್‌ಯಾಂಗ್ ನಗರ. ಆದರೆ ಈ ಕಥೆಗಳಿಗೆ ಐತಿಹಾಸಿಕ ಆಧಾರಗಳು ಇಲ್ಲವೆಂಬ ಸತ್ಯ ಇಲ್ಲ.

ಕೊರಿಯದ ವ್ಯಾವಹಾರಿಕ ಸಾಹಿತ್ಯವು ಚೈನೀ ಲಿಪಿಯಲ್ಲಿ ಬರೆಯಲ್ಪಟ್ಟಿದೆ. ಚೈನೀ ಭಾಷೆಯೂ ಲಿಪಿಯೂ ಕೊರಿಯದಲ್ಲಿ ಸರ್ವಸಾಮಾನ್ಯವಾಗಿದೆ. ಭಾರತದಲ್ಲಿ ಸಂಸ್ಕೃತಕ್ಕೆ ಏರ್ಪಟ್ಟ ಸ್ಥಾನವೇ ಕೊರಿಯದಲ್ಲಿ ಚೈನೀ ಭಾಷೆಗೆ. ಸರಕಾರಿ ನೌಕರಿಗೂ ಪರೀಕ್ಷೆಗಳಿಗೂ ಚೈನೀ ಭಾಷಾಜ್ಞಾನವು ಅತ್ಯಾವಶ್ಯಕ. ಕೊರಿಯ ಸಾಹಿತ್ಯದಲ್ಲಿ ಜೀವನ ಚರಿತ್ರೆಗಳೂ ಐತಿಹಾಸಿಕ ಪುಸ್ತಕ ವಿಶೇಷಗಳೂ ಹೆಚ್ಚಾಗಿವೆ. ಜೋಚಿಪೋನ್ ಎಂಬ ಪ್ರಸಿದ್ಧ ಕೊರಿಯ ಸಾಹಿತ್ಯಕೃತಿ ಚೈನಾ ರಾಜ್ಯದ ರಾಜಮನ್ನಣೆಗೆ ಪಾತ್ರವಾಗಿ ಒಂಭತ್ತನೇ ಶತಮಾನದಲ್ಲಿ ಬರೆಯಲ್ಪಟ್ಟಿದ್ದು ಚೈನೀ ಸಾಹಿತ್ಯವನ್ನು ಬೆಳೆಸಿದನು.

ಕೊರಿಯ ದೇಶಕ್ಕೆ ಚೈನಾದಿಂದ ಕನ್ಫ್ಯೂಶಿಯನ್ ಮತ್ತು ಬೌದ್ಧ ಧರ್ಮಗಳು ಪ್ರಚಾರವಾದ ಮೇಲೆ ಕೊರಿಯದ ಸಾಂಸ್ಕೃತಿಕ ಜೀವನದಲ್ಲಿ ಅದ್ಭುತ ಕ್ರಾಂತಿಯುಂಟಾದಂಗೆ ಚೈನೀ ಪ್ರಭಾವವು ಕೊರಿಯದಲ್ಲಿ ವಿಶೇಷವಾಯಿತು. ಬೌದ್ಧ ಧರ್ಮವು ಕೊರಿಯದಲ್ಲಿ ರಾಜಧರ್ಮವಾಗಿ ಪ್ರಗತಿಹೊಂದಿತಾದರೂ ಇತರ ದೇಶಗಳಂತೆಯೇ ಅವನತಿಯನ್ನು ಹೊಂದಿತು. ಕನ್ಫ್ಯೂಶಿಯನ್ ಮತವು ಪ್ರಬಲವಾಯಿತು. ಎಲ್ಲ ಮತಧೋರಣೆಗಳೂ ಕ್ರೈಸ್ತಿಯನ್ ಮತಪ್ರಚಾರದಿಂದ ಬದಲಾವಣೆಹೊಂದಿ ಕ್ರೈಸ್ತಿಯನರ ಸಂಖ್ಯೆಯೂ ಬೆಳೆಯಸಾಗಿತು. ಕ್ರೈಸ್ತಿಯನ್ ಮತ ಸಂದೇಶವಾಹಕರು ಕೊರಿಯದ ವೈಕ್ತಿಕ, ಧಾರ್ಮಿಕ ಸಾಂಸ್ಕೃತಿಕ ಸಂಸ್ಥೆಗಳ ಮೇಲೆ ತಮ್ಮ ಪ್ರಭಾವವನ್ನು ಬೀರಿರುವರು.

ದ್ವಿತೀಯ ಜಾಗತಿಕ ಮಹಾಯುದ್ಧದ ವರೆಗೆ ಕೊರಿಯವು ಜಪಾನಿನ ಆಕ್ರಮಣಕ್ಕೊಳಗಾಗಿದ್ದಿತು. ಮಹಾಯುದ್ಧದಲ್ಲಿ ಜಪಾನು ಸೋಲನವಾದ ಮೇಲೆ ಕೊರಿಯವು ವಿತ್ರರಾಷ್ಟ್ರಗಳ ದ್ವಿಮುಖ ಶಕ್ತಿಗಳಿಗೆ ಸಿಕ್ಕಿ ದಕ್ಷಿಣ ಮತ್ತು ಉತ್ತರ ಕೊರಿಯವೆಂದು ವಿಭಜಿಸಲ್ಪಟ್ಟಿತು. ಇಲ್ಲಿನ ಅಕ್ಷಾಂಶದಿಂದ ಉತ್ತರಕ್ಕೆ ಸಮಶಾವಾದಿಗಳ ಸರಕಾರವು ಚಿಮಿಯದ ವಿದೇಶಾಂಗ ನೀತಿಗೆ ತಲೆಬಾಗಿ ಉತ್ತರ ಕೊರಿಯನ್ನು ಆಳುತ್ತಿರುವುದು. ಸಮಶಾವಾದಿಗಳ ಉತ್ತರ ಸರಕಾರಕ್ಕೆ ಪ್ಯಾಂಗ್‌ಯಾಂಗ್ ರಾಜಧಾನಿಯಾಗಿದ್ದು ಕಮ್ಯೂನಿಸ್ಟ್‌ರು ಮುಖ್ಯ ಮಂತ್ರಿಯಾಗಿರುವರು. ಇಲ್ಲಿನ ಅಕ್ಷಾಂಶದಿಂದ ದಕ್ಷಿಣಕ್ಕಿರುವ ದಕ್ಷಿಣ ಕೊರಿಯವು ಅಮೇರಿಕನ ಪರ ಅಂತರ್‌ರಾಷ್ಟ್ರೀಯ ಸ್ನೇಹವಾದಿಯಿಂದ ಬಿಗಿಯಲ್ಪಟ್ಟು ಸಿಗ್ಮನ್ ರಿಯವರ ಮುಖ್ಯ ಮಂತ್ರಿತ್ವದಲ್ಲಿ ಸಿಯೋಲ್‌ಪಟ್ಟಣ ಸರಕಾರದಿಂದ ಪರಿಪಾಲಿಸಲ್ಪಡುತ್ತಿದ್ದಿತು.

ಜೂನ್ ೨೫ ರಿಂದು ಉತ್ತರದ ಸಮಶಾವಾದಿಗಳು ಇಲ್ಲಿನ ಅಕ್ಷಾಂಶದಾಟಿದ ದಕ್ಷಿಣದವರ ಮೇಲೆ ಧಾಳಿಮಾಡಿದ ಮೇಲೆ ಉತ್ತರದ ಪ್ರಬಲ ಶಕ್ತಿಗೆ ದಕ್ಷಿಣವು ಬೆಚ್ಚಿ ಬಿದ್ದು ಮುಂಗಾಣದೆ ತತ್ಕ್ಷಣ ಎಂಟನೆಗಳನ್ನು ಕಳೆದುಕೊಳ್ಳುತ್ತಾ ಬಂದಿತು. ಕೊರಿಯದ ಸಮರಾಂಗಣದಿಂದ ಪ್ರಜ್ವಲಿಸಿದ ಸಮರ ಜ್ವಾಲೆಯು ಜಗತ್ತನ್ನೇ ತಂತಿ ನೋಡಿಯಲು ಪ್ರಯತ್ನಿಸುವಂತೆ ವಿಶ್ವವಿನಾಶಕ್ಕಾದರೂ ತಾವೆಲ್ಲಿಗೆ ಹಬ್ಬದೆ ಈ ಭೀಕರ ಜ್ವಾಲೆಯು ಪರಿಣಾಮ ಏನಾಗುವುದೆಂದು ಜಗತ್ತು ವಿಶ್ವಾಯರ್ಥಯಗಳಿಂದ ಇದಿರು ನೋಡುತ್ತಿದೆ!

ಕೊಡಗು

ತಾ. ೪-೮-೧೯೫೦ರಂದೇ ಶುಕ್ರವಾರ

ಅಕ್ಕಿ ಸರಬರಾಯಿ.

ಕೊಡಗಿನಲ್ಲಿ ಹೊಸ ಅಕ್ಕಿ ಬರಲು ಇನ್ನೂ ಬದು ತಿಂಗಳುಗಳಿವೆ ಇಷ್ಟರಲ್ಲೇ ಕೊಡಗಿನ ಅಕ್ಕಿ ಸರಬರಾಯಿಯು ಕೆಲವು ರೇಶನ್ ಅಂಗಡಿಗಳಲ್ಲಿ ಕೂಪನ್ ದಾರರಿಗೆ ಸರಿಯಾಗಿ ಅಕ್ಕಿಯೂ ಸರಬರಾಯಿಯಾಗುತ್ತಿಲ್ಲವೆಂದು ಪುಕಾರು ಎದ್ದಿದೆ ಇದಕ್ಕೆ ಕಾರಣಕರ್ತರು ಯಾರೆಂಬುದನ್ನು ಹುಡುಕುವುದರ ಬದಲು ಈ ಕೊರತೆಯನ್ನು ಹೋಗಲಾಡಿಸಲು; ಕೂಡಲೇ ಪ್ರಯತ್ನಿಸುವುದು ಆಗತ್ಯವಾಗಿದೆ

ಕೊಡಗು ಆಹಾರ ಪದಾರ್ಥಗಳಲ್ಲಿ ಉಳುವರಿ ಪ್ರಾಂತವಾದರೂ ಉಳುವರಿ ಬತ್ತವು ಮಳೆಗಾಲಕ್ಕೆ ಮುಂಚಿತವಾಗಿ ಹೊರಗಿನ ಪ್ರಾಂತಗಳಿಗೆ ರವಾನಿಸಲ್ಪಟ್ಟು ವರ್ಷಾಂತ್ಯದಲ್ಲಿ ರೇಷನ್ ಅಂಗಡಿಗಳಿಗೆ ಹಂಚಲ್ಪಡುವಲ್ಲಿ ಕೆಲವು ಚಿಕ್ಕ ವ್ಯವಸಾಯಗಾರರಿಗೂ ಅಕ್ಕಿ ಇಲ್ಲದೆ ಕಷ್ಟ ಪಡಬೇಕಾಗುತ್ತದೆ. ಇದು ಹಲವು ವರ್ಷಗಳ ಅನುಭವದ ವಿಷಯವಾಗಿದೆ. ಆದ್ದರಿಂದಲೇ ಪ್ರಾಂತೀಯ ನಿಷ್ಪೇಪವಾಗಿ ಸಾಕಷ್ಟು ಬತ್ತವನ್ನು ಇಡಬೇಕೆಂದು ನಾವು ಸರಕಾರಕ್ಕೆ ಸಲಹೆಗಳನ್ನು ಕೊಡುತ್ತಾ ಬಂದಿದ್ದೆವು. ಒಂದೆರಡು ವರ್ಷ ಹೀಗೆ ಇಟ್ಟರೂ ಇತ್ತೀಚೆಗೆ ಈ ವ್ಯವಹಾರವನ್ನು ಬಿಟ್ಟ ಕಾರಣ ಇಷ್ಟರಲ್ಲೇ ಅಕ್ಕಿಯ ಅಭಾವವು ತೀರಾಲಾರಂಭಿಸಿದೆ.

ಈ ವರ್ಷ ಕೊಡಗಿನ ಉಳುವರಿ ಬತ್ತವು ಕಳೆದ ವರ್ಷಕ್ಕಿಂತಾ ಕಡಿಮೆಯೆಂದು ಸ್ಥಳೀಯ ಸರಕಾರದವರು ಅಂದಾಜು ಮಾಡಿ ಕಳುಹಿಸಿದ್ದರೂ ಕೇಂದ್ರ ಸರಕಾರದವರು ಹಿಂದಿನ ವರ್ಷದ ಉಳುವರಿಯನ್ನೇ ಹೋಲಿಸಿಕೊಂಡು ಸ್ವಲ್ಪ ಹೆಚ್ಚಿನ ಬತ್ತವನ್ನೇ ವ್ಯವಸಾಯ ಮತ್ತು ಮನುಷ್ಯರಿಗೆ ಕೊಡಬೇಕೆಂದು ಫಿಕ್ಸ್ ಮಾಡಿರುವುದರಿಂದ ಈ ಕಾರಣ ಈ ವರ್ಷವೂ ಪೂರ್ತಿ ಬತ್ತ ರವಾನೆಯು ಈಗ ಕೊಡಗಿನಲ್ಲಿ ಬಹು ಕಷ್ಟವಾಗಿ ಕಂಡುಬರುತ್ತಿದೆ. ವ್ಯವಸಾಯಿಗೆ ಇನ್ನೂ ಸುಮಾರು ಒಂದೂವರೆ ಸಾವಿರ ಟನ್ ಬತ್ತ ಕೊಡಲಿಕ್ಕಿದೆಯೆಂದು ತಿಳಿಯುಬರುತ್ತದೆ

ಈ ವರ್ಷ ಮೊದಲಿನಂತೆ ಉಳುವರಿ ಬತ್ತವನ್ನು ಅಕ್ಕಿ ಮಿಲ್ಲು ಬತ್ತ ರೂಪದಲ್ಲಿ ಹೊರಗೆ ಕಳುಹಿಸುವುದರ ಬದಲು ಅಕ್ಕಿಯಾಗಿಯೇ ಕಳುಹಿಸಬೇಕೆಂದು ಮಿಲ್ ಮಾಲೀಕರ ಕೋರಿಕೆಯನ್ನು ಸಲ್ಲಿಸುವ ತಾಲ್ಲೂಕಿನ ರೇಷನ್ ಅಂಗಡಿಗಳಿಗೆ ಬೇಕಾದ ಅಕ್ಕಿಯನ್ನು ಗಿರಣಿದಾರರೇ ಸರಬರಾಯಿ ಮಾಡುವ ಭರವಸೆ ಇತ್ತರು. ಅದಕ್ಕೆ ಈಗ ಅವರ ಭರವಸೆಯಂತೆ ಸರಿಯಾಗಿ ಅಕ್ಕಿಯನ್ನು ಸರಬರಾಯಿ ಮಾಡುತ್ತಿಲ್ಲವಾದ್ದರಿಂದಲೇ ಅಕ್ಕಿಯ ಅಭಾವವು ತೋರುತ್ತಿದೆ. ತಮಗೆ ಮಾಲೀಕರು ಉಳುವರಿ ಬತ್ತವನ್ನು ಪೂರಾಟ ಮಾಡುತ್ತಿಲ್ಲವೆಂದು ಮಿಲ್ ದಾರರು ಹೇಳುತ್ತಿರುವುದು. ತಮ್ಮ ಒಪ್ಪಂದದ ಮೇರೆ ಈ ಕಾರಣವನ್ನು ಹೂಡುವದು ಸರಿಯಲ್ಲದಿದ್ದರೂ ಉಳುವರಿ ಬತ್ತವನ್ನು ಜನರಿಂದ ಪಿ ಕೊಡಲು ಅಧಿಕಾರವಿರುವ ರೇಶನಿಂಗ್ ಇಲಾಖೆಯವರು ಈ ಕೆಲಸಕ್ಕೆ ಕೂಡಲೇ ಕೈಹಾಕ್ಬದಿದ್ದರೆ ಪರಿಸ್ಥಿತಿ ಮತ್ತಷ್ಟೂ ಕೆಡುವದು ಇದರಿಂದಾಗಿ ವ್ಯವಸಾಯಿಗೆ ಅಕ್ಕಿ ರವಾನಿಸುವದನ್ನು ಕೂಡಲೇ ಫಿಲ್ಲಿಸುವದು ಸೂಕ್ತವಾಗಿದೆ. ಕೊಡಗಿನಲ್ಲಿರುವ ಜನರಿಗೆ ಸಾಕಷ್ಟು ಅನ್ನವಿಲ್ಲದಿರುವಾಗ ಇನ್ನಿಂದ ಅಕ್ಕಿಯನ್ನು ಹೊರಗೆ ಕಳ ಹಿಸುವದು ಎಂದೂ ನ್ಯಾಯವಲ್ಲ.

ಕೊಡಗಿನಂಥಾ ಉಳುವರಿ ಪ್ರಾಂತ ಪಲ್ಲಿ ಬೆಳೆ ಬಂದು ಕೇವಲ ಏಳು ತಿಂಗಳುಗಳಲ್ಲೇ ಜನರಿಗೆ ಊಟಕ್ಕೆ ಅಭಾವವಾಗಿ ಗಂಜಿ ಎಂದು ಅನ್ನಿಸಿಕೊಳ್ಳುವದೇ ನಾಚಿಕೆಯ ಮಾತಾಗಿದೆ ಇಂಥಾ ಅಭಾವಕ್ಕೆ ಕಾರಣಭೂತರಾದ ಮಿಲ್ ಮಾಲೀಕರೂ ಅವರಿಗೆ ಸಹಾಯಕರಾಗಿ ಸಮ್ಮಂದಪಟ್ಟ ಇಲಾಖೆಯವರೂ ಇನ್ನಾದರೂ ಹೆಚ್ಚಿನ ಅಕ್ಕಿ ವಹಿಸಿ ಉಳುವರಿ ಬತ್ತವನ್ನೆಲ್ಲಾ ಸಂಗ್ರಹಿಸಿ ಕೂಡಲೇ ಎಲ್ಲಾ ರೇಶನ್ ಅಂಗಡಿಗಳಲ್ಲಿ ಸರಿಯಾಗಿ ಅಕ್ಕಿಯು ಸರಬರಾಯಿಯಾಗುವಂತೆ ಮಾಡುವದು ಪರಮ ಕರ್ತವ್ಯವಾಗಿದೆ ಈ ಮುಖ್ಯ ವಿಚಾರಕ್ಕೆ ಸರಕಾರದ ವೇಲಧಿಕಾರಿಗಳು ಗಮನವಿಟ್ಟು ಈ ಅವ್ಯವಸ್ಥೆಯನ್ನು ನಿವಾರಿಸುವರಾಗಿ ಆಶಿಸುತ್ತೇವೆ.

ವೆಚ್ಚ ಮನೆ.

ಇನ್ನು ಮುಂದೆ ಹಿಂದೂದೇಶದ ಸ್ತ್ರೀಜನರಿಗೆಲ್ಲಾ 'ಕೂಲಿ' ಗಳೆಂದು ಕರೆಯಲೂಡದೆಂದೂ ವಂದೆ ಅವರನ್ನು ಪುಷ್ಪಾರಿಂದೂ ಕರೆಯಬೇಕೆಂದೂ ಕೇಂದ್ರ ಸರಕಾರದ ಲೇಬರ್ ಇಲಾಖೆಯು ಹೃಕಟಿಸಿದೆ

ತಾರೀಕು ೩-೮-೫೦ ರಲ್ಲಿ ಡಾಕ್ಟರ್ ಕೆಸಂಗಪ್ಪರ ಪಂಡಿಣ್ಣನವರು ತಮ್ಮ ಳಿಗೆ ವಯಸ್ಸಿನಲ್ಲಿ ಸ್ವರ್ಗಸ್ಥರಾದರು

ಮದ್ರಾಸಿನ ಸೆಂಟ್ರಲ್ ಪೊಲಿಟೆಕ್ನಿಕ್ ಇನ್‌ಸ್ಟಿಟ್ಯೂಟಿನ ಇಲೆಕ್ಟ್ರಿಕ್ಲ್ ಇಂಜಿನಿಯರಿಂಗ್ ಡಿಪ್ಲೊಮಾ ಪರೀಕ್ಷೆಯಲ್ಲಿ ಶ್ರೀ. ಸಿ ವಿ ಪಡಿತಿವ ಇವರು ತೇರ್ಗಡೆಯಾಗಿರುವರು

ತಾರೀಕು ೩೦-೭-೫೦ ರಲ್ಲಿ ಸಮರಿಕಾಂದಾಯ ತೆರಿಗೆಯ ಸಿಲೆಕ್ಟ್ ಕಮಿಟಿ ಮಿಟಿಂಗು ನಡೆದು ಕೌನ್ಸಿಲ್ ಸಭೆಯು ಕಳೆದ ವಿಚಿಂಗಿಕಲ್ಲಿ ವ್ಯವಸಾಯ ಆದಾಯ ತೆರಿಗೆಯನ್ನ ಹಾಕುವ ಕತ್ತವನ್ನು ಒಪ್ಪಿ ಅದು ಸಿಲೆಕ್ಟ್ ಕಮಿಟಿಯಲ್ಲಿರುವದರಿಂದ ಈ ಖಡ್ಡಾಟ. ಕುದಾಯ ಹಾಕುವ ಮಸೂದೆಯನ್ನು ಜಾರಿಯಲ್ಲಿ ತರಬಾರದೆಂದೂ ಅದನ್ನು ತದ್ದು ಪಡಿಬೇಕೆಂದೂ ಕೇಂದ್ರ ಸರಕಾರವನ್ನು ಕೇಳಿಕೊಳ್ಳಬೇಕೆಂದು ಪಿಪಾರಸು ಹೂಡಲಾಗಿದಯಂತೆ

ಈ ದಿನ ಕೊಡಗು ಕಾನ್ಸಿಲ್ ಹಾಲ್ ಸೆಲ್ಲಿ ಆಪಿಲ ಭಾರತ ಕ್ಷಯ ರೋಗ ನಿವಾರಣಾ ಸಂಘದ ಕಾರ್ಯದರ್ಶಿಯಾಗಿರುವ ಶ್ರೀ. ಬೊಳಕರಂಡ ಕಾರ್ಯಪ್ಪನವರು ಕ್ಷಯರೋಗ ನಿವಾರಣೆ ಮತ್ತು ಅದರ ಸಹಾಯಕ್ಕಾಗಿ ಸೀಲ್ ಮಾರಾಟದ ವಿಚಾರವಾಗಿ ಭಾಷಣ ಮಾಡುವರು.

ಮಡಿಕೇರಿ ವೀರಾಜಪೇಟೆಗಳಲ್ಲಿ ಸಂತೆ ದಿನಗಳಲ್ಲೂ ಇತರ ಕಡೆ ಸೋಮವಾರಗಳಲ್ಲೂ ಸರಕಾರಿ ಖಜೇರಿ ಕೆಲಸವು ಮಧ್ಯಾಹ್ನ ಎರಡು ಗಂಟೆಯಿಂದ ಪ್ರಾರಂಭವಾಗುವದೆಂದೂ ಹೊರಡಿಸಿದ್ದ ಆಜ್ಞೆಯನ್ನು ವಜಾಮಾಡಿ ಈ ಹಿಂದಿನಂತೆಯೇ ಖಜೇರಿ ಕೆಲಸ ನಡೆಯುವ ವ್ಯವಸ್ಥೆಯು ಮಾಡಲಾಗಿದೆಯೆಂದು ತಿಳಿಯ ಬಂದಿದೆ

ಮಡಿಕೇರಿಗೆ ತಾರೀಕು ೩೮ ರಿಂದ ತಾ ೩೧ ರವರೆಗೆ ೧೧೦ ಇಂಚು ೭೫ ಸೆಂಟು ಮಳೆಯಾಗಿದೆ ಈ ವರೆಗೆ ಒಟ್ಟು ೮೦ ಇಂಚು ೮೨ ಸೆಂಟು ಮಳೆಯಾಗಿದಯಂತೆ

ಸೋಮವಾರಪೇಟೆಯಲ್ಲಿರುವ ಶ್ರೀ ಕೊಡಂದೇರ ಮುತ್ತಣ್ಣನವರಿಗೆ ಎಂ ಇ (ಮೆಂಬರ್ ಆಫ್ ದಿ ಬ್ರಿಟಿಷ್ ಎಂಪಾಯರ್) ಎಂಬ ಬಿರುದು ದೊರೆತಿದೆ.

ಮೂರಾಟಕ್ಕಿದೆ.

ಮಡಿಕೇರಿಯ ವ್ಯಾಪಾರ ಕೇಂದ್ರವಾದ ಚೌಕಿಯಲ್ಲಿ ಹೋಟೆಲು ಯಾ ಅಂಗಡಿ ಇಡಲು ಮತ್ತು ವಾಸಕ್ಕೂ ಯೋಗ್ಯವಾಗಿರುವ ಮನೆಯೊಂದು ಮೂರಾಟಕ್ಕಿದೆ. ಪೂರ್ಣ ಶಾದಾರರು ಈ ಕೆಳಗಿನ ಅಡ್ರೆಸಿಗೆ ಬರೆದುಕೊಳ್ಳಬಹುದು.

"A."
C/o 'KODAGU' Mercara.
3-3

"ಕೊಡಗು" ಪಬ್ಲಿಷರು,
ಪೊನ್ನಂಪೇಟೆ,
ಶ್ರೀ. ಪಿ. ಜಿ ಮುದ್ದಪ್ಪಯ್ಯನವರು.

ಲೆಬನಾನದ ಮಾಂತ್ರಿಕ ಸಮಾಧಿ.

೪೬ ವರ್ಷಗಳ ಕಾಂತ ದೀರ್ಘ ನಿದ್ರೆಯ ನಂತರ ಲೆಬನಾನಿನ ಕೆಫೋಲಿಕ್ ಕಾನ್ವೆಂಟಿನ ಸ್ಮಶಾನದಲ್ಲಿ ಸಮಾಧಿಸ್ಥನಾಗಿರುವ ಥಾದರ್ ಚಾರ್ಬೆಲ್ಲನ ಸಮಾಧಿಯ ಬಳಿ ಈಗ ಹಗಲಿರಲೂ ಭಕ್ತರ ಮತ್ತು ಕುತೂಹಲಿಗಳ ತಂಡತಂಡವೇ ನೆರೆದಿರುವ ಆಶ್ಚರ್ಯಕರ ಸುದ್ದಿಯೊಂದರ ವಿವರಗಳ 'ಹಿಂದುಸ್ಥಾನ ಟೈಮ್ಸ್' ಪತ್ರಿಕೆಯಲ್ಲಿ ಪ್ರಸಿದ್ಧವಾಗಿವೆ.

ಥಾದರ್ ಚಾರ್ಬೆಲ್ಲನ ಅವಶೇಷಗಳು ಡಾಕ್ಟರನ್ನೂ ವಿಜ್ಞಾನಿಗಳನ್ನೂ ಮಂಕುಗೂಗಳಿನಿಂ ಜೀವಂತನಾಗಿದ್ದಾಗಲೂ ಈ ಕೈಸ್ತ ಪಾದ್ರಿಯಲ್ಲಿ ಮಂಕೆ ಶಕ್ತಿಯಿತ್ತೆಂದು ಪ್ರತೀತಿಯಿತ್ತು ಬೆ ಮೈ ಅವನು ಎಣ್ಣೆ ಇಲ್ಲದ್ದಕ್ಕೆ ಜೀವ ಇಣ ಯಲ್ಲಿ ನೀರು ಹೊಯ್ದು ಇಡೀ ರಾತ್ರಿ ಉರಿಸಿದ್ದನಂತೆ ಗಳಿಳರಲ್ಲಿ ಅವಳು ತನ್ನ ದೈವಭಕ್ತಿಯ ದೀರ್ಘ ಜೀವನದ ವೇತರ ಕ್ರಿಸ್ಮಸ್ ದಿನ ತೀರಿಕೊಂಡನು. ಅವನನ್ನ ಆವನಿದ್ದ ಕಥೋಲಿಕ್ ಮಾರದ ಸಮಾಧಿ ಪ್ರದೇಶದಲ್ಲೇ ಪೆಟ್ಟಿಗೆಯಲ್ಲಟ್ಟು ಹೂಳಲಾಯಿತು. ಆದರೆ ಕಾಲಾಂತರದಲ್ಲಿ ಅವನ ಆಶ್ಚರ್ಯಕರ ಶಕ್ತಿಗಳ ಕತೆಗಳು ಹಬ್ಬಿ ಅವನ ಶವವನ್ನು ಇನ್ನೂ ಹೆಚ್ಚು ಗೌರವದ ಸ್ಥಳದಲ್ಲಿ ಹಗಿಯಬೇಕೆಂದೂ ಹೊರ ತೆಗೆದಾಗ ಇದೇ ಈಗ ಶತ್ತನ ಹೆಣದಂತೆ ಕೊಳೆಯದೆ ಉಳಿದದ್ದು ಕಂಡು ಬಂತು. ಆ ಮೇಲೆ ಆಗಾಗ್ಗೆ ಡಾಕ್ಟರರು ಅದನ್ನು ಪರೀಕ್ಷಿಸಿ ಅದು ಕೊಳೆಯದೆ ಉಳಿದುದನ್ನ ಕಂಡು ಆಶ್ಚರ್ಯಪಡುತ್ತಿದ್ದರು.

೧೯೩೬ರಲ್ಲಿ ಕಳೇಬರವನ್ನು ಹೆಚ್ಚು ಪ್ರಶಸ್ತವಾದ ಈಗಿನ ಸಮಾಧಿಗೆ ವರ್ಗಾಯಿಸಲಾಯಿತು. ಆದರೆ ಆ ವರ್ಷ ಸಮಾಧಿಯಿಂದ ನೀರು ಜಿನುಗಿಕೊಡಗಿದ್ದರಿಂದ ಪುನಃ ಬಿಚ್ಚಿ ನೋಡಲಾಯಿತು ಕಳೇಬರದ ಮೇಲೆ ಕಾಲಾಂತಯನ ಆಘಾತವು ತಟವಷ್ಟೂ ಆಗಿದ್ದಿಲ್ಲ ಮೂತ್ತವಲ್ಲ, ಆದರ ಹುಬ್ಬಿನಿಂದ ಬೆವರು ಜಿನುಗುತ್ತ. ನೆಲೆವ ಪಾದ್ರಿಗಳು ಅದನ್ನೊರಸಿದಾಗ ಪುನಃ ಹನಿ ಹನಿಯಾಗಿ ಬೆವರು ಒಸರಿತು ಚರ್ಮವನ್ನು ಚುಚ್ಚಿದರೆ ರಕ್ತ ಬಂತು!

ಈ ಅದ್ಭುತದ ಸುದ್ದಿ ಸುತ್ತಮುತ್ತ ಹಬ್ಬಿದಾಗ ಜನರು ಸಮಾಧಿಯ ದರ್ಶನಕ್ಕಾಗಿ ಬಂದು ಮುಕರತೊಡಗಿದರು. ಆಗ ಇನ್ನೂ ಅದ್ಭುತಗಳು ಘಟಿಸಿದವು. ಚಿರ ರೋಗಿಗಳ, ಅಂಗಹೀನರೇ ಮೊದಲಾದ ದಟಿಗಳ, ಅಕಸ್ಮಾತ್ತಾಗಿ ಗುಣಹೊಂದಿದರು ಇದರಿಂದಂತೂ ಯಾತ್ರಿಕರ ತಂಡಗಳು ಇನ್ನಷ್ಟ ಬೆಳೆದವು. ಕಣ್ಣಿಲ್ಲದವರಿಗೆ ಕಣ್ಣು ಬಂತು. ಕುಬ್ಜರ ಕಾಲುಗಳು ಸರಿಯಾದವು. ಡಾಕ್ಟರರಲ್ಲಿ ಕೈಬಿಟ್ಟಿದ್ದ ರೋಗಿಗಳು ಕೇವಲ ಸಮಾಧಿಯ ಸಾನ್ನಿಧ್ಯ ಪ್ರಾರ್ಥನೆಯಿಂದಲೇ ಗುಣ ಹೊಂದಿದರು.

'ಹಿಂದುಸ್ಥಾನ ಟೈಮ್ಸ್'ನ ಪ್ರತ್ಯಕ್ಷ ದರ್ಶಿಯು ತಾನು ಕಣ್ಣಾರೆ ಕಂಡ ಎರಡು ಉದಾಹರಣೆಗಳನ್ನ ಉಲ್ಲೇಖಿಸಿದ್ದಾನೆ. ೭೦ ವರ್ಷದ ಮುದುಕಿಯೊಬ್ಬಳು ಹದಿನೈದು ವರ್ಷದಿಂದ ಕಣ್ಣು ಕಳೆದುಕೊಂಡಿದ್ದಳು ಅವಳು ಸಮಾಧಿಯನ್ನು ಸ ವಿಸಿಸಿದೊಡನೆ ಒಮ್ಮೆಲೇ ಕಣ್ಣಾಗಳನ್ನು ಪಡೆದಳು ಇದು ಮಾನಸಿಕ ರೋಗದ ಚಿಕಿತ್ಸೆಯೆಂದು ಅಶ್ರದ್ಧಾಳುಗಳು ಹೇಳುವದಾದರೆ, ಹುಟ್ಟುಗೂಸಿನಿಂದಲೂ ಕಣ್ಣಿಲ್ಲದ ಹಿಂದೆ ಹೆಂಗಸೊಬ್ಬಳು ಸಮಾಧಿಯ ಬಳಿ ಸಾರಿದೊಡನೆ ಕಣ್ಣನ್ನೆ ಅವಳ ಬೆನ್ನ ನೆಟ್ಟಿಗಾಗಿ ಸರಿಯೂಗಿ ನಡೆಯತೊಡಗಿದ ಉದಾಹರಣೆಯಿದ. ಅವಳಿಗೆ ಸಮಾಧಿಯ ದರ್ಶನವಾದೊಡನೆ ವೈಯಲ್ಲಿ ಸಾವಿರ ಸೂಜಿಗಳನ್ನ ಚುಚ್ಚಿದಂತೆ ವೇದನೆಯಾಯಂತೆ. ಅಂಗಾಂಗಗಳು ಕಂಪಿಸತೊಡಗಿದವಂತೆ—ಆ ಮೇಲೆ ಒಮ್ಮೆಲೇ ಅವಳ ಸಮಸ್ತಕೋಣಕ್ಕೆ ಬ ಗಿದ್ದ ಬೆನ್ನು ನೆಟ್ಟಲ್ಲೆಂದು ನೆಟ್ಟಗಾಯಿತು. ಹಿಂದೆ ಡಾಕ್ಟರರು ಅವಳನ್ನು ಸರಿಪಡಿಸಲು ಮಾಡಿದ ಬಾರಿ ಶಸ್ತ್ರ ಚಿಕಿತ್ಸೆ ಮಾಡಿ ಸೋತಿದ್ದರು.

'ಕ. ವಿ.'

ದಿ. ಎಗ್ರಿಕಲ್ಚರಲ್ ಅಂಡ್ ಇಂಡಸ್ಟ್ರಿಯಲ್ ಬ್ಯಾಂಕ್ ಲಿಮಿಟೆಡ್., ಸೋಮವಾರಪೇಟೆ (ಕೊಡಗು).

ನೋಟೀಸು.

ಈ ಮೂಲಕ ರೊನೆಸ್ತ ಜನರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ನಮೂದಿಸಿದವರು ಈ ಬ್ಯಾಂಕಿನಿಂದ ಚಿನ್ನಭರಗಳ ಅಡಿಮೇಲೆ ಪಡೆದ ಸಾಲಗಳ ಅಸಲು ವಕ್ಕ ಬಡ್ಡಿ ವಗೈರೆಗಳನ್ನು ಬಾಕಿ ನೂಡಿರುವುದರಿಂದಲೂ, ಸದ್ರಿಯವರಿಗೆ ರಿಜಿಸ್ಟರ್ ನೋಟೀಸು ಕಳಿಸಿದ್ದಕ್ಕೆ ಕೆಲವರು ಸ್ವೀಕರಿಸಿರುವುದಿಲ್ಲವೆಂದು ನೋಟೀಸು ವಾಪಾಸು ಬಂದಿರುವುದರಿಂದಲೂ, ಬಾಕಿಯವರು ಈ ವರೆಗೆ ಸದ್ರಿ ಸಾಲಗಳ ಬಾಬ್ತು ಬಾಕಿ ಇರುವ ಅಸಲು ಬಡ್ಡಿ ವಗೈರೆಗಳನ್ನು ತಾವತಿ ಮಾಡದೆ ಇರುವುದರಿಂದಲೂ ಸದರಿ ಸಾಲಗಳ ಬಾಬ್ತು ಅಡಿಟ್ಟು ಇರುವ ಸಗಗಳನ್ನು ಇದೇ ಬರುವ ತಾರೀಕು 26-8-1950 ಶನಿವಾರ ಮಧ್ಯಾಹ್ನ 1 ಗಂಟೆಗೆ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮೂಡಲಾಗುವುದು ಸದರಿ ಏಲಂ ತಾರೀಕನ್ನು ಬ್ಯಾಂಕಿನವರಿಗೆ ಯಾವಕ್ಕೂ ಕಂಡಲ್ಲಿ ಪುನಃ ತಿಳಿಸಲಾಗುವುದಲ್ಲವೆಂದೂ ತಿಳಿದಿರಲಿ.

ಲೋನು ನಂಬ	ಹೆಸರು ಮತ್ತು ವಿಳಾಸ	ಅಡಿಟ್ಟು ತಾರೀಕ	ಸಾಲದ ಅಸಲು ರೂಪಾಯಿ
JL 3ಸ್ಟ್143	ಕರಿಯಪ್ಪ ಅಚಾರಿ, ಪಾಲ್ಬಾಜಾರು ಮಗ ಕುಂಞಪ್ಪ, ಕೆಸುಗದ್ದೆ ಸೋಮವಾರಪೇಟೆ	12 7 1945	20 0 0
JL 612143	Do	18 10 1943	20 0 0
JL 194,44	ವಿ ಕೆ ರಾಮಸ್ವಾಮಿ ಕೃಷ್ಣಸ್ವಾಮಿ ಮಗ, ಜಾಜಿ, ಸೋಮವಾರಪೇಟೆ	18 4 1944	4 0 0
JL 181 45	ದೇವಪ್ಪ, ಬಸವರಾಜಗೌಡನ ಮಗ ಕೊಂಬಾರಪೇಟೆ	30 7 1946	5 0 0
JL 358 45	ಸೋಮಯ್ಯ, ಕಿರಿಕುಟ್ಟಗೌಡನ ಹೊಂಡತಿ ಕಾರ್ಯಕೊಪ್ಪಲ್ ಎಸ್ಟೇಟ್, ಸೋಮವಾರಪೇಟೆ	11 12 1945	5 0 0
JL 27 46	ಸಬ್ಬಕಪನೆ ಬಸಪ್ಪ, ನಂಜಪ್ಪಳ ಮಗ ಬೀಳಿಗೇರಿ ಗ್ರಾಮ, ಮಡಿಕೇರಿ ತಾಲ್ಲೂ	23 1 1946	40 0 0
JL 126146	ಮಲ್ಲಗವಾಡ ಚಕ್ಕಮಣಿ ಕಟ್ಟಿ ಮಗ ಪೂಣಚ, ಸೋಮವಾರಪೇಟೆ	26 3 1946	4 0 0
JL 278 46	ಟಿ ಕೆ ಶಾಂತವೀರಗೌಡ ಕೆಳಗಿನ ಕಿರಿಕ್ಕಟ್ಟಿ ಪೇಟೆಗೌಡ ಮಗ ಚಿಣ್ಣಪ್ಪ, ಸೋಮವಾರಪೇಟೆ	18 7 194	20 0 0
JL 308146	Do	6 8 1946	100 0 0
JL 321 46	Do	17 8 1946	22 0 0
JL 453146	ಕಳಸ್ಯ ಅಂತೋನಿ ಗೌಡನ ಮಗ C o ಗಾಡಿ ಗಂಗಯ್ಯ, ಸೋಮವಾರಪೇಟೆ	16 10 1946	12 0 0
JL 106 47	ಕಂಬಿಬಾಣೆ ಮುತ್ತಣ್ಣ, ಸುಬ್ಬಯ್ಯನವರ ಮಗ ಚಿಣ್ಣಪ್ಪ ಹುಣಸೆ ಸೋಡ ಪಾಲಿಟೆ	14 3 1947	5 0 0
JL 353147	ಬಿ ಟಿ ಪಾಂಡುರಂಗ ಶೇಖ್, ತಿಮ್ಮಪ್ಪ ಶೇಖರ ಮಗ ಚಿಣವ ರ ಸೋಮವಾರಪೇಟೆ	18 7 1947	100 0 0
JL 362 47	Do	23 7 1947	50 0 0
JL 369 47	ತೊಂಗಳ್ಳಮನೆ ನಿಂಗಪ್ಪ, ನಿಂಗಪ್ಪನ ಮಗ, ಬೇಳೂರು ಬಸವಳ್ಳಿ ಸೋಮವಾರಪೇಟೆ	28 7 1947	30 0 0
JL 499147	ಬಿ ಟಿ ಪಾಂಡುರಂಗಶೇಖ್ ತಿಮ್ಮಪ್ಪಶೇಖರ ಮಗ, ಚಿಣವಾರ ಸೋ ಮವಾರಪೇಟೆ	10 9 1947	80 0 0
JL 558 47	ಜಾಜಿ ಊರು, ಅಡಿಕೆ ಮಗ ಕರಿಯಪ್ಪ, ಸೋಮವಾರಪೇಟೆ ಪೋಸ್ಟು	29 9 1947	15 0 0
JL 627 47	ತೊಂಗಳ್ಳಮನೆ ನಿಂಗಪ್ಪ, ನಿಂಗಪ್ಪನ ಮಗ ಬೇಳೂರು ಬಸವಳ್ಳಿ, ಸೋಮವಾರಪೇಟೆ	27 10 1947	15 0 0
JL 734 47	ಕಮ್ಮಯ್ಯಹಾಡಿ ಮಚಿಲಂಗಡಾ ಮಗ, ಜಾಜಿ, ಸೋಮವಾರಪೇಟೆ	9 12 1947	18 0 0
JL 29148	ಕಾಳ, ದಾಮನ ಮಗ ಮೊಣಗೇರಿ, ಸೋಮವಾರಪೇಟೆ	13 1 1948	7 0 0
JL 210148	ಎಂ ಜಂಗಪ್ಪ, ಮಚಿಲಂಗಡನ ಮಗ ಫಾರೆಸ್ಟ್ ಗಾರ್ಡ್ ಬೇಳೂರು, ಸೋಮವಾರಪೇಟೆ	26 4 1948	185 0 0
JL 362 48	ಕೆ, ತಿಮ್ಮಪ್ಪ ಶೆಟ್ಟಿ, ಸುಬ್ಬಯ್ಯಶೆಟ್ಟಿಯ ಮಗ, ವ್ಯಾಪಾರಿ ಸೋಮವಾರಪೇಟೆ	28 6 1948	110 0 0

ಕೆ. ಅಮಲಾಕ್ಷ ನಾಯರ್,
ಏಜಂಟ್,
ಬ್ಯಾಂಕಿನ ಆಫೀಸು,
ಸೋಮವಾರಪೇಟೆ, ತಾ 1-8-1950

ಓದುಗರ ಓಲೆಗಳು.

ಜುಲುಮಿನ ತೆರಿಗೆ

ಕಟ್ಟಣಗಳನ್ನ ಉದ್ಧರಿಸುವ ದೃಷ್ಟಿಯಿಂದ ಮುನ್ಸಿಪಾಲಿಟಿಗಳಲ್ಲಿ 'ಆಕ್ಟ್ರಾಯಿ' ತೆರಿಗೆ ಹಾಕುತ್ತಿರುವರು. ಹಳ್ಳಿಗಳಿಂದ ಕರುವ ತರಕಾರಿ, ಕೋಳಿಮೊಟ್ಟೆ, ಹಾಲು ಮೊದಲಾದುವಕ್ಕೂ ಈ ತೆರಿಗೆ ಹಾಕಲ್ಪಡುತ್ತಿ ನೆಂಟಿಯಲ್ಲಿ ಮೂರಾಟವಾಗದೆ ಹೊರಗೆ ಕಳುಹಿಸುವಲೆ ವಹಿವಾಟಿನ ಅನುಕೂಲತೆಗಾಗಿ ಪಟ್ಟಣಕ್ಕೆ ಬರುವ ವಸ್ತುಗಳಿಗೂ ಕಂದಾಯ ಹಾಕಲ್ಪಡುತ್ತಿದೆ ಇದನ್ನು ವಸೂಲ್ಮಾಡುವ ರೀತಿಯೂ ಜನರಿಗೆ ತ್ರಾಸದ ಯಕ್ಕವಾಗಿದೆ ಸಾಮಾನು ತುಂಬಿ ಬರುವ ಲಾರಿಗಳು ರಾತ್ರಿ ಬಂದರೆ ಗೇಟಿನಲ್ಲಿ ಬೆಳಗ್ಗಿನ ವರೆಗೆ ನಿಂತಿರಬೇಕಾಗುತ್ತದೆ ಬಸ್ಸುಗಳಲ್ಲಿ ಸಾಮಾನುಗಳನ್ನು ಆಕ್ಟ್ರಾಯಿ ಆಫೀಸಿಗೆ ಹೊರಿಸಿ ಜನರಿಗೆ ತೊಂದರೆ ಮಾಡಲಾಗುತ್ತಿದೆ ಜನಾಯಿತ ಚಿನಪ್ರತಿನಿಧಿಗಳೇ ಆಡಳಿತ ನಡೆಸುವ ಮುನ್ಸಿಪಾಲಿಟಿಗಳಲ್ಲಿ ಜನರ ಹಿತದ ಕಡೆಗೂ ಗಮನವಿಡಬೇಡವೆ? ಜನರಿಗೆ ತೊಂದರೆಯಾಗದ ರೀತಿ ಈ ಕ್ರಮಗಳನ್ನೆಲ್ಲಾ ನೂರ್ಪಡಿಸಬೇಕು.

'ಅನುಭವಿಸಿದವ'

ಕಾಲೇಜು ಹಾಸ್ಟೆಲು

ಕೊಡಗು ಸರಕಾರಿ ಕಾಲೇಜಿಗೆ ಸಂಬಂಧಿಸಿದ ವಿದ್ಯಾರ್ಥಿಗಳ ನಿವಾಸ ಗೃಹವಿಷಯದ ಅದರ ಪರಿಸ್ಥಿತಿಯ ಬಗ್ಗೆ ಅಷ್ಟಾಸ್ಟ್ರಿಕರವಾಗಿದೆ ಮಳೆ ಹೊಡೆದಾಗ ವಿಂಡಿಯ ದನೀರ ಬದ್ದು ನೆಲವೆಲ್ಲಾ ಕೆಸರಂಗುತ್ತದೆ ಕಾಲೇಜು ವಿದ್ಯಾರ್ಥಿಗಳು ಈ 'ಡ್ಯಾಂಕ್' ಮನೆಯಲ್ಲಿ ಒಂದು ವರ್ಷಕ್ಕೆ ಮೇಷ್ಟುಟ್ಟು ಜೀವನ ತಿಥ್ಥತೂ ಅದಕ್ಕೆ ವಿಶೇಷ ದ್ರವ್ಯವನ್ನು ಮಾಡಿಕೊಟ್ಟಿಲ್ಲ. ಮೊನ್ನೆ ಮೊನ್ನೆಯಷ್ಟೆ ಕಟ್ಟಿದ ಮನೆಗಳಿಗೆ ನಿದ್ಯುದ್ದೀಪ ಸರಬರಾಯಿಯಾಗಿದೆ ಪ್ರತಿಯೊಬ್ಬ ವಿದ್ಯಾರ್ಥಿಯೂ ಒಂದೊಂದು ದೀಪವಿಟ್ಟುಕೊಂಡು ವಿಪರೀತ ಬಿರ್ತಿನ ದಾರಿಬಾಗಿದೆ ಊಟ ಪೂರ್ತಿಪ್ತಿಕರವಾಗಿಲ್ಲ ಕಲ್ಲು ಮಿಶ್ರಿತ ಅಕ್ಕಿಯೇ ವಿದ್ಯಾರ್ಥಿಗಳ ಪಾಲಿಗೆ ಹರಮಾನ್ನ! ಸಿನಿಯರ್ ತರಗತಿಯ ವಿದ್ಯಾರ್ಥಿಗಳು ಈ ವರ್ಷ ಕೊಂಚ ಓದಬೇಕಿರುವುದರಿಂದ ಅವರಿಗೆ ಪ್ರತ್ಯೇಕ ಓದುವ ಅನುಕೂಲತೆ ಇಲ್ಲ ಕೇವಲ ೩೦ ವಿದ್ಯಾರ್ಥಿಗಳಿಗೆ ಸ್ಥಳವಿರುವ ಈ ಹಾಸ್ಟೆಲಿನಲ್ಲಿ ಈಗ ಇಲ್ಲ ವಿದ್ಯಾರ್ಥಿಗಳದ್ದಾರೆ ಪ್ರತಿ ಕೋಟೆಯಲ್ಲಿ ಮೂಡಲು ಸೀನಿಯರ್ ಮತ್ತು ಐದು ಜೂನಿಯರ್ ವಿದ್ಯಾರ್ಥಿಗಳನ್ನು ತುಂಬಲಾಗಿದೆ ಊಟವಾಡಿ ಹೋಗಿ ಸೀನ್ ಹಾಲ್‌ನಲ್ಲಿ ಸ್ಥಳವಿಲ್ಲದೆ ಊಟ ಮಾಡುವಾಗ ಒಬ್ಬರ ಕೈ ಒಬ್ಬರ ಎದೆಗೆ ಮುಟ್ಟುತ್ತದೆ ಕಣ್ಣೆದುರಿಗೆ ಕಾಣುವ ಇಲ್ಲಿಯ ಹೈಸ್ಕೂಲು ವಿದ್ಯಾರ್ಥಿ ನಿವಾಸ ಗೃಹದಲ್ಲಿರುವ ಅನುಕೂಲತೆ ಕೂಡ ಇಲ್ಲಿಲ್ಲ. ಪ್ರತಿ ವಿದ್ಯಾರ್ಥಿಯು ಕೋಷೆಯ ಬಾಡಿಗೆ ಎಂದು ರೂ. ೩-೧-೦ ಕೊಡುತ್ತಾನೆ ಊಟದ ಖರ್ಚು ರೂ. ೪೫ ಆಗುತ್ತದೆ. ಇಷ್ಟು ಕರ್ಚಾದರೂ ವಿದ್ಯಾರ್ಥಿಗಳಿಗೆ ಅದಕ್ಕೆ ತಂಯೂದ ಯಾವದೇ ಸವಲತ್ತು ದೊರೆಯುತ್ತಿಲ್ಲ. ಇನ್ನಾದರೂ ಸಂಬಂಧಿಸಿದವರು ಪರಿಶೀಲಿಸಿ, ಅವಶ್ಯವಾದ ಅನುಕೂಲತೆಗಳನ್ನು ಒದಗಿಸಿಕೊಡುವರೇ?

'ವಿ'

ಚಿಯ್ಯಂಡಾಣೆ ಆಸ್ಪತ್ರೆ

ಇಲ್ಲಿ ಒಂದು ಆಸ್ಪತ್ರೆ ತೆರೆದಿದ್ದಕ್ಕೆ ಅಧಿಕಾರಿಗಳಿಗೆ ತುಂಬಾ ವಂದನೆ ಆದರೆ ಇದರಿಂದ ಜನರಿಗೆ ಸಾಕಷ್ಟು ಉಪಯೋಗ ದೊರೆಯದಂತಾಗಿದೆ. ಈ ಆಸ್ಪತ್ರೆಗೆ ಬರುವ ಡಾಕ್ಟರರು ಟ್ರಾನ್ಸ್ ಪೋರ್ಟ್ ಬಸ್ಸಿನಲ್ಲಿ ವೀರಾಜಪೇಟೆಯಿಂದ ೧೫ ಗಂಟೆಗೆ ಬಂದು. ಆಸ್ಪತ್ರೆ ತೆರೆಯುವ ತ್ತಾರೆ ಬಸ್ ಹಿಂದಕ್ಕೆ ಹೋಗುವಾಗ ಅಂದರೆ ಎರಡೂವರೆ ಗಂಟೆಗೆ ಆಸ್ಪತ್ರೆ ಮುಚ್ಚಿ ಬಸ್ಸಿನಲ್ಲಿ ಹೊರಡ ತ್ತಾರೆ ಈ ರೀತಿಯ ವಿವ್ಯವಹಾರಿಂದ ಜನರಿಗೆ ಯಾವ ದೇ ಲಾಭವಾಗುತ್ತಿಲ್ಲ ಈ ಒಗ್ಗೆ ಅಧಿಕಾರಿಗಳು ನಿಗ ವಹಿಸಿ ಈ ಆಸ್ಪತ್ರೆಯ ಅನುಕೂಲವನ್ನು ಜನರು ಹೆಚ್ಚು ಹೊಂದುವ ವಿಷಾಡು ಮಾಡುವರೇ?

ಬಿ ಸಿ ರಾಬಿ

ಕಪ್ಪು ಸಂತೆ.

ಕೆಲವು ಸಮಯದ ಹಿಂದೆ ವೀರಾಜಪೇಟೆಯ ವ್ಯಾಪಾರಸ್ಥರೊಬ್ಬರ ಅಂಗಡಿಯಲ್ಲಿ ಅವಲಕ್ಕಿ ಮೂರಾಟ ಮಾಡುವದನ್ನು ಮಡಿಕೇರಿಯಿಂದ ಒಂದು ರೇಶನಿಂಗ್ ಆಫೀಸರು ಕಂಡು ಹಿಡಿದು ಆತನಿಗೆ ೪೦ ರೂ ಜುಲ್ಮಾನೆಯಾಯಿತು ಆದೇ ಅಂಗಡಿಯಲ್ಲಿ ಪುನಹ ಅವಲಕ್ಕಿ ಮೂರಾಟವಾಗುತ್ತಿದೆ ಸಕ್ಕರೆಯೂ ಮೂರಾಟವಾಗುತ್ತಿದೆ ಹೀಗಾಗಲು ಕಾರಣವೇನು? ಇಲ್ಲಿರುವ ನಿಯಂತ್ರಣ ಅಧಿಕಾರಿಗಳು ಕಣ್ಣುಮುಚ್ಚಿ ವರ್ತಿಸುತ್ತಿರುವರೇ? ಈ ಸಂದರ್ಭದಲ್ಲಿ ಒಂದು ಮಾತು ಹೇಳಬೇಕಾಗಿದೆ. ನಿಯಂತ್ರಣ ಇಲಾಖೆಯ ಹಲವು ಅಧಿಕಾರಿಗಳು ವ್ಯಾಪಾರಸ್ಥರ ಅಂಗಡಿಗಳಲ್ಲಿ ಕೊತು ಹರಟೆ ಕೊಚ್ಚುತ್ತಿರುವದೂ, ಟೀ ಕಡಿಯುತ್ತಿರುವುದೂ ಅಪರೂಪವಲ್ಲ ಈ ರೀತಿಯ ವೈತ್ರಿಯೇ ಮುಂದೆ ಬೆಳೆದು ಇಂದಿನ ಒಂದು ಕಪ್ಪು ಬೆಂಚು ವರೆಯು ಹುಟ್ಟುಹಾಕಿದೆ ಎಂಬುದನ್ನು ಅಧಿಕಾರಿಗಳು ನೋಡಿ ತಿಳಿಯಬೇಕಾಗಿದೆ ಅಲ್ಲದೆ ಮಾಡಿ ಸಿಕ್ಕಿದವರಿಗೆ ಹೆಸರಿಗೆ ಜುಲ್ಮಾನೆ ಹಾಕಿದರೆ ಸಾಲದು ನೊನ್ನೆಯಂತೆ ಬೆಂಗಳೂರಿನ ಕಂಟ್ರೋಲ್ ಅಧಿಕಾರಿಯೊಬ್ಬರು ರೂ ೪೦೦ ಪಡೆದಂತೆ ಕ್ಷಾಗಿ ವರ್ಷ ಕಠಿಣಾಸಜೆ ರೂ ೧೦೦೦ ಜುಲ್ಮಾನೆ ವಿಧಿಸಿದಂತೆ ಅಂತೆ ಕಠಿಣ ಶಿಕ್ಷೆ ವಿಧಿಸಬೇಕು. ಈ ರೀತಿ ಪಿಡ್ಡಾಯ ವರ್ಗಗಳನ್ನನುಸರಿಸಿದರೆ ಕಪ್ಪು ಸಂತೆ ಸ್ವಲ್ಪವಾದರೂ ನಿಂತೀತು.

ತಮ್ಮಯ್ಯ.

(ಮುಂದಿನ ಪುಟ ನೋಡಿ)

ಭೀತಿ ಯೂ ಪ್ರೀತಿ ಇಲ್ಲದೆ.

ಲೇ:– "ಗುಪ್ತ" ಮಡಿಕೇರಿ.

ಯುದ್ಧ ಗಡಿ.

ಕೊರಿಯಾ ಯುದ್ಧವು ಪ್ರುಶಗತಿಯಿಂದ ಸಾಗಿದೆ. ಉತ್ತರ ಕೊರಿಯಾದ ಕಮ್ಯೂನಿಸ್ಟ್ ಪಕ್ಷವು ನಿರಂತರಂಕವಾಗಿ ಮುಂದರಿಯುತ್ತಿದೆ. ಅಮೇರಿಕನರು ತಮ್ಮ ಸೈನ್ಯ ಪಡೆಗಳನ್ನು ತುಂಬಿ ಎಸ್ಟೇ ಪ್ರಯತ್ನ ಪಟ್ಟರೂ, ಬಾಂಬರುಗಳನ್ನು ಪ್ರುಯೋಗಿಸಿ ಬಾಂಬಿನ ಮಳೆಗರೆದರೂ ಯುದ್ಧಗತಿ ಬದಲಾಗಿರುವದಿಲ್ಲ ದಕ್ಷಿಣ ಕೊರಿಯಾದ ಬಹು ಭಾಗವು ಕಮ್ಯೂನಿಸ್ಟರ ವಶಕಾಗಿದೆ. ಇನ್ನೂ ಕೇವಲ ೩೫ ಮೈಲುಗಳಷ್ಟ ಮುಂದರಿದರೆ ಅಮೇರಿಕನರು ಕೊರಿಯಾವನ್ನು ಬಿಡಬೇಕಾಗುವದೆಂದು ಹೇಳಲಾಗುತ್ತಿದೆ. ಕಮ್ಯೂನಿಸ್ಟ್ ವಾರ್ತೆಯಂತೆ ಕೊರಿಯಾದಲ್ಲಿ ಅಮೇರಿಕನರನ್ನು ಸಂಪೂರ್ಣ ಸೋಲಿಸಿ ಹಿಮ್ಮೆಟ್ಟಿಸಲಾಗಿದೆಯೆಂದೂ, ಇಡೀ ಕೊರಿಯಾವು ಕಮ್ಯೂನಿಸ್ಟರ ವಶವಾಯಿತೆಂದಾಗ ಅಲ್ಲಲ್ಲಿ ಹುದುಗಿಕೊಂಡಿರುವ ಗೊರಿಲ್ಲಾ ಪಡೆಗಳನ್ನು ಹುಡುಕಿ ಪದೆಬಡೆಯುತ್ತಿದೆಯೆಂದೂ ತಿಳಿಯಬರುತ್ತದೆ. ಯುದ್ಧಕ್ಷೇತ್ರಯೊಗಿರಬಹ ವಾರ್ತಾರೂಪ ಪಡೆಗಳು ಯಕಸ್ಸಿ ರೀತಿ ಕೊರಿಯನ್ ಮುನ್ನಡೆ ತಡೆಯಲು ಸಮರ್ಥರಾಗಿಲ್ಲವೆಂಬ ಸತ್ಯ.

ಎರಡನೇ ಡಂಕರ್ಕ್?

ಕಳೆದ ಯುದ್ಧದ ಕಾಲಕ್ಕೆ ಜರ್ಮನ್ ಸೇನೆಗಳಿಂದ ಸುತ್ತುವರಿಯಲ್ಪಟ್ಟ ವಿತ್ರರಾಷ್ಟ್ರಗಳ ಪಡೆಯು ಡಂಕರ್ಕ್ ಎಂಬಲ್ಲಿಂದ ಹಿಂತೆಗೆದುಕೊಳ್ಳುವದೇ ಪ್ರುಯಾಸವಾಯಿತ. ಹಾಗೆ ಅಪ್ರತಿಮ ಸಾಹಸ ಮತ್ತ್ ತ್ಯಾಗಗಳಿಂದ ಹಿಂದೆ ಬಂದುದಸ್ನೇ ನಿಜವಾಕ್ಕೀಥಾ ಹೆಚ್ಚಾಗಿ ಹೊಗಳಿಕೊಳ್ಳಲಾಯಿತು. ಆದೇ ಪರಿಸ್ಥಿತಿ ಕೊರಿಯಾದಲ್ಲಿ ಆಗುವದೇ ಎಂಬ ಸಂಶಯ ತಲೆದೋರುತ್ತಿದೆ. ಸಂಯುಕ್ತ ರಾಷ್ಟ್ರಸಂಘದ ಆಶ್ರಯದಲ್ಲಿ ಸಂಯುಕ್ತ ರಾಷ್ಟ್ರಸಂಘದ ಧ್ವಜವನ್ನು ಹಿಡಿದು ದಕ್ಷಿಣ ಕೊರಿಯಾದ ನೆರವಿಗೆ ಬಂದಿರುವ ೩೫ ರಾಷ್ಟ್ರಗಳ ಇತರರಲ್ಲಿ ಮೇಜರ್ಜರ್ ಇವರು ಕೇವಲ ಅಮೆರಿಕಾನ ಮಲ್ಲರೆಂದೇ ತೋರುತ್ತಿದೆ. ಪಾರೀಕ್ಷ ಅವರು ಹೀಗೆ ಹೇಳಿದ್ದರು. ಉತ್ತರ ಕೊರಿಯಾದ ಸೈನ್ಯಗಳು ವಿಜಯದ ಸುಯೋಗವನ್ನು ಪಡೆಕೊಂಡಿವೆ. ಅವರ ಅದೃಷ್ಟವು ಬಲವತ್ತರವಾಗಿದೆ. ಆದರೆ ಈ ಸೂತಿನಂತಾಗದೆ ಈಗ ಕೊರಿಯಾದಿಂದ ಅಮೇರಿಕನ್ ಸೇನೆಗಳೇ ಕಾಲ್ತೆಗೆಯುವ ಪ್ರುಸಂಗ ಬಂದಿದೆ. ಜಗತ್ತಿನ ಸಾಮ್ರಾಜ್ಯಶಾಹಿ ಸರ್ವಶಕ್ತರೇ ಎಂದು ಮೆರೆಯುತ್ತಿದ್ದ ಅಮೇರಿಕಾದ ಪ್ರತಿಷ್ಠಾನವು ಮಣ್ಣಾಪಾಲಾಗಿದೆ! ಎಂಬಂತೆ ಪರಿಸ್ಥಿತಿ ಇದೆ.

ಕಮ್ಯೂನಿಸ್ಟ್ ಸ್ಫೋ.

ಕಳೆದ ವಾರ ನಾನು ಬರೆದಾಗ ಇಂಡೋಚೀನಾದಲ್ಲಿ ಕಮ್ಯೂನಿಸ್ಟರಿಗೆ ಬಲ ಜಾಗುವದೆಂದು ಬರೆದಿದ್ದೆ. ಅಹು ಸತ್ಯವಾಗುವ ಚಿಹ್ನೆಗಳು ಕೋರಿಬರುತ್ತಿವೆ ಚೀನೀ ಕಮ್ಯೂನಿಸ್ಟರು ಇಂಡೋಚೀನಾ ಮತ್ತು ಥಾರ್ಮೋಸಾಗಳ ಕಡೆ ಆಸಕ್ತಿ ತೋರಿಸುತ್ತಿದ್ದಾರೆ ಜಿಯಂಗ್ ಕೈಶೇಕರ ಕಡೆಗೆ ಹೆಜ್ಜೆಯಿಗಿರುವ ಥಾರ್ಮೋಸಾವು ಜೈನಾಕ್ಕೆ ಸೇರಬೇಕಾದುದು. ಈಗ ಪೂರ್ವ ಏಷ್ಯಾದಲ್ಲಿ ಹೆಚ್ಚುತ್ತಿರುವ ಕಮ್ಯೂನಿಸ್ಟ್ ಚಳವಳವನ್ನು ತಡೆಗಟ್ಟಲು ಅಮೇರಿಕನರು ಥರ್ಮೋಸಾದಲ್ಲಿ ತಮ್ಮ ಸೈನ್ಯ ಕೇಂದ್ರವನ್ನು ಸ್ಥಾಪಿಸಿರುವರ. ಆದ್ದರಿಂದಲೇ ಕಮ್ಯೂನಿಸ್ಟರೂ ಕೂಡ ಇದರ ಮೇಲೇರಿ ಬಾರದೆ ಸಮಯ ಕಾಯುತ್ತಿದ್ದಾರೆ ಒಂದು ನೇಳೆ ಅವರು ಥಾರ್ಮೋಸಾದ ಮೇಲೆ ಧಾಳಿ ಪ್ರಾರಂಭಿಸಿದರೆ ಮೂರನೆ ಜಾಗತಿಕ ಮಹಾಯುದ್ಧವು ಪ್ರಾರಂಭವಾಂತೆಯೇ ಎನ್ನಲಡ್ಡಿಯಿಲ್ಲ ಇದರ ಜೊತೆಗೆ ಯೂರೋಪಿನಲ್ಲಿಯೂ ಇತ್ತಲಾಗಿ ಚಟುವಟಿಕೆಗಳು ಹೆಚ್ಚಿವೆ ಪೂರ್ವ ಜರ್ಮನಿಯಲ್ಲಿ ಯೂರೋಪಿನ ಪ್ರಾಮುಖ್ಯ ಕಮ್ಯೂನಿಸ್ಟ್ ಮುಂದಾಳುಗಳ ಸಮ್ಮೇಳನ ನಡೆದಿದೆ

ಸ್ಟಾಲಿನರ ಅದೃಷ್ಯವೇ?

ರಷ್ಯಾದ ಸ್ಟಾಲಿನರು ಅದೃಷ್ಯಶಾಲಿಗಳೆನ್ನಬಹುದು. ಅವರಿಗೆ ದೊರೆತಿರುವ ಮತ್ತು ದೊರೆಯುತ್ತಿರುವ ಸನ್ನಿವೇಶಗಳು ಇದನ್ನು ಎತ್ತಿಹೇಳುತ್ತಿದೆ ಕೊರಿಯಾ ಯುದ್ಧದಲ್ಲಿ ಕಮ್ಯೂನಿಸ್ಟರ ಮೇಲೆ ಜಗತ್ತೇ ಉರಿದು ಬಿದ್ದಂತಿದ್ದಾಗ ಪಂಡಿತನೆಹರೂವರ ಸಂಧಾನ ರಾಜತ್ವವೂಂದು ಸ್ಟಾಲಿನರು ಶಾಂತಿಗೆ ವಿರೋಧಿಗಳಲ್ಲವೆಂಬುದನ್ನು ಜಗತ್ತಿಗೆ ಸಾರಿತು ಜೈನಾದಲ್ಲಿ ಯಾಗಲೀ, ಕೊರಿಯಾದಲ್ಲಿಯಾಗಲೀ, ಕಡೆಗೆ ಇಂಡೋಚೀನಾ ಬರ್ಮಾಗಳಲ್ಲಾಗಲೀ ತಾವು ಪ್ರತ್ಯಕ್ಷ ಕಾಣಿಸಿಕೊಳ್ಳದೆ ಅಲ್ಲಿಯವರಿಂದಲೇ ತನ್ನಕಾರ್ಯ ಸಾಧಿಸುವಅವ. ಜಾಣ್ಮೆಯನ್ನು ಪೆಚ್ಚಬೇಕು. ಅಪಕ್ಕನು ಗುಣವಾಗಿ ಅವರಿಗೆ ಶಕ್ತ ಸಂಬಳರಗಳೂ ಸೊರೆಯ ಎತ್ತಿವೆ.

ರಾಜಾ ಲಿಯೋಪಾಲ್ಡ್.

ಕಳೆದ ಯುದ್ಧದ ಕಾಲಕ್ಕೆ ಹಿಟ್ಲರನ ಪಕ್ಷ ವಹಿಸಿದ್ದನೆಂದು ಬೆಲ್ಜಿಯಮಿನಿಂದ ಹೊರಹಾಕಲ್ಪಟ್ಟ ಅವರ ಅರಸ ಲಿಯೋಪಾಲ್ಡ್ ದೊರೆಯು ಕಳೆದ ಆರೇಳು ವರ್ಷಗಳಿಂದ ಹೊಡೆಶಾಳ್ಗಿ ಜೀವಿಸಿ ಡ್ಡ ಲಿಯೋಪಾಲ್ಡ್ ಈಗ ತನ್ನ ಸ್ವತಂತ್ರಕಳಿಸಲಡಸಿ ವಾ ಹಿಂದಿನ ಆಸ್ಥಾನಕ್ಕೆ ಗೌರವಪೂರ್ಣ ಬೇಡವೇ ಎಂಬ ಜಿಜ್ಞಾಸೆಯ ಉದ್ಭವಿಸಿದೆ. ಬೆಲ್ಜಿಯಮ್ ಪ್ರಜೆಗಳು ರಾಜ್ಯಕ್ಕೆ ತಿಲಾಂಜಲಿ ಬಿಡಬೇಕೆಂದೂ ಮತವಿತ್ತರು. ಇತ್ತಲಾಗಿ ಬೆಲ್ಜಿಯನ್ ಪಾರ್ಲಿಮೆಂಟು ರಾಜರನ್ನು ಸಿಂಹಾಸನಕ್ಕೆ ಕರೆಸುವ ನಿರ್ಧಾರ ಮಾಡಿ ಅವರನ್ನು ಕರೆಸಿ ಸ್ವಾಗತಿಸಿದೆ. ಅರಸನ್ನು ಕರೆಸಿ ಬಾರದೆಂದು ಸೃಜಾರ ಮಾಡುತ್ತಿದ್ದ ಸಮಾಜವಾದಿಗಳ ಹಿಂದಿನ ಮುಖ್ಯಮಂತ್ರಿ ಹೆನ್ರಿಸ್ಪಾಕ್‌ರವರ ಮುಂದಾಳ್ತನದಲ್ಲಿ ಅಸಾಧ್ಯ ಪ್ರತಿಭಟನೆಗೆ ಪ್ರಾರಂಭಿಸಿದ್ದಾರೆ. ಮಿಲಿಯೊಂತ ಜನರಿಂದ ಕೂಡಿದ ಇವರ ಚಳವಳವು ದಿನೇ ದಿನೇ ಬಲಗೊಳ್ಳುತ್ತಿದೆ ಎಲ್ಲಾ ಕೂಲಿ ವರ್ಗದವರು, ಬಡ ಜನರು ಇತರ ಎಡ ಪಕ್ಷದವರು ಒಮ್ಮತವಾಗಿ 'ಲಿಯೋಪಾಲ್ಡರನ್ನು ತೂಗಬೇಕು' ಎಂದು ಗರ್ಜಿಸತೊಡಗಿದ್ದಾರೆ ಲಿಯೋಪಾಲ್ಡರು ಅರಮನೆಯಿಂದ ಹೊರಗೆ ಹೋಗಲಾರರು. ಮನೆಯಲ್ಲಿ ಸುಸಜ್ಜಿತ ಸೈನ್ಯದಿಂದ ರಕ್ಷಿತವಾಗಿದೆ ಅರಮನೆಗೆ ಧಾಮಿಸಿಬಂಡ ಜಳವಳದಾರರಿಗೂ, ಸೈನ್ಯಕ್ಕೂ ಘರ್ಷಣೆ ನಡೆದು ಅರವನೆಯ ಮುಂದೆ ರಕ್ತದ ಕಾಲುವೆ ಹರಿದಿದೆ ಲಿಯೋಪಾಲ್ಡರು ಸಿಂಹಾಸನ ತ್ಯಾಗಮಾಡದೆ ಚಳವಳ ನಿಲ್ಲುವಂತಿಲ್ಲ! ಇದು ಕಿರೀಟಗಳಿಗೆ ಕಾಲವಲ್ಲ ಹಿಂದೂಸ್ತಾನದ ಏಸರಕ್ಕೂ ಮಿಕ್ಕ ಕೀರೀಟಗಳು ನಿರ್ಜೀವವಾಗಿಲ್ಲವೇ? ಇತ್ತಲಾಗಿ ಲಿಯೋಪಾಲ್ಡರು ಸಿಂಹಾಸನ ತ್ಯಾಗಮಾಡುವರೆಂದು ತಿಳಿದುಬಂದಿದೆ. ಒರವ ಸೆಪ್ಟಂಬರ್ ತಿಂಗಳಲ್ಲಿ ತನ್ನ ಮಗ ಬೌದವಿನಾರಿಗೆ ಸಿಂಹಾಸನ ಬಿಟ್ಟು ಕೊಡಲಿರುವರು.

ಕಾಶ್ಮೀರ ಸಮಸ್ಯೆ

ಪಾಕಿಸ್ತಾನ ಮತ್ತು ಭಾರತಗಳ ಮುಖ್ಯ ಮಂತ್ರಿಗಳು ಡೆಲ್ಲಿಯಲ್ಲಿ ಕಲೆತು ಸಂಯುಕ್ತ ರಾಷ್ಟ್ರ ಸಂಘದ ಸರ್ ಓವೆನ್ ಡಿಕ್ಸನರೊಡಗೂಡಿ ಕಾಶ್ಮೀರ ಸಮಸ್ಯೆಯನ್ನು ಬಗೆಹರಿಸಲು ಐದು ದಿನಗಳ ವರೆಗೆ ಕೂಡಿ ಚರ್ಚೆ ನಡೆಸಿದರು ಈ ಅವಧಿಯ ಧೀರ್ಘ ಚರ್ಚೆಯಿಂದ ಯಾವ ತೀರ್ಮಾನವೂ ಆಗಿರುವದಿಲ್ಲ ಹಿಂದೆ ಆನೇಕ ಬಾರಿ ಮುಂದೆ ಇನ್ನೂ ಸಮಸ್ಯೆಗಳೇ ಇಂದೂ ಮುಂದೆ ನಿಂತಿವೆ ಸಂಯುಕ್ತ ರಾಷ್ಟ್ರಗಳ ಪ್ರತಿನಿಧಿಯು ಹೊಸ ಸೂಚನೆಗಳನ್ನೇನೂ ಮಾಡಿರುವದಿಲ್ಲ ಈ ಮುಖ್ಯಮಂತ್ರಿಗಳ ಭೇಟಿಯು ಮುಂದೆ ಕಾರ್ಯರೂಪಕ್ಕೆ ಬರುವ ಸೂಚನೆಯೂ ಕಾಣಿಸಿಕೊಳ್ಳದೆ ಅಲ್ಲಿಯ ಸರಕಾರಗಳ ಬಾರದಿದ್ದರೆ ಈಗ ಸರ್ ಡಿಕ್ಸನರು ತಮ್ಮ ಸೂಚನೆಯನ್ನು ಮುಂದಿಡುವರೆನ್ನಲಾಗಿದೆ. ದಿಲ್ಲಿಯಲ್ಲಿ ನಡೆದ ಚರ್ಚೆಯಲ್ಲಿ ನಿಸ್ಪಕ್ಷಪಾತ ದೃಷ್ಟಿಯಿಂದ ಕಾಶ್ಮೀರದ ಜನತೆಯು ಅಭಿಪ್ರಾಯವನ್ನು ಯಾವ ರೀತಿ ತೆಗೆಯಬಹ ದೆಂಬದನ್ನು ಹೆಚ್ಚು ವಿವೇಚನಾಗಿದೆಯಂತೆ ಕಾಶ್ಮೀರ ಸಮಸ್ಯೆಯ ನಿರ್ಣಯಕ್ಕಾಗಿ ಸಂಯುಕ್ತ ರಾಷ್ಟ್ರಸಂಘದಿಂದ ನೇಮಿತರಾಗಿದ್ದ ಎಡ್ಮಿರಲ್ ನಿಮಿಟ್ಸರವರನ್ನು ರಾಷ್ಟ್ರಸಂಘವು ಹಿಂದೆ ಕರೆಸಿತ್ತು ಈಗ ಪುನಹ ಅನೇಕ ತಿಂಗಳುಗಳ ನಂತರ ಅವರನ್ನು ಅದೇ ಕೆಲಸಕ್ಕೆ ನಿಯೋಜಿಸಿ ಕಾಶ್ಮೀರಕ್ಕೆ ಕಳಿಸಲಿದ್ದಾರೆ. ಇದರಿಂದಾಗಿ ಕಾಶ್ಮೀರ ಸಮಸ್ಯೆಯ ಬಗ್ಗೆ ಶೀಘ್ರ ಒಂದು ನಿರ್ಣಯ ಆಗುವದಿಹೆಯೆಂದು ಅನುಮಾನ ಮೂಡಲಾಗಿದೆ.

ಕಾಶ್ಮೀರ ಮತ್ತು ಕೊರಿಯಾ.

ಎರಡಾಗಿ ವಿಭಾಗವಾಗಿದ್ದ ಕೊರಿಯಾದ ದಕ್ಷಿಣ ಭಾಗದ ಮೇಲೆ ಉತ್ತರ ಕೊರಿಯಾನರು ಕೈಯಾಡಿದ್ದು ತಪ್ಪೆಂದೂ, ಅದು ಜಗತ್ತಿನ ಶಾಂತಿಗೆ ಭಂಗತರುವಂಥಾ ಕಾರ್ಯವೆಂದೂ ಅದ್ದರಿಂದ ದಕ್ಷಿಣ ಕೊರಿಯನರಿಗೆ ತಾವು ಸಹಾಯ ಕೊಡುವದು ನ್ಯಾಯವೆಂದೂ ಅಮೇರಿಕಾವು ಭಾವಿಸಿ ಯುದ್ಧಕ್ಕೆ ಕೈಹಾಕಿತು. ಸಂಯುಕ್ತ ರಾಷ್ಟ್ರಸಂಘವು ತನ್ನ ಬೆಂಬಲವನ್ನು ಸೂಚಿಸಿ ತನ್ನ ಧ್ವಜವನ್ನೇ ಕೊಟ್ಟಿತು ಆ ಯುದ್ಧವು ಸಂಯುಕ್ತ ರಾಷ್ಟ್ರ ಸಂಘದ ಮೂಲಕ ಶಾಂತಿ ಸಂರಕ್ಷಣಾ ಯುದ್ಧವೆಂದು ಖಾತರಿತು. ಇತ್ತ ಕಾಶ್ಮೀರದಲ್ಲಿ ಆದುದೂ ಆದೇ ರೀತಿ ತನ್ನ ಪಾಡಿಗೆ ತಾನೇ ಬಂದಿದ್ದ ಕಾಶ್ಮೀರದ ಮೇಲೆ ಹಣ್ಣಿಟ್ಟು ಆದನ್ನು ವಶಪಡಿಸಿಕೊಳ್ಳುವ ದೃಷ್ಟಿಯಿಂದ ಪಾಕಿಸ್ತಾನವು ಕಾಶ್ಮೀರದ ಮೇಲೆ ಯುದ್ಧ ಪ್ರಾರಂಭಿಸಿತು. ಕಾಶ್ಮೀರ ಸರಕಾರವು ದಕ್ಷಿಣ ಕೊರಿಯಾವು ಅಮೇರಿಕವರ ಸಹಾಯ ಕೇಳಿದಂತೆ ಭಾರತ ಸರಕಾರದ ಸಹಾಯ ಕೇಳಿತು ಭೌಂತವು ಅಮೇರಿಕಾದಂತೆಯೇ ತನ್ನ ಸೈನ್ಯವನ್ನು ಕಳಿಸಿಸಿ ದೇಶದ ತಾಂತ್ರಿಕ ರಕ್ಷಣೆಗಾಗಿ ಯುದ್ಧ ಕೈಕೊಂಡಿತು. ಪರಿಸ್ಥಿತಿ ಹೀಗಿರುವಂಗ ಸಂಯುಕ್ತ ರಾಷ್ಟ್ರ ಸಂಘವು ತಾನು ಜಗತ್ತಿನ ಶಾಂತಿ ರಕ್ಷಣೆಗಾಗಿರುವೆನೆಂದು ಹೇಳಿಕೊಳ್ಳುವರಲ್ಲಿ ಅರ್ಥವಿದ್ದಿದ್ದರೆ ಇಂದು ಅವರು ಕೊರಿಯಾದಲ್ಲಿ ಕೈಕೊಂಡ ನೀತಿಯನ್ನೇ ಕಾಶ್ಮೀರ ವಿಷಯದ ಬಗ್ಗೂ ಕೈಕೊಂಡು ಪಾಕಿಸ್ತಾನವನ್ನು ಧಂಗಿಗಾರ ರಾಷ್ಟ್ರವೆಂದು ಗುರುತಿಸಬೇಕಿತ್ತು ಶಾಂತಿಗ ಭಂಗತರುವ ಆದರ ಪ್ರಯತ್ನವನ್ನೂ ತಡೆಗಟ್ಟಿ ಭಾರತದ ನಿಲುವನ್ನು ಮೆಚ್ಚಿ ಸಹಾಯಕೊಡಬೇಕಿತ್ತು. ಆದಕೆ ಪರಿಸ್ಥಿತಿ ಹಾಗಾಗಿಲ್ಲ ಕಾಶ್ಮೀರ ಸಮಸ್ಯೆಯು ಸಂಯುಕ್ತ ರಾಷ್ಟ್ರ ಸಂಘದ ಮುಂದೆ ಬಂದು ಐದೂವರ್ಷಗಳಾಂ ಕಳೆದರೂ ಆದು ಬಗಹರಿದಿಲ್ಲ ಮೂಲ್ಯವಲ್ಲ; ಆದು ಚಕ್ಕಂದದ ಅಧಿಕಾರ ರಾಜಕೀಯದ ಮಾರ್ಗವಾಂಗದ ಈ ರೀತಿ ಸಂಯುಕ್ತ ರಾಷ್ಟ್ರಸಂಘವು ಒಬ್ಬೊಬ್ಬರು ಒಂದು ಬಲ-ಢ್ಯ ರಾಷ್ಟ್ರಗಳ ಕೈಗೊಂಬೆಯಾಗಿ ನಿರ್ಧಿಸ್ಯವಂದ ತನ್ನ ನೀತಿಯನ್ನು ಎಲ್ಲಿಲ್ಲಾ ಒಂದೇ ರೀತಿಯಲ್ಲಿ ಜಾರಿಗೆ ತರಲೆತ್ನಿಸದೆ ತಮ್ಮ ಸ್ವಾರ್ಥವಿದ್ದಿ ತೋರಿಸಿದರೆ ಆದಕ್ಕೆ ಹಿಂದಿನ ಜನತಾಂಗಗಳ ಕೂಟದ ಭವಿಷ್ಯವೇ ಕಟ್ಟಡೆಯೆಂದು ಹೇಳಲು ಶಾಸ್ತ್ರಕಾರರು ಬೇಕಿಲ್ಲ.

(ಹಿಂದಿನ ಪುರದಿಂದ ಸಾಗಿದ್ದು)

ಹೀಗೇಕೆ?

ಹಾತೂರು ಎಗ್ರಿಕಲ್ಚರಲ್ ಆಫೀಸಿನಿಂದ ಬಂದ ಫೀಲ್ಡ್‌ಮೆನ್‌ರ ಸಲಹೆಯಂತೆ ನಾವು ನಾಲ್ಕೈದು ಇಪ್ಪಂ ಗುಂಡಿಗೆಗಳನ್ನು ತೆಗೆದು ಕಾಂಪೋಸ್ಟು ಗೊಬ್ಬರ ತಯಾರಿಸಿದೆವು. ನಮ್ಮ ಗ್ರಾಮದ ಕೆಲವರು ಆಸ್ಟೆ ನಮ್ಮತ್ವ ಹಾಸ್ಯ ಮಾಡಿದರು. ಈಗ ಬಹುಮಾನ ಹಂಚುತಿದ್ದಾರೆ. ಪ್ರಯತ್ನಿಸಿದವರಿಗೂ ಬಹುಮಾನವಿಲ್ಲ ನಮ್ಮನ್ನು ಹಾಸ್ಯ ಮಾಡಿದವರಿಗೆ ಬಹುಮಾನ! ಒಬ್ಬರಿಗೆ ಎರಡನೇ ಬಹುಮಾನ ಕೊಡಲ್ಪಟ್ಟಿದೆ. ಬಹುಮಾನ ಪಟ್ಟಿಯಲ್ಲಿ ಒಂದು ಗುದ್ದಲಿ, ಒಂದು ಕತ್ತಿ, ಒಂದು ಪಿಕಾಸಿ ಎಂದಿತ್ತ. ಆದರೆ ಅವರಿಗೆ ದೊರೆತುದು ಒಂದು ಗುದ್ದಲಿ ಮಾತ್ರ ಕೇಳಿದಾಗ ಬಹುಮಾನ ಹಂಚಿದವರು ಸಾಮಾನು ಇನ್ನೂ ಬಂದಿಲ್ಲವೆನ್ನುತ್ತಾರೆ. ಈ ರೀತಿಯ ಅವ್ಯವಸ್ಥೆ ಏಕೆ?

K. M. K

ಗರ್ಭಿಣಿ ಸ್ತ್ರೀಯರು ಮತ್ತು ಶಿಶುಗಳ ಪೋಷಣೆ.

[ವೈದ್ಯ ಇಲಾಖೆಯವರಿಂದ]

ಸ್ತ್ರೀಯರು ಗರ್ಭಿಣಿಯರಾಗಿರುವಾಗ ಎಲ್ಲಾ ಸಮಯ ಕೈಂತಲೂ ಹೆಚ್ಚಾಗಿ ಜಾಗರೂಕರಾಗಿರಬೇಕು. ತಾಯ್ತನದ ಅಭಿಪ್ರಾಯದಂತೆ ವಿಶ್ರ ಆಹಾರವನ್ನು ಉಪಯೋಗಿಸಿ ಆರೋಗ್ಯವಂತರಾಗಿರುವ ಗರ್ಭಿಣಿ ಸ್ತ್ರೀಯರಲ್ಲಿ ಶಿಶುಜನನ ಸಾಮಾನ್ಯವಾಗಿ ಯಾವ ಹೆಚ್ಚಿವ ತೊಂದರೆಯೂ ಇಲ್ಲದೆ ಆಗುತ್ತದೆ ಮತ್ತು ಹುಟ್ಟುವ ಮಗುವೂ ಕೂಡ ಆರೋಗ್ಯವಾಗಿಯೂ ಬಲಯುತವಾಗಿಯೂ ಇರುತ್ತದೆ

ಸ್ತ್ರೀಯರು ಗರ್ಭಿಣಿಯರಾಗಿರುವಾಗ ಅನೇಕ ಜಂತುಲೆಗಳಿಗೆ ಅಡಿಗವರು ಈ ಕಾರಣದಿಂದ ಕೊಡಗಿನ ವೈದ್ಯ ಇಲಾಖೆಯ ಎಲ್ಲಾ ಆಸ್ಪತ್ರೆಗಳಲ್ಲೂ ವಾರದಲ್ಲಿ ಒಂದು ದಿನ ಗರ್ಭಿಣಿ ಸ್ತ್ರೀಯರ ಪರೀಕ್ಷೆ ನಡೆಸಲು ಏರ್ಪಾಡಾಗಿರುತ್ತದೆ. ಮಡಿಕೇರಿಯಲ್ಲಿ ಪ್ರತಿ ಶುಕ್ರವಾರವೂ, ವೀರಾಜಪೇಟೆಯಲ್ಲಿ ಪ್ರತಿ ಬುಧವಾರವೂ ಗರ್ಭಿಣಿಸ್ತ್ರೀಯರ ಪರೀಕ್ಷೆಯೂ ಆಸ್ಪತ್ರೆಯ ಸ್ತ್ರೀ ಸಿಬ್ಬಂದಿಯಿಂದಲೇ ನಡೆಸಲ್ಪಡುತ್ತದೆ ಬೇಕಾದ ಔಷಧಿಗಳನ್ನೂ ಕೂಡ ವಾರದಲ್ಲಿ ಒಂದು ದಿನ ಗರ್ಭಿಣಿ ಸ್ತ್ರೀಯರ ಪರೀಕ್ಷೆಗಾಗಿ ಮಿಸಲುಗೊಡಲಾಗಿದೆ ಈ ಪರೀಕ್ಷೆಗಳಿಂದ ಗರ್ಭಿಣಿ ಸ್ತ್ರೀಯ ರಕ್ಷಿಸುವ ರಕ್ಷಣೆಗಳು, ಮುಂತ್ಯದೋಷಗಳು, ರಕ್ತದ ಒತ್ತಡ, ರಕ್ತ ಜನನದಲ್ಲಿ ಒದಗಬಹುದಾದ ತೊಂದರೆಗಳು ಮುಂತಾದ ಇನ್ನಿತರ ಅಂಶಲೆಗಳನ್ನು ಕಂಡು ಹಿಡಿದು ಅವುಗಳ ಬಗೆಹರಿಸಲು ಸಾಧ್ಯವೇ ಇಲ್ಲದೆ ಗಳನ್ನೂ ಕೂಡಲೆಗುವುದು

ಗರ್ಭಿಣಿ ಸ್ತ್ರೀಯರು ಆಹಾರದ ವಿಚಾರದಲ್ಲಿ ಮುಖ್ಯವಾಗಿ ಕೂಡಬೇಕು. ಶಿಶುವು ಹುಟ್ಟುವಾಗ ಆರೋಗ್ಯವಾಗಿಯೂ ಬಲಯುತವಾಗಿಯೂ ಇರಬೇಕಾದರೆ ತಾಯಿಗೆ ಒಳ್ಳೆ ಆಹಾರವನ್ನು ಕೊಡಬೇಕು. ಇಂಡಿಯಾದಂತಹವಲ್ಲಿ ರಕ್ತಹೀನತೆಯಿಂದ ಗರ್ಭಿಣಿ ಸ್ತ್ರೀಯರು ಸಾಯುವುದು ಬಹಳ ಜಾಸ್ತಿಯಾಗಿದೆ ಇದಕ್ಕೆ ಕಾರಣ ಮುಖ್ಯವಾಗಿ ವಿಶ್ರ ಆಹಾರದ ಕೊರತೆಯೇ ಆಗಿದೆ ಆದ್ದರಿಂದ ಗರ್ಭಿಣಿ ಸ್ತ್ರೀಯರು ಆಹಾರದಲ್ಲಿ ಮುಖ್ಯವಾಗಿ ಸಸಾರ ಜನಕ ಲೋಹ ಲವಣಗಳು. (ಸುಣ್ಣ ಂತ್ಯ ಕಬ್ಬಿಣ) ಮತ್ತು ಅನ್ನಾಂಗಗಳು ಜಾಸ್ತಿಯಾಗಿರಬೇಕು. ಸಾಧಾರಣವಾಗಿ ಒಂದು ಗರ್ಭಿಣಿ ಸ್ತ್ರೀಗ ದಿನಕ್ಕೆ ೩೦೦ ಕ್ಯಾಲರಿಗಳಷ್ಟು ಆಹಾರ ಬೇಕು.

ಶಿಶುವು ಜನನವಾದ ಮೇಲೆ ತಾಯಿಯ ಎದೆ ಹಾಲಿನಲ್ಲಿಯೇ ಮುಖ್ಯವಾಗಿ ಬೆಳೆಯುತ್ತದೆ. ಆದ ಕಾರಣ ಮಗುವಿಗೆ ಬಳಸಲಿಗೆ ಬೇಕಾದಷ್ಟು ಎದೆ ಹಾಲನ್ನು ಕೊಡಲು ತಾಯಿಯ ಆಹಾರದಲ್ಲಿ ಮುಖ್ಯವಾಗಿ ಹಾಲು, ಮೊಟ್ಟೆ, ಮಾಂಸ, ಮೀನು, ಕಾಯಿ ಪಲ್ಯಗಳು ಮುಂತಾದ ಪದಾರ್ಥಗಳಿರಬೇಕು. ಇದೂ ಅಲ್ಲದೆ ತಾಯಿಯ ಆಹಾರವು ದಿನಕ್ಕೆ ೩೦೦೦ ಕ್ಯಾಲರಿನಷ್ಟನ್ನು ಒದಗಿಸುವುದು ವಿಶ್ರ ಆಹಾರವಾಗಿರಬೇಕು ಚಿಕ್ಕ ಮಕ್ಕಳ ಆಹಾರಕ್ಕೂ ದೊಡ್ಡವರ ಆಹಾರಕ್ಕೂ ಬಹಳ ವ್ಯತ್ಯಾಸವಿದೆ. ಮಕ್ಕಳು ದಿನವೂ ದೆಳೆಯುವಂತಾದ್ದರಿಂದ ಅವರಿಗೆ ಬೆಳವಣಿಗೆಗೆ ತಕ್ಕಂತೆ ಜಿಸ್ತಿ ಆಹಾರಬೇಕು ಸಾರಜನಕವು ಸೂಸಪಿಂಡಗಳನ್ನು ಬೆಳಸಲಿಕ್ಕೂ ಕಬ್ಬಿಣ ರಕ್ತವೃಂಟ ಗುವುದಕ್ಕೂ ರಂಜಕ ಮತ್ತು ಸುಣ್ಣ ಮೂಳೆಗಳ ಬೆಳವಣಿಗೆಗೂ ಮುಖ್ಯವಾಗಿರಬೇಕು ಸುಣ್ಣವು ಸರಗಳು ಸರಿಯಾಗಿ ಕೆಲಸ ಮಾಡುವುದಕ್ಕೂ ಸಹಾಯ ಮಾಡುವುದು ವಿಟಮಿನ್ನುಗಳೂ ಶರೀರಕ್ಕೆ ಶಕ್ತಿಯನ್ನು ಕೊಡಲು ಸಹಾಯ ಮಾಡುತ್ತವೆ ಇದರ ಜೊತೆಗೆ ಬೆಳವಣಿಗೆಗೆ ಬೇಕಾದ ಆನ್ನಾಂಗಗಳೂ ಇರಬೇಕು. ಈ ಮೇಲೆ ಹೇಳಿದ ವಿವಿಧಾಂಶಗಳು ಮಕ್ಕಳಿಗೆ ಹಾಲಿನಿಂದ ಸಿಕ್ಕುತ್ತವೆ ಆದ್ದರಿಂದಲೇ ಹಾಲು ವಕ್ಕಳಿಗೆ ಶ್ರೇಷ್ಟವಾದ ಆಹಾರವಾಗಿದೆ

ಎದೆಹಾಲು ಕೊಡಿಸಿಗೆ ಬೇಕಾದ ಎಲ್ಲಾ ಅಂಶಗಳನ್ನು ಒದಗಿಸ ಕ್ತದೆ ಎದೆಹಾಲಿಗೆ ಕ್ರಿಮಿಗಳು ಕೂಡಲು ಅವಕಾಶವಿಲ್ಲದಿರುವುದರಿಂದ, ಆ ಹಾಲನ್ನ ಕುಡಿಯುವ ಮಕ್ಕಳಲ್ಲಿ ಕಿಬ್ಬಳ ಸಂಬಂಧ ತಾಯಿಲೆಗಳ ಕವಿಷ್ಟ ಅದ ಅಲ್ಲದೆ ಪಕ್ಕಳು ಈ ಹಾಲನ್ನು ಸುಲಭವಾಗಿ ಜೀರ್ಣಿಸಿಕೊಳ್ಳ ತ್ತವೆ ಆದ್ದರಿಂದಲೇ ತಾಯಿಯ ಆಹಾರವು ಮಗುವಿಗೆ ಹಾಲನ್ನು ಒದಗಿಸಲೋಸುಗ ಉತ್ಕೃಷ್ಟವಾಗಿರಬೇಕು

ಎದೆ ಹಾಲಿಲ್ಲದೆ ಬೇರೆ ಹಾಲು ಮತ್ತ ಆದರ ಸಂಬಂಧ ಪದಾರ್ಥಗಳನ್ನು ಬೆಳೆದ ಶಿಶುಗಳ ಆರೋಗ್ಯವು ತೃಪ್ತಿಕರವಾಗಿಲ್ಲ ಇಂಥ್ಯೆ ಮಬ್ಬು ಕಂಣಿ ಎ ಜ್ಞರಿಳಿಯಲ್ಲದೆ ವೇಳೆ ತಪ್ಪು ಕೂಸಿಗೆ ಕಸಿ ಅಧವಾ ಜಿಸ್ತಿ ತಾಲಲನ್ನು ಶಚಿ ಇಲ್ಲದ ಪಕ್ಕಿಗಳಲ್ಲಿ ಕಂಡುಬರುವುದು ಜೊತೆಗೆ ಶಿಶುಗಳು ಕ.ಚಿಯಾದ ವಾತಾವರಣದಲ್ಲಿ ಬೆಳೆಯಲು ಪ್ರಯತ್ನಿಸುವುದರಿಂದ ಕಡುಳಿಕ ಸಂಬಂಧ ತಾಯಿಲೆಗಳು ಉಟಾಗುತ್ತವೆ ಈ ಕಾರಣಗಳಿಂದ ಅದಷ್ಟ ಬೇಗ ಶಿಶುಗಳಿಗೆ ಎದೆ ಹಾಲನ್ನು ಕೊಡುವುದೇ ಒಳ್ಳೆಯದಾಗಿದೆ

ಎದೆಹಾಲು ಕೂಡ ಮಕ್ಕಳಿಗೆ ಬಹಳ ಸಮಯದ ವರೆಗೂ ಸಮರ್ಪಕವಾಗಿರುವುದಿಲ್ಲ ಶಿಶುವಿಗೆ ೯ ತಿಂಗಳ ತುಂಬಿದ ಮೇಲೆ ಎಂಥ ಲಘ್ವ ನಿಸಿನಾದ ಒಳ್ಳೆಯ ಇತ್ತಾದ್ದ ಒದಲು ರವೆ ಗಂಜಿ ಹಾಲನ್ನು ಮಿಶ್ರಮಾಡಿ ಕೊಡುವುದು ಒಳ್ಳೆಯದು ಇವೆಸಿಕ್ಕದಿದ್ದ ಪಕ್ಷದಲ್ಲಿ ಕುಸಲಕ್ಕಿಯನ್ನೋ, ಕೊಟ್ಟಿದ ಅಕ್ಕಿಯನ್ನೋ ಉಪಯೋಗಿಸಬಹುದು ಮಕ್ಕಳಿಗೆ ಕಾಯಿಲೆಯಿರುವಾಗ ಅದವಾ ಬೇಸಿಗೆ ಕಾಲದಲ್ಲಿ ಎದೆಹಾಲನ್ನು ಶಿಶುವಿಗೆ ನಿಲ್ಲಿಸಲು ನೋಡಲು ಮಾಡಬಾರದು

ಪೊಲೀಸ್ ಅಧಿಕಾರಿಗೆ ಆರು ವೈ ಭತ್ತೆ.

ಉತ್ತರ ಪ್ರದೇಶದ ಓರ್ವ ಪೊಲೀಸ್ ಅಧಿಕಾರಿಯನ್ನು ಇಂಗ್ಲೆಂಡಿಗೆ ಹೆಚ್ಚಿನ ತರಬೇತಿಯ ಒಗ್ಗೆ ಸರಕಾರವು ಕಳಹಿಸಿತ್ತು. ಆ ಅಧಿಕಾರಿಯು ಲಂಡನ್‌ನಲ್ಲಿ ತರಬೇತಿ ಮುಗಿದ ತರುವಾಯ ಪ್ಯಾರಿಸ್ ನಗರಕ್ಕೂ ತೆರಳಿದನಂತೆ ಅಲ್ಲಿ ಆ ಅಧಿಕಾರಿ ಎರಡು ದಿನಗಳ ವರೆಗೆ ಉಳಿದುಕೊಂಡು ಕೆಲವು ವಿಷಯಗಳನ್ನು ತಿಳಿದುಕೊಂಡ. ನಗರದಲ್ಲಿ ವೆಚ್ಚ ಮಾಡಿದ ಬಗ್ಗೆ ಸರಕಾರಕ್ಕೆ ಲೆಕ್ಕ ಕೊಟ್ಟು ೩೦೦ ರೂಪಾಯಿ ಕನಗೆ ಉಗಿಬೇಕೆಂದು ಬರಿದ ಸರಕಾರವು ಈ ಲೆಕ್ಕ ಪತ್ರಗಳನ್ನ ಪರಿಶೀಲಿಸಿ ಅದರಲ್ಲಿ ಕೇವಲ ಎರಡೂ ವೈಗಳನ್ನು ಮಾತ್ರ ಮಂಜೂರುಮಾಡಿತ!

ವಾರ್ತೆಗಳು.

ನ್ಯೂಯಿರ್ಕ್‌ಗೆ ಬಂದ ಒಂದು ಗುಪ್ತರ ವೈರ್ ಸಂದೇಶದಲ್ಲಿ ಸಂಯುಕ್ತ ಜನಾಂಗ ಸಂಘ ಭದ್ರತಾಸಮಿತಿಯ ಸದಸ್ಯ ಸಂಖ್ಯೆಯನ್ನ ಆರಕ್ಕೆ ಏರಿಸಿ, ಆರನೇ ಸ್ಥಾನವನ್ನು ಭಾರತಕ್ಕೆ ಕೊಡಿಸುವ ಒಂದು ಸೂಚನೆಯಿತ್ತೆಂದು ನ್ಯೂಯಾರ್ಕಿನ 'ನ್ಯೂಸ್ ವೀಕ್ ಮೆಗಜೀನ್' ಪ್ರಕಟಿಸಿತ್ತು ಈ ಸುದ್ದಿ ಸುಳ್ಳು ವಕ್ಕು ನಿರ್ಣಯವೆಂದು ಭಾರತದ ಪ್ರತಿನಿಧಿ ಕೃಷ್ಣಮೆನನ್ ಅವರು ಪ್ರಕಟಿಸಿದ್ದಾರೆ

ಫ್ರೆಂಚ್ ಸರಕಾರವು ಸಮ್ಮರ್ಲ್ಲೇ ಸ್ವಿಟ್ಜರ್‌ಲೆಂಡ್‌ನಲ್ಲಿ ಹೊಸಗೊಂದು ಗಳನ್ನು ತೆರೆಯಲು ನಿರ್ಣಯಿಸಿದೆ ಪ್ರಸ್ತುತ ಇವು ಕೇಂದ್ರಗಳಲ್ಲಿ ಭಾರತದ ಟ್ರೂಪ್ ಇರಬೇಕೆಂಬ ಕರೆಯಿಲ್ಲ

ಚೀನಾ ಕಮ್ಯೂನಿಸ್ಟ್ ಸೈನ್ಯವು ಟಿಬೆಟ್‌ದೊಳಗೆ ನುಗ್ಗಿದೆ ಎಂಬ ಸುದ್ದಿಯನ್ನು ಕಲಂಪೋಗ್ಯದಲ್ಲಿರುವ ಕಮ್ಯೂನಿಸ್ಟ್ ಚೀನಾ ಟಿಬೇಟಿನ ಶಿಷ್ಟಮಂಡಲದ ಮುಖಂಡ ಮಿ ಸೇಂಘೋನ್ ರಿಗ ವಾರವರು ಅಲ್ಲಗಳೆದಿದ್ದಾರೆ. ಕಮ್ಯೂನಿಸ್ಟರು ಅಕ್ರಮವಾಗಿ ಸಿರುವ ಕಾರ್ಯ ಒಟ್ಟಣವು ಟಿಬೇಟಿಗೆ ಸೇರಿದುದಲ್ಲವೆಂದೂ ಆ ಪಟ್ಟಣವನ್ನು ಕಮ್ಯೂನಿಸ್ಟರು, ವಶ ಮಾಡಿಕೊಳ್ಳುವುದಕ್ಕೆ ಮುಂಚೆಯೇ ಆಕ್ರಮಿಸಿರುವುದು ಗಿಯೂ ವಿಶದಪಡಿಸಿರುವರು

'ಮಹಾಯ ವಿದ್ಧ ಶೋಂದು ಸ್ಯಾದಪ್ಪೇ ಸಂಭವಿಸುವುದೆಂದು ನಾನೆಣಿಸುವುದಿಲ್ಲ' ಎಂಬುದಾಗಿ ಬ್ರಿಟನಿನ ಯುದ್ಧ ಕಾಲೀನ ಮುಖ್ಯ ಮಂತ್ರಿ ಐ ವಿನ್ಸ್‌ಟನ್ ಚರ್ಚಿಲ್ಲರ ನಿಶ್ಚಿತಾಭಿಪ್ರಾಯವಾಗಿರುತ್ತದೆ.

ತನ್ನ ವ್ಯಾಪಾರಲಾಭಕ್ಕೂ ಒಂದು ಆನೆಯನ್ನ ಕಳಿಸಿಕೊಡಬೇಕೆಂದು ಒರಿಸ್ಸಾ ಪ್ರದೇಶಕ್ಕೆ ಭಾರತ ಪ್ರಧಾನ ಪಂಡಿತ ನಹರುರವರಲ್ಲಿ ವಿನಂತಿಸಿಕೊಂಡಿದ್ದಾರೆ ಜರ್ಮನಿಯ ಲ್ಲಿರುವ ಹಿಂದಿಯ ವಿಲಿಟರಿ ಶಿಷ್ಟಮಂಡಲದ ಮುಖಂಡ ಜನರಲ್ ಬೂಚ್‌ಜಂದರು ಆವರ ಈ ಕೋರಿಕೆಯನ್ನು ಪೂರೈಸಿಕೊಡುವುದಾಗಿ ವಾಗ್ದಾನ ಮಾಡಿರುತ್ತಾರೆ.

೪೦೦ ವರ್ಷಗಳ ಹಿಂದೆ ರಸ್ಯದ ಘೋರಣೆಯನ್ನು ಪ್ರತಿಪಾದಿಸಿ ಮೇಲಿಂದ ಮೇಲೆ ಬಿರುಸಿನ ಭಾಷಣಗಳನ್ನ ಮಾಡಿದ್ದ ಅಮೇರಿಕದ ಮೂಜಿ ಉದಾಧ್ಯಕ್ಷ ಮಿ ಹೆನ್ರಿ ವಾಲ್ಲೇಸರು ಕೊರಿಯಾ ಕಾಳಗದ ವಿಚಾರದಲ್ಲಿ ತಾನು ಅಮೇರಿಕಾ ಮತ್ತು ಸಂಯುಕ್ತ ಜನಾಂಗ ಸಂಘದ ಕಡೆ ಎಂದು ವ್ಯಕ್ತಪಡಿಸಿರುವರೇ

ಸಂಯುಕ್ತ ಅಮೇರಿಕದಲ್ಲಿ ಹೈಡ್ರೋಜನ್ ಬಾಂಬ್ ತಯಾರಿಯ ಕಾರ್ಯಕ್ರಮವು ಬಿರುಸಿನಿಂದ ನಡೆಯುತ್ತಿದೆಯೆಂದು ಎಟಾಮಿಕ್ ಎನರ್ಜಿ ಕಮಿಷನಿನ ಸದಸ್ಯರಲ್ಲೊಬ್ಬರಾದ ಮಿ ಥೊಮಸ್ ಈ ಮುಲ್ರೋಯವರು ವ್ಯಕ್ತಪಡಿಸಿರುವರು

ಮಲಯದಲ್ಲಿರುವ ರಬ್ಬರ್ ತೋಟಗಳಲ್ಲಿ ಕೆಲಸ ಮಾಡುವ ಭಾರತೀಯ ಕೆಲಸಗಾರರಿಗೆ ಎಸ್ಟೇಟ್‌ಗಳಲ್ಲಿ ಮದ್ಯದ ಅಂಗಡಿಗಳನ್ನು ಮೆತ್ತೆ ಸ್ಥಾಪಿಸಕೂಡದೆಂದು ಮಲಯ ಟ್ರೇಡ್ ಯೂನಿಯನ್ಸ್ ಕೌನ್ಸಿಲು ಖಂಡಿಸಿದೆ

ಸಂಯುಕ್ತ ಸಂಸ್ಥಾನದ ವೈಮಾನಿಕ ದಳಗ ನುಹಿಳಾ ಶಾಖೆಯವರಿಗೆ ಯುದ್ಧ ಕತೆ ಬಂದಿದೆ. ವೈಮಾನಿಕ ದಳದ ಮಹಿಳಾ ಶಾಖೆಯ ರಿಜರ್ವಿಸ್ಟ್ ಮಹಿಳಾ ಸೈನಿಕರೆಲ್ಲರೂ ಯುದ್ಧಕ್ಕೆ ಬರಲು ಸಿದ್ಧರಿರಬೇಕೆಂದು ಕರೆಯಲಾಗಿದೆ

'ಉತ್ತರ ಕೊರಿಯಾ ಸೈನಿಕರನ್ನು ವಿರೋಧಿಸಿ ಜೀವವಿರುವ ವರೆಗೆ ಘೋರ ಯುದ್ಧ ನೂಡಿರಿ' ಕತ್ರುಗಳಿಗೆ ಒಂದಂಗಲ ಸೆಲವನ್ನೂ ಇಟ್ಟುಕೂಡಬೇಡಿ' ಎಂದು ಜನರಲ್ ಮೆಕಾರ್ಥರರ ಕನ್ಯೆ ಎಲಿನೆ ಅಮೇರಿಕನ್ ವೈನ್ಯಕ್ಕೆ ಕಟ್ಟಾಜ್ಞೆ ಹೊಡಿದ್ದಾರೆ.

'ವೈದ್ಯನಾಯವು ಅತ್ಯಂತ ಪ್ರಾಮುಖ್ಯವಾದ ಉದ್ಯೋಗವಾದುದರಿಂದ ಭಾರತದಲ್ಲಿ ಎಲ್ಲಾ ಜನರೂ ನೈವಿಸಾಯ ಕಲಿಕವನ್ನು ತಿಳಿದಿರಬೇಕು ವೈದ್ಯಸಾಮಂದಿಂದಲೇ ಭಾರತದ ಅಭಿವೃದ್ಧಿ' ಎಂಬುದಾಗಿ ಮದ್ರಾಸಿನ ವೈದ್ಯಸಾಯ ಮಂತ್ರಿ ಶ್ರೀ. ಎ ಬ ಪಟ್ಟಿಯವರು ಮದ್ರಾಸಿನ ವೈದ್ಯ ಸಾಯ ಸಮ್ಮೇಳನದಲ್ಲಿ ಭಾಷಣ ಮಾಡುತ್ತಾ ತಿಳಿಸಿದರು.

ಭಾರತ ಸರಕಾರವು ದಕ್ಷಿಣ ಕೊರಿಯಾಕ್ಕೆ ಯುದ್ಧದಲ್ಲಿ ನೊಂದವರಿಗೆ ವೈದ್ಯ ಸಹಾಯ ಮಾಡುವ ವೈದ್ಯ ಚಿಕಿತ್ಸೆ ವಂಡಲಿಯೊಂದನ್ನು ಕಳ ಹಿಸಲು ನಿರ್ಧರಿಸಿದೆ ಪ್ರಧಾನ ಮಂತ್ರಿ ಶ್ರೀಮತಿ ಇಂದಿರಾ ಗಾಂಧಿ ಸೆಕ್ರೆಟರಿ ಜನರಲ್ ಟ್ರಿಗ್ವಿಲ್ಲೆಯವರಿಗೆ ಈ ವಿಚಾರ ತಿಳಿಸಲಾಗಿದೆ.

ಶ್ರೀ ಟಿ ಎನ್ ಗೋವಿಂದರಾಜು,
'ಕೊಡಗು' ವಿಜೆಂಟರು,
ವೀರಾಜಪೇಟೆ

ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ಸಮ್ಮಲ್ಲಿ ಕೋವಿಗಳು, ತೋಟಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಹತ್ಯಾರುಗಳು ದೊರಯುತ್ತವೆ.

1. 32 ಪಿಸ್ತೂಲುಗಳು (Pistols) ಕ್ರಂ ರೂ. 162 ರಿಂದ 245ರ ವರೆಗೆ.
2. 12ನೇ ನಂಬರಿನ ಒಂಟಿ ಹೊಳವಿನ ಕೋವಿ ಕ್ರಯ ರೂ. 218-0-0
3. 12ನೇ ನಂಬರಿನ ಜೋಡು ಹೊಳವಿನ ಕೋವಿ (Webley & Scott)
4. 12ನೇ ನಂಬರಿನ ಜೋಡು ಹೊಳವಿನ ಕೋವಿ (Spanish make) ಕ್ರಯ ರೂ. 627-5-0
5. 6 ಗಜದ (Hand loom) ಕೈವಲ್ಲಿದ ಸೀರೆಗಳು ಕ್ರಯ ರೂ. 4-10-0.
6. 12, 16, 20ನೇ ನಂಬರು ಕೋವಿಗಳ ತೋಟಗಳೂ ಪಿಸ್ತೂಲು ಮತ್ತು ರಿವಾಲ್ವರುಗಳ ತೋಟಗಳೂ ಸಹ ದೊರೆಯುತ್ತವೆ.

(ಅವಶ್ಯವಿರುವ ಕೋವಿಗಳಿಗೂ, ತೋಟಿಗಳಿಗೂ ಜಿಲ್ಲಾ ಮೇಜಸ್ಟ್ರೇಟರಿಂದ ವಿಶೇಷ ಪರ್ಮಿಟ್ "Special permit" ಪಡೆದಿರಬೇಕು ಮತ್ತು ದೊರಯುವದು)

ಎಂ. ಎಸ್. ಸೋಮಯ್ಯ,
ಗೌರವ ಕಾರ್ಯದರ್ಶಿ.

52–46

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೊಡಗಿನಲ್ಲಿ ಮೊದಲ ಸ್ವದೇಶೀಯರ ಒಡೆತನದ ಬ್ಯಾಂಕು (1921ರಲ್ಲಿ ಸ್ಥಾಪಿಸಲ್ಪಟ್ಟಿತು.

ಅಧಿಕೃತ ಶೇರು ಭಂಡವಾಳ	ರೂ.	10,00,000.
ವಸೂಲಾದ ಶೇರು ಮೊತ್ತಗಳು	ರೂ.	1,79,000.
ಕ್ಷೇಮನಿಧಿ	ರೂ.	53,000.
ಇತರ ನಿಧಿಗಳು	ರೂ	28,000

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವದು

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರಿ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಾಣ್ಯಗಳ ಈಡಿನ ಮೇಲೆಯೂ ಸಾಲ ಕೊಡಲಾಗುವುದು. ಚೆಕ್ ಮತ್ತು ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಫೈರ್, ಮೋಟಾರ್ ಮತ್ತು ಮಾರ್ಕೆಟ್ ಇನ್ಷೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಕೊಂಡುಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಅಥವಿಸಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ,
ಗೌ. ಕಾರ್ಯದರ್ಶಿ.

ಕೆ. ಪಿ. ಅಪ್ಪಯ್ಯ, M. L. C.
ಸ್ಥಾಪಕರು ಮತ್ತು ಸಭಾಪತಿ.

ENTERTAINING FAMILY & FRIENDS EASY NOW!

NOODLE OR NOOPUTU (ಸೇವಿಗೆ)

making with this all BRASS easy handling Machine in a Variety of Sizes and Shapes is a boon to House wives.



52-7 *Rs. 23/8 (Postage extra.)*

GOBIND & CHENGPA,
2. CANNING STREET, CALCUTTA.

ಮತ್ತೊಂದು ಉಜ್ವಲ ವರ್ಷ.

1948ನೇ ವರ್ಷದ್ದ ವಾರ್ಷಿಕ ವರದಿಯ ಪ್ರಾಮುಖ್ಯಾಂಶಗಳು.

ಹೊಸ ಉದ್ಯಮ	ರೂ.	6,13,00,000 ಮೊದಲೆ.
ಚಾಲ್ತಿಯಲ್ಲಿರುವ ಒಟ್ಟು ಉದ್ಯಮ	ರೂ.	27,73,00,000 ,,
ಒಟ್ಟು ನಿಧಿ.	ರೂ.	8,30,00,000 ,,
ನಾನಾವಾದದಿಂದ ಪಾವತಿಯಾದ ಕ್ಲೈಮ್‌ಗಳು		10,96,00,000 ,,

1,28,000 ಕ್ಕೂ ಮೀರಿದ ಕೃಷಿ ಕಡೆದ ಪಾಲಿಸಿದಾರರು.

ಶಕ್ತಿ. ಸೇವೆ ಭದ್ರತೆ.

ಎಂಪೈರ್ ಆಫ್ ಇಂಡಿಯಾ

ಲೈಫ್ ಎಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ,—1897

ರೋಶನ್‌ಲಾಲ್, ಜನರಲ್ ಮೇನೇಜರ್.

ಶಾಖಾ ಕಛೇರಿ: ಎಂಪೈರ್ ಹೌಸ್, ಹಾರ್ನ್‌ಬಿ. ರೋಡ್, ಫೋರ್ಟ್, ಬೊಂಬಾಯಿ.

ಅಂಚೆ ಕಛೇರಿ: ಪಿಸ್ಟಿಕ್ಟ್ ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡರಸ್ತೆ, ಬೆಂಗಳೂರು.

ಭದ್ರತೆ! 17 ವರ್ಷಗಳ ಅನುಭವ ಅನುಕೂಲತೆ !!

ಅನುಭವಶೀಲರು!!

ದಿ ವಿಜಯ ಬ್ಯಾಂಕ್ ಲಿಮಿಟೆಡ್

ಮುಖ್ಯ ಕಛೇರಿ,

ಕದ್ರಿ ರೋಡ್, ಮಂಗಳೂರು.

ನಿರಖು ಠೇವಣಿಗಳ ಬಡ್ಡಿ

3	ತಿಂಗಳು	3%
6	,,	3½%
12	,,	3¾%
24	,,	4 %

ರೂ. ೧೫,೦೦೦ಕ್ಕೆ ಮೀರಿದ ಒಂದೇ ಡಿಪಾಜಿಟ್ಟಿಗೆ ಮೇಲಿನ ದರಕ್ಕಿಂತಾ ¼% ಹೆಚ್ಚಿಗೆ

ಶಾಖೆಗಳು:— ಎಸ್. ಪಿ. ಮಂಗಳೂರು, ಬೈಂದೂರು, ಕುಂದಾಪುರ, ಬ್ರಹ್ಮಾವರ, ಉಡುಪಿ, ಕಾಪು, ಕಾರ್ಕಳ, ಕಾಸರಗೋಡು, ಕಾಞಂಗಾಡ್, ಪುತ್ತೂರು, ಮಡಿಕೇರಿ ಮತ್ತು ಮಂಜರಾಬಾದ್.

ಒಟ್ಟು ವಹಿವಾಟು ಭಂಡವಾಳ ರೂ. ೪೦ ಲಕ್ಷಕ್ಕೂ ಮೀರಿದೆ.

ಎಲ್ಲಾ ವಿಧದ ಅಧುನಿಕ ಬ್ಯಾಂಕಿಂಗ್ ವಹಿವಾಟುಗಳು ಅತೀ ಕಡಿಮೆ ದರದಲ್ಲಿ ದಕ್ಷತೆಯಿಂದ ನಡೆಸಲ್ಪಡುವವು.

ಹೆಚ್ಚಿನ ವಿವರಗಳಿಗೆ ಬರೆಯಿರಿ:— ಮ್ಯಾನೇಜರ್,

ಮಡಿಕೇರಿ ಶಾಖೆ, ಮಡಿಕೇರಿ.

ದಿ ಟ್ರೋಪಿಕಲ್

ಇನ್ಷೂರೆನ್ಸ್ ಕಂಪೆನಿ ಲಿಮಿಟೆಡ್.

ಮೇನೇಜಿಂಗ್ ಡೈರೆಕ್ಟರ್:— ಲಾಲ ಶಂಕರ್ ಲಾಲ್.

ಮುಖ್ಯ ಕಛೇರಿ:— ಹೊಸ ದಿಲ್ಲಿ.

ಸ್ಥಾಪಿಸಿದ ಡೈರೆಕ್ಟರರು:

ಹಂಡಿತ ಮೋತಿಲಾಲ್ ನೆಹರು. ಎಸ್. ಶ್ರೀನಿವಾಸ ಅಯ್ಯಂಗಾರ್
ಹಕೀಮ್ ಅಜಮಲ್‌ಖಾನ್. ಡಾ|| ಎಂ. ಎ. ಅನ್ಸಾರಿ.

Transacts:—Life, Fire, Motor and Marine.

ಯಂ. ಯು. ಆಚ್ಚಣ್ಣ, ಡಿಪ್ಟಿ ಸುಪರಿಂಟೆಂಡೆಂಟ್, ಮಡಿಕೇರಿ, ಕೊಡಗು.

ಎಂ. ಎ. ಬೆಳ್ಯಪ್ಪ, ಬ್ರಾಂಚ್ ಸೆಕ್ರೆಟರಿ, ಹಂಪನಕಟ್ಟೆ, ಮಂಗಳೂರು.

The Popular Insurance Company Ltd.

Established over 20 years ago, the Company is noted for its sound progress, careful management and efficient service to its constituents.

Agents on permanent and remunerative contracts are wanted in COORG. Apply today

Head Office:
MANGALORE
26-13

K. M Bopaiah, Esq,
Branch Secretary for Mysore & Coorg,
85 Sultanpet, BANGALORE 2.

Edited Printed and Published by P. J. Pellimma at 'Kodagu Press, Mercara, for 'Kodagu' Ltd.

Reg. No. M. 1556.
'KODAGU' MERCARA. (Coorg).

ಕೊಡಗು

ಸಂಪಾದಕರು—ಪಿ. ಡಿ. ಬೆಳ್ಯಪ್ಪನವರು] [ವಾರ್ಷಿಕ ಬೆಲೆ ರೂ. 5–0–0.

ಸಂಪುಟ ೨೯ | ತಾರೀಖು ೧೫–೮–೧೯೫೦ನೇ ಮಂಗಳವಾರ | ಸಂಖ್ಯೆ ೧೦

ಕಾಂಗ್ರೆಸಿನ ಸದ್ಯ ಪರಿಸ್ಥಿತಿ.

ಲೇ:–ಶ್ರೀ ಶ್ರೀರಾಮ ಶರ್ಮ, ಸಂಪಾದಕ, ವಿಶಾಲ ಭಾರತ.

ಕಾಂಗ್ರೆಸ್ಸಿನ ವಿಚಾರದಲ್ಲಿ ನಾನು ಇಲ್ಲಿ ಬರೆಯಲು ಇಚ್ಛಿಸಿರುವ ವಿಷಯಗಳು ಪುಸ್ತಕ–ಗ್ರಂಥಗಳಲ್ಲಿ ಗಲಿಯೂ ಬೇರೆಯವರಿಂದ ಕೇಳ್ಪುಗಳಿಗಲೀ ಇಲ್ಲವೆಂಬ ಖಾತ್ರಿಯನ್ನು ವಾಚಕರಿಗೆ ಇಲ್ಲ ಪ್ರಾಮಾಣಿಕ ಚೈಸುತ್ತೇನೆ. ನಾನು ಸ್ವತಹ ಕಾಂಗ್ರೆಸಿಗನೆನ್ನ. ಮತ್ತು ನನ್ನ ಶಕ್ತಿಗನುಗುಣ ಕಾಂಗ್ರೆಸಿನಲ್ಲಿ ಸೇವೆ ಸಲ್ಲಿಸಿದ್ದೇನೆ; ಸಲ್ಲಿಸುತ್ತಿದ್ದೇನೆ. ಇಳೆದ ಎರಡು ವರ್ಷಗಳಿಂದ ಕಾಂಗ್ರೆಸಿನ ಸಂಘಟನೆಯಲ್ಲಿ ಮತ್ತು ಸಂಘಟನೆಗಳಲ್ಲಿ ಯೂವ ಪಕ್ಷದ ಮುಖಂಡರು ಬಂದ ಯೂವುದನ್ನು ಕಣ್ಣಾರೆ ಕಂಡು ಭೋರಿಸಲೇಕು ಗಿದೆಯೋ ಅದನ್ನು ವಿಚಾರಿಸುವಾಗ ಕಾಂಗ್ರೆಸಿಗೆ ವಿನಾಶದಿ, ಕಾಂಗ್ರೆಸು ತನ್ನ ಉದ್ದೇಶ ಮತ್ತು ಆದರ್ಶಗಳಿಂದ ವಿಮುಖವಾಗಿ ಅಧಃಪತನದೆಡೆಗೆ ಸಾಗುತ್ತಿದೆ ಎಂಬ ಅಭಿಪ್ರಾಯ ಬಲವಾಗಿ ಮೂಡಿ ಬಂದಿತು. ಇಂದು ಕಾಂಗ್ರೆಸಿನ ಯೋಗ್ಯ ಹಾಗೂ ಅರ್ಹ ಸದಸ್ಯರೂ ಹೌದು. ಈ ವರೆಗೆ ನಾನು ಪ್ರಾಂತೀಯ ಕಮಿಟಿಗೆ ಹೋಗಿಲ್ಲ. ಇದರಿಂದ ನನ್ನ ಮಿತ್ರರಿಗೆ ಕ್ಲೇಶವಾಗಿದೆ. ಎಲ್ಲವನ್ನೂ ನಾವು ನಮ್ಮ ಹೃದಯದ ವೇದನೆಯನ್ನು ಹೇಳುವದಾದರೆ ಕಾಂಗ್ರೆಸಿಗರು ಹೇಗಿದ್ದರೂ, ಕಾಂಗ್ರೆಸಿನ ಪದಾಧಿಕಾರಿಗಳಲಿ ಯೂ ಮಂತ್ರಿಗಳಲಿ ಅವರಿಂದ ಪ್ರತ್ಯಕ್ಷ ಯೂ ಅಪ್ರತ್ಯಕ್ಷವಾಗಿ ಅನೈತಿಕತೆಗೆ ಪ್ರೋತ್ಸಾಹ ದೊರೆಯುವದನ್ನು ಹೇಳಬೇಕೂ. ದೇಶದ ಉದ್ದಗಲಕ್ಕೂ ಕಾಂಗ್ರೆಸ್ ಪಂಚಾಯಿತಿ ಹಾಗೂ ಪ್ರಾಂತೀಯ ಕಾಂಗ್ರೆಸಿನ ಚುನಾವಣೆ ನಡೆದಿದ. ಯೋಗ್ಯ ಸದಸ್ಯರನ್ನು ಆರಿಸುವ ಬಗ್ಗೆ ಯೂವ ಶರತ್ತುಗಳಿವೆ; ಅವುಗಳನ್ನು ಸಲಿಸಿದವರಾ ಒಹಿಳ ವಿವಳವೆನ್ನಬೇಕಾಗಿದೆ. ಅನೇಕ ಸ್ಥಳಗಳಲ್ಲಿ ಗೂಂಡಾ ಪ್ರವೃತ್ತಿಯವರು ಸದಸ್ಯರಾಗಿದ್ದಾರೆ. ಚುನಾವಣೆಯ ದಿನ ಬೇರೊಬ್ಬರಿಂದ ಜಡಿದು ಖಾದಿ ಧಾರಿಗಳಾಗಿ ಖಚೇರಿಗೆ ಬರುತ್ತಾರೆ. ನಾವು ಸರಕಾರಿ ಅಧಿಕಾರಿಗಳನ್ನು ಹಾಗೂ ಸರಕಾರಕ್ಕೆ ಸಂಬಂಧಿಸಿದ ಜನರ ನೀತಿಕತೆಯನ್ನು ಪ್ರಶ್ನಿಸಿದರೆ ಅವರು ತಮ್ಮನ್ನು ಪ್ರಶ್ನಿಸಿದಂತೆ ಭಾವಿಸಿ ಕೋಪಗೊಳ್ಳುತ್ತಾರೆ. ಕಳ್ಳ ವ್ಯಾಪಾರದಲ್ಲಿ ಸಹಾಯ ಪಡೆಯಲೂ ಅವರು ಹಿಂಜರಿಯುವಾರು.. ಯೂರೇ ಯೂವುದೇ ಅನೈತಿಕತೆಯ ಕೆಲಸ ಮಾಡಲಿ, ಪಕ್ಕದ, ಸೀನೇಟ್, ಮೊದಲಾದವುಗಳ ಕಳ್ಳವ್ಯಾಪಾರ ನಡೆಸಲಿ, ಅವರ ಮತವೊಂದು ನ್ಯಾಯಕ್ಕನಿಗೆ ದೊರೆಯುವ ವರೆಗೆ ಅವರ ಈ ಕಪ್ಪು ಕೃತ್ಯಗಳು ಜೋಬೇಳಲಾರವು. ಇಂಥಾ ಕಳ್ಳಾಟಕಯವರಿಗೆ ಸಭ್ಯ ಸ್ಥಳಗಳು ಕೊಡಲ್ಪಡುತ್ತವೆ. ದೇಶವು ಯೂವ ದೇ ದುರ್ಗತಿಗಿಳಿಯಲಿ ಇವರಿಗೆ ಅದರ ಚಿಂತೆ ಇಲ್ಲ. ಗಾಂಧೀಜಿಯವರ ಹೆಸರಿಗೆ ಕಳಂಕ ಕಟ್ಟಿದರೂ ಇವರಿಗೆ ಯೂವುದೇ ರೀತಿಯಿಂದ ತಮ್ಮ ಸ್ವಾರ್ಥ ಸಾಧನೆಯೇ ಪರಿಮ. ಶಕ್ತಿವನಿಗೆ ಕಶವು ಮೇಲೆ ಕಾಗೆಗಳ, ನರಿಗಳು ಪತ್ತ ನಾಯಿಗಳಂ ಬಯಿ ಹಾಕಿ ಸೂಂಸ ತಿನ್ನುವಂತೆ ಕಾಂಗ್ರೆಸ್ ಶವವನ್ನು ಇಲ್ಲ ಜೀವಿತವಿರುವ ಕಾಂಗ್ರೆಸಿನ ವರ್ಚಸ್ಸು ಇವರ ಅಧಃಪತನ ನಡೆದಿದೆ.

ಕೊರಿಯಾ ಯುದ್ಧದ ಬಗ್ಗೆ ನಮ್ಮ ಸರಕಾರವು ತಳೆದ ನೀತಿಯಂ ಏನೇ ಇದ್ದ ರೂ ಭಾರತೀಯರಾದ ನಮ್ಮ ಪ್ರಜಾನು ಭೂತಿಯು ದುಃಖತ್ಪಡಾಗಿರುವ ಕೊರಿ ಯಾದ ಜಪಾನಾನ್ಯರ ಕಡೆಗಿದೆ. ಅದೇ ಅಲ್ಲ; ಕೊರಿಯಾ ಯುದ್ಧ ಕ್ಷೇತ್ರದಲ್ಲಿ ಮೃತರಾದ ಕರ್ನಲ್ ಉನ್ನೈನಾಯರನ್ನು ನೆನೆದು ಇನ್ನೂ ದುಃಖವಾಗುತ್ತದೆ. ತಾ

ಓದುಗರ ಓಲೆಗಳು.

ಸಂದಣಿ–ಅಭಾವ.

ನೆರೆವ್ಯಾಂತ್ಯಗಳಲ್ಲಿನ ಅಕ್ಕಿಯ ಅಭಾವದಿಂದಲೇ ಎನ್ನಬಹುದು, ಇಂದು ದಿನೇ ದಿನೇ ಕೊಡಗಿನ ಜನಸಂಖ್ಯೆ ಏರುತ್ತಿದೆ. ಅಂದಾಜಿನಂತೆ ಒಂದು ಲಕ್ಷದ ಎಪ್ಪತ್ತು ಸಾವಿರವಂತೂ ಅಲ್ಲವೇ ಅಲ್ಲ. ಕಮ್ಮಿಪಕ್ಷ ೆಂಗಳಿಗೆ ಸಾವಿರದಂತೆಯಾದರೂ, ಈ ಕಳೆದ ಎರಡು ೆಂಗಳಿಂದ ಜನಸಂಖ್ಯೆ ಏರುತ್ತಿದೆಯೆಂದು ಊಹಿಸಬಹುದು. ಅಕ್ಕಿ ಭತ್ತಗಳಲ್ಲಿ ಕೊಡಗು ಉಳುವರಿ ಪ್ರದೇಶವಾದರೂ ಸಹ ಈ ಪರಿಸ್ಥಿತಿಯಲ್ಲಿ ಪಾರ್ಶ್ವಕ್ಷಾಮವಾದರೂ ಬಂದೀತೆಂಬುದು ನಿಜವಾದುದೋ ಎಂಬುವ ಭೀತಿ.

ಮಧ್ಯಮ ವರ್ಗದ ಸರಕಾರಿ ಉದ್ಯೋಗಸ್ಥರು ಹಾಗೂ ಇತರರಿಗೆ, ಗದ್ದೆ ಭೂಮಿ ಭತ್ತ ಬೆಳೆಯಿಲ್ಲದವರಿಗೆ, ಈಗಲೇ ಬಿಸಿಯೇರಿದೆ. ಕೆಲವು ಕಡೆ ರೂಪಾಯಿಗೆ ೧ ಸೇರು ಅಕ್ಕಿ ಕ್ರಯುಚ್ಚೆ ತೆಗೆದಿದ್ದರೆಂದು ಕೇಳ್ವೆನೆ. ಕೆಲವೇ ರೂಪಾಯಿಗೆ ೧½ ಸೇರಿನಂತೆ ತೆಗೆಯುತ್ತಿರುವುದು ಸ್ವಲ್ಪ ಬಂದಿತ್ತು. ಕೆಲವಡೆ ರೂಪಾಯಿ. ಹಿಡಿದು ಅತಿಶಯರೂ ಅಕ್ಕಿ ಸಿಕ್ಕದೆ ಹಿಂದಿರುಗಿದ್ದೂ ಕಂಡಿರಬೇಕು. ಅಕ್ಕಿ ಅಂಗಡಿಗಳಲ್ಲಿ ಅಕ್ಕಿಯಿಲ್ಲ ಅಂತೂ ಕಪ್ಪು ಸಂತೆಯಲ್ಲಿ ಅನಲಕ್ಕೆ ಸಹ ಸಿಗುತ್ತಿಲ್ಲ. ಈ ಸಂಗತಿ ವಿಚಿತ್ರ. ಹಳೆತರಿಗೆ, ಮಧ್ಯಮ ವರ್ಗದವರಿಗೆ, ಭೂಮಿ ಬೆಳೆಯಿಲ್ಲದವರಿಗೆ ಇದು ಬಹು ಕೋಚಿತೆಯು ಪುಸಂಗ ತಕ್ಕ ಕಾರ್ಯಕ್ರಮ ಸರಕಾರ ವಹಿಸುವುದೇ?

'ವಿರಾಜ'

ಕೊಡಗಿನ ಆಹಾರ ವ್ಯವಸ್ಥೆ

ಎಲ್ಲೆಲ್ಲಿಯೂ ರೇಶನ್ ಡಿಪಾರ್ಟ್‌ಮೆಂಟ್ ಇಟ್ಟಿರುವುದೇ ಕೊಡಗಿನಲ್ಲಿಯೂ ಇದೆ. ಆದರೆ ಡಿಪಾರ್ಟ್‌ಮೆಂಟ್ ಅದರ ಕಾರ್ಯವನ್ನು ದಕ್ಷತೆಯಿಂದ ನಡಿಸುತ್ತಿಲ್ಲವೆಂಬ ವಾಚಕರ ಮಂದಿಡುತ್ತೇನೆ.

ನಮ್ಮ ಕೊಡಗು ಪ್ರದೇಶವು ಉಳುವರಿ ಪ್ರದೇಶವಾದರೂ ಕೆಲವು ಕಡೆಗಳಲ್ಲಿ ಭತ್ತಕ್ಕೆಯೇ ಸಕ್ತವಲ್ಲದಿರುವುದೆಂಬ ದೂರು ಕೇಳುತ್ತಿದ್ದೇನೆ. ಅಕ್ಕಿ ಸಿಕ್ಕದಿರಲು ಕಾರಣ ಸರಕಾರದವರೇ ಆಗಿದ್ದಾರೆ. ಈ ಬಗ್ಗೆ ಸರಕಾರವು ಜವಾಬುದಾರಿಯನ್ನು ಅರಿತುಕೊಂಡಂತಿಲ್ಲ ಕಾಣುವುದಿಲ್ಲ ಎರಡು ಮೂರು ವರ್ಷಗಳಿಂದಲೂ ಆಂತರಿಕ ಉಪಯೋಗಕ್ಕೆ ಸರಕಾರವು ನಿಷ್ಕೇಪ ಇಡಬೇಕೆಂದು ಸೂಚಿಸಿದರೂ ಸರಕಾರವು ಆ ಭಾರವನ್ನು ವಹಿಸಿಕೊಳ್ಳದೆ ಬರೀ ಮಿಲ್ಲು ಮಾಲೀಕರನ್ನು ಹೆದರಿಸಿಕೊಂಡು ಅವರಿಂದಲೇ ನಡಿಸುತ್ತಾ ಬರುತ್ತಿದ್ದಾರೆ. ಈ ಪರ್ಷವೂ ಮಿಲ್ಲು ಮಾಲೀಕರಿಂದ ಸಾವಿರ ರೂಪಾಯಿಯಂತೆ ಸರಕಾರದವರು ಡಿಪಾಜಿಟ್ಟು ತೆಗೆದುಕೊಂಡು ಒಂದೊಂದು ಮಿಲ್ಲಿಗೆ ಸವರು ನೂರು ನೂರು ಗಂಡಿ ಭತ್ತವನ್ನು ರೇಶನಾಗಿ ಇಡಬೇಕೆಂದು ಹೇಳುಮಾಡಿರುವರಂತೆ! ಮಿಲ್ಲು ಮಾಲೀಕರು ಅವರ ಹಣ ಹಾಕಿ ನೂರು ಗಾಡಿ ಭತ್ತ ಇಡುವಷ್ಟು ಜೈಕಸ್ಯ ಇರುವವರು ಇದ್ದಾರೋ ಎಂಬುವುದು ಸಂಶಯ ನಾನು ಮಿಲ್ಲು ಮಾಲಿಕರಲ್ಲಿ ತಿಳಿದ ಪ್ರಕಾರ ಯಾರೂ ನಿಕ್ಷೇಪವಿಟ್ಟಿಲ್ಲ; ರೈತರಲ್ಲಿ ಭತ್ತವಿರುತ್ತೆ. ಅಲ್ಪಸ್ವಲ್ಪ ಹೆಚ್ಚಿಗೆ ಬೆಲೆಕೊಟ್ಟು ತೆಗೆದುಕೊಂಡು ರೇಶನ್ ಶಿಫೋಗಳನ್ನು ಪಡೆಯುತ್ತಾ ಬರುತ್ತಿರುವರಂತೆ! ಈ ವರ್ಷ ಮೈಸೂರಿಗೆ ಭತ್ತ ಹೋಗಲೇಬೇಕಿದ್ದಷ್ಟು ಅಕ್ಕಿ ಹೋಗಲಿಲ್ಲ, ಮೈಸೂರಿನ ಭತ್ತ ಯದಕಶಕ್ತಿಯಾನು ವಾಗಿ ಸರಕಾರವು ಮೈಸೂರವರಿಗೆ ಆರ್ಡರ್ ಮಾಡಿ ಅಕ್ಕಿ ಕಳುಹಿಸದಿದ್ದರೆ ನಿನ್ನ ಲೈಸನ್ಸ್ ಪಜಾ ಮಾಡಲಾದೀತು ಎಂದು ಖಟ್ಟಿಮಾಡಿ ನೋಟೀಸಿನಂತೆ ಇದ್ದ ಭತ್ತವನ್ನೆಲ್ಲಾ ಅಕ್ಕಿ ಮಾಡಿ ಎಲ್ಲಿಸವರು ಕಳುಹಿಸಿಸುವರೆ. ಈಗ ರೇಶನ್ ಅಂಗಡಿಗೆ ಅಕ್ಕಿ ಕಳುಹಿಸಬೇಕೆಂದು ಒಂದು ಮಿಲ್ಲಿಗೆ ನೋಟೀಸ್ ಕಳಹಿಸಿ ಅವರಲ್ಲಿ ಭತ್ತ ಇಲ್ಲದ ಕಾರಣ ಕಳಹಿಸಿದ್ದಕ್ಕೆ ಅವರ ಡಿಪಾಜಿಟ್ಟು ಸುಮಾರು ರೂಪಾಯಿಗಳನ್ನು ದಂಡವಾಗಿ ತೆಗೆಯಲಾಗಿದೆ ಎಂದು ವಾರ್ತೆ ಇದೆ. ಸರಕಾರದವರು ಜನತೆಯ ಹಿತದ ದೃಷ್ಟಿಯಿಂದ ಜವಾಬ್ದಾರಿಯನ್ನು ತಿಳಿದು ಭತ್ತವನ್ನು ನಿಕ್ಷೇಪವಿಡದ ಬರೀ ಮಿಲ್ಲು ಮಾಲೀಕರ ಮೇಲೆ ಇಷ್ಟು ದೊಡ್ಡ ಹೊರೆಯ ನ್ನು ಹೊರಿಸಿದ ಕಾರಣವೇ ಇಂದು ಗಂಡಾಂತರದ ಪರಿಸ್ಥಿತಿ ಬಂದಿರುವುದಾಗಿದೆ. ವ್ಯಾಪಾರಿಗಳ ಸಂಘವು ಈ ವಿಷಯದಲ್ಲಿ ಸೂಚಿಸಿರುವಂತೆ ಉತ್ಪಾದಕ ಕೊಡಗಿನ ನೈತಿಕಗಳಲ್ಲಿ ಭತ್ತ ದಾಸ್ತಾನು ಸರಕಾರ ಇಂಚೇರು. ದಕ್ಷಿಣ ಕೊಡಗಿನ ಮಿಲ್ಲುಗಳಿಂದ ಅಕ್ಕಿ ಹೊರ ಲಾರಿಗಳಲ್ಲಿ ವಾಪಾಸು ಬರುವಾಗ್ಗೆ ಭತ್ತ ತೆಗೆದುಕೊಂಡು ಬರುವ ವಿಚಾರ ಮಾಡಬೇಕಿತ್ತು.

ಹಿಂದೊದೇಶದ ಎಲ್ಲಾ ಕಡೆಗಳಲ್ಲೂ ಇದ್ದಂತೆಯೇ ಇಲ್ಲಿಯೂ ದಕ್ಷಿಣ ಕೊಡಗಿಗೆ ಒಂದು ಉತ್ತರ ಕೊಡಗಿಗೆ ಒಂದು ಪೂರ್ ಎಫ್ಫೈಸರ್ ಕನಿಷ್ಟ ಇವಿಷ್ಟು ಅಂತರ ಹೆಸರಿಗೆ ಮಾತ್ರ ಇದೆಯಷ್ಟೆ, ಆ ಕಮಿಟಿಯವರ ಸೂಚನೆಯು ಕೇಳಲಿಲ್ಲ. ಸರಕಾರ ಇವನ್ನು ಗಮನಿಸಿದ್ದಾ ಕಾಣುವುದಿಲ್ಲ. ಉದಾಹರಣೆಗೆ ಅವಲಕ್ಕಿ ಮಾಡಲಿಕ್ಕೆ ಬಿಡುವೇಳೆ. ಬಡಜನರಿಗೆ ಕೈಗಾರಿಕೆ, ಅವರು ಗೈದು ವಿದ್ಯೆಲಿಕ್ಕೆ ಸಹಾಯ ಮಾಡಬೇಕಿ. ಅದರಿಂದ ಜನರಿಗೆ ಉಪಕಾರವಾಗುತ್ತದೆಂದೂ ಮತ್ತು ಗಾಳಿಯಿಂದ ಗಾಳಿಯಕ್ಕೆ ಭತ್ತ, ಅಕ್ಕಿ ಸಾಗಿಸುವುದನ್ನು ಬಿಡಬೇಕೆಂದೂ ಪ್ರದೇಶ ಗಡಿಯಲ್ಲಿರುವಕ್ಕ ಊರುಗಳಿಗೆ ಹೋಗುವ ಭತ್ತ ಅಕ್ಕಿಗಳಿಗೆ ಮಾತ್ರ ಪರ್ಮಿಟ್ಟು ಕೊಡಲು ಪ್ರಯತ್ನಿಸಬೇಕೆಂದೂ ಸೂಚನೆ ಕೊಟ್ಟರೂ ಆ ಜಾರಿಯಲ್ಲಿ ಬಂದಿಲ್ಲ. ವೀರಾಜಪೇಟೆಯಲ್ಲಿ ಹೀಗಾದರೂ, ವಕ್ಕಳೂ, ಆಷರಿಗೆ ಸಿಕ್ಕಿದ ದೇಶಸ್ ಅಕ್ಕಿಯನ್ನು ಮಿಲ್ಲಿನಲ್ಲಿ ತೊಳಸಿಸೂಡಿಯೂ ಪಡೆದು ಮೂಡಿಕೊಂಡು ಬರಲು ತೆಗೆದುಕೊಂಡು ಹೋದರೆ, ರೇಶನ್ ಇನ್ಸ್‌ಪೆಕ್ಟರವರು ಅದಕ್ಕೆ ಪಾಸು ಇಲ್ಲವೆಂದು ಹಿಡಿದು ಮಡಿಕಿ ಉಡಮಾಸ ಬೀಳಿಸಿದ ಸಂಗತಿ ಸಹ ತಿಳಿಯುತ್ತೇನೆ. ಈ ರೀತಿ ಸರಕಾರವು ವರ್ತಿಸುವುದು. ಯಾರ ಹಿತಕ್ಕಾಗಿ? ಬಡಜನರ ಹಿತರಕ್ಷಣೆಯು ಜವಾಬ್ದಾರಿ ಸರಕಾರಕ್ಕಿಲ್ಲವೇ? ಸ್ಥಳೀಯ ಪತ್ರಿಕೆಯಲ್ಲೂ ಎಚ್ಚರಿಸಿದರೂ ಸರಕಾರ ಜಾಗರೂಕತೆ ವಹಿಸಿದಂತೆ ತೋರುವುದಿಲ್ಲ ನಂಬರು ೪ ನವೆಂಬರ್, ಡಿಸೆಂಬರ್‌ಗಳಲ್ಲಿ ಕೊಡಗಿನಲ್ಲೂ ಜನರು ಉಪವಾಸ ಬೀಳುವ ಪ್ರಸಂಗ ಬರಬಹುದೇನೋ!

ವನಸೊಂದವ

ಸಂಪೂರ್ಣ ಸರಿಯಿಲ್ಲ.

ತಾ. ೪-೮-೧೯೩೦ರ 'ಕೊಡಗು' ಪತ್ರಿಕೆಯಲ್ಲಿ 'ವೀರಾಜಪೇಟೆ ಮಾಧ್ಯಮ ಲಿಟ್ಟಿಯ ವಿಚಾರ' ಪಟ್ಟಣಿಗ' ಬರೆದ ಸಂಪೂರ್ಣವಾಗಿ, ಸರಿಯಾದ, ತಲಸ್ಪರ್ಶಿಕ ಚಿತ್ರವಲ್ಲ. ಓದುಗರಿಗೆ ಯಥಾರ್ಥ ಚಿತ್ರವನ್ನು ಕೊಡಲಿಲ್ಲ. ಕಳೆದ ಒಂದು ವರ್ಷದಿಂದ 'ಆಕ್ಟಿಯೆ' ವರೂಲು ಮಾಡಿದ್ದರಿಂದ ಕಂದಾಯವಿಗಿಂತ ಉಳಿತಾಯ ವಾಗಿ ವೀರಾಜಪೇಟೆಯ ರಚ್ಚಿ, ಇನ ಕೂಲಕ್ಕೆಗಳು ಹಾಗೂ ಜೊಂದ ಹೆಚ್ಚಾಗುವಂತೆ ಕಾರ್ಯಕ್ರಮವ ಕೈಕೊಂಡ, ಮ ನ್ಸಿಪಾಲಿಟಿಯು ಅನೇಕ ಪ್ರಯತ್ನಗಳಲ್ಲಿ ಸಫಲವಾಗಿದೆ.

ರಸ್ತೆ ಅಗಲ ಮಾಡಿದ್ದು ನಿಲ್ಲದು ಕಡೆ ಸರಿಯಾಗಿ ನೀಡಿದೆ ನಗರದಲ್ಲಿ, ಚರ್ಚ್‌ಬೀಟಿಗಿಷ್ಟು ರಸ್ತೆ ಬದಿ ಬೀಳಲಿಲ್ಲ. ನನಗೆ ತಿಳಿದ ಮಟ್ಟಿಗೆ 'ದೇವಾಂಗಬೀದಿ' ರಸ್ತೆ ಕಂಟ್ರಾಕ್ಟರಿಂದ ಕಟ್ಟಿಸಿದ್ದು, ಕಂಟ್ರಾಕ್ಟರನೇದ ಈ ವಿಷಯವನ್ನು ಹೆಣ ಹಿಡಿದಿದ್ದಾನೆಂದು ತಿಳಿದಿರುವೆನೆ. ಜನಂತರ ಬಾವಿಗಳು, ನೀರಿನ ಜಕಾನುಕೂಲತೆ ಹೋಗಲಾಡಿಸಲು ಒಂದು ನರ್ಷದಲ್ಲಿ ಅ ೇಳು ಬಾವಿ ತೋಡಿಸಿರುವರು ಗತ್ತ ಕೆಲವು ರವೇ ಸಹ ಆಗಿದೆ ಈ ಹಲವಾ ರುಗಳಲ್ಲಿ ಒಂದು, ವಳೆ ಹೊಡೆತ ವಿಪರೀತವಾದ್ದರಿಂದ 'ದೇವಾಂಗಬೀದಿ ರಸ್ತೆಯಾಗೋಡೆ' ಬಿದ್ದಂತೆ ಬಿದ್ದರೆ ಕರ್ತವ್ಯವ್ಯತ್ಯಯವಿಲ್ಲವೆ? ಬೇಕಾದಷ್ಟು ಹೇಳಲಾಗುವುದಿಲ್ಲ. 'ವನದ ದೊಡ್ಡಿಯಾ' ಸಹ ಜೀರ್ಣಾವಿದೆ ಸಿದಬ್ಬಾ. ಡಿ ಏನೋ ತೊಂದರೆ ಬಾಡಿದರೂ ಈಗಲ ತೊಂದರೆಗಳಲ್ಲ ಇದಕ್ಕೂ ಶಲೂ ವ್ಯಾವಹಾರಿಕ ಇನ್ನಿನ ರಸ್ತೆಗಳಿಗೆ 'ಮೆಟಲಿಲ್' ಮಾಡಿಸಿದ್ದರೂ, ವ್ಯಾಪಾರ ವಿಷರೀತ ಇರುವ ಪೇಟೆಯು ಅನೇಕ ರಸ್ತೆಗಳು ಈಗ ಬಹು ಜೀರ್ಣಾಗಿವೆ. ಚರಂಡಿಗಳು ಶ.ಟಿಯೂಗಿವೆ. ಮಾರ್ಕೆಟ್, ಬಸ್‌ಸ್ಟೇಂಡ್ ಇವುಗಳೆಲ್ಲಾ ಕರ್ತವ್ಯದಕ್ಷತೆಯ ಸಾಕ್ಷಿಗಳಾಗಿವೆ ನಿಜವಾಗಿಯೂ ಅಲ್ಲೊಂದು ಇಲ್ಲೊಂದು ನ್ಯೂನತೆಗಳಿಲ್ಲದ್ದರೂ ಮುನ್ಸಿಪಾಲಿಟಿಯು ಸಾರ್ವಜನಿಕ ಹಣವನ್ನು ದುರ್ವ್ಯಯಮಾಡಿದೆಯೆಂದು ಹೇಳಲಾಗುವುದಿಲ್ಲ.

ಪಾರ್ಕ್ ಕಟ್ಟಿಸಿದ್ದು ಮುನ್ಸಿಪಾಲಿಟಿಯ ಸ್ವೇಚ್ಛೆಯಿಂದಲ್ಲ. ಗತ ಚೀಫ್ ಕಮಿಷನರ್ ಸೂಚಿಸಿದ್ದರಿಂದ ಅವರ ಮನತೃಪ್ತಿಗಷ್ಟೆ! ಇದೂ ಸಾರ್ವಜನಿಕ ಉಪಯೋಗವಲ್ಲ. ಆದೂ ಸಾರ್ವಜನಿಕ ಉಪಯೋಗವಾದ ಸಮಂಜಸವಾದ ಚಿತ್ರ ಕೊಡದೆ ಪರಿಸ್ಥಿತಿಯ ದ್ವಿಮುಖಗಳನ್ನೂ ತೋರಿಸದ್ದಕ್ಕೆ ಕಪ್ಪು, ಸೋಲುಗಳನ್ನು ಮಾತ್ರ ಕಾಣಿಸಿದ್ದು ಸ್ವಲ್ಪ ತೋಚಿನಿಯ.

'ವಿರಾಜ.'

ಪೆರಾಜೆ

ಮಡಿಕೇರಿಯಿಂದ ಇಪ್ಪತ್ತೇಳು ಮೈಲುಗಳ ದೂರದಲ್ಲಿ ವೆಸಾಜೆಯೆಂಬೂರು, ಸುತ್ತುಮುತ್ತಲು ದಕ್ಷಿಣ ಕನ್ನಡದ ಪರಿಹದ್ದಿರುವ ಗ್ರಾಮವದೆ. ೭ ಲಕ್ಷ ಹಳ್ಳಿಗಳಿಂದ ಕೂಡಿದ ಹಿಂದೂಸ್ಥಾನದಲ್ಲಿ ಕೊಡಗು ಸುವೇಶದ ಮೂಲೆಯಲ್ಲಿ ಇರೂ ಒಂದು ಎನ್ನಬಹುದು. ಬಡಜನವು ಹಿಂದೂದೇಶದ ಹಕ್ಕಿನ ಭಾಗದಂತಿರುವಾಗ ಇದನ್ನೂ ಬಡತನವು ಬಿಟ್ಟ ಹೋಗಿಲ್ಲ, ಇರಲ್ಲಿ ಅಧಿಕಾರಿಗಳ ವರ್ಷಾಪು ಕಡಿಮೆಯಾಗಿಲ್ಲ ಆದರೆ ಕೆಲವರು. ಎಂದರೆ ಕೈಷಿ ಇಲಾಖೆಯಂತಹವು ಪ್ರಯತ್ನದ ಧನಗಳಿಂದ ಜನತಾ ಸೇವೆಯನ್ನು ಮಾಡುತಿದ್ದಾರೆ, ಪರು ಇಲಾಖೆಯವರೂ ತಮ್ಮ ಸೇವೆಯನ್ನು ಸಲ್ಲಿಸುತಿದ್ದಾರೆ.

ಇಲ್ಲಿ ಒಂದು ಶಿಲೆಯಿದೆ. ಎಂಟನೇ ದರ್ಜೆಯಾಗಿ ಮೂರ್ಯಡಿಸುವುದಾಗಿದ್ದರೂ ಆಧಿಕಾರಿಗಳ 'ಜಳ್ಳಗೇಕೆ ಎಂಟನೆ ದರ್ಜೆಯ ಶಾಲೆ'ಯೆಂಬ ಹೊಸ ಸುಧಾರಣೆಯಿಂದ ವಿವನೇ ದರ್ಜೆಯ ಶಾಲೆಯಾಗಿಯೇ ಇದೆ. ಒಂದು ಒತ್ತ ಸಂಗ್ರಹಾಲಯ ಇವೆಯಾದರೂ ಅಕ್ಕಿ ಬಂದರೆ ಬಂಕ. ಇಲ್ಲದಿದ್ದಕೆ 'ಭಣಕ ಭಿಕ್ಷಾಂ ದೇಹಿ' ಎಂಬ ಸವತ್ತಕ್ಷರೀ ಮಂತ್ರ! ಇದರಿಂದ ಅಲ್ಲಿರುವ ಬಡಜನರಿಗೆ ತೊಂದರೆಯು ಎಷ್ಟಾಗಿದೆಯೆಂಬುದನ್ನು ಗಮನಿಸಿ ಸಂಬಂಧಪಟ್ಟವರು ಯೋಗ್ಯ ಸುಧಾರಣೆಯನ್ನು ಕೈಕೊಳ್ಳುವುದು ಸೂಕ್ತವಾಗಿದೆ. ಈ ಗ್ರಾಮದಿಂದ ನಮೂಲಾಗ್ರವಾದುದು ಕದಾಯ. ಪಕ್ಷವಲ್ಲದೆ ಸ್ವಯೋಜನಕಾರಿಯಾಗುವ ಯಾವ ಕೆಲಸಗಳೂ ಇಸ್ಪರತನಕ ಆಗಿಲ್ಲ. ಏನೋ ಒಬ್ಬಿಬ್ಬರ ಐತ್ಮಾಸೆಯಿಂದ ಈಗೊಂದು ಓಳರಕ್ಕೆಯಾಗಿದೆಯಾದರೂ ಪ್ರಯೋಜನವು ಗ್ರಾಮಸ್ಥರಿಗೆ ದೊರೆತಿಲ್ಲ. ಅಲ್ಲದೆ ಸ್ಥಳೀಯರು ಪೋಸ್ಟಾಫೀಸಿನ ಕೊಂತೆಯಿಂದ, ತವುಗೆ ಬರುವ ಮನಿಯಾರ್ಡರ್, ಇನ್ಯೂರು, ವಾರ್ಸ್‌ಲ್‌ಗಳಿಗೆ ದಕ್ಷಿಣ ಕನ್ನಡಜಲ್ಲಿಯ ದೂರದ ಅಂಚೆ ಆಫೀಸಿಗೆ ಹೊಂದಿಕೊಂಡಿರಬೇಕಾಗಿದೆ. ಆಸ್ಪತ್ರೆಯೂ ಇಲ್ಲಿಗೆ ಜನತಾ ರೋಗ್ಯವಾದರೆ ದೀನೋದ್ಧಾರನನ್ನು ಮೆರೆಯಿಡಬೇಕಾಗಿದೆ. ಇಷ್ಟೆಲ್ಲಾ ನಮ್ಮಿನತೆಗಳಿರುವುದನ್ನು ಕೊಂಚ ಮಟ್ಟಿಗಾದರೂ ಅಧಿಕಾರಿಗಳು ಯೂ ಇತರ ನುಖಂಡರು ಗಮನಿಸಬಾರದೇ?

ಕ.ಶಾಲಪ್ಪ

ನು ತೊಡೆದೆಯೆಲ್ಲಿಲ್ಲ ಭಾರತಕ್ಕೆ ಕೇರ್ತಿ ತಂದ ಆ ಪುಣ್ಯವನು ಸಂಯುಕ್ತ ರಾಷ್ಟ್ರ ಸಂಘದ ಮಿಲಿಟರಿ ಅನಲೋಚನಗಾರಂಥಿ ಮುಖ್ಯರಾಗಿ ಅಸಲ್ಪಡುವವರಿದ್ದರು. ಇವರು ಮೈರಾದುದೇ ಉತ್ತರ ಕೊರಿಯ ನವಿಂದಲ್ಲ ಅನೇಕಾರಾದವರು ಹಾಕಿವೆ ವೈಸಿನಿಂದ ಮೃತರಾದರು. ಸಂಯುಕ್ತ ರಾಷ್ಟ್ರ ಸಂಘದ ಮಿಲಿಟರಿ ಅನಲೋಚನಗಾರರಾದ ಉಣ್ಣೆನಾಯರನ್ನು ಅಮೇರಿಕಾದ ವೈಸಿನ ಕೊಂದಿದ್ದರಿಂದ ಅಮೇರಿಕದ ನೀತಿಯು ಸಂಯುಕ್ತ ರಾಷ್ಟ್ರ ಸಂಘವಿನ್ನೇ ಹತಮಾಡಿದಿರಲಿ!

ದುಂದುಗಾರಿಕೆ.

ಮಡಿಕೇರಿ ಮುನ್ಸಿಪಾಲಿಟಿಗೆ ಆಕ್ಟ್ರಾಯಿ ಮೂಲಕ ಹೆಚ್ಚು ಹಣ ಬರುತ್ತಿರುವ ದೆಂದೋ ಏನೋ ಹಿಡಿತವಿಲ್ಲದೆ ಹಣ ಖರ್ಚಾಗುತ್ತಿದೆ ಖಾಲಿ ಪೈಸಾರಿ ಜಾಗ ಪಡಪು ಮನೆ ಕಟ್ಟುವದು ವಾಡಿಕೆಯಾದರೂ ಮುನ್ಸಿಪಾಲಿಟಿಯು ಜಾಗಕ್ಕೆ ಸಾವಿರಾರು ರೂಪಾಯಿ ತೆತ್ತು ದಾಸವಾಳ ಕೆರೆಯ ಬಳಿ ಸುಮಾರು ಹದಿನೈದು ಸಾವಿರ ರೂಪಾಯಿ ಖರ್ಚು ಮಾಡಿ ಮುನ್ಸಿಪಲ್ ಸರ್ಕಾರ್ಗೂ, ಒವರ್ಸಿಯರಿಗೂ ವಾಸಕ್ಕೆ ಮನೆ ಕಟ್ಟುಸಿದೆ! ಈ ಮನೆಗಳಿಗೆ ಸೀಮೆಂಟ್, ಇಟ್ಟಿಗೆಗಳ ಕಾಂಪೌಂಡ್ ಕಟ್ಟುವ ಏರ್ಪಾಡಾಗುತ್ತಿದೆ! ಕೇವಲ ೪೦ ಸಾವಿರ ರೂಪಾಯಿ ವೇತನದ ಈ ನೌಕರರಿಗೆ ಇಷ್ಟು ದೊಡ್ಡ ಹಣದ ಖರ್ಚಿನ ಮನೆ ಬೇಕಿಲ್ಲ ಈ ಮನೆಗಳನ್ನು ಬೇರೆ ಸಾರ್ವಜನಿಕರಿಗೆ ಬಾಡಿಗೆಗೆ ಕೊಟ್ಟು ಕಡಿಮೆ ಖರ್ಚಿನಲ್ಲಿ ಇವರಿಗೆ ಬೇರೆ ಮನೆ ಕಟ್ಟಬಹುದಾಗಿದೆ ಈ ಮಾರ್ಗದಿಂದ ಮುನ್ಸಿಪಾಲಿಟಿಗೆ ಹೆಚ್ಚಿನ ಉಪಯೋಗ ಬಂದಂತಾಗದು

ಮಡಿಕೇರಿ ಚೌಕಿಯಲ್ಲಿ ಒಂದು ಸರ್ಕಲ್ ಹಾಕುವ ನಿಮಿತ್ತ ಚೌಕಿಯಲ್ಲಿರುವ ಐದು ಪಗಡೆಗಳನ್ನು ಕೃಯಕ್ಕೆ ಕೊಂಡುಕೊಳ್ಳುವ ವಿಚಾರಣೆಯನ್ನು ಪ್ರೆಸಿಡೆಂಟರು ಮಾಡುತ್ತಿರುವರಂತಾ ತಿಳಿಯಬಂದಿದೆ ಈ ಮನೆಗಳು ಅರು ಸೆಂಟು ಜಾಗದಲ್ಲಿರುತ್ತವೆ ಈ ಜಾಗದಲ್ಲಿರುವ ಮನೆಗಳಿಗಾಗಿ ೨೪೦೦೦ ರೂಪಾಯಿ ಕೊಡುವ ವಿಚಾರಣೆಯಂತೆ! ರಸ್ತೆಗೆ ಒತ್ತಾಗಿರುವ ಮನೆಗಳಲ್ಲಿ ಪ್ರತಿ ಒಳಗಿನ ಎರಡು ಮನೆಗಳನ್ನು ಕೊಂಡುಕೊಳ್ಳಲು ಚೀಫ್ ಕಮಿಷನರಿಗೆ ಅನುಮತಿಗೆ ಬರೆದಿರುವರಂತೆ ಈ ವಿಷಯದಲ್ಲಿ ಸರಕಾರದವರು ಎಚ್ಚರಿಕೆಯಿಂದ ವರ್ತಿಸಬೇಕು ಮಹದೇವಪೇಟೆಗೆ ಈ ಸರ್ಕಲು ಆವಶ್ಯವಿಲ್ಲ ಮಹದೇವಪೇಟೆಗೆ ಬೇಕಾಗಿರುವದು ಒಂದು ಹೈಯರ್ ಎಲಿಮೆಂಟರಿ ಶಾಲೆ, ಒಂದು ಔಟ್‌ಪೇಶಂಟ್ ಆಸ್ಪತ್ರೆ. ಇವಲ್ಲದೆ ಯೋಗ್ಯ ಬೆಳಕಿನ, ನೀರಿನ ವಿಚಾರಗಳಿಗೆ ಗಮನಕೊಡುವ ಸರ್ಕಲ್ ಕಛೇರಿಯ ಕೈಹಾಕಿರುವ ಇವರು ಜನಹಿತಕ್ಕೆ ಎಷ್ಟು ಗಮನವಿತ್ತಿರುವರೆಂಬುದು ವೇದ್ಯವಾಗುತ್ತದೆ

ವೇಲಾಗಿ ಈ ಸರ್ಕಲಿನ ಯೋಜನೆಗೆ ಎಷ್ಟು ಹಣ ವೆಚ್ಚವಾಗುವದೆಂಬುದರ ಅಂದಾಜೆ ಮಾಡಿಲ್ಲವಂತೆ! ಅಂದರೆ ಪ್ರೆಸಿಡೆಂಟರು ಮನಸು ಬಂದಷ್ಟು ವೆಚ್ಚು ಮಾಡುವದೆಂದರ್ಥವೇ? ಸರಕಾರದವರು ಇದಕ್ಕೆ ಸಂಬಂಧಿಸಿದ ವಿಕಾರ್ತುಗಳನ್ನು ತರಿಸಿಕೊಂಡು ಅಜಮಾಯಿಸುವರಾಗಿ ನಂಬುತ್ತೇನೆ ಪುರನಿವಾಸಿಗಳಿಗೆ ಆಗತ್ಯವಾಗಿ ಬೇಕಾದ ವಿಷಯಗಳನ್ನು ಒದಗಿಸುವದರ ಈ ರೀತಿಯ ಅಡಂಬರಕ್ಕಿಳಿಯಬೇಕೇ ವಿನಹ ಪುರನಿವಾಸಿಗಳು ನೀರಿಲ್ಲದೆ, ದೀಪವಿಲ್ಲದೆ, ಒಂದು ಟೂಸಾಹೋಲೋ, ಒಂದು ಯೋಗ್ಯ ವಾಚನಾಲಯವೋ ಇಲ್ಲದೆ ಕಷ್ಟಪಡುತ್ತಿರುವಾಗ ಈ ರೀತಿಯ ಖರ್ಚು ಸಲ್ಲದು

'ಮಹದೇವಪೇಟೆ ನಿವಾಸಿ'

ಇನ್ನೂ ಈ ದರ್ಪವೇ?

ಪ್ರಜಾಪ್ರತಿನಿಧಿಗಳ ಪ್ರಭಾವಕ್ಕೆ ಬಗ್ಗುವ ಕೊಡಗಿನಲ್ಲಿರುವ ಅಧಿಕಾರಿಗಳೂ ಪ್ರಜಾಭಿಪ್ರಾಯಕ್ಕೆ ಮನ್ನಣೆಯನ್ನು ಕೊಡಲಿಕ್ಕೆ ತಕ್ಕಂತೆ ಕೆಲವು ಅಧಿಕಾರಿಗಳಿಗೆ ಪೂರ್ವಾಡಾಗಿದ್ದರೂ ಕೆಲವರಲ್ಲಿ ಅಗಿಲ್ಲ ನನ್ನ ಅನುಭವವನ್ನು ಹೇಳುವದಾದರೆ ಕೊಡಗಿನಲ್ಲಿರುವ ಯಂತ್ರ ಎಕ್ಸ್ಟ್ರಾ ಇಲಾಖೆಯ ಕೆಲವು ಅಧಿಕಾರಿಗಳು ದರ್ಪದಿಂದ ವರ್ತಿಸುತ್ತಿರುವರು ನವ್ವದು ದೂರದ ಗ್ರಾಮ ಇಲ್ಲಿ ಅಧಿಕಾರಿಗಳು ಬಂದರೆ ಉಳಕೊಳ್ಳಲು ಅನುವಿಲ್ಲವೆಂದ (ಬಹತನದ ಕಾರಣ ಅಧಿಕಾರಿಯನ್ನು ಮನೆಗೆ ಕರೆಯುವ ಎದೆಗಾರಿಗೆ ರೈತರಿಗಿಲ್ಲ) ಅದೇ ದಿನ ಹಿಂತಿರುಗಿ ತ್ಯಾಲೆ. ಗ್ರಾಮವನ್ನು ಸುತ್ತಲೆ ಆವಶ್ಯವರನ್ನು ಕೇಳಿ ಹೊಗೆಸೂಪ್ಪು ಬೆಳೆಸಿದ ವಿವರ ಬರೆದು ಕೊಳ್ಳುತ್ತಾರೆ. ಬರಹ ತಿಳಿಯದ ರೈತರು ಹೆದರಿಕೆಯಿಂದ ಸಹಿ ಹಾಕುತ್ತಾರೆ ಹೊರಹೊಮ್ಮಾಗ ಪೊಲೆಯ ಫ್ಲರ್ಡಿಂದ ರೈತರಿಂದ ತನ್ನ ಸಾಮಾನ ಹೊರಿಸಿಕೊಂಡು ಬರುವದಿದೆ ಈ ರೀತಿಯ ದರ್ಪ ಸಲ್ಲದು ಕೂಲಿಗೆ ಒಡತನವಾದರೂ ಕೂಲಿಕ್ಕಾಬಡತನವಿಲ್ಲವೆಂಬಂತೆ ಗ್ರಾಮ ಸ್ಥರು ಬಡವರಾದರೂ ಅವರೂ ಗೌರವಾನ್ವಿತರಲ್ಲವೇ? ಹೇಟ್, ಬೂಟ್, ಸೂಟ್, ಹಾಕಿದ್ದಾಕ್ಷಣ ಯಾರಿಗೂ ದೇವತ್ವ ಬರುವುದಿಲ್ಲ ಆದ್ದರಿಂದ ಇನ್ನಾದರೂ ಸರಕಾರಿ ಅಧಿಕಾರಿಗಳು ಜನಸಾಮಾನ್ಯರು ತಾವೆಂದು ವರ್ತಿಸಬೇಕು ಮೇಲಧಿಕಾರಿಗಳೂ ಈ ಬಗ್ಗೆ ನಿಗವಹಿಸುವದೆ ಅಗತ್ಯ

—ನೊಂದ ಹೆಳ್ಳಗ.

ಕೊಡಗಿನ ಹರಿಜನರಿಗೆ ಎಚ್ಚರಿಕೆ!

ಸ್ವತಂತ್ರ ಭಾರತದ ಪ್ರತಿಯೊಬ್ಬ ಭಾರತೀಯನೂ ತನ್ನ ಸುಖಾಭಿವೃದ್ಧಿಗೆ ದಾರಿ ಹುಡುಕುತ್ತಿದ್ದಾನೆ ಕೆಲವರಿಗೆ ಅಧಿಕಾರ ಸ್ವಾತಂತ್ರ್ಯವಿದೆ ಕೆಲವರಿಗೆ ಭೂಸಂಪತ್ತಿನ ಅನುಕೂಲವಿದೆ. ಇನ್ನು ಕೆಲವರಿಗೆ ವ್ಯಾಪಾರದಲ್ಲಿ ಅಧಿಕ ಲಾಭ ಸಿಕ್ಕಿ ಭಂಡವಾಳ ತುಂಬಿಕೊಳ್ಳುತ್ತಿದ್ದಾರೆ ಆದರೆ ಬಡ ಕಾರ್ಮಿಕರಿಗೆ, ಹಾಗೂ ಹಿಂದುಳಿದ ಸಂಗಡದವರಾದ ಹರಿಜನರಿಗೆ ಸ್ವಿಕಾರವು ದೇನು?

ಅಧಿಕಾರಿಗಳು, ವ್ಯವಹಾರಿಗಳು ಎನ್ನುವವರು ಹೇಳುವ ಆವೃತ್ತಿಭ ಪಣಗಳನ್ನು ಕೇಳಿ ವಾಗ ಮನಸು ಹಿಗ್ಗುತ್ತದೆ ಕರ್ಣೇಂದ್ರಿಯಗಳು ನಿಗುರಿ ನಿಗುರಿ ಲಾಲಿಸುತ್ತವೆ ನೇತ್ರೇಂದ್ರಿಯಗಳಿಗೆ ದೇದಿಪ್ಯಮಾನ ಸೂಬಗೇ ತೋರುತ್ತದೆ ಕಳೆದ ಮೂರು ವರ್ಷಗಳಿಂದಲೂ ಇಂಥಾ ಭಾಷಣಗಳನ್ನು ಕೇಳಿ ಸಾಕಾಯಿತ ಕೊಡಗಿನ ನಮ್ಮೂರಿನಲ್ಲಿ ಹರಿಜನ ಕಮಿಟಿ ವಿಮರ್ಶಿಂಗ್‌ಗಳೂ ಮಹಾ ಸಭೆಗಳೂ ನಡೆದವು ಆ ಸಭೆಗಳಲ್ಲಿ ತೀರ್ಮಾನಿಸಲ್ಪಟ್ಟ ಅಜೆಸ್ಟೇ ರವಾನೆಗಳು ಸರಕಾರಕ್ಕೆ ಒಪ್ಪಿಸಲ್ಪಟ್ಟವು ವಿನಾಯಿತ್ತೆ?

ಕೊಡಗಿನಲ್ಲಿರುವ ಹರಿಜನರು ಸಾವಿರಾರು ವರ್ಷಗಳಿಂದ ಸಾವಾವೃತ್ತಿಯಿಂದ ಜೀವಿಸಿಕೊಂಡು ಬಂದಿರುವರಲ್ಲದೆ ತಮ್ಮಲ್ಲಿದ್ದ ಅಲ್ಪ ಸ್ವಲ್ಪ ಭೂಸೌಕ್ಯಗಳನ್ನೆಲ್ಲಾ ಕಳೆದುಕೊಂಡಿದ್ದಾರೆ ವಾಸಕ್ಕೆ ಮನೆ ಇಲ್ಲ ವ್ಯವಸಾಯಕ್ಕೆ ಭೂಮಿ ಇಲ್ಲ ಜ್ಞಾನಕ್ಕೆ ವಿದ್ಯೆ ಇಲ್ಲ ಲಾಭಕ್ಕೆ ವಾಣಿಜ್ಯ ಕಸುಬಿಲ್ಲ

ಹರಿಜನರ ಏಳಿಗೆಗಾಗಿ ಸರಕಾರವು ಒಂದು ಆಫ್ಲಿಪ್ತ ಕವಿಟಿಯನ್ನು ಸ್ಥಾಪಿಸಿತ ಆ ಕವಿಟಿಯಲ್ಲಿ ಒಂದು ಪಂಚವರ್ಷಿಕ ಯೋಜನೆಯನ್ನು ತಯಾರಿಸುವುದಕ್ಕೆ ಒಂದು ವರ್ಷಗಳ ಕಾಲ ಹಿಡಿಯಿತ ಆ ಯೋಜನೆಯು ಭಾರ್ಕವ ಕಮಿಷನರ್ ಸಾಹೇಬರವರ ಮಂಜೂರಾತಿಗೆ ಹೋಗಿ ಬಾಗಿ ಬರುವಷ್ಟರಲ್ಲಿ ಇನ್ನೂ ಒಂದು ವರ್ಷ ಹಿಂಬಡ್ತಿ ಪಂಚ ವರ್ಷ ಆಗಿಯೇ ಹೋಗಲಿ ವಿದ್ಯೆಯ ಮಟ್ಟಿಗೆ ಹರಿಜನರಿಗೆ ಸಾಕಷ್ಟು ಸಹಾಯ ದೊರೆಯುತ್ತಿಲ್ಲ ಎಲ್ಲಾ ಸರಕಾರಿ ಹಾಸ್ಟೆಲುಗಳಲ್ಲಿ ಹರಿಜನ ವಿದ್ಯಾರ್ಥಿಗಳಿಗೆ ಪ್ರವೇಶ ದೊರೆಯುವಂತಿಲ್ಲ ಪ್ರತ್ಯೇಕ ಹಾಸ್ಟೆಲು ಮಾಡಿಕೊಡ ವುದೆಂದರೆ ಹರಿಜನರ ಆಗ್ರಹಕ್ಕೆ ಕಟ್ಟುಬಡಿಸಿಲ್ಲ, ಸರಕಾರದಲ್ಲಿ ಹಣವೂ ಇಲ್ಲ!

ಸರಕಾರವು ಮಾಡಿರುವ 'ಪ್ಲಾನ್ ಆಫ್ ಆಕ್ಷನ್' ಪ್ರಕಾರ ವರ್ಷಕ್ಕೊಮ್ಮೆ ಲಿಮಿಟೆಡ್ ಟೆಂಡರ್ ಇವುಗಳಂತೆ ನೇಮಸ್ಥಾನ ಸ್ಪರ್ಧೆಗೆ ಇವುಗಳ ಜಾರಿಗೆ ಸಂಬಂಧ ಪಟ್ಟ ಅಧಿಕಾರಿಗಳ ಸರಿಯಾದ ಕಾರ್ಯಕ್ರಮಗಳನ್ನು ಪಿಡ್ಡಾಯವಾಗಿ ನಡೆಯುತ್ತಿಲ್ಲ ಎಲ್ಲಿ ಕೇಳಿಬ್ಬರೂ ವಿಳಂಬಗಳೇ ಕಾಗುತ್ತವೆ ಮಡಿಕೇರಿ ಒಂದನ್ನು ಬಿಟ್ಟರೆ ಕೊಡಗಿನ ಯಾವ ಬಾಗದಲ್ಲಿಯೂ ಹರಿಜನರಿಗೆ ಜೋಪಡಿಗಳು ಪ್ರವೇಶವಿಲ್ಲ! ಗೋಣಿಕೊಪ್ಪಲಿನಿಂದ ಒಬ್ಬ ಹರಿಜನ ಕಂಪೌಂಡರು ತಮ್ಮ ನಿವಾರಣಾರ್ಥ ಆಸ್ಪತ್ರೆಗೆ ಕಲಸಕ್ಕೆ ಒಂದು ಹೊಟೇಲುಗಳಲ್ಲಿ ಪ್ರವೇಶ ಸಿಕ್ಕದೆ ತನ್ನ ಊಟ ತಿಂಡಿಗಾಗಿ ಎಷ್ಟೊಂದು ಕಷ್ಟಪಟ್ಟಿದ್ದಾಗಿದೆ ಇಂಥಾ ವಿಚಾರಗಳನ್ನು ಸರಕಾರವು ಏಕೆ ಗಮನಕ್ಕೆ ತೆಗೆದುಕೊಳ್ಳಬಾರದು? ಆಂಧ್ರಾ ಹೊಟೇಲುಗಳ ಲೈಸೆನ್ಸು ಏಕೆ ವಜಾ ಮಾಡಬಾರದು?

'ಪ್ಲಾನ್ ಆಕ್ಷನ್' ಪ್ರಕಾರವಾಗಿ ಜಾರಿಗೆ ಒಂದೆರೂ ಕೂಡ ಹರಿಜನರು ಅನೇಕ ಕಡೆ ಗೋಹೆಣ ಮಾಂಸ ಭಕ್ಷಣೆ ಮಾಡುತ್ತಲೇ ಇದ್ದಾರೆ! ಈ ವಿಷಯವಲ್ಲಿ ಸರಕಾರವು ಎಚ್ಚರಿಕೆ ತೆಗೆದೂ ಕೊಳ್ಳುತ್ತಾ ಇಲ್ಲ ಅಲ್ಲದೆ ದೇಶದ ಅನೇಕ ಕಡಗಳಲ್ಲಿ ಕೆಲವು ಸವರ್ಣ ಹಿಂದೂಗಳು ಹರಿಜನರಿಗೆ ಕಿರುಕುಳ ಕೊಟ್ಟು ಹಿಂದಕ್ಕೆ ತಳ್ಳುತ್ತಿದ್ದಾರೆ ಸರಕಾರವು ಕಾನೂನು ಮಾಡಿದ ನಿಯಮಗಳನ್ನು ಜಾರಿಯಲ್ಲಿ ತಂದು ಅವರಿಗೆ ಅದಕ್ಕೆ ತೊಂದರೆ ಕೊಡದಿದ್ದರೆ ಅದಕ್ಕೆ ನೆನ್ನೆ ಬೇಕು?

ಹರಿಜನ ಬಂಧುವರು ಎಚ್ಚರಗೊಳ್ಳಬೇಕು ಪ್ರಜಾ ರಾಜ್ಯವಲ್ಲಿ ಒಕ್ಕೆ ಸ್ವಾತಂತ್ರ್ಯ ಮತ್ತು ಸಮಾಜವ ಹಕ್ಕು ಬಾಧ್ಯತೆಗಳನ್ನು ಕಳಕೊಳ್ಳಬಾರದು ನಾವೆ ಚೆಂತರಿಸಿಕೊಳ್ಳಬೇಕಾದರೂ ನಮಗಾಗಿ ಯಾವುದನ್ನೂ ಮಾಡಿ ಕೊಡಲಾರರು ನಮಗೆ ಸರಕಾರದಿಂದ ಏನೇನು ಸಹಾಯ ಆಗಬೇಕೋ ಅವುಗಳನ್ನು ಕುರಿತು ಚೀಫ್ ಕಮಿಷನರ್ ಸಾಹೇಬರವರಿಗೆ ಬರೆದು ಚರ್ಚಿಸಿ ಮುಂದುಗಳ್ಳು ಹಾಗೂ ಹರಿಜನ ಪೈಲಿಗಳ ರಕ್ಷಕರ ಸಹಾನುಭೂತಿ ಪಡೆದು, ಮಡಿಕೇರಿಯಲ್ಲಿ ಅಖಿಲ ಕೊಡಗು ಹರಿಜನ ಸಮ್ಮೇಳನ ನಡೆಸಬೇಕು ನಾವು ಸಂಘಟಿತರಾಗದಿದ್ದರೆ ನಮ್ಮ ಕೂಗು ಯಾರಿಗೂ ಕೇಳಲಾರದು.

'ಸಮೂಹದಲ್ಲಿ ಮನನೊಂದವ'



ನಿಮ್ಮ ಸೌಭಾಗ್ಯಾದಿ ಸಂಪತ್ಪಡೆಗಳ ಅಭಿವೃದ್ಧಿಗೆ

ಗ್ರಹಣಾದಿ ಪುಣ್ಯ ಕಾಲಗಳಲ್ಲಿ ತಯಾರಿಸಿದ ನವಗ್ರಹ ವಿಜಯ ಮಹಾ ಯಂತ್ರವನ್ನೂ ಲಕ್ಷ್ಮೀ ವರೀಕರಣ ಎಂಬ ಮಹಾ ಆಂಜನೆಯನ್ನೂ ನಿತ್ಯ ಧರಿಸಿರಿ.

ಲಕ್ಷ್ಮೀ ವರೀಕರಣ ಮಹಾ ಆಂಜನೆ 1 ತೊಲ	10	0	0
ಆಧ್ರ ತೊಲ	8	0	0
ನವಗ್ರಹ ವಿಜಯ ಮಹಾ ಯಂತ್ರ ಬಂಗಾರದ ತಾಯಿತ	120	0	0
ಬೆಳ್ಳಿಯ ತಾಯಿತ "	10	0	0
ಧನಸಂಪಾದನಾಭಿವೃದ್ಧಿಗೆ ಶ್ರೀಲಕ್ಷ್ಮಿ ಯಂತ್ರ ಬೆಳ್ಳಿ ತಾಯಿತ	5	0	0
ಧೈರ್ಯ ನಿವಾರಣೆಗೆ ಮಹಾಕಾಳಿ ಯಂತ್ರ	8	0	0
ಸರ್ವತೋಮುಖ ಅಭಿವೃದ್ಧಿಗೆ ಸರ್ವಾಷ್ಟಸ್ವಾಮಿ ಯಂತ್ರ	10	0	0
ಶತ್ರುಭಾಧಾನಿವಾರಣೆ ಬಗಲಾಮುಖಿ ಯಂತ್ರ	5	0	0
ಮಕ್ಕಳ ಸಕಲ ರೋಗ ನಿವಾರಣೆಗೆ ಬಾಲಗ್ರಹ ಯಂತ್ರ	5	0	0
ವಿದ್ಯಾ ಬುದ್ಧಿಗಳ ಅಭಿವೃದ್ಧಿಗೆ ಸರಸ್ವತಿ ಮಹಾ ಯಂತ್ರ	5	0	0
ಸರ್ವಜನ ಪ್ರೀತಿಗಾ ಪರಿಪೂರ್ಣವಾದ ಸಾಮ್ರಾಜ್ಯಕ್ಕಾಗಿ ಅನಂದಭೈರವ	5	0	0
ರಾಜಕೀಯ ವ್ಯವಹಾರಿಗಳ ಜಯಪ್ರಪ್ತಿಗೆ ಮಹಾಜಾಲಕ್ಕೆ	4	0	0
ವ್ಯಾಪಾರ ಧನಾಭಿವೃದ್ಧಿಗೆ ವ್ಯಾಪಾರ ಸಂಜೀವಿನಿ ಯಂತ್ರ	4	0	
ಗೃಹ ಭೂಮಿ, ಪಶು ತೋಟಗಳ ಅಭಿವೃದ್ಧಿಗೆ ಭೂಗರ್ಭ ಯಂತ್ರ	16	0	

(೨) ನಮಗೆ ಬೇಕಾದುದನ್ನು ತಿಳಿಸಿ ಪೋಸ್ಟೇಜು 0-12-0 ಸಾಲಿಸಿ

ವನ.ವೆಂಕಟಸುಬ್ಬಪ್ಪ
ಶ್ರೀದೇವಿಪ್ರಸಾದ್ ಜ್ಯೋತಿಷ್ಯಾ

ಸ್ವತಂತ್ರ

ತಾ. ೧೯-೯-೧೯೫೦ನೇ ಶುಕ್ರವಾರ

ಶಾಂತಿ ದೂತ.

ಕೊರಿಯಾದಲ್ಲಿ ಪ್ರಾರಂಭವಾಗಿರುವ ಯುದ್ಧವು ಜಗತ್ತಿನ ಗಮನವನ್ನು ಪೂರ್ಣವಾಗಿ ಸೆಳೆಯಲು ಕಾರಣವಿಲ್ಲದಿಲ್ಲ. ಅಲ್ಲಿ ಪ್ರಾರಂಭವಾದ ಯುದ್ಧವು ಜಗತ್ತಿನ ಶಾಂತಿಯ ಕಡೆಗೆ ಗುರಿಯಿಟ್ಟು ಅಮೇರಿಕಾ ರಷ್ಯಾಗಳನ್ನು ಪಾರ್ಶ್ವಕ್ಕೆ ಭಾವಗಳಿಂದ ಒಂದೆಡೆ ಸೇರಿಸಿ ಈ ವಿಚಾರದಲ್ಲಿ ಪರಿಶೀಲನೆ ಮಾಡಿ ಸಮಯಕ್ಕೆ ರಾಷ್ಟ್ರ ಸಂಘವನ್ನು ಬಲಗೊಳಿಸುವ ಪ್ರಯತ್ನವನ್ನು ಮಾಡಿದರು. ಈ ಸಂಧಾನ ಪ್ರಯತ್ನವಷ್ಟೇ ರಷ್ಯಾವು ತಡೆಯಿಲ್ಲದೆ ಸ್ವಾಗತಿಸಿತ ಸಂಯುಕ್ತ ಸಂಸ್ಥಾಯಲ್ಲಿ ಕಮ್ಯೂನಿಸ್ಟ್ ಚೈನಾಕ್ಕೆ ಸ್ಥಳ ಕೊಡಬೇಕೆಂಬ ನೆಹರೂರವರ ಸೂಚನೆಗೆ ಸಂತೋಷಗೊಂಡಿತು. ಆ ತಕ್ಷಣ ಅಮೇರಿಕವು ನೆಹರೂರವರ ಸಂಧಾನ ಯತ್ನಕ್ಕೆ ಪ್ರೋತ್ಸಾಹವೀಯುವಲ್ಲಿಲ್ಲವೆನ್ನಬಹುದು. ಬದಲು ಕೊರಿಯಾ ಸಮಸ್ಯೆಗೂ, ಸಂರಕ್ಷಿತ ಸಭೆಯ ಚೀನೀ ಸ್ಥಾನಕ್ಕೂ ಸಂಬಂಧವಿಲ್ಲವೆಂದು ಸ್ಪಷ್ಟವಾಗಿ ಹೇಳಿತು. ಆ ಕಾರಣ ನೆಹರೂರವರ ಸಂಧಾನ ಯತ್ನವು ಮುಂದುವರಿಯಲು ಸಾಧ್ಯವಾಗಲಿಲ್ಲ. ಆದರೂ ಕೂಡ ಜಗತ್ತಿನ ಶಾಂತಿ ರಕ್ಷಣೆಗೆ ಕಂಕಣಬದ್ಧರಾಗಿ ಪ್ರಯತ್ನಿಸುತ್ತಿರುವ ನೆಹರೂರವರು ತನ್ನ ಪ್ರಯತ್ನವನ್ನು ಬಿಡಲಿಲ್ಲ. ಸಂಡಿತ ನೆಹರೂರವರು ಲೇಕ್ ಸಕ್ಸೆಸ್‌ನಲ್ಲಿರುವ ಭಾರತದ ಪ್ರತಿನಿಧಿ ಶ್ರೀ ಬಿ. ಎನ್. ರಾವ್‌ರವರ ಮೂಲಕ ಮತ್ತೊಂದು ಸೂಚನೆಯನ್ನು ಸಾರ್ವಜನಿಕರುವರು. ಈ ಸೂಚನೆಯು ಪ್ರಕಾರ ಕೊರಿಯಾ ಸಮಸ್ಯೆಯನ್ನು ಸುರಕ್ಷಿತ ಪರಿಷತ್ತಿನ ಸಭ್ಯರಲ್ಲದ ಅಥವಾ ಸದಸ್ಯರಲ್ಲದ ಎರಡು ಜನರ ಪರಿಷತ್ತಿಗೆ ಬಿಡಬೇಕೆಂದು, ಆದರು ಸಂಯುಕ್ತ ಸಂಸ್ಥೆಯಲ್ಲಿ ಯಾವುದೇ ಅಭಿಪ್ರಾಯ ಭೇದವಿಲ್ಲದ ರಾಷ್ಟ್ರದ ಪ್ರತಿನಿಧಿಗಳಿಗೆ ಈ ವಿಷಯವನ್ನು ಕೊರಿಯಾ ಸಮಸ್ಯೆಯನ್ನು ನ್ಯಾಯ ದೃಷ್ಟಿಯಿಂದ ತೀರ್ಮಾನಿಸಲು ಸಮರ್ಥರಾಗಬಹುದೆಂದೂ, ಅವರ ತೀರ್ಮಾನವು ಅಥರದ ಮೇಲೆ ಪ್ರಭಾವ ಇತರ ಬಲಿಷ್ಠ ರಾಷ್ಟ್ರಗಳು ಒಂದು ಒಪ್ಪಂದಕ್ಕೆ ಬರಲು ಸಹಾಯಕವಾಗಬಹುದೆಂದೂ ಸೂಚಿಸಿರುವರು.

ನೆಹರೂರವರ ಈ ಸೂಚನೆಯನ್ನು ಬ್ರಿಟನ್, ಅಮೇರಿಕಾಗಳು ಸ್ವಾಗತಿಸಿವೆ. ರಾಜಕೀಯ ಮುಂದಾಳುಗಳೂ, ಪತ್ರಿಕೆಗಳೂ ನೆಹರೂರವರ ಈ ಸೂಚನೆಯನ್ನು ಮುಕ್ತಕಂಠದಿಂದ ಹೊಗಳಿ ಪ್ರಶಂಸಿಸಿವೆ. ವಾಲ್ಟ್ ಲಿಪ್‌ಮನ್‌ರಂಥಾ ರಾಜನೀತಿಜ್ಞರು, ನ್ಯೂಯಾರ್ಕ್ ಹೆರಾಲ್ಡ್ ಟ್ರಿಬ್ಯೂನ್ ನಂಥಾ ಪತ್ರಿಕೆಗಳು ನೆಹರೂರವರ ಶಾಂತಿಪ್ರಯತ್ನವನ್ನು ಕೊಂಡಾಡಿ ತ್ತಿವೆ. ಆಗತಾನೆ ಸ್ವಾತಂತ್ರ್ಯ ರಂಗದಲ್ಲಿ ನೆಹರೂಗಳ ಅರ್ಥಾತ್ ಭಾರತದ ಚಿಕ್ಕ ಇನ್ನಷ್ಟು ಮೇಲೇರಿದೆಯೆನ್ನಲು ಅಡ್ಡಿ ಇಲ್ಲ.

ಜಗತ್ತಿನ ಪ್ರಭುಸ್ಥಿಗಳನ್ನೊಮ್ಮೆ ನೋಡಿದಾಗ ಕಾರ್ಮೋಡ ದೃಷ್ಟಿಯಿಂದ ಭಯಪೀಡಿತರಾದರೆ ಕಾಣಿಸುವುದು ಅನೇಕ ವಿಷಯಗಳಿಂದ ತುಂಬಿರುವುದನ್ನು ತೋರುತ್ತದೆ. ಆದರು ಕೊರಿಯಾವಿರಲಿ, ಇಂಡೋಚೀನಾವಿರಲಿ, ಜರ್ಮನಿ ಇರಲಿ, ಯಾ ಕಾಶ್ಮೀರವಿರಲಿ ಪ್ರತಿಯೊಂದರಲ್ಲೂ ಸ್ವಾರ್ಥಪೂರಣಗಳು ಹೆಣಗಾಡುತ್ತಿವೆ. ಪ್ರತಿಯೊಂದು ಪ್ರಶ್ನೆಯಲ್ಲೂ ಶಾಂತಿಯ ಕೊಲೆಯಾಗುತ್ತಿರುವುದನ್ನು ಅಮೇರಿಕಾಗಳಂಥಾ ಒಳಾಡಳಿತ ರಾಷ್ಟ್ರವಿರಲಿ, ದರ್ಜಾ ಫ್ರೆಂಚ್‌ಕಂಥಾ ನಿರ್ಬಲರಿರಲಿ ಪ್ರತಿಯೊಂದೂ ಕೂಡ ಇನ್ನೊಬ್ಬರ ಮೇಲೆ ತಮ್ಮ ಶಾಸನವನ್ನು ಹೇರುವ ಆಟಂಕಿಯ ಲೋಕಾಂತಿಯೇ ತೋರುತ್ತದೆ. ಜಗತ್ತಿನ ಶಾಂತಿಗೆಂದು ಸ್ಥಾಪಿತವೆತ್ತ ಸಂಯುಕ್ತ ರಾಷ್ಟ್ರ ಸಂಘವೆತಲ್ಲೂ ಈ ಸ್ವಾರ್ಥ ಹಾಗೂ ಅಧಿಕಾರ ರಾಜಕೀಯದ ಚದುರಂಗವೇ ತೋರಿಬರುತ್ತಿದೆ. ಜಾತಕ್ಕವರ್ಷಗಳ ಹಿಂದೆ ಪ್ರಾವಿವಿಸೇಕಾನಂದರು ಈ ರೀತಿ ನುಡಿದಿದ್ದರು "ಪಾಶ್ಚಿಮಾತ್ಯ ನಾಗರೀಕತೆಯು ತನ್ನ ಚರಮ ಹಂತಕ್ಕೆ ಮುಟ್ಟಿ ಯಾದವಿಳಂಬಲದಂತೆ ತನ್ನ ತಾನೆ ನಾಶಕ್ಕಿಳಿಯುವುದು ಎನ್ನುವುದರಲ್ಲಿ ಸಂಶಯವಿಲ್ಲ" ಎಂದು. ಅಂದಿನ ಪರಿಸ್ಥಿತಿಗಳಲ್ಲಿ ಇಂದಿನ ಪರಿಸ್ಥಿತಿಗಳಲ್ಲಿ ಹೋಲಿಕೆ ಕಂಡುಬರುತ್ತದೆ.

ಕಟ್ಟಿನ ಫೈಕ್ ಎಸ್ಟೇಟಿನಲ್ಲಿ ತಾ. ೧೯-೮-೫೦ರಲ್ಲಿ ಶ್ರೀ ಕೃಷ್ಣಯ್ಯ ಬ್ಯಾಸ್ಟಿಯಲ್ ಹಾಲಿವರ್ ಎಂಬವರು ಅವರ ಬಾಪ ಲೂಯಿಸ್ ಡಿಕ್ಕಸ್ ಎಂಬವರನ್ನು ಸವಿದು ಕೊಂದಿರುವರೆಂದೂ, ಪೋಲೀಸ್ ತನಿಕೆ ನಡೆಯುತ್ತಿದೆಯೆಂದೂ ತಿಳಿಯುತ್ತೇವೆ.

ವರ್ತಮಾನ.

ಕನ್ನಡ ಚೆನ್ನಾಗಿ ಓದಲು ಬರೆಯಲು ಕೊಡ್ತಿದ್ದ ಪ್ರಾಯ ೧೪ರಿಂದ ೫೫ರ ವರೆಗೆ ಇನ್ನು ಎತ್ತರ ಹಾಡಿ ಹಾಡಿ ಇಂಚೆ ಇರುವ ಹುಡುಗರು ಕೊಡಗು ಪೋಲೀಸು ಇಲಾಖೆಗೆ ಬೇಕಾಗಿದ್ದಾರೆ ಕುತ ಹಲ ಉತ್ಸಾಹರು ಸೆಪ್ಟೆಂಬರ್ ೩ನೇ ತಾರೀಖು ಬೆಳಿಗ್ಗೆ ೧೦ ಗಂಟೆಗೆ ಮಡಿಕೇರಿ ಡಿಸ್ಟ್ರಿಕ್ಟ್ ಎಂಪ್ಲಾಯಿಮೆಂಟ್ ಆಫೀಸಿಗೆ ಹಾಜರಾಗತಕ್ಕದ್ದು.

ಚುನಾವಣಾ ಸಂಬಂಧದ ಮತದಾರರ ಪಟ್ಟಿ ಮತ್ತದಕ್ಕೆ ಸಂಬಂಧಿಸಿದ ಇತರ ಕೆಲಸ ನಿರ್ವಹಿಸುವ ಬಗ್ಗೆ ಕೊಡಗು ಅಸಿಸ್ಟೆಂಟ್ ಕಮಿಷನರನ್ನು ವ್ಯಷ್ಟಿ ಇಲೆಕ್ಟರಲ್ ಆಫೀಸರ್‌ರಾಗಿ ನೇಮಿಸಲಾಗಿದೆ.

ನಾಲ್ಕು ತಿಂಗಳ ರಜೆಯಲ್ಲಿ ಹೋಗಿರುವ ಉತ್ತರ ಕೊಡಗಿನ ಶಾಲೆದಾರರಾದ ಶ್ರೀ. ಕೇಳಪಂಡ ಅಯ್ಯಣ್ಣನವರ ಬದಲು ಶ್ರೀ ಬಲ್ಲಚಂಡ ಅಪ್ಪಯ್ಯನವರನ್ನು ನೇಮಿಸಲಾಗಿದೆ. ಆದರೆ ಬದಲು ಟೆಂಬರ್ ಸುದೆದಾರರಾಗಿ ಶ್ರೀ. ಎಜ್. ಎ ಅಕ್ಕಮ್ಮಯ್ಯನವರನ್ನು ನೇಮಿಸಿರುವರು.

ನಾಪೋಕ್ಲು ಪೈಸ್ಕೂಲಿಗೆ ವರ್ಗವಾಗಿರುವ ಶ್ರೀ ಕೋಟೇರ ಮುತ್ತಣ್ಣನವರನ್ನು ಬೀಳ್ಕೊಡಲು ಶಾಲಾ ವಿದ್ಯಾರ್ಥಿಗಳು ಸಭೆ ಸೇರಿ ಒಂದು ಬನ್ನವತ್ತ ಕೆಯನ್ನು ತ್ತುದಲ್ಲದೆ ಉಪಾಧ್ಯಾಯರು ಒಂದು ಚಹಪಾನ ಕೂಟವನ್ನೇರ್ಪಡಿಸಿದ್ದರು..

ಎಸ್. ಎಸ್. ಎಲ್. ಸಿ ಪಾಸಾಗಿ ಪ್ರಾಯ ೧೮ರಿಂದ ೨೦ರ ಒಳಗಿನ ಯುವಕರು ವಿಮಾನ ದಳಕ್ಕೆ ಬೇಕಾಗಿದ್ದಾರೆ ಸೇರಲು ಕತೂಹಲವುಳ್ಳವರು ಇದಕ್ಕೆ ಸಂಬಂಧಪಟ್ಟ ಹೆಚ್ಚಿನ ವಿಷಯಗಳನ್ನು ಮಡಿಕೇರಿಯಲ್ಲಿರುವ ಡಿಸ್ಟ್ರಿಕ್ಟ್ ಎಂಪ್ಲಾಯಿಮೆಂಟ್ ಆಫೀಸಿನಿಂದ ತಿಳಿದುಕೊಳ್ಳಬಹುದು.

ವೀರಾಜಪೇಟೆ ಸ್ಪೀಡಿಂಗ್ ರೂಮಿನ ಎದುರು ಭಗವಾನ್ ಸ್ಟ್ರೀಟಿಂಗ್ ಸೈಸ್ ಎಂಬ ಹೆಸರಿನ ಧಿ ಪಲು ನೆಯನ್ನು ಶ್ರೀ ಎಸ್ ಜಿ ನಟರಾಜ ಇವರು ತೆರೆದಿರುವರು

ಕಟ್ಟಿನ ಫೈಕ್ ಎಸ್ಟೇಟಿನಲ್ಲಿ ತಾ. ೧೯-೮-೫೦ರಲ್ಲಿ ಶ್ರೀ ಕೃಷ್ಣಯ್ಯ ಬ್ಯಾಸ್ಟಿಯಲ್ ಹಾಲಿವರ್ ಎಂಬವರು ಅವರ ಬಾಪ ಲೂಯಿಸ್ ಡಿಕ್ಕಸ್ ಎಂಬವರನ್ನು ಸವಿದು ಕೊಂದಿರುವರೆಂದೂ, ಪೋಲೀಸ್ ತನಿಕೆ ನಡೆಯುತ್ತಿದೆಯೆಂದೂ ತಿಳಿಯುತ್ತೇವೆ.

ಬಣ್ಣದ ಮೊಟ್ಟೆಗಳ ತಯಾರಿಕೆ.

ಕೋಳಿಗಳು ಬಣ್ಣ ಬಣ್ಣದ ಮೊಟ್ಟೆಗಳನ್ನು ಇಡಬೇಕಾದರೆ ಅವುಗಳಿಗೆ ಯಾವ ರೀತಿಯ ಆಹಾರ ಕೊಡಬೇಕೆಂಬ ವಿಷಯದಲ್ಲಿ ಬ್ರಿಟನ್ನಾದ್ಯಂತ ವಿಜ್ಞಾನಿಗಳು ತಲೆ ತುರಿಸಿಕೊಳ್ಳುತ್ತಿರುವರು.

ಭಂಗಾರದ ಬಣ್ಣದ ಮೊಟ್ಟೆಗಳು ಉತ್ತಮವೆಂದು ಬ್ರಿಟನಿನಲ್ಲಿ ಹೆಚ್ಚಿನವರು ಆಭಿಪ್ರಾಯಪಡುತ್ತಾರೆ. ಬಣ್ಣದ ಮೊಟ್ಟೆಗಳಿಗೆ ಬೇಡಿಕೆ ಹೆಚ್ಚಬಹುದೆಂದು ತಿಳಿದಿದ್ದ ತೋಳಿಗಳ ಆಹಾರದಲ್ಲಿ ಬದಲಾವಣೆ ಮಾಡುತ್ತಿದ್ದು ಬಣ್ಣದ ಮೊಟ್ಟೆ ಸಿಗುವಂತೆ ಪ್ರಯತ್ನಿಸುತ್ತಲಿದ್ದಾರೆ.

ಕಮ್ಯೂನಿಸ್ಟರು ಆಹಾರವಿಲ್ಲದೆ ಬಳಲಿರುವರು.

ಕೊರಿಯಾದ ದಕ್ಷಿಣ ಭಾಗವಳಿಯು ಟ್ಯೂಗು ವಿಭಾಗದಲ್ಲಿ ಯುದ್ಧ ನಡೆಸುತ್ತಿರುವ ಉತ್ತರದ ಕಮ್ಯೂನಿಸ್ಟ್ ಸೈನಿಕರಿಗೆ ಕಳೆದ ಹಲವು ದಿನಗಳಿಂದ ಆಹಾರ ಸಿಗದೆ ಅವರು ಉಪವಾಸ ಬಿದ್ದಿರುವರೆಂದೂ ಅಮೇರಿಕನರ ಶೆಲ್ಲಿಗೆ ಬಲಿಯಾಗಿ ಸಿಕ್ಕಿ ಬಿದ್ದಿದ್ದ ಕಮ್ಯೂನಿಸ್ಟ್ ಸೈನಿಕರು ಹೇಳಿದ್ದಾರೆ.

ರಷ್ಯನರ ಮೇಲ್ನಾಟೆಯಲ್ಲಿ ಉತ್ತರ ಕೊರಿಯನವರು.

ಉತ್ತರ ಕೊರಿಯಾದ ಸೈನ್ಯಗಳು ಯುದ್ಧರಂಗದಲ್ಲಿ ರಷ್ಯದ ಸೈನ್ಯಾಧಿಕಾರಿಗಳ ಆದೇಶದಂತೆ ಯುದ್ಧ ಮಾಡುತ್ತಿರುವುದು ಕಂಡು ಬಂದಿದೆ ಎಂದು ಅಮೇರಿಕನರಿಂದ ಸೆರೆ ಹಿಡಿಯಲ್ಪಟ್ಟ ಉತ್ತರ ಕೊರಿಯಾದ ಸೈನಿಕನು ಬಾನುಲಿ ಕಂದರ್ಶನ ಪ್ರೊಂದರಲ್ಲಿ ಹೇಳಿರುವನೆಂದು ನ್ಯೂಯಾರ್ಕ್‌ನಿಂದ ಸುದ್ದಿಯಿದೆ.

ನೋಟೀಸು.

ಮುಳ್ಳುತಂತಿಗಾಗಿ ಆರ್ಜಿಗಳು ತುಂಬಾ ಫೆಡರೇಶನ್ ಆಫೀಸಿಗೆ ಬರುತ್ತಿವೆ. ಆಲ್ಲದೆ ಹಲವರು ಈ ಸಂಬಂಧ ವಿಚಾರಮಾಡುತ್ತಿರುವರು ಆದರೆ ಸುಮಾರು ಆರು ತಿಂಗಳುಗಳಿಂದ ತಂತಿ ಏನೂ ಬಂದಿರುವದಿಲ್ಲ. ವೈಯಕ್ತಾಯ ಇಲಾಖೆಯವರಿಗೆ ೨೦ ಟನ್ ಮತ್ತು ಪೆದರೇಶನಿಗೆ ೩೦ ಟನ್ ತಂತಿಗಾಗಿ ಸುಮಾರು ಹದಿನೈದು ಸಾವಿರ ರೂಪಾಯಿ ಇಂದ್ರನಗರದಲ್ಲಿರುವ ಕಾರ್ಖಾನೆಗೆ ಮುಂಗಡ ಹಣ ಕೊಟ್ಟು ತಂತಿಯು ತಯಾರಾಗಿದ್ದರೂ ಎಂ ಎಸ್. ಎಂ. ರೈಲ್ವೆಯಲ್ಲಿ ವೇಗನ್ ಸಿಕ್ಕದ ಇನ್ನೂ ರವಾನಿಸಿರುವದಿಲ್ಲ ಈಗ ಆಹಾರ ಪದಾರ್ಥ ಮತ್ತು ಗೂಬ್ಬರಕ್ಕೆ ಮಾತ್ರ ವೇಗನುಗಳನ್ನು ಕೊಡುತ್ತಿದ್ದಾರಲ್ಲದೆ ಇತರ ಸಾಮಾನುಗಳಿಗೆ ಕೊಡುತ್ತಿಲ್ಲ ಸ್ವಲ್ಪ ದಿವಸಗಳ ಹಿಂದೆ ನಾನು ಮದ್ರಾಸಿಗೆ ಹೋಗಿ ಬಹುಮಟ್ಟಿಗೆ ಪ್ರಯತ್ನಿಸಿದೆ ಆದು ಪ್ರಾಯೋಗಗಳನ್ನು ಪಡೆದು ಅಲ್ಲಿಂದ ಸೋದೆ ೩ ಮೂರು ಟನ್ ಝಿಂಕ್ ಶೀಟುಗಳು ಮತ್ತು ಕಬ್ಬಿಣದ ಪಟ್ಟಿಗಳನ್ನು ಸಾಗಿಸಲು ಸಾಧ್ಯವಾಯಿತು. ಈ ಸಾಮಾನುಗಳನ್ನು ಆರ್ಜಿಯ ಕಾರ್ಡಿನಿಂತೆ ಹಂಚಲಾಗುತ್ತಿದೆ. ಆವರೆ ಸುಮಾರು ೧೬,೦೦೦ ಝಿಂಕ್ ಶೀಟುಗಳಿಗೆ ಆರ್ಜಿ ಒಂದಿರುವಲ್ಲಿ ಬರೀ ೨,೫೦೦ ಶೀಟ್‌ಗಳು ಈಗ ದೊರೆತಿರುವುದರಿಂದ ಆರ್ಜಿದಾರರಿಗೆ ಕೋರಿಕೆಯಂತೆ ಶೀಟುಗಳನ್ನು ಕೊಡಲಾಗುವುದಿಲ್ಲ ಆರ್ಜಿದಾರರಿಗೆಲ್ಲರಿಗೂ ಅವರಿಗೆ ದೊರೆಯುವ ಸಾಮಾನುಗಳನ್ನು ನಮೂದಿಸಿ ಈ ಮೊದಲಿನಂತೆ ಕಾರ್ಡ್‌ಗಳನ್ನು ಕಳುಹಿಸಲಾಗುವುದು. ಆಯಾಯ ಅವಧಿಯೊಳಗೆ ಸಾಮಾನುಗಳನ್ನು ಹೋದಿಕೊಳ್ಳಬೇಕಾಗಿ ಈ ಮೂಲಕ ಕೋರಲಾಗಿದೆ. ಪತ್ಯೇಕ ಶೀಟುಗಳನ್ನು ಉತ್ತರ ಕೊಡಗಿನವರಿಗೆ ಮಡಿಕೇರಿಯಲ್ಲಿ ಹಂಚುವ ವ್ಯವಸ್ಥೆ ಮಾಡಲಾಗಿದೆ.

ಪ್ರೆಸಿಡೆಂಟ್,
ಕೊಡಗು ಪ್ರಾಂತೀಕ ಸಹಕಾರ
ಮಾರ್ಕೆಟಿಂಗ್ ಫೆಡರೇಶನ್.

ಕೃತಜ್ಞತಾ ವಂದನೆ.

ನನ್ನ ಸಹೋದರನ ಮರಣದಿಂದ ಪಮಗುಂಟಾದ ದುಃಖದ ಸಮಯದಲ್ಲಿ ನನಗೂ ನನ್ನ ಮತೋಶ್ರೀಯವರಿಗೂ ಪತ್ರ ಬರೆದು ಮತ್ತು ಖುದ್ದಾಗಿ ಬಂದು ತಮ್ಮ ಸಂತಾಪವನ್ನು ಸೂಚಿಸಿ ನಮ್ಮ ದುಃಖದಲ್ಲಿ ಭಾಗಿಗಳಾದ ಸರ್ವ ಬಂಧುಮಿತ್ರರಿಗೆ ಈ ಮೂಲಕ ನಮ್ಮ ಕೃತಜ್ಞತೆಯನ್ನು ಅರ್ಪಿಸುತ್ತೇನೆ.

ಪುಟ್ಟಿಮಾಡ ನಾಣಯ್ಯ,
ವೀರಾಜಪೇಟೆ.

ಮೊರ್ಫಲ್ ಸ್ಟಾಲಿನರಿಗೆ ಹೊಸ ಕಾಣಿಕೆ.

ಚೀನಾಗೋದಲ್ಲಿರುವ ಒಂದು ಮನೆ ವಾರ್ತೆಯು ಮರದ ಸಾಮಾನುಗಳನ್ನು ಸರಬರಾಜುಮಾಡುವ ಸಂಸ್ಥೆಯವರು ರಷ್ಯದ ಮಾರ್ಷಲ್ ಸ್ಟಾಲಿನ್‌ರವರ ವಿಷಯದಲ್ಲಿ ಒಂದು ಹೊಸ ಕತೆಯನ್ನು ಹೊರಡಿಸಿದ ಕಿ ಮಾರ್ಷಲ್ ಸ್ಟಾಲಿನರಿಗೆ ಸರಿಯಾಗಿ ನಿದ್ದೆ ಬೀಳದುದರಿಂದಲೇ ಅವರು ಇತ್ತೀಚೆಗೆ ಆಂತರಾಷ್ಟ್ರೀಯ ರಾಜಕೀಯದಲ್ಲಿ ಆಸಾಹಿ ಕಗಳನ್ನೆ ತಂದೂ ಡ್ಡುತ್ತಿರುವರು. ಆದುದರಿಂದ ಅವರಿಗೆ ಒಂದು ಉತ್ತಮ ಹಾಸಿಗೆಯನ್ನು ಒಹುಮಾನವಾಗಿ ಕಳುಹಿಸಿ ನಿದ್ದೆಯಲ್ಲಿ ಲಕ್ಷಿಸಿ ಹೆಜ್ಜೆಯಂತೆ ನೂಡಬೇಕೆಂದು ಈ ಸಂಸ್ಥೆಯವರ ಸೂಚನೆಯಂತೆ ಸರಿಯಾಗಿ ನಿದ್ದೆ ಬೀಳುವುದಂತೆ ಭೀಕ್ಷ, ಕ್ರೋದ ಮೊಪಲಾದ ನಾನಸಿಕ ಕೊಂದರೆಗಳು ನೀಗುವದೆಂದೂ ವಿಜ್ಞಾನಿಗಳು ಸಾರಿರುವುದರಿಂದ ಸ್ಟಾಲಿನರು ನಿದ್ದೆಇಲ್ಲದ ಈ ರೀತಿ ವ್ಯಸನವೆಂದೂ ಆ ರಷ್ಯನ್ ರಾಜಕೀಯ ಸರ್ಕಾರಿಗೆ ನಿದ್ದೆಯೇ ಮುದ್ದು ಎಂದೂ ಅಭಿಪ್ರಾಯ ಪಡಲಾಗಿದೆ

ವಾರ್ತೆಗಳು.

ರಾಮಪುರದಲ್ಲಿ ಸೂರುಪಟ್ಟಿ ನೀಗಳ ವಯಸಿನ ಪಗ ಪೂರ್ಣ ಮಾಡಿ ಹಾಸ್ತಿದೆಯಲ್ಲದೆ ತನ್ನ ಪೂರ್ವಶಾಂತವನ್ನೂ ಹೆಳಿಕ್ಕಿದೆ ಇದ ಹುಟ್ಟಿ ಒಂದು ವಾರದಲ್ಲಿಯೇ ಆದಕ್ಕೆ ಹಲ್ಲುಗಳು ಬಂದಿವೆ ಆ ಮಾಡುಗನನ್ನು ನೋಡಲು ಅನೇಕ ಪ್ರಶ್ನೆಕರು ಹೋಗಿ ತಿರಿ ಎಂಬಂತೆ!

'ಪ್ರಜಾಮಿತ್ರ' ಪತ್ರಿಕೆಯ ಮತ್ತು ಕಾಂಗ್ರೆಸ್ ಸಮಿತಿಗಳ ಖಜಾಂಚಿ ಅವಧಿ ಮೂರು ವರ್ಷವೆಂದು ಕಾಂಗ್ರೆಸ್ ಘಟನೆಯ ತಿದ್ದುಪಡಿಯಲ್ಲಿ ಹೇಳಿದ ಪರಂತು ಕ್ಕೂ ಕಾಂಗ್ರೆಸ್ ಅಧಿವೇಶನವನ್ನು ಸೇರಿಸುವುದಾದರೆ ಅಧ್ಯಕ್ಷರನ್ನು ಬದಲಿಸಬೇಕೂ ಎಂಬುವನ್ನು ನಿರ್ಣಯಿಸದೇಕಾಗುವುದು ಕಾಂಗ್ರೆಸ್ ಅಧ್ಯಕ್ಷರ ಅಧಿಕಾರಾವಧಿಯನ್ನು ಮೂರು ವರ್ಷ ಹೆಚ್ಚಿಸುವದಕ್ಕೆ ಘಟನೆಯಲ್ಲಿ ಅವಕಾಶವಿಲ್ಲ' ಎಂದು ಮಂತ್ರಿಗಳಾಗಿ ಕಾಂಗ್ರೆಸ್ ಕಾರ್ಯದರ್ಶಿಗಳು ಪ್ರಕಟಿಸಿದ್ದಾರೆ.

'ಎವರೆಸ್ಟ್' ಶಿಖರಕ್ಕಿಂತಲೂ ಉನ್ನತವಾದ ಶಿಖರವನ್ನು ಹಿಮಾಲಯದಲ್ಲಿ ಕಂಡು ಹಿಡಿಯಲಿರುವುದಾಗಿ ಬರವಸೆಯನ್ನು ಬಂಗಳೂರಿನ ವಿಶ್ವವಿದ್ಯಾಲಯದ ಇಬ್ಬರು ವಿದ್ಯಾರ್ಥಿಗಳು ಹಿಮಾಲಯ ಪರ್ವತಾರೋಹಣ ಶೈಕ್ಷಣಿಕದಿಂದ ಹಿಂದಿರುಗಿ ಬರುತ್ತಿದ್ದಾರೆ.

ನಾಸಿಕ ಕಾಂಗ್ರೆಸ್ ಅಧಿವೇಶನದ ಬಗ್ಗೆ ಗಾಂಧಿಜಿಯವರ ರಚನೆಯೊಂದಿಗೆ ಶ್ರೀ ಜೆ ತಿಂಗಳಿನ ಅಂತ್ಯದೊಳಗೆ ಪೂರ್ಣವಾಗಬಹುದೆಂದು ಎಣಿಸಲಾಗಿದೆ. ಇತರ ಸಿದ್ಧತೆಗಳೂ ಭರದಿಂದ ನಡೆಯುತ್ತಿವೆ ಅಧಿವೇಶನ ಜರಗುವ ದಿನಗಳಲ್ಲಿ ಕೋಚ ಬದಲಾವಣೆ ನಡೆಸಬೇಕಾಗಿ ಬಂದಿದೆ ಸೆಪ್ಟೆಂಬರ್ ತಿಂಗಳು ೧೫ ನೆ ತಾರೀಖಿನಲ್ಲಿ ನಡೆಯಬೇಕಾದ ಅಧಿವೇಶನ ನಿಸ್ಸೆಂಬರ್ ತಿಂ ೩೦, ತಿಗಳಲ್ಲಿ ನಡೆಯುವೆಂದಾಗಿದೆ

ಬ್ರಿಟಿಷ್ ರಾಜಕುಮಾರಿ ಎಲಿಜಬೆತಳಿಗೆ ಭಾರತ ಸ್ವಾತಂತ್ರ್ಯ ದಿನಾಚರಣೆಯಂದು ಹೆಣ್ಣು ಶಿಶು ಜನಿಸಿತು ಕ್ವೀನ್ಸ್ ಆರಮನೆಯಲ್ಲಿ ರಾಜಕುಮಾರಿಯ ಸುಖ ಸ್ವಸವವಾಯಿತು (ಮೊದಲು ಮಗು ರಾಜಕ ಮಾರಿ ಚಾರ್ಲ್ಸ್‌ನು ಹುಟ್ಟಿದುದು ಪಂಡಿತ ನೆಹರೂರವರ ಜನ್ಮೋತ್ಸವದಂದು!)

ಮೂರಾಟಕ್ಕಿದೆ.

ಮೂವತ್ತೊಕ್ಕು ಗಾಮದ ಲೆಂಟ್ ಪರಮೇಶ್ವರಯ್ಯನವರಿಂದ ವಿಕ್ರಿ ನೀರಾ ಪರಿಜವಿನಿಂ, ಯೂಲಕ್ಕಿ, ಕಿತ್ತಳೆಮತ್ತು ಕಾಫಿಹಣ್ಣಿನ ಅಮೃತಾಲವಾದ ಎಸ್ಟೇಟ್ ಪಕ್ಕಿಕಡು ಮೂರಾಟಕ್ಕಿದೆ ಸಕಲ ಕೊಡ ಕಾಫಿ ಇರುವ ಮೆಷ್ಟ ಸಕಲಿಗೆ ಬರಲಿರವ ಕಿತ್ತಳೆ ಮರಗಳೂ ಇವೆ ಅಂಬಾಜು ೨ ಸಾವಿರ ರೂಪಾಯಿ ಬೆಲೆ ಬಾಳುವ ಮರಗಳೂ ಇವೆ ಮೊದಾಪುರದಿಂದ ೧½ ಮೈಲಿ ದೂರ ಕೊಂಡು ಕೊಳ್ಳಲು ಇಷ್ಟವಿರುವವರು ಮೊದಾಪುರ ತೋಟಕ್ಕೆ ಬೇಸೆಂದರು ಯಾರ್ ಗಣಪಯ್ಯನವರನ್ನ ವಿಚಾರಿಸಿ ತಿಳಿದು ಕೊಳ್ಳಬಹುದು.

2-೧ ಸಾವಿತ್ರಮ್ಮ,
ಲೆಂಟ್ ಪರಮೇಶ್ವರಯ್ಯನವರ ಮಗಳು

ನೋಟೀಸು.

ನೆಕ್ಕಿಣಿ ಕೊಡಗ ತಾಲೂಕಿನ ಪೊನ್ನಂಪೇಟೆನಾಡ ಊರುರು ಗ್ರಾಮದ ಒಕ್ಕಲಿಗರ ಕೆ ಕಣ್ಣಾಯನವರ ಮಗಳು ಕಾವೇರಮ್ಮನು ರಾ ಪೂಲಕತಿಳಿಸಿ ಗಡಿಸುವುದೇನಂದರೆ

ನನ್ನ ತಂದೆಯ ಉತ್ಪತ್ತಿನಾಡು ಕೊಡಕ್ತಿನ ಚೆಕ್ಕೇರಾ ಗ್ರಾಮದ ಒಕ್ಕಲಿಗರ ಪೊತಿ ಚನ್ನಿಯ್ಯನವರ ಮಗ ದೇವಣ್ಣನವರಿಗೆ ೧೯೩೬ನೇ ಇಸವಿಯಲ್ಲಿ ನನ್ನನ್ನು ಲಗ್ನ ಮಾಡಿಕೊಟ್ಟರ ನನ್ನ ಪತಿ ಕಂಚ ಸೊಮಯ ಇವರಿಗ್ಗೂ ಎನಿಪೂಮಿ ಸಂತ್ಪಾ ಎಳೆ ಜಗಳವನ್ನು ಗಟ್ಟಿನಾಡು ಹಾತೂರು ಗ್ರಾಮದ ಕೊಕ್ಕೆತೆರೀ ಮೇದಪ್ಪನವರ ಮಗ ಬೆಳ್ಳಪ್ಪನವರು ನನಗೂ ನನ್ನ ವಕ್ಕಳಿಗೂ ತಿಳಿಯದೆ ನಂಬಿಸಿ ಗಟ್ಟನಲ್ಲಿ ಕ್ರಯ ಪತ್ರವನ್ನು ಗಳಿಸಿನ್ ಇವರಲ್ಲಿ ಬಾಸಿ ಕೊಂಡಿರುತ್ತಾರೆ ಈ ವಿಕ್ರಯಪತ್ರ ಸಾಕ್ಷಿವಿಗಾಗಿ ವಕ್ಕಂಡ ಬೆಳ್ಳಪ್ಪನವರ ಮೇಲೆ ನನ್ನ ಮತ್ತು ನನ್ನ ಮಕ್ಕಳ ವ್ಯಾಜ್ಯ ಮಂಡೆ ನಡೆಯಲಿರುವುದು ಇದು ಕೆಂದು ಬೆಳ್ಳಪ್ಪನವರ ಸೊತ್ತನ್ನು ಪರಾಧೀನ ಮಾಡಲು ಪ್ರಯತ್ನಿಸುವುದಾಗಿ ತಿಳಿದು ಬರುತ್ತದೆ ಆದ್ದರಿಂದ ಈ ಸಾಕ್ಷ್ಯವನ್ನು ಯಾರಾದರೂ ಸಿಗ್ಗ ತೀರ್ಪಿನ ಪ್ರಯತ್ನ ಕೊಂಡಿಕೊಳ್ಳು ವಿಷಯಲ್ಲಿ ಬಾಧಕವಿಲ್ಲವೆಂದು ಒರು ವಕ್ಷ ನಷ್ಟಕ್ಕೆ ಅವರೇ ಗುರಿಯಾಗತಕ್ಕ ದೆಂದು ಈ ಮೂಲಕ ತಿಳಿಸಲಾಗಿದೆ

ವಿ. ಕಾವೇರಮ್ಮ,

ಕೊಡಗಿನ ಮಹಾಜನರಲ್ಲಿ ನುಡಿಪುರ ಕುಣಿಯಾರಾಮ ಮೇನೇಜರ ವಿನಂತಿ.

ಕೊಡಗಿನಲ್ಲಿ ಕೆಲವು ಕಡೆಯಲ್ಲಿ ಕೆಲವು ಜನರು ತಮ್ಮ ಸ್ವಂತವಾಗಿ ಮಂತ್ರಪ್ಪ ದೇವರ ಹೆಸರಿನಿಂದ ಉತ್ಸಹಗಳನ್ನು ನಡೆಸುತ್ತಿರುವುದು ನನ್ನ ಆವಗಾಪನೆಗೆ ಬಂದಿರುತ್ತದೆ ಹೀಗೆ ಅವರು ಗಳು ನಡೆಸಲು ಆಧಿಕಾರವಿಲ್ಲವೆಂದು ಯಾವ ಹಕ್ಕಿಂ ಹಡೆದಿರುವುದಿಲ್ಲ ಆಕ್ಷೇಪ ಅವುಗಳು ಆಧಿಕಾರಕ್ಕೆ ಸಂಬಂಧ ಪಟ್ಟಿರುವುದಿಲ್ಲ ಆದುದರಿಂದ ಹೀಗೆ ನಡೆಸುವ ಉತ್ಸವಗಳಿಗಾಗಿ, ಅದವಾ ದೇವರ ಹೆಸರಿನಲ್ಲಿ ಬಂದು ಯಾರಾದರು ಹಣ ಕಾಣಿಕೆಗಳನ್ನು ಕಾಳಿದಾರಾಗಲಿ ಕೊಡ ಬೇಕಾದ ಸಂಬಂಧ ಇರುವುದಿಲ್ಲ ಎಂಬ ಸಂಗತಿಯನ್ನು ಈ ಮೂಲಕ ಸರ್ವ ಮಹಾ ಜನರಿಗೆ ತಿಳಿಸುವುದಾಗಿದೆ

ಪಿ ಟುಂ ಕುಣಿಯಾರಾಮು,
ಮೇನೇಜರ್,
12-3 ಮಂದಪುರ

ಸ್ವೀಕಾರ ಪತ್ರ.

ಆಗಷ್ಟ್ ತಾ ೩೦ರಲ್ಲಿ ಶಿವಾದೀ ಪ ಹೊಂದಿದ, ನನ್ನ ಸಹೋದರ ಮುದ್ದಯ್ಯನ ಅಕಾಲ ಮರಣದಿಂದ ಪನರೂ, ಆವನ ಕುಟುಂಬಕ್ಕೂ ಉಂಟಾದ ಅಪಾರ ನಷ್ಟದಲ್ಲಿ ನನ್ನನ್ನೂ ಅವನ ಕುಟುಂಬವನ್ನೂ, ಪತ್ರಿಗಳ ಮೂಲಕ ಯೂ ಸ್ವತಹ ಬಂದು ಸಂತೈಸಿದ ಮತ್ತು ಅವನು ವೀರಾಜಪೇಟೆ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ಇದ್ದಾಗ ಬಂದು ನೋಡಿದ ಮಹನೀಯ ವ್ಯಕ್ತಿಗಳಿಗೂ, ಅವನ ಚಿಕಿತ್ಸೆ ಸಂಬಂಧ ಪ್ರಯತ್ನಪಟ್ಟಿದ ಸರಿ ಆಸ್ಪತ್ರೆ ಅಸಿಸ್ಟೆಂಟ್ ಸರ್ಜನ್ ಮತ್ತು ಅವರ ಸಿಬ್ಬಂದಿಗಳಿಗೂ, ಆವರ ಉತ್ತರ ಕ್ರಿಯೆ ಯಲ್ಲಿ ಬಂದು ಭಾಗವಹಿಸಿದವರುಗಳಿಗೂ, ನನ್ನ ಅನಂದ ಭಾಷ್ಪಗಳನ್ನು ಈ ಪತ್ರಿಕ ಮೂಲಕ ಅರ್ಪಿಸುತ್ತೇನೆ

ಚೇರಂಡ ಎ ಪೆಮ್ಮಯ್ಯ,
ಸೋಮವಾರಪೇಟೆ
ತಾ ೫೮—೮—೧೯೩೮

ಈಗ ತಾನೇ ಬಂದಿವೆ.

ಎಸ್ಸೊ ಮತ್ತು ಪಮುಖ್ ರೇಡಿಯೋಗಳು, ಬೆಯಿನ್ಸ್, ಕಾರ್ಡ್ ಮತು ಟೀಟರ್ ಸಮೂನೆಗಳು ಬಾಡಿಗೆ ಖರೀದಿಯ ರಿಪೇರಿಸಂ ಕೆಯೂ ದೊರೆಯುವುದು ಅಲ್ಲದೆ ರೆಮಿಂಗ್ಟನ್ ಪೋರ್ಟಬಲ್ ಟೈಪ್‌ರೈಟರುಗಳೂ ಮೂರಾಟಕ್ಕಿವೆ

ಹೆಚ್ಚಿನ ವಿವರಗಳಿಗೆ ಬರೆಯಿರಿ

ಉಮ್ಮ ವಿರಲ ಅನಂತನಾಯಕ್,
ಎಕೂ ವಿತರಕೆಗಾರರು, ಕೆ ಎಸ್ ರೋಡ್, ಮಂಗಳೂರು

ರಘುಲಾಲ್ & ಕಂಪನಿ,
ಔಷಧ ವ್ಯಾಪಾರಿಗಳು, ಮೈಸೂರು.

ಕರ್ನಾಟಕದಲ್ಲೆಲ್ಲಾ ಚೆನ್ನಾಗಿ ಸಂಗ್ರಹಿತವಾದ ಮತ್ತು ವಿಶ್ವಾಸ ಪೂರಿತವಾದ ವಿಷಧಿ ಅಂಗಡಿ

Also at
೭೦ ಆರ್ಕಾಟ್ ಶ್ರೀನಿವಾಸಚಾರ್ ಬೀದಿ,
2C-1 ಬೆಂಗಳೂರು ೨.

RAGULAL & CO., CHEMISTS, MYSORE

ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ಸಮ್ಮಲ್ಲಿ ಕೋವಿಗಳು, ಕೋಟಿಗಳು ಮತ್ತು ಎಲ್ಲಾ ಕರಡಿ ವ್ಯವಸಾಯದ ಹತ್ಯಾರುಗಳು ದೊರೆಯುತ್ತವೆ

1	32 ಪಿಸ್ತೂಲಿಗಳು (Pistol)	ಕ್ರಯ ರೂ 162 ರಿಂದ 215 ವರೆಗೆ
2	12ನೇ ನಂಬರಿನ ಒಂಟಿ ಕೂವಿನ ತೂವಿ	ಕ್ರಯ ರೂ 218-0-0
3	12ನೇ ನಂಬರಿನ ಜೋಡಿ ಸೊವಿನ ಕೂವಿ	(Webley & Scott)
4	12ನೇ ನಂಬರಿನ ಜೋಡಿ ಸೊವಿನ ಕೂವಿ	(Spanish make) ಕ್ರಯ ರೂ 627-5-0
5	6 ಗಜದ (Hard loom) ಸೈನ್ಸ್ ಸೀರೆ	ಕ್ರಯ ರೂ 4-10
6	12 16, 20 ನೇ ನಂಬರಿನ ಕಾರ್ಟ್ರಿಜ್ ಪೋಟಿಗಳು ಹಿಗಲಾದ ಎಲ್ಲಾ ಸಮಗಳ ತೋಟಿಗಳೂ ಸಹ ದೊರೆಯುತ್ತವೆ	

(ಪಿಸ್ತೂಲಿಗೂ, ಸೋಲ್ಟರಿಗೂ ಜಿಲ್ಲಾ ಪಾಲೀಸ್ ಪರವಾನಿಗೆ "Special permit" ಅವಶ್ಯಕವಾಗಿದೆ)

ಎಂ ಎಸ್
52-51 ಗಾಂ

ಭಾರತದ ಉನ್ನತಿ.

[ಕರ್ನಾಟಕದ ಪ್ರಸಿದ್ಧ ಸಾಹಿತಿಗಳಾದ ಶ್ರೀ ಶಿವರಾಮ ಕಾರಂತರು ತಾ. ೨೯-೮-೫೧ರಲ್ಲು ಕೊಡಗು ಸರಕಾರಿ ಕಾಲೇಜಿನಲ್ಲಿ ಮಾಡಿದ ಭಾಷಣದ ಸಾರಾಂತವನ್ನು ನಮ್ಮ ವಾಚಕರಿಗಾಗಿ ಶ್ರೀ. ಎಂ. ಎಂ. ಪೂಣಚ್ಚನವರು ಸಂಗ್ರಹಿಸಿ ಕೊಟ್ಟಿದ್ದಾರೆ]

ದೇಶದ ಮುನ್ನಡೆಯಲ್ಲಿ ಎರಡು ಭಾಗವಿದೆಯೆನ್ನಬಹುದು. ಒಂದನೆಯದಾಗಿ ವ್ಯಕ್ತಿಯು ಘನತೆಯನ್ನು ಪಡೆಯಲು ಮಾಡುವ ಪ್ರಯತ್ನ ತತ್ಪರಿಣಾಮವಾಗಿ ದೇಶದ ಸಾಮೂಹಿಕ ಉನ್ನತಿ. ಭಾರತದ ಸಾಮೂಹಿಕ ಉನ್ನತಿ ಅಂಶ ಮಾತ್ರಕ್ಕೆ ಭಾರತದ ನೇರಗಿಗೆ ವಿಸ್ತರಣವೆಂದು ತಿಳಿಕೊಳ್ಳಬಾರದು. ದೇಶದ ಉನ್ನತಿ ಅಂದರೆ ಜನತೆಯ ಉನ್ನತಿ. ಜನತೆಯ ಸಂಸ್ಕೃತಿಯನ್ನು ಆಯಾ ಜನಾಂಗದ ಜನ ಜೀವನವು ಪ್ರತಿಬಿಂಬಿಸುವುದು. ಜನ ಜೀವನವೇ ದೇಶದ ಉನ್ನತಿಯನ್ನು ಪ್ರತಿಬಿಂಬಿಸುವ ಕನ್ನಡಿ ಎಂದು ಹೇಳಬಹುದು. ಭಾರತದ ಜನತೆಯನ್ನು ತೆಗೆದು ಕೊಳ್ಳುವದಾದರೆ ಬರೀ ಕೆಲವರು ಮಾತ್ರ ಉನ್ನತ ಮಟ್ಟದಲ್ಲಿದ್ದಾರೆ. ರಾಜಕೀಯದಲ್ಲಿ ಒಬ್ಬಿಬ್ಬರು, ವಿಜ್ಞಾನದಲ್ಲಿ ಒಬ್ಬಿಬ್ಬರು. ಆದರೆ ಇಂಗ್ಲೆಂಡ್, ಅಮೇರಿಕಾದಲ್ಲಿ ಹಾಗಲ್ಲ. ಜನತೆಯ ಸಂಸ್ಕೃತಿ ಸಾರ್ವತ್ರಿಕವಾಗಿದ್ದು ಜನತೆಯ ಜೀವನ ಮಟ್ಟ ಬಹು ಮುಂದುವರಿದಿದೆ.

ಇಂದಿನ ಯಃವಕರೇ ನಾಳಿನ ಭಾವಿ ಜನಾಂಗ. ಯುವಕರಾದ ನಿಮ್ಮ ಕೈಯಲ್ಲಿ ಭಾರತದ ಉನ್ನತಿ ಯೂ ಅವನತಿ ನಿಂತಿದೆ. ನೀವು ಭಾರತವನ್ನು ಅರಬೀ ಸಮುದ್ರದಲ್ಲಿ ಮುಳುಗಿಸಬಹುದು ಯೂ ಅಗ್ರ ಉನ್ನತ ಸ್ಥಿತಿಗೆ ತರಬಹುದು. ಇಂದು ಜನಜೀವನದಲ್ಲಿ ಎರಡು ಭಾವ ವೈದ್ಯ ಕಂಡುಬರುತ್ತಿದೆ. ಒಂದು ದೇಶದ ಯುವಕರ ಭಾವ, ಮತ್ತೊಂದು ಇನ್ನಿತರ ಜನತೆಯ ಭಾವ.

ಇಂದು ಜನತೆಯ ಭಾವ ಆಸೆ, ತನ್ನ ಉನ್ನತಿ ಕಡೆಗೆ ಒಲಿದಿದೆ. ಅಧಿಕಾರಕ್ಕಾಗಿ ಪೈಪೋಟಿ ನಡೆಯುತ್ತಿದೆ. ಕೌನ್ಸಿಲುಮೆ ದಲಾದ ಸ್ಥಳಕ್ಕಾಗಿ ಕಾಫಿ ಕೊಟ್ಟು ಓಟು ಸಂಗ್ರಹ ಮಾಡುವ ಪರಿಸ್ಥಿತಿ ಒದಗಿದೆ ಪ್ರಜೆಯೊಬ್ಬರೂ ಅಧಿಕಾರದ ಆಸೆಗಾಗಿ ಏನೂ ಮಾಡಲು ಸಿದ್ಧರು. ನಾಳೆ ನೆಹರೂರವರು ಎಂಟು ದಿನಸ ರಜೆ ಸಡಕೊಂಡಿಗೆ ಹೆಲವರು ಮಂತ್ರಿ ಪದವಿಗೆ ಪೈಪೋಟಿ ಮಾಡುವವರಿದ್ದಾರೆ! ಆದರೆ ಸಿವಿ. ರಾಮನ್ ಮತ್ತಿತರರಂತೆ ಹೇಹ ಶ್ರವಿಸಿ ಸಂಶೋಧನೆ ಮಾಡುವವರು ಭಾರತದಲ್ಲಿ ಎನ್ನುದ್ದಾರೆ! ಇಂದು ಜನತೆಯಲ್ಲಿ ಶಾರೀರಿಕ ಶ್ರಮ ಕಡಿಮೆ ಮಾಡುವ ಪ್ರಯತ್ನ, ಹೆಚ್ಚಿಗೆ ಲಾಭ ಪಡೆಯುವ ಪೈಪೋಟಿ ಕಂಡು ಬರುತ್ತದೆ. ರೈತನ ಜೀವನವನ್ನು ತೆಗೆದುಕೊಂಡರೆ ಉಳಬೇಕು, ಬಿತ್ತಬೇಕು, ನೆಡಬೇಕು, ತುಂಬಾ ಲಾಭ ಬರಬೇಕು ಎಂಬ ಭಾವನೆಯಲ್ಲದೆ ಹೆಚ್ಚು ಶ್ರಮಿಸಿ ಭೂಮಿಯನ್ನು ಫಲವತ್ತಾಗಿ ನೂಡಿ ಯೋಗ್ಯ ಬೆಳೆಯನ್ನು ಪಡೆಯಬೇಕು ಎಂಬ ಭಾವನೆ ಕಂಡುಬರುವುದಿಲ್ಲ ಇವೇ ರೀತಿ ಬಡಗಿ, ಕಮ್ಮಾರ ಅಥವಾ ಯಾವ ಉದ್ಯೋಗವನ್ನು ತೆಗೆದುಕೊಂಡರೂ ನೈ ಶ್ರಮ ಕಡಿಮೆ ಮಾಡಲು ಪ್ರಯತ್ನವಲ್ಲದೆ ಉನ್ನತಿಗಾಗಿ ಶ್ರಮಿಸುವುದು ಕಂಡುಬರುವುದಿಲ್ಲ. ಯಂದ್ರದ ಪೂರ್ವದಲ್ಲಿ ಬೀಡಿ ಆಂಗಡಿ ಇಟ್ಟಿದ್ದ ಒಬ್ಬ ವ್ಯಾಪಾರಿಯು ಇಂದು ಸಾವಿರಗಟ್ಟಲೆ ಸಂಪಾದಿಸಿದ್ದಾನೆ! ಆದರೆ ಈ ಸಂಪಾದನೆ ಆತನ ದೇಹ ಶ್ರಮದಿಂದಲ್ಲ. ಅಳತೆ, ತೂಕದಲ್ಲಿ, ಕಪ್ಪು ಸಂತೆ ಮೊದಲಾದುವುಗಳಿಂದ, ನಿರಾತಂಕ ಸುಲಿಗೆಯಿಂದ ಸಂಪಾದನೆ ಆತನ ಭಾವನೆ ಸುಲಿಗೆಯಲ್ಲಿ ಹೊರತು ನಿರಾಕರಣವನ್ನು ಒಲಿಸುವ ಭಾವನೆ ಇಲ್ಲವೇ ಇಲ್ಲ. ಇಂಗ್ಲೆಂಡಿನಿಂದ ಬರುವ ಬಟ್ಟೆ, ಉಪಯೋಗಿಸುವವನಿಗೆ ದೊರೆಯಬೇಕಾದರೆ ಹಲವು ಮಧ್ಯಸ್ಥಗಾರರನ್ನು ದಾಟಬೇಕು. ಈ ಮಧ್ಯಸ್ಥಗಾರರು ಕುಳಿತಲ್ಲಿಯೇ ವ್ಯಾಪಾರದಿಂದ ದುಡ್ಡು ಸಂಪಾದನೆ ಮಾಡುವವರಿದ್ದಾರೆ.

ಕಾಲೇಜು ವಿದ್ಯಾರ್ಥಿಗಳನ್ನು ತೆಗೆದುಕೊಳ್ಳುವ. ಜ್ಞಾನ ಸಂಪಾದನೆ ಅಥವಾ ತಿಳಿವಳಿಕೆಯ ಅಭಿವೃದ್ಧಿಗಾಗಿ ಕಾಲೇಜಿಗೆ ಬರುವವರ ಸಂಖ್ಯೆ ಅತೀ ಕಡಿಮೆ. ಪ್ರತಿ ವಿದ್ಯಾರ್ಥಿಯು ಡಿಗ್ರಿ ಪಡೆಯಬೇಕು ದುಡ್ಡಿ ಸಂಪಾದಿಸಬೇಕು ಎಂಬ ಭಾವನೆಯಿಂದಲೇ ಬರುವವರಾಗಿದ್ದಾರೆ. ವರ್ಷದ ಹಲವು ಭಾಗಗಳನ್ನು ತಿನೋದದಿಂದ ಕಳೆಯುತ್ತಾ, ಪರೀಕ್ಷೆ ಸಮೀಪಿಸಿದಾಗ ರಾತ್ರಿ ಹಗಲೆನ್ನದೆ ಓದಿ ಪಾಸಾಗುವ ಪ್ರಯತ್ನ! ಪರೀಕ್ಷೆ ಕಳೆದು ಕೆಲವು ದಿನಗಳ ನಂತರ ಕಲೆಯಲ್ಲಿ ಏನೂ ಇರುವುದಿಲ್ಲ. ಎಲ್ಲರೂ ಪಿ. ಸಿ ಎ., (ಫಲಿಸ್ಕ್ಸ್, ಕೆಮಿಸ್ಟ್ರಿ, ಲೆಕ್ಕ) ಬೇಕು ಎಂದು ಹೇಳುವವರೆ! ಆದರೆ ಆರಕ್ಕೆ ಮೂರು ಕೊಡಿಸಲು ಬರುತ್ತದೋ ಎಂದು ತನ್ನನ್ನು ತಾನೇ ತಿಳಿಕೊಳ್ಳುವನರು ಅತಿ ವಿರಳ ಡಿಗ್ರಿ ಪಡೆದವರು ಮನೆಯಲ್ಲಿ ವಾಚನಾಲಯವನ್ನು ನೋಡಿದರೆ ಅತನಲ್ಲಿ ಬರೀ ಮೂರಾಟವಾಗದ ಪಠ್ಯ ಪುಸ್ತಕಗಳ ವಿನಹ ಜ್ಞಾನ ಸಂಪಾದನೆಗೆ ಯೋಗ್ಯವಾದ ಯಾವ ವಿಧದ ಗ್ರಂಥಗಳೂ ಕಂಡುಬರುವುದಿಲ್ಲ. ಯಾರಾದರೂ ಓದಲು ಪುಸ್ತಕ ಕೊಟ್ಟರೆ ಇಲ್ಲದ ನೆವನ ನೇಳಿ ಓದಲು ಬಿಡುವಿಲ್ಲ ಅನ್ನುವವರು ಬಹಳ. ಡಿಗ್ರಿ ಪದೆಯಬೇಕು. ಹೆಗ್ಗಣ ಸಂಬಳ ಪಡೆಯಬೇಕು ಎಂಬ ಭಾವನೆಯಲ್ಲದೆ ಸಮಾಜ ಉದ್ಧಾರಕ್ಕಾಗಿ ತನ್ನಲ್ಲಿ ದುಡಿಯುವ ಶಕ್ತಿ ಬರಬೇಕು. ಎನ್ನುವ ಭಾವನೆ ಇಲ್ಲ. ಉದಾಹರಣೆಗಾಗಿ ನನ್ನ ಒಬ್ಬ ಮಿತ್ರರು ಶಾಸ್ತ್ರೀಯ ರೀತಿ ಹಣ್ಣಿನ ರಸ ತೆಗೆಯುವ ವಿಧಾನದ ಬಗ್ಗೆ ಪಾಶ್ಚಾತ್ಯ ದೇಶದಲ್ಲಿ ತರಬೇತು ಹೊಂದಿ ಬಂದು ಪಂಜಾಬಿನಲ್ಲಿ ಮೊಕ್ಕೆ ಟಿಂಗ್ ಆಫೀಸರಾಗಿದ್ದಾರೆ! ತರಬೇತಿಗೂ ಇದಕ್ಕೂ ಸಂಬಂಧವೇ ಇಲ್ಲ.

ಇಂದಿನ ರಾಜಕೀಯದಲ್ಲಿ ಬರೀ ಜೈಲಿಗೆ ಹೋಗಿ ಗಾಂಧಿ ಟೊಪ್ಪಿ ಹಾಕಿದರೆ ಮಂತ್ರಿಯಾಗಬಹುದೆಂಬ ಭಾವನೆ ಇದೆ. ಆದಕ್ಕೆ ಪೈಪೋಟಿ ಸಹ ನಡೆಯುತ್ತಿದೆ. ಆದರೆ ಮಂತ್ರಿ ತನಕ್ಕೆ ನಿಲ್ಲುವ ವ್ಯಕ್ತಿ ತನ್ನ ಶಕ್ತಿ ಸಾಮರ್ಥ್ಯದ ಬಗ್ಗೆ ಆಲೋಚಿಸುವುದಿಲ್ಲ ಆರೋಗ್ಯದ ಶಾಖೆಯ ಮಂತ್ರಿಗೆ ಆರೋಗ್ಯದ ವಿಷಯ ಏನೂ ಗೊತ್ತಿರುವುದಿಲ್ಲ. ಹಣ ಕಾಸಿನ ಮಂತ್ರಿಗೆ ಆರ್ಥಿಕ ವಿಚಾರದ ಗಂಧವಿರುವುದಿಲ್ಲ. ಹೀಗಿದೆ ನಮ್ಮ ಪರಿಸ್ಥಿತಿ. ಹುಡುಗರಿಗೆ ಗಂಡ ರಾಜಕೀಯದಲ್ಲಿ ಕಾಲಿಡುವುದೂ ಬಹು ಸುಲಭ! ಉದಾಹರಣೆಗೆ ೧೯೪೭ರಲ್ಲಿ ಹಲವು ವಿದ್ಯಾರ್ಥಿಗಳು ಕಾಲೇಜು ಶಿಕ್ಷಣಗಳನ್ನು ತ್ಯಜಿಸಿ ದೇಶಸೇವೆಗೆಂದು ಮುಂದೆ ಬಂದರು. ಆದರೆ ಕೆಲವೇ ವಾರಗಳಲ್ಲಿ ಅವರ ಉತ್ಸಾಹ ಆರಿಹೋಗಿ 'ಕಾಂಗ್ರೆಸ್ ಕಮಿಷನ್' ಮೊದಲಾದುಗಳಿಗೆ ಸೇರತೊಡಗಿದರು.

ಜಪತೆಯು ತೀಲ ವ್ಯಕ್ತಿತ್ವ ದೊಡ್ಡದಿದ್ದಕ್ಕೆ ತನ್ನಷ್ಟಕ್ಕೆ ದೇಶ ದೊಡ್ಡದಾಗುತ್ತೆ. ದೇಶದ ಬಡತನ ಹೋಗಬೇಕು. ಸಾಕಷ್ಟು ಹೆಚ್ಚಾಗಬೇಕು. ಸಮತಾವಾದಿಗಳು ದೇಶದ ಎಲ್ಲಾ ಕೈಗಾರಿಕೆ ಇತ್ಯಾದಿಗಳನ್ನು ರಾಷ್ಟ್ರೀಕರಣ ಮಾಡಿದರೆ ಸಂಪತ್ತು ಹೆಚ್ಚಾಗುತ್ತೆ ಅನ್ನುತ್ತಾರೆ. ರಾಷ್ಟ್ರೀಕರಣವಾಗಬಾರದೆಂದು ನಾನು ಹೇಳುವದಲ್ಲ. ಆರ್ಥಿಕ ಪರಿಶೀಲನೆಯ ಪ್ರಕಾರ ನಮ್ಮ ದೇಶದ ವಾರ್ಷಿಕ ಉತ್ಪನ್ನ ೪೫೦೦ ಕೋಟಿ ರೂಪಾಯಿಗಳ. ಇದು ೩೫ ಕೋಟಿ ಜನಸಂಖ್ಯೆಗೆ ತಲಾ ಒಂದರ ೧೩೦ ರೂ. ಖಂದಂತಾಗುವುದು. ಈ ಸಂಪತ್ತಿನಿಂದ ದೇಶ ಉದ್ಧಾರವಾಗಲಾರದು. ಸಮತಾವಾದವು ಬರೀ ಹಂಗಡ ಕಟ್ಟಲು ಅನುಕೂಲವಿರುವ ಸಾಧನ. ಇಂದು ಪೋಸ್ಟಲ್ ಮುಷ್ಕರ ಅಥವಾ ಬೊಂಬಾಯಿ ಗಿರಣಿ ಮುಷ್ಕರವನ್ನು ತೆಗೆದುಕೊಳ್ಳುವ. ಗಿರಣಿಯ ಒಬ್ಬ ದುಡಿಮೆಗಾರನಿಗೆ ತಿಂಗಳಿಗೆ ೧೫೦ ರೂ. ದೊರೆಯುತ್ತದೆ. ಪೋಸ್ಟಲ್ ಒಬ್ಬ ಪೇದೆಗೆ ತಿಂಗಳಿಗೆ ರೂ. ೬೫ ದೊರೆಯುತ್ತೆ. ಅಂದರೆ ನಮ್ಮ ದೇಶದ ಒಬ್ಬ ವ್ಯಕ್ತಿಗೆ ತಲಾ ಒಂದರ ವರ್ಷಕ್ಕೆ ದೊರೆಯುವ ರೂಪಾಯಿ ೧೫೦೦೦ಕ್ಕಿಂತ ಎಷ್ಟೋ ಪಟ್ಟು ಹೆಚ್ಚು ದೊರೆಯುವುದು ಎಂದಾಗುವುದು ಪ್ರತಿಯೊಬ್ಬರು ತಪ್ಪ ಜೊಬಿಗೆ ಬರುವುದೇನಾದರೂ ಇಳ್ಳರೆ ತೆಗೆದುಕೊಳ್ಳಲು ತಯಾರಿರುವುದೇ ಹೊರತು ತಮ್ಮಿಂದ ಕೊಡಲಾಗುವುದನ್ನು ಗಮನಿಸುವುದಿಲ್ಲ.

ಸಮಾಜದ ಸಂಪತ್ತು ಬೆಳೆಯಬೇಕು. ದೇಶದ ಸಂಪತ್ತನ್ನು ಎರಡು ವಿಧದಲ್ಲಿ ಹೆಚ್ಚಿಸಬಹುದು ಒಂದು ಕೃಷಿಯಿಂದ ಮತ್ತೊಂದು ಔದ್ಯೋಗಿಕ ಮಾರ್ಗದಿಂದ ಇಂದು ನಮಗೆ ೬ ಬೆನ್ನು ಅಕ್ಕಿ ರೇಷನ್ ದೊರೆಯುತ್ತೆ. (ನಿಮ್ಮಲ್ಲಿ ಅಲ್ಲ. ನಮ್ಮ ಮಂಗಳೂರಿನಲ್ಲಿ!) ರೇಷನ್ ಹೋಗಬೇಕು ಹೆಚ್ಚು ದೊರೆಯಬೇಕು ಅನ್ನುವವರು ಹಲವರಿದ್ದಾರೆ. ಆದರೆ ದೇಶದಲ್ಲಿ ಹೆಚ್ಚು ಬೆಳೆ ಬೆಳೆಯದೆ ದೇಶದ ಸಂಪತ್ತು ಹೆಚ್ಚುವದು ಹೇಗೆ ಸಾಧ್ಯವೆಂಬುದು ಯಾರೂ ಆಲೋಚಿಸುವುದಿಲ್ಲ. ಹೆಚ್ಚು ಬೆಳೆ ಬೆಳೆಯಬೇಕಾದರೆ ನಮ್ಮ ನೀರಾವರಿ ಯೋಜನೆಗಳೆಲ್ಲಾ ಕಾರ್ಯರೂಪಕ್ಕೆ ಬರಬೇಕು. ಇದು ಬರಬೇಕಾದರೆ ಸುಮಾರು ಹತ್ತು ಹನ್ನೆರಡು ವರ್ಷ ಹಿಡಿಯಬಹುದು. ಭಾರತದಲ್ಲಿ ಜನಸಂಖ್ಯೆ ಮಾತ್ರ ಹೆಚ್ಚಾಗುತಿದೆಯೇ ವಿನಹ ಬೇರೆ ಯಾವುದರಲ್ಲೂ ಮುನ್ನಡೆ ತೋರುವದಿಲ್ಲ. ವಾಣಿಜ್ಯತೆ ದೇಶದಲ್ಲಿ ಹಲವು ವಿಧದಲ್ಲಿ ಸಂಪತ್ತು ಹೆಚ್ಚು ಮಾಡುವ ಪ್ರಯತ್ನ ನಡೆಯುತ್ತಿದೆ. ಬೆಳೆ ಬೆಳೆಯದ ಸ್ಥಳಗಳಲ್ಲಿ ಶಾಸ್ತ್ರೀಯ ರೀತಿಯಲ್ಲಿ ಅಣಬೆ ಬೆಳೆಸಿ ಮಾರಾಟ ಮಾಡುವ ವಿಧಾನ ನಡೆಯುತ್ತಿದೆ. ನಾವು ಸಹ ಜೇನು ಸಾಕುತ್ತೇವೆ. ಜೇನು ದೇಹಾರೋಗ್ಯಕ್ಕೆ ಒಳ್ಳೆದೆಂದು ಅನ್ನುತ್ತೇವೆ. ನಮ್ಮಲ್ಲಿ ಒಂದು ಪೌಂಡು ಜೇನಿಗೆ ರೂ ೫. ವಿದೇಶಿಯರು ಸಾಕಾರವಿರುವ ಒಬ್ಬನು ಪ್ರತಿಯೊಬ್ಬರಿಗೆ ದಿನಕ್ಕೆ ಒಂದು ಔನ್ಸಿನಂತೆ ಜೇನು ಪಡೆದುಕೊಡುವುದು ಸಾಧ್ಯವೇ? ಜೇನು ಕೃಷಿ ಶಾಸ್ತ್ರೀಯ ರೀತಿಯಲ್ಲಿ ನಡೆಯದಿರುವುದೇ ಹೆಚ್ಚು ಬೆಲೆಗೆ ಕಾರಣ ಅಮೇರಿಕಾದಲ್ಲಿ ಶಾಸ್ತ್ರೀಯ ರೀತಿ ಹೆಚ್ಚು ರಾಣಿ ಹುಳಗಳನ್ನು ಉತ್ಪಾದಿಸಿ ಜೇನು ಸಂತತಿ ಹೆಚ್ಚಿಸುವುದಲ್ಲದೆ ಯಾವ ತರದ ಹೂವಿನಿಂದ ಹೆಚ್ಚು ಜೇನು ಸಿಕ್ಕುತ್ತದೋ ಅದನ್ನು ಬೆಳೆಯಿಸುತ್ತಾರೆ! ನಮ್ಮಲ್ಲಿ ಸಂಶೋಧನೆ ಮಾಡುವ ಆಭ್ಯಾಸವೇ ಇಲ್ಲ! ಜೀವಿತದಲ್ಲಿ ಪ್ರತಿಯೊಂದು ಬಾಬಿನಲ್ಲಿ ಸಂತೋಷನೆಯೂ ಬೇಕು ಉತ್ಪಾದನೆ ವಿಜ್ಞಾನೆ ಶಾಸ್ತ್ರೀಯ ರೀತಿಯಲ್ಲಿ ಆಗಬೇಕು. ಎಲ್ಲರೂ ಭಾರತವು ವಿಷ್ಯಾ ಖಂಡದ ಮುಂದಾಳು ಅನ್ನುತ್ತಾರೆ. ಈ ಮುಂದಾಳುತನ ಬೇಕೆಲ್ಲ. ಆಳದ ಊರಿಗೆ ಉಳಿದವನೇ ಗೌಡ ಎನ್ನುವ ಗಾದೆ ಇದೆ. ವಿಷ್ಯಾ ಖಂಡದ ಯಾವ ಭಾವವೂ ಮುಂದುಪರಿದಿಲ್ಲ. ನಮ್ಮ ಪ್ರಯತ್ನದಿಂದ ಈ ಮುಂದಾಳ್ತನವಲ್ಲ ನಾವು ಕೃತಿಯಲ್ಲಿ ಯಾವುದನ್ನು ಸಾಧಿಸಿಲ್ಲ. ಹಿಂದಿನ ವೈಭವವನ್ನೆ ಹೊಗಳುತ್ತೇವೆ ವಿನಹ ಅದಕ್ಕನ ಗುಣ ನಡೆಯುತ್ತಿಲ್ಲ. ಇತಿಹಾಸದ ಸಂಶೋಧನೆ, ಕೃಷಿ ಶೋಧನೆ ಮೊದಲಾದ ಯಾವ ಭಾಗದಲ್ಲೂ ನಾವು ತೊಡಗಿರುವುದಿಲ್ಲ. ಪ್ರತಿಯೊಬ್ಬನಿಗೂ ಸಂಶೋಧನೆಯಲ್ಲಿ ಆಸೆ ಇರಬೇಕು. ದುಡಿಯಬೇಕ, ಸತ್ಯದ ಆಸೆ ಇರಬೇಕು. ದೊಡ್ಡದಾಗುವ ಭಾವನೆ ಇರಬೇಕು. ಗಾಂಧಿ ಟೊಪ್ಪಿ ಹಾಕಿದ ಮಾತ್ರಕ್ಕೆ ಜವಾಹರ್‌ಲಾಲ್ ಆಗುವುದಿಲ್ಲ. ಕಳ್ಳ ಆಸೆ ಇರಬಾರದು, ಪ್ರತಿಯೊಂದು ಕ್ಷೇತ್ರದಲ್ಲೂ ಜ್ಞಾನದ ಹಸಿವಿರಬೇಕೆ, ಅಭಿರುಚಿ ಇರಬೇಕು. ಕೀರ್ತಿಗಾಗಿ ಪ್ರಯತ್ನಿಸಬೇಡಿ ಅಥವಾ ಸಂಗಡಕಟ್ಟಿ ಕೀರ್ತಿಗಳಿಸುವುದಕ್ಕಾಗಿ ಪ್ರಯತ್ನಿಸಬೇಡಿ ಅಂದ ಮಾತ್ರಕ್ಕೆ ವಿದ್ಯಾರ್ಥಿಗಳು ರಾಜಕೀಯಕ್ಕೆ ಕೈಹಾಕಬಾರದೆಂದಲ್ಲ ಪ್ರತಿಯೊಬ್ಬರೂ ರಾಜಕೀಯ ವಿಚಾರವನ್ನು ತಿಳಿಕೊಳ್ಳಲು ಶ್ರಮಿಸಬೇಕು. ಪ್ರತಿಯೊಬ್ಬರು ಮನಸ್ಸಿನ ಬೆಳವಣಿಗೆಗಾಗಿ ಪ್ರಯತ್ನಿಸಿ, ಪ್ರಪಂಚದಲ್ಲಿ ಕಳಕೊಳ್ಳುವವರೇ ಬಹಳ ಲಾಭ ಹೊಂದುವವರು ಅತೀ ವಿರಳ. ಆದುದರಿಂದ ಸುಪ್ತಸ್ಥಿತಿಯ ಬೆಳವಣಿಗಾಗಿ ಪ್ರಯತ್ನಿಸಿ ದೇಶದ, ಸಮಾಜದ ಕಲ್ಯಾಣಕ್ಕಾಗಿ ಶ್ರಮಿಸುವ ಮನಸ್ಸು ಮಾಡಿ.

ನಮ್ಮೂರಿನ ಕೆಲವು ರಸಿಕರು ೩.

ಕಾಲೇಜು ವಿದ್ಯಾರ್ಥಿ ಪ್ರಭಾಕರರಾಯ.

ಪ್ರಭಾಕರರಾಯನು ನಮ್ಮೂರಿನ ಕಾಲೇಜಿನ ವಿದ್ಯಾರ್ಥಿ. ನ ವೋಕ್ಲ್ ಹೈಸ್ಕೂಲಿನಿಂದ ತೇರ್ಗಡೆಯಾಗಿ ಬಂದನಲ್ಲ. ಈತನ ತಂದೆಯು ಸ್ಥಿತಿಯು ಈತನಿಗೆ ಕಾಲೇಜು ವಿದ್ಯಾಭ್ಯಾಸಕ್ಕೆ ಹಣ ಒಗಿಗುವಷ್ಟು ಉತ್ತಮವಾಗಿರಲಿಲ್ಲ. ಆದರೂ ಮಡಿಕೇರಿಯಲ್ಲಿ ಕಾಲೇಜು ಇಡಿಯಲ್ಲಾ ಕಡಿಮೆ ಖರ್ಚಿನಿಂದ ಮಗನ ವ್ಯಾಸಂಗವು ಸಾಗಬಹುದು. ಮಗನು ಜೆನ್ಮಾಗಿ ಓದಿ ಬಿ. ಎ ಪಾಸಾದರೆ ಅವನು ಒಳ್ಳೆಯ ಪದವಿಗೆ ಬರಬಹುದೆಂದು ಆಲೋಚಿಸಿ ಕಷ್ಟವಾದರೂ ಮಗನನ್ನು ಕಾಲೇಜಿಗೆ ಕಳುಹಿಸಿದನು.

ಪ್ರಭಾಕರನು ಹೆಳ್ಳಿಯ ವಾತಾವರಣವನ್ನು ಬೆಳೆದವನು. ಆತನ ಉಡಿಗೆ ತೊಡಿಗೆಗಳೂ ಆಹಾರ ವಿಹಾರಗಳೂ ಸಾಧಾರಣವಾಗಿತ್ತು. ಪೈಜಾಮೆ ಪದಟು, ಕೋಟು, ಸೂರಾಲು, ತಲೆಯ ದೇಲೆ ಒಂದು ಕೋಪಿ ಎಸ್. ಎಸ್. ಎಲ್. ಸಿ ತೇರ್ಗಡೆಯಾಗುವ ವರೆಗೆ ಪಾರ ಕಲಿಯುವುದರಲ್ಲಿಯೂ ಉತ್ಸಾಹಿಯಾಗಿದ್ದನು. ಕಾಲೇಜಿನಲ್ಲಿಯೂ ಹೆನ್ನಾಗಿ ವ್ಯಾಸಂಗ ಮಾಡುವ ನಿಶ್ಚಯವನ್ನು ಮಾಡಿದ್ದನು.

ಪ್ರಭಾಕರನು ಮಡಿಕೇರಿ ಕಾಲೇಜು ಸೇರಿ ನೋಡುತ್ತಾನೆ, ತನ್ನ ಹಾಗೆ ಸಾಧಾರಣ ಉಡುಪಿನವರೂ ಕೆಲವೇ ಜನರು! ಉಳಿದವರೆಲ್ಲರೂ ಸೀಪೆಯಿಂದ ಹೊಸತಾಗಿ ಬಂದು ಇಳಿದವರು ಹಾಗಿದ್ದರೂ ಕಲಿಯಲ್ಲಿ ಹೆಚ್ಚು, ಈ ಜೆಗೆಯಲ್ಲಿ ಟೈ ಮೂಶ ಇನ್ನೂ ಬಂದಿರಲಿಲ್ಲ. ಪ್ರಭಾಕರನು ಅವರನ್ನು ನೋಡಿ ಬೆರಗಾಗಿ ಹೋದನು. ಇವನು ಕಾಲೇಜು ಸೇರಿ ಒಂದೆರಡು ವಾರಗಳೊಳಗೆ ಕೆಲವು ಕಾಲೇಜು ವಿದ್ಯಾರ್ಥಿಗಳು ಇವನನ್ನು ಕರೆದು, ಏನ್ಶೈಯ್ಯಾ ನಿನಗೆ ಇದು ಕಾಲೇಜೆಂದು ಗೊತ್ತಿಲ್ಲವೇ? ಇನ್ನೂ ನಾಪೋಕ್ಲು ಶಾಲೆಯೆಂದು ಹಳ್ಳಿ ಹುಡಗನ ಹಾಗೆ ಉಡುಪು ಪುಚೆಟ್ಟುಕೊಂಡು ಬರುತ್ತಿದ್ದೀಯಾ? ಟೀಗೆ ಬರುವುದು ನಿನ್ನ ಕಾತೆಜಿಗೆ ಅನಮಾನ, ಕಾಲೇಜು ವಿದ್ಯಾರ್ಥಿಗಳೆಂದರೆ ಇಂಟಲ್ಲಾಜೆನ್ಸ್. ನೀನು ಇನ್ನು ಮುಂದೆ ಕಾಲಿಗೆ ಕಾಲುಚೀಲ, ಶೂ ಹಾಕಿಕೊಂಡು ಬರಬೇಕು, ಸರಾಲಿನ ಪ್ರೀಸ್ ಮಡಿಕೆ ಇಸೆಯಲ್ಲಾ, ಪೈಸಕಾಗಿ ಇಸ್ತ್ರಿಮಾಡಿದ ಶರ್ಟಾಗಿರಬೇಕು. ಈಗ ಕೋಟು ಬ್ಯಾಡ್ ಆಫ್ ಫ್ಯಾಷನ್. ಕೀಪ್ ಹಿತವಾ ಸಾಪ್ಲಿನ್ ನ ಉದ್ದ ಕೈಯ ಪಂಟುಗಳನ್ನು ಹಾಕಿಕೊಳ್ಳಬೇಕು. ಪರಟಿಗೆ ಲಿಂಕ್ಸ್ ಸ್ಟಡ್ಸ್ ಒಪ್ಪುವಂತಿರಬೇಕು. ಪರಟಿನ ಮೇಲೆ ಸ್ವೆಟ್ಟರ್ ಹಾಕಿಕೊಳ್ಳಬೇಕು. ತಲೆ ಕೂದಲು ಅನವಶ್ಯಕವಾಗಿ ಕ್ರಾಪ್‌ಮಾಡಿಸಿ ಕೋಂಬ್ ಮಾಡಿಕೊಂಡು ಬರಬೇಕು.!

ಪ್ರಭಾಕರ–ನನಗೆ ಇದೆಲ್ಲಾ ಹೆಣ ವೆಲ್ಲಿಂದ? ನನ್ನ ತಂದೆ ಕನಗೆ ಬೇಕಾದ ಹಾಗೆ ಖರ್ಚು ಮಾಡುವುದಕ್ಕೆ ಹಣ ಕಳಿಸುವುದಿಲ್ಲ. ಅವಶ್ಯವಿದ್ದ ಪಟ್ಟವನ್ನು ಕೊಂಡುಕೊಳ್ಳುವುದಕ್ಕೆ ಮಾತ್ರ ಹಣ ಕಳಿಸುತ್ತಾರೆ.

ಅಯ್ಯರವ್ವಿ ಜರರೆಲ್ಲೊಬ್ಬನು–ಕಾಲೇಜಿಗೆ ಕಳುಹಿಸಿದ ಮೇಲೆ, ಅದಕ್ಕೆ ಖರ್ಚು ಮಾಡಬೇಡ, ಇವಕ್ಕೆ ಖರ್ಚು ಮಾಡಬೇಡ ಎಂದು ಹೇಳುವರೆ ಆಗುತ್ತದೆಯೇ? ಕಾಲೇಜು ವಿದ್ಯಾಭ್ಯಾಸವೆಂದರೆ ಹಣ ಖರ್ಚು ಮಾಡ ಪುದಕ್ಕೇ ಇರುವುದು. ನಿನ್ನ ತಂದೆಗೆ ಹಣ ಖರ್ಚು ಮಾಡುವುದಕ್ಕಾಗಿ ದಿನ್ದಲಿ ನಿನ್ನನ್ನು ಇಲ್ಲಿಗೆ ಕಳುಹಿಸಿದ್ದು ಏಕೆ?

ಮತ್ತೊಬ್ಬ ವಿದ್ಯಾರ್ಥಿ–ಹೇಗೂ ನೀನು ಕಾಲೇಜು ಸೇರಿಯಾಯಿತು. ಇನ್ನು ನಿನ್ನ ತಂದೆ ಹಣ ಕಳುಹಿಸದೆ ಏನು ಮಾಡುತ್ತಾರೆ? ಪುಸ್ತಕಗಳಿಗೆ ಇನ್ನೂ ಏನ ತ್ತು ರೂಪಾಯಿಗಳು ಬೇಕೆಂದು ಬರೆದು ಬೋರ್ಡಿಂಗ್ ಮನೆ ಊಟ ಸೇರುವುದಿಲ್ಲಿ. ಮೆಲ್ಬರ್ಚಿಗೆ ಇಪ್ಪತ್ತು ರೂಪಾಯಿಗಳನ್ನು ಕಳುಹಿಸಬೇಕೆಂದು ಬರೆ. ಹಣ ಬಂದೇ ಬರುತ್ತದೆ.

ಪ್ರಭಾಕರನು ಇನ್ನೂ ಚಿಕ್ಕವನು. ಅವರು ಹೇಳಿದಂತೆ ಮಾಡುವುದಾಗಿ ಒಪ್ಪಿಕೊಂಡನು. ಕ್ರಮಕ್ರಮವಾಗಿ ಆತನ ವೇಷಭೂಷಣಗಳು ಬದಲಾದವು. ಸೊಗಸಾದ ಬಟ್ಟೆಬರೆಗಳನ್ನು ತೊಟ್ಟು ಕನ್ನಡಿಯ ಮುಂದೆ ನಿಂತು ಮುಖಕ್ಕೆ ಫೇಸ್‌ಪೌಡರ್ ಬಳಿದು ತನ್ನ ಶೃಂಗಾರ ಮಾಡಿಕೊಳ್ಳುವುದರಲ್ಲಿ ವೇಳೆಗೆ ಸಾಯಂಕಾಲ ಆಟ ಮುಗಿಸ್ಕಾಲು ಗಂಟೆ ಕಳೆಯಕ್ಕಾಯಿತು. ಇಷ್ಟು ಶೃಂಗಾರಿಸಿಕೊಂದ ಮೇಲೆ ಬೇರೆಯವರಿಗೆ ಕೆಲಸವಿರಬೇಡವೇ? ಅದಕ್ಕೆಂತಲೇ ತನ್ನ ಸ್ನೇಹಿತರೊಡನೆ ಕಾಲೇಜು ಗೇಟಿನ ಹತ್ತಿರ, ಕಾಲೇಜಿಗೆ ಹೋಗುವ ಮಾರ್ಗದಲ್ಲಿ ನಿಲ್ಲತೊಡಗಿದನು. ಆಟೆ ದಾರಿಯಾಗಿ ಹೋಗುವ ಸ್ತ್ರೀ ಇತರರು ಉಡುಪುಗಳನ್ನೂ ಮಾಗಳನ್ನೂ ನೋಡಿ, ಅವರ ಸುಂದರತನ್ನು ಅಸ್ತಿ ಪಡಿಸಲೆಂದು ಇಲ್ಲ. ಇವರ ಸುಂದರತೆ ಕತ್ತೆಯಂತೆ ಇದೆ. ಅವರ ಮೂಡ ಸತ್ತೆಯಲ್ಲಾ ಹೀಗಾಗಿದೆ. ಅವರ ಮೂಡ ಏಕೆ, ಆದರೆಡಿ ಹೋಗಿದೆ ಇಂಥಾ ಮೂ ಏಕೆ ಹಾಕಬೇಕು? ಎಂದು ಇವನೂ ಇವನ ಸ್ನೇಹಿತರೊಡನೆ ಸೇರಿ ಟೀಕೆ ಮಾಡಲು ಸುರು ಮಾಡಿದನ.

ಈ ವಿದ್ಯಾರ್ಥಿಗಳಲ್ಲಿ ಇನ್ನೊಂದು ವಿಧಿಯ ಅಭ್ಯಾಸವೂ ಇತ್ತು. ಅದು ಏನು ಗೊತ್ತೆ? ಕಾಲೇಜು ಗೇಟಿಗಾಗಿ ಹಾದುಹೋಗುವ ಕಾಲೇಜು ವಿದ್ಯಾರ್ಥಿಗಳ ಹೈಸ್ಕೂಲಿನ ಹೆಣ್ಣು ಪಕ್ಕಳನ್ನು ಗಮನಿಸಿ ಹೇಳುವುದು. ಆವಾಗ ಮಾತ್ರ ಆವರ ವಶಿಕರ ವಶಿಗೆ ಎನೆಯಿಕ್ಕದೆ ತೀಕ್ಷ್ಣವಾಗಿ ದೃಷ್ಟಿಸುವುದು. ಭಗವಂತನ ಸೃಷ್ಟಿಸ್ಥರ ಕಣ್ಣಿಗೆ ದಪ್ಪಿಸುವ ಶಕ್ತಿಯನ್ನು ಕೊಡದಿರುವುದರ ಗುಟ್ಟು ಇಲ್ಲಿ ತಿಳಿಯುತ್ತದೆ. ಒಂದು ಹೆಂಳೆ ಆ ವಂಶಸ್ಥಿಗೆ ಸರಸ್ವೇಶ್ವರನು ಮನಸ್ಸಿನ ನ್ನು ಗಹಿಸಿಗ ಹಾಗೆ ದಪ್ಪಿಸುವ ಶಕ್ತಿಯೊಟ್ಟಿದ್ದರೆ ಇವತ್ತು ನಮ್ಮ ಕಾಲೇಜು ಹೈಸ್ಕೂಲುಗಳಲ್ಲಿ ಹೆಣ್ಣು ಪಕ್ಕಳೇ ಇರುತ್ತಿರಲಿಲ್ಲ! ಎಲ್ಲಾ ಭಗ್ನವಾಗಿ ಹೋಗ ತ್ತಿದ್ದ!

ಕೆಲವು ವೇಳೆ ಯೂರಾದರೂ ಇವರನ್ನು ಯಂಕಯ್ಯಾ. ನೀವು ದಾರಿಯಲ್ಲಿ ಹೋಗುವ ಬೇಗ್ಗಿನ 'ಮ್ಯೂಟಿಫಿ' ಚಿತ್ರವನ್ನು ನೋಡುವುದಕ್ಕೆ ಹೋಗಿರುವನೆಂದು ಹೇಳಿ ಅವರನ್ನು ಸಿನೆಮಾ ಹಾಲಿಗೆ ಕರೆದುಕೊಂಡು ಹೋದನು, ಆಗ 'ಮ್ಯೂಟಿಫಿ' ಅಂತ್ಯವಾಗಿ ಜನರು ಒಳಗಿನಿಂಚ ಗುಂಪು ಗುಂಪಾಗಿ ಬರುತಿದ್ದರು. ಶ್ರೀನಿವಾಸಯ್ಯನೂ, ಮುದ್ದಣ್ಣನೂ ಬರುವ ಜನರನ್ನೇ ನೋಡುತಿದ್ದರು. ಒಂದೆರಡು ನಿಮಿಷಗಳಲ್ಲಿ ಪ್ರಭಾಕರನೊಂತಿರುವ ಹುಡುಗನೂ ಅವನ ವ್ಯಾಯೆದ ಇತರ ಹುಡುಗರೊಡನೆ ಸಿನೆಮಾ ಮನೆಯ ಒಳಗಿನಿಂದ ಬರುವುದು ಕಂಡಿತು. ಶ್ರೀನಿವಾಸಯ್ಯನಿಗೆ ಅವನು ತನ್ನ ಮಗನು ಹೌದೋ ಅಲ್ಲವೋ ಎಂಬ ಸಂಶಯವು ಶಲೆದೋರಿತು. ಪ್ರಭಾಕರನಂತಿರುವ ಹುಡುಗ ಕೆಲವು ಗಜ ಇವರ ಕಡೆ ಬಂದು ಛಕ್ಕನೆ ಇವರ ಕಡೆ ನೋಡಿ ಹಿಂದಕ್ಕೆ ತಿರುಗಿ ಜನರ ಸಂದಿನಲ್ಲಿ ನುಸುಳಿ ಮಾಯವಾದಂತಾಯಿತು. ಒಂದೆರಡು ನಿಮಿಷಗಳಲ್ಲಿ ಜನರ ಗುಂಪು ಕವಿಯೆಯಾದ ಮೇಲೆ ಪ್ರಭಾಕರನು ನಾಚಿಕೆಪಟ್ಟು ನಿಟ್ಟಿಸಿದಂದ ಕೂಡಿದ ಮುಖದಿಂದ ಶ್ರೀನಿವಾಸಯ್ಯನ ಹತ್ತಿರ ಬಂದನು. ಬಂದವನೇ 'ಏನಪ್ಪಾ, ನೀನು ಇಲ್ಲಿಗೆ ಯಾತಕ್ಕೆ ಬಂದಿದ್ದು. ಮಡಿಕೇರಿಗೆ ಬರುತ್ತೀನೆಂದು ಒಂದು ಕಾಗದವನ್ನು ಬರೆಯಬೇಡವೆ? ಹೀಗೆ ನನ್ನ ಸ್ನೇಹಿತರೊಡನೆ ನೀವಾಗ ನೀನು ಮೂಣಂಲಿನ ವರೆಗೆ ಒಂದು ಹಂಚೆಯನ್ನಷ್ಟಿಟ್ಟಕೊಂಡು ಬಂದು ನನ್ನ ಮರ್ಯಾದೆಯನ್ನು ಹಾಳು ಮಾಡಿಬಿಟ್ಟೆ. ಇನ್ನು ನಾನು ನನ್ನ ಸ್ನೇಹಿತರಿಗೆ ಹ್ಯಾಗೆ ಹ್ಯಾಗೆ ಮುಖವನ್ನು ತೋರಿಸುವುದು ಎಂದು ಗದರಿಸಿದನು. ಶ್ರೀನಿವಾಸಯ್ಯನಿಗೆ ಮಗನ ಕೋಪಕ್ಕೆ ಕಾರಣ ತಿಳಿಯದೆ ಬೆರಗಾಗಿ ನಿಂತುಕೊಂಡನು. ಮತ್ತೆ ನಾಡಲು ಬಾಯಿಯಿಂದ ಶಬ್ದಗಳೇ ಹೊರಡಲಿಲ್ಲ.

ಆಗ ಶ್ರೀನಿವಾಸಯ್ಯನ ಸಂಗಡವಿದ್ದ ಮುದ್ದಣ್ಣನು ಯಿನಯ್ಯ, ಪ್ರಭಾಕರ, ಮರ್ಯಾದೆ, ಮರ್ಯಾದೆ, ಎಂದೇ ಹೇಳುತ್ತಿರುವುದಲ್ಲಾ, ಮರ್ಯಾದೆ ಮನುಷ್ಯನ ಗುಣ, ಸಡತೆ ಮತ್ತು ಯೋಗ್ಯತೆಗಳ ಮೇಲೆ ಹೊಂದಿಕೊಂಡಿದೆಯೋ ಅಧಮಾ ಅತನ ಉಡುಪಿನ ಮೇಲೆ ಹೊಂದಿಕೊಂಡಿದೆಯೋ?

ಪ್ರಭಾಕರನ —"ನೀವು ಬಳಬರು. ನಿಮಗೇನು ಗೊತ್ತು. ಈಗ ಕೃಮ. ಈಗ ಬೇಕಾಗಿರುವುದು ಒಂದೇ ಉಡಿಗೆ ತೊಡಿಗೆ. ಸಂತಗಿನಲ್ಲಂತೂ ಕಾಲಿಗೆ ಶೂ, ತಲೆಗ ಹ್ಯಾಟು ಜಾಕೀಟ್ಗಳಿದ್ದರೆ ವಿದ್ವತ್ತನ್ನು ಹೊಕನಾಡಿಗಾವರು ಗಾರ? ಇನ್ನು ಸೂಟು ಹಾಕದ್ದಿಗೆ ಹೋಟೆಲಿನಲ್ಲಿ ಗಸ್ಟ ನಮಗೆ ಒಳ್ಳೇ ಕಣಿಸಿಗವುದಲ್ಲ ಎಂದನು. ಆ ಷ್ಟರಲ್ಲಿ ಪ್ರಭಾಕರನ ಸ್ನೇಹಿತರು ಈ ವರು ಅಲ್ಲಿಗೆ ಬಂದು ಪಾಪ ಕನಸ್ಸನ್ನು ನೋಡಿ ಇಷ್ಟು ಹಾಸ್ಯದ ನಗವನ್ನು ನನ್ನರು. ಆಗ ಮುದ್ದಣ್ಣ ಅವರನ್ನು ನೋಡಿ "ನಗಬೇಡಿ ಮಕ್ಕಳೇ, ಸ್ವಲ್ಪ ನಿನ್ನ ಸೂ

ಮತ್ತೊಂದು ಉಜ್ವಲ ವರ್ಷ.

1948ನೇ ವರ್ಷದ್ದುವಾರ್ಷಿಕ ವರದಿಯ ಪ್ರಾಮುಖ್ಯಾಂಶಗಳು.

ಹೊಸ ಉದ್ಯಮ ರೂ. .... 6,13,00,000 ಮೊದಲಿದೆ.
ಜಾಲ್ತಿಯಲ್ಲಿರುವ ಒಟ್ಟು ಉದ್ಯಮ ರೂ. .... 27,73,00,000 ,,
ಒಟ್ಟು ನಿಧಿ. ರೂ. .... 8,30,00,000 ,,
ಸಾ ಪಿತವಾದಂದಿನಿಂದ ಪಾವತಿಯಾದ ಕ್ಲೈಮುಗಳು 10,96,00,000 ,,
1,28,000 ಕ್ಕೆ ಮೊದಲಿದ ಕ್ಲೈಮ್ ಪಡೆದ ಪಾಲಿಸಿದಾರರು.

ಶಕ್ತಿ. ಸೇವೆ ಭದ್ರತೆ.

ಎಂಪೈರ್ ಆಫ್ ಇಂಡಿಯಾ
ಲೈಫ್ ಎಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ,—1897
ಹೆಡ್ ಆಫೀಸ್: ಬಾಂಬೆ.
ಪ್ರಧಾನ ಕಛೇರಿ: ಜನರಲ್ ಮೇನೇಜರ್.
ಶಾಖಾ ಕಛೇರಿ.

ಎಂಪೈರ್ ಹೌಸ್, ಡಾರ್ಸಿ ರೋಡ್, ಫೋರ್ಟ್, ಬೊಂಬೆ.
ತಿಮ್ಮಿಕ್ಟ್ ಬಿಲ್ಡಿಂಗ್, ಕೆಂಪೇಗೌಡರಸ್ತೆ, ಬೆಂಗಳೂರು.

ದಿ ಟ್ರಾಪಿಕಲ್
ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮೇನೇಜಿಂಗ್ ಡೈರೆಕ್ಟರ್:— ಲಾಲ ಶಂಕರ್ ಲಾಲ್.
ಮುಖ್ಯ ಕಚೇರಿ:— ಹೊಸ ದೆಲ್ಲಿ.
ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ಮೋತಿಲಾಲ್ ನೆಹರು. ಎಸ್. ಶ್ರೀನಿವಾಸ ಅಯ್ಯಂಗಾರ್
ಹಕೀಮ್ ಅಜಮಲ್‌ಖಾನ್. ಡಾ|| ಎಂ. ಎ. ಅನ್ಸಾರಿ.

Transacts:—Life, Fire, Motor and Marine.

ಯಂ. ಯಂ. ಅಜ್ಜಂಜಿ, ಪಬ್ಲಿಸಿಟಿ ಸುಪರಿಂಟೆಂಡೆಂಟ್, ಮಡಿಕೇರಿ, ಕೊಡಗು.
ಎಂ. ಎ. ಬೆಳ್ಯಪ್ಪ, ಬ್ರಾಂಚ್ ಸೆಕ್ರೆಟರಿ, ಹಂಪನಕಟ್ಟೆ, ಮಂಗಳೂರು.

ಕೊಡಗು ಪ್ರಾಂತೀಯ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೊ.ಪ್ರಾಂತೀಯ ಸಹಕಾರಿ ಬ್ಯಾಂಕ್ ಲಿಮಿಟೆಡ್ ಪ್ರಧಾನ ಕಚೇರಿ. (1931ರಲ್ಲಿ ಸ್ಥಾಪಿತವಾಗಿದೆ.

ಅಧಿಕೃತ ಶೇರು ಧನಮೊತ್ತ ರೂ. 10,00,000.
ವಸೂಲಾದ ಶೇರು ಮೊಬಲಗು ರೂ. 1,79,000.
ಕ್ಷೇಮನಿಧಿ ರೂ. 53,000.
ಇತರ ನಿಧಿಗಳು ರೂ. 28,000.

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯಾ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಾನ್ಸಿಟ್ ಮತ್ತು ವಾರ್ಡ್ಸ್ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನೂ ಹೊಂದಿಕೊಳ್ಳಲಾಗುವುದು. ಹೆಚ್ಚಿನ ವಿವರಗಳನ್ನು ಅಧಿಕಾರಿಯಿಂದ ತಿಳಿದುಕೊಳ್ಳಬಹುದು

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ.
ಕೆ. ಪಿ. ಅಪ್ಪಯ್ಯ, ಬಿ. ಎ. ಬಿ. ಎಲ್. ಅಧ್ಯಕ್ಷರು ಮತ್ತು ಮೇನೇಜರ್.

The Popular Insurance Company Ltd.

Established over 20 years ago, the Company is noted for its sound progress, careful management and efficient service to its constituents.

Agents on permanent and remunerative contracts are wanted in COORG. Apply today

Head Office:
MANGALORE
26-19

K. M. Bopaiah, Esq.,
Branch Secretary for Mysore & Coorg,
85 Sultanpet, BANGALORE 2.

Edited, Printed and Published by P. I. Bellippa at 'Kodagu' Press, Mercara, for 'Kodagu' Ltd.

ತುಗಳನ್ನು ಕೇಳಿ ಆಮೇಲೆ ನಿಮಗೆ ತೋರಿದಂತೆ ಮಾಡಿ" ಎಂದನು. ಅವನ ಮುಖದಲ್ಲಿ ಅಕರ್ಮಕ ತೇಜಸ್ಸು ಇದ್ದುದರಿಂದ ಅವನ ಮಾತುಗಳನ್ನು ಮೀರಿ ಹೋಗಲು ಅವರಿಗೆ ಧೈರ್ಯ ಬರಲಿಲ್ಲ. ಆಗ ಮಂದುಕನು "ನೋಡಿ, ಮಕ್ಕಳೇ, ನೀನೇ ನಮ್ಮ ಮುಂದಿನ ಜನಾಂಗ ನಮ್ಮ ಹಿಂದೂದೇಶದ ಉನ್ನತಿ ಅವನತಿಗಳು ನಿಮ್ಮ ಕೈಯ್ಯಲ್ಲಿವೆ. ತಮ್ಮ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದಂದಿನಿಂದ ನಿಮ್ಮ ಜವಾಬ್ದಾರಿಯು ಹೆಚ್ಚಾಗಿದೆ. ಒಂದು ದೇಶದ ಉನ್ನತಿಯು ಆ ದೇಶದ ಜನರ ಶೀಲ ಸ್ವಭಾವಗಳ ಮೇಲೆ, ದಕ್ಷತೆಯ ಮೇಲೆ ಹೊಂದಿಕೊಂಡಿದೆ. ಹಣಕ್ಕೆ ಈಗ ನಿಮ್ಮ ವರ್ತನೆಯು ಪ್ರಮಾಣವನ್ನುಂಟು ಮಾಡಿದೆ. ನೀವು ಸ್ವಾತಂತ್ರ್ಯವೆಂದರೆ ಧಿಮ್ಮ ಮನಸ್ಸು ಬಂದಂತೆ ವರ್ತಿಸುವುದು ಎಂದು ತಿಳಿದುಕೊಂಡಂತೆ ತೋರುತ್ತಿದೆ. ಈ ಸಮಯ ನಿಮ್ಮ ಜೀವನದ ಅಮೂಲ್ಯವಾದ ಕಾಲ. ನಿಮ್ಮ ಜೀವನದ ಧ್ಯೇಯವು ಸರಳ ಜೀವನ, ಉನ್ನತ ವಿಚಾರವಾಗಿರಬೇಕು. ಆದರೆ ನಾನು ಈಗ ನೋಡುತ್ತಿರುವುದೇನು? "ಅಲ್ಪ ವಿಚಾರ, ಆಡಂಬರದ ಜೀವನವನ್ನು!" ನೀವು ಅಂದವಾಗಿ ದೇಹಾಲಂಕಾರ ಮಾಡಬಾರದೆಂದಲ್ಲ. ಆದರೆ ಅದಕ್ಕೆ ತಕ್ಕ ಸಮಯವಿದೆ. ಮೊದಲು ನಿಮ್ಮ ವ್ಯಾಸಂಗದಲ್ಲಿ ಮಗ್ನರಾಗಿ. ದೇಹಾಲಂಕಾರಕ್ಕಿಂತಲೂ ನಿಮ್ಮ ಬುದ್ಧಿ ಶಕ್ತಿಯನ್ನು ಬೆಳಗಿಸಿರಿ. ನೀವು ನಿಮ್ಮ ವ್ಯಾಸಂಗದಲ್ಲಿ ಪ್ರವೀಣರಾಗಿದ್ದು ಉತ್ತಮ ಶೀಲವುಳ್ಳವರಾದರೆ ನಿಮ್ಮ ಕಾಲೇಜಿಗೆ ಹೆಸರು ತರುವಿರಿ. ಅದರಿಂದ ದೇಶದ ಹಿರಿಮೆಯೂ ಹೆಚ್ಚುವುದು ನೀವು ಸರಳ ಜೀವನ, ಸಾತ್ವಿಕ ಸ್ವಭಾವ, ಆತ್ಮ ಸಂಯಮನಗಳಿಂದ ಇದ್ದು ಶ್ರದ್ಧೆಯಿಂದ ವ್ಯಾಸಂಗ ಮಾಡಿ. ಆಗ ನಿಮ್ಮ ತೀರ್ಮಯು ಶೋಭಿಸುವುದು". ಪುತ್ರವು ಸುವಾಸನೆಯುಳ್ಳದಾಗಿದ್ದರೆ. ಜನರು ಅದನ್ನು ಮೆಚ್ಚುವುದಿಲ್ಲವೇ? ನೆಹರೂ, ರಾಜಾಜಿಯಂಥಾ ನಮ್ಮ ಧುರೀಣರು ತಮ್ಮ ಮೇಧಾ ಶಕ್ತಿ, ಸ್ವಾರ್ಥ ತ್ಯಾಗ ಮೊದಲಾದುವುಗಳಿಂದ ಜನ ಮೆಚ್ಚುಗೆಯನ್ನು ಪಡೆದವರಲ್ಲವೆ? ಆಡಂಬರ ಜೀವನದಿಂದ ಪುಣ್ಯಾತ್ಮರಾದರೇ?

ಈ ಮಾತುಗಳನ್ನು ಕೇಳಿ ಅಲ್ಲಿದ್ದ ವಿದ್ಯಾರ್ಥಿಗಳಿಗೆ ತಮ್ಮ ಮನಸ್ಸಿನಲ್ಲಿದ್ದ ಅಜ್ಞಾನವು ಕಳೆದು ಸೂರ್ಯಪ್ರಕಾಶ ಉಂಟಾಯಿತು. ಆ ಮಂದುಕನನ್ನು ಉಪಹಾಸ್ಯ ಮಾಡಬೇಕೆಂದಿದ್ದವರು ಗೋಲ್ಡ್ ಸ್ಮಿತ್ ಕವಿ ಎಂದ ಹಾಗೆ 'Those who came to scoff remained to pray' ಎಂಬಂತೆ ಭಕ್ತಿಯಿಂದ ಅವನಿಗೆ ನಮಸ್ಕರಿಸಿದರು.

ಪ್ರಭಾಕರನೂ ಅವನ ಸ್ನೇಹಿತರೂ ಅಂದಿನಿಂದ ಸರಳ ಜೀವನಕ್ಕಾಗಿ ಪಾಠಗಳಲ್ಲಿ ಹಿಂದಿದ್ದವರು ಚೆನ್ನಾಗಿ ವ್ಯಾಸಂಗ ಮಾಡಿ ತಮ್ಮ ಮೇಧಾಶಕ್ತಿಯಿಂದ ತಮ್ಮ ಉಪಾಧ್ಯಾಯರನ್ನೂ ವಿದ್ಯಾರ್ಥಿಗಳನ್ನೂ ಮೆಚ್ಚುಗೊಳಿಸಿದರು. ಪ್ರಭಾಕರನು ಆ ಮುದುಕನನ್ನು ತನ್ನ ಭಾಗದ ದೇವರು ಎಂದುಕೊಂಡಿದ್ದನು!

ವಾರ್ತೆಗಳು.

ಶಾತಿಯ ಒಬ್ಬ ದರ್ಜಿಯವನನ್ನು ತನ್ನ ನಾಯಿಗೆ ಸ್ಕೇಲಿನಿಂದ ಗಡಿಯಾರ ರಿಪೇರಿಯನ್ನು ಮಾಡಿಸಿಕೊಟ್ಟನ ಬಳಿಯಲ್ಲಿದ್ದ ಒಂದು ನಾಯಿಯನ್ನು ತಂದುಕೊಂಡು ಆ ಎರಡು ನಾಯಿಗಳ ವಿವಾಹವನ್ನು ವಿಜೃಂಭಣೆಯಿಂದ ನೆರವೇರಿಸಿದ. ಈ ವಿವಾಹಕ್ಕಾಗಿ ಆತ ೩೦೦ ರೂಪಾಯಿಗಿಂತ ಹೆಚ್ಚು ಖರ್ಚು ಮಾಡಿದ. ಅನೇಕರಿಗೆ ಅನ್ನದಾನ ಮಾಡಿದ ರಸ್ತೆಗಳಲ್ಲಿ 'ನವದಂಪತಿಗಳ' ಮೆರವಣಿಗೆಯು ನಡೆಯಿತು.

ಪ್ರತಿ ಒಬ್ಬನಿಂದ ಹತ್ತು ರೂಪಾಯಿಗಳ ಪ್ರವೇಶ ಶುಲ್ಕವನ್ನು ತೆಗೆದುಕೊಂಡು ಕಾಂಗ್ರೆಸ್ಸಿನ ವಾರ್ಷಿಕಾಧಿವೇಶನಕ್ಕೆ ಪ್ರತಿ ಪ್ರಾಂತದ ೧೦೦ ಜನ ವಿಶ್ವಾಸಿಕ ಕಾಂಗ್ರೆಸ್ ಕಾರ್ಯಕರ್ತರಿಗೆ ಬರಲು ಅವಕಾಶ ಕೊಡಬೇಕೆಂದು ನಾಸಿಕ ಕಾಂಗ್ರೆಸ್ ಅಧಿವೇಶನದ ಸ್ವಾಗತ ಸಮಿತಿಯು ನಿರ್ಧರಿಸಿದೆ. ಇಂಥವರಿಗೆ ಗಾಂಧಿ ನಗರದಲ್ಲಿ ಊಟ ವಸತಿಗಳ ವ್ಯವಸ್ಥೆಯಿದ್ದರಿಂದ ವಂಬಾಯಿ ಮೈಲು ದೂರದಲ್ಲಿರುವ ನಗರದಲ್ಲಿಂಬಾಲಾ ಛಟ್ಟಡಗಳಲ್ಲಿ ಸ್ಥಳ ಕೊಡಲಾಗುವುದು. ಮಳೆ ಪುಕ್ಕಟೆ ದೊರೆಯುತಿದ್ದು ಊಟಕ್ಕಾಗಿ ಹಣ ಕೊಡಬೇಕಾಗುವುದು.

ಉತ್ತರ ಪ್ರದೇಶದಲ್ಲಿ ಎಂಟು ನದಿಗಳಲ್ಲಿ ಪ್ರವಾಹ ಹೆಚ್ಚಿ ಪ್ರಾಂತದ ಪೂರ್ವ ಜಿಲ್ಲೆಗಳಲ್ಲಿ ೩೩೦೦ ಗ್ರಾಮಗಳು ನೀರಿನಲ್ಲಿ ಮುಳುಗಿವೆ ಬೆಳೆಯಿದ್ದ ಸುಮಾರು ೮ ಲಕ್ಷ ಎಕರೆ ಭೂಮಿಯು ಈ ರೀತಿ ನೀರಿನಲ್ಲಿ ಮುಳುಗಿದೆ. ಈ ಪ್ರವಾಹದಿಂದ ೫ ಕೋಟಿ ರೂಪಾಯಿಗಳಷ್ಟು ನಷ್ಟವಾಗಿದೆಯೆಂದೆ ಅಂದಾಜಾಗಿದೆ. ೬ ಲಕ್ಷ ಜನರು ಈ ಪ್ರವಾಹದಿಂದ ತೊಂದರೆಗೊಳಗಾಗಿದ್ದಾರೆ.

ಅಕ್ಟೋಬರ್ ೧೫ರಿಂದ ಕೆಲ ಪ್ರಮುಖ ನಗರಗಳಲ್ಲಿ ಅಂಚೆ ತಂತಿ ಕಚೇರಿಗಳನ್ನು ಇನ್ನು ಹೆಚ್ಚು ಅವಧಿಯ ವರೆಗೆ ಮತ್ತು ಆದಿತ್ಯವಾರವೂ ತೆರೆದಿಡಲು ಸರಕಾರದವರು ನಿರ್ಧರಿಸಿ ಪ್ರಕಟಣೆ ಹೊರಡಿಸಿದ್ದಾರೆ. ಕಲ್ಕತ್ತ ಬಾಂಬಯಿಯ ಬಾ, ಮದರಾಸಿನ ಬಾ, ದಿಲ್ಲಿ, ಹೊಸದಿಲ್ಲಿ, ಹೈದರಾಬಾದ, ಕಾನಪುರ, ಅಹಮದಾಬಾದಗಳಲ್ಲಿಯ ಒಂದೊಂದು ಕಚೇರಿಯಲ್ಲಿ ಈ ಪ್ರಯೋಗ ಮಾಡಿ ನೋಡಲಾಗುವುದು. ರಾತ್ರಿ ೧೦ರ ವರೆಗೆ ರಿಜಿಸ್ಟರ್ಡ್ ಮಕ್ಕುಗಳನ್ನು ತೆಗೆದುಕೊಳ್ಳುವುದು, ಸ್ಟಾಂಪು ಮತ್ತು ಪೋಸ್ಟಲ್ ಆರ್ಡರ್ ಕೊಡುವುದು ತಂತಿ ಮನಿಯಾರ್ಡರ್ ಸ್ವೀಕರಿಸುವುದು ಮೊದಲಾದ ಕೆಲಸ ನಡೆಯುವುದು.

ನೇಪಾಲದ ಮಲಂಗ್ವಾ ಸೀಮಾಪ್ರದೇಶದಲ್ಲಿ ಜುಲೈ ತಾ ೩೦ರಿಂದ ಅನ್ನಸಾಮ್ರಾಗ್ರಹ ಕೈಕೊಂಡಿದ್ದ ನೇಪಾಲ ಕಾಂಗ್ರೆಸ್ ಸ್ಥಾಪನ ಬಿದ್ದ ಕೈದಿ ಶ್ರೀ. ಕೃಷ್ಣ ಪ್ರಸಾದ ಶರ್ಮಾ ಎಂಬವರು, ಜೈಲಿನಲ್ಲಿ ವ್ಯಕ್ತಪಟ್ಟರು. ನೇಪಾಲ ಜೈಲಿನಲ್ಲಿ ರಾಜಕೀಯ ಕೈದಿಗಳ ಸ್ಥಿತಿ ಸುಧಾರಣೆ ಹೊಂದಬೇಕೆಂದು ಅವರು ನಿರಶನ ವ್ರತ ಕೈಕೊಂಡಿದ್ದರು.

Reg. No. M. 1589.
'KODAGU' MERCARA. (Coorg).

ಕೊಡಗು

ಸಂಪಾದಕರು—ಪಿ. ವಿ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.

ಸಂಪುಟ ೭ | ತಾರೀಕು ೮-೯-೧೯೩೦ನೇ ಶುಕ್ರವಾರ | ಸಂಚಿಕೆ ೧೪

ಹರಿಜನ ಅಗ್ರಲೇಖ

ಆಹಾರೋತ್ಪಾದನಕ್ಕೆ ಬೇಕಾದ ಅನುಕೂಲಗಳು

ಶ್ರೀ. ಕೆ. ಫ್. ಮಕ್ಕಪ್ಪಾಲಾ

ನಾವು ಆಹಾರ ಸಂಕಟವನ್ನು ಪರಾಮರ್ಶಿಸತೊಡಗಿ ಬಂದಿದ್ದೇವೆ. ಇದರಲ್ಲಿ ಮೂರ್ನಿಜಂ ನಮಗೊಂದು ಮಬ್ಬುಬಾದ ಪಾಠವನ್ನು ಕಲಿಸಬಲ್ಲದು. ನಮ್ಮ ಯೋಜನೆಗಳೂ ಕಲ್ಪನೆಗಳೂ ಬಹಳ ವಿವೇಕಯುಕ್ತ, ಪರಿಪೂರ್ಣ ಮತ್ತು ಪರಹಿತಕರ ಎನಿಸಿದ್ದರೂ ಈ ಯೋಜನೆ ಮತ್ತು ಕಲ್ಪನೆಗಳಿಗೆ ಜೀವನದ ಭೌತಿಕ ಪರಿಸ್ಥಿತಿಯು ಅನುಕೂಲವಾಗಿಲ್ಲವೆಂದೂ ಇಷ್ಟೆ ಪರಿಣಾಮಗಳನ್ನು ನಿರೀಕ್ಷಿಸುವ ಮೊದಲು ಇವನ್ನು ಸರಿಪಡಿಸಿಕೊಳ್ಳಬೇಕೆಂದೂ ನಾವು ಗಮನಿಸಬೇಕಾಗಿದೆ. ಮೂರ್ನಿಜಮ್ಮಿನ ಭೌತಿಕ ವಿವೇಕ ಮುಂಬರಿದು ಹೇಳುವುದೇನೆಂದರೆ—

'ಸಮೂಹದ ಭೌತಿಕ ಜೀವನವು ವಸ್ತುನಿಷ್ಠ ಸತ್ಯಾಂಶ; ಅದೇ ಮನುಷ್ಯರ ಇಚ್ಛೆಯಿಂದ ಸ್ವತಂತ್ರವಾಗಿರುತ್ತದೆ. ಸಮೂಹದ ಆಧ್ಯಾತ್ಮಿಕ ಜೀವನವಾದರೋ ಈ ವಸ್ತುನಿಷ್ಠ ಸತ್ಯಾಂಶದ ಪಡಿನೆಲೆಲು, ಒಂದು ಆಸ್ತಿತ್ವದಲ್ಲಿರುವ ವೈಕ್ತಿವಿಷಯದ ಪ್ರತಿಬಿಂಬ.

'ಆದುದರಿಂದ ಸಮೂಹದ ಆಧ್ಯಾತ್ಮಿಕ ಜೀವನದ ರಚನೆಯು ಆಗರವನ್ನು—ಸಾಮೂಹಿಕ ಕಲ್ಪನೆಗಳ ಮತ್ತು ಸಿದ್ಧಾಂತಗಳ, ರಾಜಕೀಯ ಅಭಿಪ್ರಾಯಗಳ ಮತ್ತು ಸಂಸ್ಥೆಗಳ ಜನ್ಮಸ್ಥಾನವನ್ನು ಸಮೂಹದ ಭೌತಿಕ ಜೀವನದ ಪರಿಸ್ಥಿತಿಯಲ್ಲಿಯೇ ಹುಡುಕಹೋಗಬೇಕು, ಸಾಮೂಹಿಕ ಆಸ್ತಿತ್ವದಲ್ಲಿಯೇ ಕಂಡುಹಿಡಿಯಬೇಕು. ಏಕೆಂದರೆ ಈ ಕಲ್ಪನೆ, ಸಿದ್ಧಾಂತ, ಅಭಿಪ್ರಾಯ, ಮುಂತಾದವೆಲ್ಲ ಆಗರ ಸ್ವತಿಬಿಂಬಗಳೇ' 'ಸಮೂಹದ ಭೌತಿಕ ಜೀವನದ ಪರಿಸ್ಥಿತಿ' ಎಂದರೆ 'ಮನುಷ್ಯರ ಬದುಕಿಗೆ ಅವಶ್ಯವಾದ ಜೀವನ ಸಾಧನವನ್ನು ಪಡೆಯುವ ಕ್ರಮ—ಆಹಾರ, ವಸ್ತ್ರ, ಪಾದರಕ್ಷೆ, ಮನೆ, ಸಾಮಿ, ಉತ್ಪಾದನ ಸಾಧನ ಮುಂತಾದ ಸಮೂಹದ ಬೆಳವಣಿಗೆಗೆ ಅಪರಿಹಾರ್ಯ ಅನಿಷ್ಟಕತೆಗಳಿನಿಸಿದ ಭೌತಿಕ ಮೂಲ್ಯಗಳ ಉತ್ಪಾದನೆಯ ರೀತಿ' ಎಂದು ಅರ್ಥ ಮಾಡಲಾಗಿದೆ.

'ಒಂದು ಸಮೂಹದ ಉತ್ಪಾದನೆಯ ರೀತಿ ಹೇಗೇ ಇರಲಿ. ಸಮೂಹವೆಂದರೆ, ಅದರ ಕಲ್ಪನೆ ಮತ್ತು ಸಿದ್ಧಾಂತಗಳೆಂದರೆ, ರಾಜಕೀಯ ಅಭಿಸಂಧಿ ಮತ್ತು ಸಂಸ್ಥೆಗಳೆಂತಹರೆ ಮುಖ್ಯವಾಗಿ ಹೀಗೇ ಇರುತ್ತವೆ' ಎಂಬ ಮಾರ್ಕ್ಸಿಜಮ್ಮಿನ ಅಚಲ ಶ್ರದ್ಧೆಯಿಂದ ಸಮೂಹದ ಉತ್ಪಾದಕ ಶಕ್ತಿಗಳು ಸರಿಯಾದ ಸಂಘಟನೆ ಪೂಡುವುದರ ಮೇಲೆ ಸ್ಟಾಲಿನ್ನರು ಹೆಚ್ಚಿನ ಭರವಸೆಯನ್ನಿಟ್ಟುಕೊಂಡಿದ್ದಾರೆ. (ಎಲ್ಲ ಉದ್ದೃತ ವಾಕ್ಯಗಳನ್ನೂ ಸ್ಟಾಲಿನ್ನರ 'ತಾರ್ಕಿಕ ಮತ್ತು ಐತಿಹಾಸಿಕ ಭೌತವಾದ' ಎಂಬ ಗ್ರಂಥದಿಂದ ಎತ್ತಿ ತೂಳ್ಳಲಾಗಿದೆ.)

ಮೇಲಿನ ಸಿದ್ಧಾಂತದಲ್ಲಿಯ ಸತ್ಯಾಂಶಗಳನ್ನು ಸ್ವೀಕರಿಸಲು ಯಾವನಾದರೂ ಕಸ್ಯೂನಿಸ್ಟನೇ ಆಗಬೇಕೂ ಎಂಬುದೇನೂ ಇಲ್ಲ

ಬಹಳ ಆಹಾರ ಬೆಳೆಸಬೇಕು, ಅದು ಸುಲಭ ಬೆಲೆಗೆ ದೊರಕುವಂತಾಗಬೇಕು. ಎಂದಿದ್ದರೆ 'ಸಮೂಹದ ಉತ್ಪಾದಕ ಶಕ್ತಿಗಳನ್ನು ಯುಕ್ತ ವ್ಯವಸ್ಥೆಗೊಳಪಡಿಸಬೇಕಾದುದು ಬಹಳ ಮಹತ್ವದ್ದು. ನಮ್ಮ ರಾಜಕೀಯ ಸಾಮಾಜಿಕ ಮತ್ತು ಆರ್ಥಿಕ ಪದ್ಧತಿಗಳೂ ಕಾರ್ಯಪ್ರಾಲಿಕೆಯ ಅದೇಶಗಳೂ ಘೋರಣೆಗಳೂ ಈ ಗುರಿಯನ್ನು ಹೇಗೆ ಅನಲಂಬಿಸಿವೆಯೆಂಬುದನ್ನು ನಾವು ಪರಿಶೀಲಿಸಬೇಕು.

ಭಾರತದ ಬಹು ಸಂಖ್ಯಾಕರು ಕೃಷಿಶ್ರಮದಿಂದಲೇ ಬದುಕುತ್ತಾರೆ ಎಂಬುದನ್ನು ಈ ಮೊದಲು ಬರೆಯಲಾಗಿದೆ. ಆದರೆ ಅವರಲ್ಲಿ ಅತ್ಯಲ್ಪಸಂಖ್ಯಾಕರು ನೂತ್ರ ಭೂಮಿಯ ಒಡೆಯರು. ಮಿಕ್ಕವರು ಇನ್ನೊಬ್ಬರ ಹೊಲಗದ್ದೆಗಳಲ್ಲಿ ರೊಕ್ಕದ ಮಜೂರರಾಗಿ, ಅರೆಗುಲಾಮಿ ಮಜೂರರಾಗಿ, ಗೇಣಿಯ ಒಕ್ಕಲಾಗಿ ಅಧವಾ ಬೆಳೆಯ ಪಾಲುಗಾರ ಒಕ್ಕಲಾಗಿ ಕೆಲಸ ಮಾಡುತ್ತಾರೆ. ತಮ್ಮ ನೆಲವನ್ನು ತಮ್ಮ ಕಾಟುಂಬಿಕರ ನೆರವಿನಿಂದ ಸಂಬಳದ ಆಳುಗಳನ್ನು ಇಟ್ಟುಕೊಳ್ಳದೆಯೇ ಸಾಗು ಮಾಡುವ ಕೃಷಿಕರ ಸಂಖ್ಯೆ ಅತ್ಯಲ್ಪ. ಗೇಣಿದಾರ ಪಾಲುಗಾರರಲ್ಲಿಯೂ ಬಹುಸಂಖ್ಯಾಕರು ಆಗಾಗ ಮಜೂರರನ್ನು ನಿಯಮಿಸಿಕೊಳ್ಳಬೇಕಾಗುತ್ತದೆ

ನಿಜ ಕೃಷಿಕರು.

ನೆಲವನ್ನು ಉತ್ತು, ಬಿತ್ತಿ, ಕಳೆಕಿತ್ತು, ಬೆಳೆ ಸಂಗ್ರಹಿಸುವವರು ಈ ಜನರೇ. ಇವರು ತಮಗೆ ಲಭ್ಯವಾದ ಸಲಕರಣೆಗಳಿಂದ, ಕ್ರಮಬದ್ಧ ಕರಬೇತಿಯಿಲ್ಲದೆ ಪರಂಪರಾಗತ ಮೂಲ ಶ್ರುತ್ಯಕ್ತಿಗಳ ಪ್ರಕಾರ ಮೇಲಿನ ಕಾರ್ಯಗಳನ್ನು ಮಾಡುತ್ತಾರೆ

ಈ ಮಾನವ ಸಾಮಗ್ರಿಯಿಂದಲೇ ನಾವಿಂದು ತಮ್ಮ ಆಹಾರವನ್ನು ಬೆಳೆದು ತೊಳ್ಳಬೇಕಾಗಿದೆ. ಈ ವರ್ಗಕ್ಕೆ ತಾವು ಬೆಳೆದ ಆಹಾರ ತಮ್ಮ ಬಳಕೆಗೇ ಬೇಕಾಗಿರುವುದು.

ನನ್ನ ರಾಜಕೀಯ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಗಳು ಈ ಜನರಿಗೆ ತಮ್ಮ ಕಲಸವಲ್ಲಿ ಅಶಕ್ತಿ ವಹಿಸುವಂತೆ ಮಾಡಬಲ್ಲವಾಗಿರುವನೇ? ತಾವು ಬೆಳೆದ ಆಹಾರ, ಹತ್ತಿ, ಒಟ್ಟು, ಎಣ್ಣೆ (ಅಥವಾ ಇನ್ನಿತರ ಯಾವುದೂ ಸರಿಯೇ,) ಕಾಯಿಪಲ್ಯ ಮತ್ತ ಇತರ ಗೌಣ ಆಹಾರ ಪದಾರ್ಥಗಳಲ್ಲಿ (ಹಾಲು ಮತ್ತು ತ.ಪ್ಪಗಳನ್ನಂತೂ ಹೊರಸುವದೇ ಬೇಡ) ಎಷ್ಟನ್ನು ಇವರ ಬಳಕೆಗೆ ಸಿಗುವಂತೆ ಖಾತ್ರಿ ಮಾಡಿಕೊಡಲಾಗಿದೆ? ಬಟ್ಟೆಯನ್ನು ಬದಿಗಿಡಿರಿ, ಪ್ರತಿಫಲ ಕೊಡಬೇಕೆಂದು ಹಟಹಿಡಿದು ಘಟನೆಯ ಸಾಧನ ಅವರಲ್ಲಿಲ್ಲ. ಪ್ರಾಯಿ ವಿಗಳಾಗಿರುವುದೊತ್ತಟ್ಟಿಗಿರಲಿ—ಅವರು ಅಧಃಪತಿತರಾಗಿದ್ದಾರೆ. ಅವರು ಸಂಪೂ ಹೊಡಲಾರರು; ಅವರಿಗಿರುವ ಒಂದೇ ಒಂದು ಸಂಪನ ಮಾರ್ಗವೆಂದರೆ ಅನ್ನಶಕ್ತಿಗ್ರಹ; ಅವರಿಗೆ ಅರ್ಧೋಪವಾಸದ ಅಭ್ಯಾಸವಿದ್ದರೂ ಜೀವನದ ಬಗ್ಗೆ ಅವರಿಗಿರುವ ವ್ಯಾಮೋಹವು ಸಾಯುವ ತನಕ ಉಪವಾಸ ಮಾಡಲು ಅವರಮ್ಮ ಬಿಡದು. ಅದರೆ ತಮ್ಮ ಕೆಲಸದಲ್ಲಿ ಉತ್ಸಾಹ ತೆಗೆದುಕೊಳ್ಳುವ ಚಯಕೆಯನ್ನು ಅವರಲ್ಲಿ ಹುಟ್ಟಿಸುವಂಥ ಅನುಕೂಲ ಪರಿಸ್ಥಿತಿ ಈಗ ಇಲ್ಲವಾಗಿದೆ. ತಮ್ಮ ಕೆಲಸಕ್ಕೆ ಶಾಂತಿಷ್ಟೇ ಫಲ ಬೇಕೆಂದು ಹಟಹಿಡಿದು ಆಹಾರವಸ್ತುಗಳನ್ನೇ ತೆಗೆದುಕೊಳ್ಳೋಣ. ನಮ್ಮ ಲೆಕ್ಕ ಹೀಗಿದೆ.

ನೈಸರ್ಗಿಕ ಅವಶ್ಯಕತೆ—ಧಾನ್ಯ ೧೬ ಔನ್ಸು, ಕೊಬ್ಬು ೨ ಔನ್ಸು, ಕಾಯಿಪಲ್ಲೆ ೬ ಔನ್ಸು, ಇತರ ...

ಸದ್ಯದ ಬಳಕೆಯ ಸರಾಸರಿ—ಧಾನ್ಯ ೧೦ ಔನ್ಸು, ಕೊಬ್ಬು ಔನ್ಸು, ಕಾಯಿಪಲ್ಲೆ ೨ ಔನ್ಸು, ಇತರ ....

ನೈಸರ್ಗಿಕ ಅವಶ್ಯಕತೆಯಲ್ಲಿರಲಿ—ಇವಗಿಂತ ಮೇಲಿನ ಸರಾಸರಿ ಪ್ರಮಾಣದಲ್ಲಾದರೂ ಆಯಾ ವಸ್ತುಗಳು ಸಿಗುವುವೇ? ಹೋಗಲಿ—ಸರಾಸರಿಯನ್ನು ಸಹ ಬಿಟ್ಟು ಬಿಡೋಣ; ಇವರಿಗೆ ಆರೌನ್ಸು ಧಾನ್ಯ, ಒಂದು ಡ್ರಾಂ ಕೊಬ್ಬು ಮತ್ತು ಅರ್ಧ ಔನ್ಸು ತರಕಾರಿ ಇವಿಷ್ಟಾದರೂ ಪರ್ಮಾವಧಿ ಕಷ್ಟದೆ ಸಿಕ್ಕಾವುದೆಂದು ನಿಶ್ಚಯ ಮಾಡಿಕೊಡಲಾಗಿದೆಯೇ? ಅವನ್ನು ಕೊಳ್ಳುವ ಸಾಧನವಾದರೂ ಇವರ ಕೈಯಲ್ಲಿರುವುದೇ? ಅಥವಾ ಅದೂ ಹೋಗಲಿ ಎಂದರೆ, ಆಕ್ಯತ್ಯಮ ಬೆಳೆ ಬಂದ ಕಾಲದಲ್ಲಾದರೂ ನವದಲ್ಲಿ ಕಡೆಯ ಪಕ್ಷ ಎರಡು ತಿಂಗಳಾದರೂ ಹೊಟ್ಟೆ ತುಂಬುವಂಥ ಆಹಾರ ಸಿಕ್ಕದವರು ಇವರಲ್ಲಿ ಲಕ್ಷೋಪಲಕ್ಷ ಜನರಿಲ್ಲವೇ?

ಸರಕಾರದ ಕಳೆದ ನಾಲ್ಕು ವರ್ಷಗಳ ವಿತ್ತೀಯ ಮತ್ತು ಔದ್ಯೋಗಿಕ ಘೋರಣಗಳನ್ನು ಉದ್ಯೋಗಿಗಳೂ ಮಜೂರ ಸಂಘಗಳೂ ಒಪ್ಪಿಲ್ಲ. ಆಸಹಕಾರ, ಕಾರ್ಯ ಕಾಪಟ್ಯ, ವಿಧ್ವಂಸನ, ಮುಷ್ಕರ ಮತ್ತು ಅಗತ್ಯವಾದ ವಿವಿಧ ವಸ್ತುಗಳು ದೊರಕದ ಹಾಗೆ ಸಂಕಟವನ್ನು ತಂದೊಡ್ಡುವುದು ಮುಂತಾದ ನಾನಾ ರೀತಿಗಳಿಂದ ಆ ಘೋರಣಗಳಿಗೆ ಮಜೂರರು ತಡೆ ಹಾಕಿದರು. ಒಂದರ ಮೇಲೊಂದರಂತೆ ಅವರು ತಮಗಾಗಿ ಉತ್ತಮವಾದ ಸಾಕರ್ಯಗಳನ್ನು ಪಡೆದರು. ಸರಕಾರವನ್ನು, ಕೆಲವೆಡೆ ನಿಯೋಜಕರನ್ನು ಅವರು ಒತ್ತಾಯಿಸಿ ತಮಗೆ ಶರಣು ಬರುವಂತೆ ಮಾಡಿದರೆಂದೇ ಹೇಳಬೇಕು. ಅವರು ಧನಿಕರು, ಪ್ರಭಾವಿಗಳು, ಯಃಕ್ತಿಸಂಪನ್ನರು ಮತ್ತು ಸಂಘಟಿತರು ಎನಿಸಿದ್ದಾರೆ. ತಮ್ಮ ಮಾತಿಗೆ ಬೆಲೆ ಬರುವಂತೆ ಮಾಡುವಷ್ಟು ಅವರು ಬಲಿಷ್ಠರೂ ವಾಕ್ಚಟುಗಳೂ ಆಗಿದ್ದಾರೆ.

ನೆಲಗೆಲಸಿಗರು ಅಸಂಘಟಿತರು.

ಒಕ್ಕಲುತನದ ಮಜೂರರು ಅಂಥವರಲ್ಲ. ಅವರು ಬಡವರು, ಅಜ್ಞರು; ಸಂಪಡೆಯುವಷ್ಟು ಸಾಮರ್ಥ್ಯವಿಲ್ಲದವರಿಂದ ಅವರು ಲೋಪನೀತಿಯನ್ನು ಪೂರ್ತಿ ಹಿಡಿಯುತ್ತಾರೆ. ಅವರು ಕೆಲಸ ಮಾಡಲುಪಕ್ರಮಿಸುವುದು ಒಗ್ಗಾಲಿಯ ಸೈಕಲ್ಲಿನ ರೀತಿಯಲ್ಲಿ; ಅಂದರೆ, ಮೇಲೆ ಕುಳಿತವನು ಪೆಡಲು ಹೊಡೆಯುತ್ತಲೇ ಇದ್ದರೆ ನೂಕ್ಕು ಮುಂದೆ ಹೋಗುವುದು; ಒಂದು ನಿಮಿಷ ಅವನು ನಿಲ್ಲಿಸಿದನೆಂದರೆ ಬೀಳುತ್ತಾನೆ ಅಥವಾ ಸೈಕಲ್ಲು ನಿಂತು ಬಿಡುತ್ತದೆ. ಅವನು ಕೆಳಗಿಳಿದು [illegible] ಬೇಕು!

ಭಾರತವು ಆಹಾರದಲ್ಲಿ ಸ್ವಯಂಪೂರ್ಣವಾಗಲೇಬೇಕೆಂಬುದರಲ್ಲಿ ಭಿನ್ನಾಭಿಪ್ರಾಯವಿರಕೂಡದು. ಇನ್ನು ಆಹಾರದಲ್ಲಿ ಕಾಳುಗಳೂ ಬೇಳೆಗಳೂ ಗೌರವದ ಸ್ಥಾನವನ್ನು ಆಕ್ರಮಿಸಬೇಕು. ಉಳಿದೆಲ್ಲವನ್ನೂ ತಡೆಹಿಡಬಹುದು. ನವಗೆಲ್ಲರಿಗೂ ಇದು ಹೊಸದೆಂದು ಸಮೂಧಾನವಾಗಿದೆಯೇ? ಸರಕಾರದ ಘೋರಣವು ಆನೇಕ ಬೇಳೆ ಬದಲಾಗತ್ತ ಹೋಗಿದೆ; ಆ ಬದಲಾವಣೆಗಳನ್ನು ನೋಡಿದರೆ ಮುಖ್ಯಾಹಾರವೇ ಗೌಣಾಹಾರಕ್ಕಿಂತ-ಹತ್ತಿ, ಸಣಬು, ತಂಬಾಕು, ನೆಲಗಡಲೆ, ಕಬ್ಬು ಮುಂತಾದವಕ್ಕಿಂತ ಹೆಚ್ಚು ಗೌಣ ಎಂದು ಎಣಿಸಿದಂತೆ ತೋರುತ್ತದೆ.

ಆಹಾರದ ಉತ್ಪಾದಕನೇ ರಾಷ್ಟ್ರದ ನಿಜವಾದ ಪಾಲಕ ಮತ್ತು ಪೋಷಕ. ಯೋಧರಿಗೂ ಅವರ ಆವಶ್ಯಕತೆಗಳಿಗೂ ಎಷ್ಟು ಪುರಸ್ಕಾರವನ್ನು ಕೊಡುವೆವೋ ಅಷ್ಟೇ ಪುರಸ್ಕಾರವನ್ನು ನಾವು ಒಕ್ಕಲು ತನದ ಮಜೂರನಿಗೂ ಅವನ ಬೇಡಿಕೆಗಳಿಗೂ ಕೊಡಬೇಕು.

ಸಂರಕ್ಷಣಾ ಮಂತ್ರಿಗಳ ಕೈಕೆಳಗೆ ಜನರಲ್ ಕಾರ್ಯಪ್ಪನವರು ತಮ್ಮ ಸೈನಿಕರ ಮಹಾ ದಂಡನಾಯಕರಾಗಿದ್ದಾರೆ. ಸರಕಾರದಲ್ಲಿ ಅವರ ಗೌರವ ಮಾರ್ಯಾದೆ ಪ್ರಧಾನ ಮಂತ್ರಿಗಳದರಷ್ಟೇ ಇದೆಯೆನ್ನಬಹುದು. ಅವರ ಯಾವನಾದರೊಬ್ಬ ಕೂಡ್ಡ ಉಪಾಧಿಕಾರಿಯು ಮಡಿದರೆ ನಾವು ಅವನ ಸಿದ್ಧಿಗೆಯನ್ನು ಸೈನಿಕ ಗೌರವಗಳಂದ ಹೊತ್ತೊಯ್ಯುತ್ತೇವೆ. ಅಂಥವರು ಸುಪ್ರತಿಫಲ ಸಂಪನ್ನವಾದ ತಮ್ಮ ಸೇವೆಯನ್ನು ಸಲ್ಲಿಸುವುದರಲ್ಲಿ ಮಾಡಿದ ವೀರ ಕಾರ್ಯಗಳಿಗಾಗಿ ಕಾರ್ಯಪ್ಪನವರು ಅವರ ಹೆಸರುಗಳನ್ನು ತಿಥಿಂಪತ್ರ ಮಾಡಿದರೆ, ಅವರಿಗೆ ಪರಮವೀರ ಚಕ್ರವೇ ಮೊದಲಾದ

ಗೌರವ ಮುದ್ರೆಗಳನ್ನೂ ನಿವೃತ್ತಿವೇತನಗಳನ್ನೂ ನಾವು ಕೊಡುತ್ತೇವೆ. ಜನರಲ್ ಕಾರ್ಯಪ್ಪನವರನ್ನೂ ಅವರ ಉಪಾಧಿಕಾರಿಗಳನ್ನೂ ನಿಯೋಜಿಸುವುದರಲ್ಲಿ ಅವರಿಗೆ ಸೈನಿಕ ತಂತ್ರದಲ್ಲಿ ನಿಜವಾದ ಜ್ಞಾನ ಮತ್ತು ಅನುಭವಗಳಿವೆಯೇ ಹೇಗೆಂಬುದನ್ನೂ ತಮ್ಮ ಕಾರ್ಯದಲ್ಲಿ ಯಾವ ದಾದರೊಂದು ಪ್ರತಿಶಂಸನೀಯ ರೀತಿಯಿಂದ ಪ್ರಸಿದ್ಧಿ ಪಡೆದಿದ್ದಾರೆಯೋ ಹೇಗೆಂಬುದನ್ನೂ ನಾವು ವಿಚಾರಿಸುತ್ತೇವೆ

ಮಣ್ಣಿನ ಮಹಾವೀರ.

ಹನಿನನ್ನು ಹೊಡೆದೋಡಿಸುವ ಈ ದೊಡ್ಡ ರಾಷ್ಟ್ರೀಯ ಸೈನ್ಯದಲ್ಲಿ ಆಹಾರ ಮಂತ್ರಿಗಳ ಕೈಕೆಳಗಿನ ಜನರಲ್ ಕಾರ್ಯಪ್ಪನೆಂದರೆ ಯಾರು? ಕೃಷಿಯಲ್ಲಿ ಅವನ ಅನುಭವ ಮತ್ತು ಸಾಹಸಗಳಾವುವು? ದೇಶವು ಒಕ್ಕಲಿಗನತ್ತ ಎಂಥ ಭಯಗೌರವ ದೃಷ್ಟಿಯಿಂದ ನೋಡುತ್ತಿದೆ? ಅವನ ಸೈನಿಕ ಶಿಬಿರಕ್ಕಾಗಿ ಅವನಿಗೆ ಹೇಗೆ ಸ್ಫೂರ್ತಿ ಫಲವನ್ನು ಸಲ್ಲಿಸಲಾಗುತ್ತಿದೆ? ಅವನ ವಿಶಿಷ್ಟ ಸಜ್ಜೆತಿಗಳನ್ನು ಹೇಗೆ ಪ್ರಶಂಸಿಸಲಾಗುತ್ತಿದೆ? ಒಂದಲ್ಲ ಒಂದು ದಿನ ಮಣ್ಣಿನ ಮಹಾವೀರನೊಬ್ಬನ ಅಂಗಿಗೆ ಅಲಂಕರಿಸಲು ಆಧ್ಯಕ್ಷರನ್ನು ಕೇಳಿಕೊಳ್ಳಬಹುದಾದ ಅನ್ನದಾತ ಚಕ್ರ ಯಾವುದು?

ಸಶಸ್ತ್ರ ದಲದ ಸದಸ್ಯನಷ್ಟು ನೆಚ್ಚಿದ ವ್ಯಕ್ತಿಯಲ್ಲ ಇವನು ಅವನು ಇವನನ್ನು ಅವಲಂಬಿಸಿರಬೇಕಾಗುವುದಲ್ಲದೆ ಇವನು ಅವನನ್ನಲ್ಲ. ಇವನು ಯೋಧನಿಗೆ ಆಹಾರಗಳನ್ನು ಒದಗಿಸಿಕೊಡುವವನಷ್ಟೇ ಅಲ್ಲ; ಕಡೆಗೆ ನೋಡಿದರೆ ಇವನ ವರ್ಗದಿಂದಲೇ ಅವನು ಸೈನಿಕ ವೃತ್ತಿಗೆ ನಿಯೋಜಿಸಿಕೊಂಡಿದ್ದೆಂಬುದು ಗೊತ್ತಾಗುತ್ತದೆ

ಉತ್ಪಾದನೆಯ ಮುಖ್ಯ ಕಾರಣವಾದ ಮಾನವ ಸಾಮಗ್ರಿಯನ್ನು ಅಲಕ್ಷಿಸುತ್ತಿರುವ ವರೆಗೆ ನಾವು ಸಾಕಷ್ಟು ಆಹಾರವನ್ನು ಬೆಳೆಯಲಾರೆವು ಆವರ ಸಂಖ್ಯೆ ಅನಂತವಾಗಿದೆ, ವ್ಯವಹಾರದಲ್ಲಿ ಅವನೇ ರಾಜ್ಞ ಎನ್ನಬಹುದಾಗಿದೆ

ಅವರಿಗೆ ಮಿಕ್ಕವರಿಗೆನಿಸುವಂತೆಯೇ ಈ ಸರಕಾರ ತಮ್ಮ ಜನರದ್ದು, ತಮ್ಮ ಜನರಿಗಾಗಿ, ಇರುವಂಥದು ಮತ್ತು ತಮ್ಮ ವರಿಂದ ನಡೆಯುತ್ತಿರುವುದು ಎನಿಸುವಂತೆ ದಿಯೇನು ನಮ್ಮ ಪ್ರಜಾ ಪ್ರಭುತ್ವ? ಇವರು ತಮ್ಮ ಕಾರ್ಯದಲ್ಲಿ ಆಸಕ್ತಿ ಪಹಿಸುವ ಹಾಗೆ ನಾವು ಅವರ ಜೀವನದ ಭೌತಿಕ ಸರಿಸ್ಥಿತಿಯನ್ನು ಬದಲಿಸಬೇಕು.

ಸ್ವಾತಂತ್ರ್ಯವು ದೊರಕಿದಿಯೂದರೂ ಉಣಲು ಸಾಕಷ್ಟು ಆಹಾರ, ಉಡಲು ಸಾಕಷ್ಟು ಬಟ್ಟೆ ಇಲ್ಲದೆ ನಾವು ಕಂಗಾಲ ಪರಿಸ್ಥಿತಿಯಲ್ಲಿ ನರಳುತ್ತಿದ್ದೇವೆ ಎಂದು ಈ ಅಂಕೆ ಸಂಖ್ಯೆಗಳನ್ನು ಓದುವಾಗ ನಮಗೆ ತಿಳಿಯುವುದು ನಮಗಿಂತಲೂ ಹೆಚ್ಚಿನ ಸುಖ ಸಂತೋಷಗಳನ್ನು ನಮ್ಮ ಹಿರಿಯರು ಅನುಭವಿಸಿಕೊಂಡಿದ್ದರೆನ್ನಬಹುದು ಹೆಚ್ಚಿನ ರೋಗರುಜಿನಗಳಿಲ್ಲದೆ ಆರೋಗ್ಯವಂತರಾಗಿ ಅವರು ಬಾಳಿಕೊಂಡಿದ್ದರು. ದೀರ್ಘಾಯುಗಳೂ ಆಗಿದ್ದರು

ಕಳ್ಳ ಸಂತೆಯ ನಿರ್ಮೂಲಕ್ಕಾಗಿ

ಮಿತಿಮೀರುವ ಧಾರಣೆಗಳನ್ನು ಹತೋಟಿಗೆ ತರುವುದು ಸರಕಾರಕ್ಕೆ ತಂಬಾ ಕಷ್ಟಸಾಧ್ಯವಾಗಿದೆ ಕಾರಣ, ನಾವು ನೈತಿಕತೆಯನ್ನು ಸಂಪೂರ್ಣವಾಗಿ ಕಳೆದುಕೊಂಡಿದ್ದೇವೆ. ಲಾಭಬಡಕತನ ಸ್ವಾರ್ಥ, ದೇಶದ್ರೋಹ ಮುಂತಾದ ವ್ಯಾಪಾರಗಳಿಗೆ ತೊಡಗಿದ್ದೇವೆ ಕಳ್ಳ ಸಂತೆಯ ನಿರ್ಮೂಲನಕ್ಕಾಗಿ ಸರಕಾರದ ಸಹಾಯವನ್ನು ಅಪೇಕ್ಷಿಸುವ ಬದಲು ಜನರೇ ವ್ಯಾಮೋಹಕತನ ಮತ್ತು ಸ್ವಾರ್ಥ ತ್ಯಾಗ ಬುದ್ಧಿ ಪ್ರದರ್ಶನ ಮಾಡಿ ಮುಂದೆ ಬರಬೇಕಾಗಿದೆ ಕಳ್ಳಸಂತೆ, ಲಾಭಬಡಕತನ ನಡೆಸುವವರನ್ನು ಬಯಲಿಗೆಳೆಯಬೇಕಾಗಿದೆ. ಸರಕಾರಿ ಅಧಿಕಾರಿಗಳೊಡನೆ ನಾವು ಸಹಕರಿಸಿ, ಕಳ್ಳಸಂತೆಯ ನಿರ್ಮೂಲನಕ್ಕೆ ಸ್ಪಂದಿಸಿದರೆ ಜೀವನದ ಮಟ್ಟ ಕಾನೂನಿಗಿಂತಲೂ ಸ್ವಯಿಚ್ಛೆಯಿಂದ ಬರುವುದು ನಮ್ಮ ದೇಶದ ಪ್ರಮುಖ ರಾಜಕೀಯ ಪಕ್ಷಗಳು ಪರಸ್ಪರ ಈರ್ಷಾಸೂಯೆಯಿಂದ ಹೊಯ್ದಾಟ ಬಡದಂಟಿಗಳಲ್ಲಿ ಸಮಯ ಮತ್ತು ಶ್ರಮ ವ್ಯಯಿಸುವುದಂ ಇಂತಹ ದೇಶೋದ್ಧಾರ ಕಾರ್ಯದಲ್ಲಿ ನಿರತವಾದರೆ ಅದರಿಂದ ದೇಶದ ಏಳ್ಗೆಯನ್ನಾದೂ ಸಾಧಿಸಿದಂತಾದೀತು. ಘೋರ ತಪ ಜನತೆಗೆ ಅನ ವಸನಗಳನ್ನು ಪೂರೈಸುವ ಸೇವೆಯೇ ಇಂದಿನ ಅವಶ್ಯಕತೆಯಾಗಿದೆ ಈ ಸೇವೆಯಲ್ಲಿ ಜಾತಿ, ಪಕ್ಷಗಳ ಭೇದವಿಲ್ಲದೆ ಜನರು ಒಂದಾಗಬೇಕು ಕಳ್ಳಸಂತೆ, ಲಾಭಬಡಕತನಗಳ ಹೆಸರನ್ನು ಅಳಿಸಿ, ಎಲ್ಲಂಗೂ ನ್ಯಾಯ ವಾದ ಬೆಲೆಗೆ ಅವಶ್ಯವಿರುವಷ್ಟು ಆಹಾರ ಸಾಮಗ್ರಿ ದೊರೆಯುವಂತೆ ಮಾಡಲು ನಿಸ್ವಾರ್ಥ ಸೇವಾ ಧುರಂಧರರ ಒಂದು ಸಂಸ್ಥೆಯೇ ರಚಿಸಲ್ಪಡಬೇಕು ಕಳ್ಳಸಂತೆಯ ಭೂತವನ್ನು ಉಚ್ಚಾಟಿಸಿ ಮಾಡಿ ಹೆಚ್ಚೆಚ್ಚು ಆಹಾರ ಬೆಳೆಸುವ ಯೋಜನೆಯನ್ನು ಶೀಘ್ರ ಕಾರ್ಯರೂಪಕ್ಕೆ ತಂದರೆ ಸಮಗೆ ಏಳ್ಗೆಯಿಲ್ಲ; ಕಷ್ಟಸಟ್ಟ ನಾವು ಗಳಿಸಿದ ಸ್ವತಂತ್ರ್ಯದ ಸವಿದುಣ್ಣುವುದೂ ಸಾಧ್ಯವಾಗದು

ಅಗತ್ಯಬಿದ್ದರೆ ಪಿಕೆಟಿಂಗ್ ಕೂಡಾ

ಕಳ್ಳಸಂತೆಯ ನಿರ್ಮೂಲ ಮಾಡುವುದರ ಕಡೆಗೆ ಕೊಂಚ ಪ್ರಚಾರ ಕಾರ್ಯ ಅವಶ್ಯವಿರಬಹುದು ಆರಂಭದಿಂದಲೇ ಪ್ರಯೋಜನಕಾರೀ ರಚನಾತ್ಮಕ ಕಾರ್ಯ ಸಾಧಿರುವೆವೆಂಬ ಧ್ಯೇಯ ಇಟ್ಟುಕೊಳ್ಳುವುದವಶ್ಯ. ಅದು ಎಷ್ಟೇ ಚಿಕ್ಕ ಕ್ಷೇತ್ರದಲ್ಲಿ ನಡೆಯಲಿ, ಆದರಿಂದ ಪ್ರಯೋಜನವಾಗದೆ ಇರಲಾರದು ಅಕ್ರಮ ಮತ್ತು ಅನ್ಯಾಯದ ವಿಕ್ರಯ ನಡೆಯಲ್ಲಿ ಪಿಕೆಟಿಂಗ್ ನಡೆಸುವುದು ಕೂಡಾ ಅಗತ್ಯ ಬೀಳಬಹುದು ಕಾರ್ಯಕರ್ತರು ಅದಕ್ಕೂ ಸಿದ್ಧರಿರಬೇಕು. ಅಂತಹ ವಿಕ್ರಯ ನಡೆಸುವವರನ್ನು ಕೋರ್ಟಿಗೆ ಎಳೆದೊಯ್ಯುವುದೂ ಅವಶ್ಯವಿದೆ ಈ ಸುಧಾರಣೆಯ ಕಡೆ ಶ್ರಮಿಸುವವರು ತಾವು ಸ್ವತಃ ನಿಷ್ಕಪಟಿಗಳೂ ಪ್ರಾಮಾಣಿಕರೂ ಇದ್ದು, ಒಳ್ಳೆಯ ಸಹನಾಕಾರರೂ ಇರಬೇಕು. ಆದುದರಿಂದ ಇಂತಹ ಸುಧಾರಣಾ ಕಾರ್ಯಕ್ಕೆ ಕಾರ್ಯಕರ್ತರನ್ನು ಆರಿಸುವಾಗ ಒಳ್ಳೆಯ ಎಚ್ಚರಿಕೆಯಿಂದಿರಬೇಕಾಗುವುದು. ಇತರರಲ್ಲಿ ವಿಶ್ವಾಸ ಹುಟ್ಟಿಸುವ ಸ್ವಾರ್ಥ ತ್ಯಾಗಿಗಳನ್ನೇ ಆರಿಸುವುದು ಅತ್ಯವಶ್ಯ. ಇಂತಹ ಸುಧಾರಣೆ ನಡೆದರೆ ಜನಸಾಮಾನ್ಯರೂ ಅದನ್ನು ಸ್ವಾಗತಿಸುವುದಲ್ಲದೆ ಸುಧಾರಕರಿಗೆ ಅನಿವಾರ್ಯಕ ಸಹಕಾರ, ಬೆಂಬಲ ನೀಡದೆ ಇರಲಾರರು.

—ಪ್ರಭಾತ.

ಬೆಲೆಯ ಏರಾಟ.

ಧಾರಕದ ಮೂಲತ್ಕೃದು ಮೀರಿಯು ಜನರಿಗೆ ಸ್ವಾತಂತ್ರ್ಯವು ಹೆಚ್ಚಿನ ಸವಿತಂದಿಲ್ಲ ಮುಖದ ಮೇಲೆ ಅದೊಂದು ರೀತಿಯ ಶೃಪ್ತಿಯ ಶಾಂತಿ ತೋರುತ್ತಿದೆಯಾದರೂ ಪೂರ್ತಿಯೊಬ್ಬನು ನೆಮ್ಮದಿಇಲ್ಲದೆ ಒಳಗಿಂದೊಳಗೆ ಗುಣುಗುಟ್ಟುತ್ತಿದ್ದಾನೆ ಜೀವನಾವಶ್ಯಕ ವಸ್ತುಗಳ ಧಾರಣೆ ಒಂದೇ ಸವನೆ ಏರಿದುದರಿಂದ ಜನಸಾಮಾನ್ಯರ ವೇಲೆ ಆರ್ಥಿಕ ಒತ್ತಡ ಬಲವಾಗಿದೆ. ಮುಖ್ಯವಾಗಿ ಸಂಕಷ್ಟಗಳಿಗೆ ಗುರಿಯಾದವರೆಂದರೆ ಮಧ್ಯಮ ವರ್ಗದವರು ಮತ್ತು ಬಡವರು ಅವರ ಮಜೂರಿ ಮಿತಿಮೀರಿದ ಧಾರಣೆಗಳ ಪ್ರಮಾಣದಲ್ಲೇ ಏರಿಸಿಯೂದರೂ ಅದರಿಂದ ಜೀವನ ನಡೆಸುವುದು ಕಷ್ಟಸಾಧ್ಯವಾಗಿದೆ. ಮಜೂರಿ ಹೆಚ್ಚಿಸಿರುವಷ್ಟಕ್ಕೆ ಆವಶ್ಯಕ ವಸ್ತುಗಳ ಧಾರಣೆಗಳು ಇನ್ನೂ ಏರುತ್ತಿವೆ. ಧಾರಣೆಗಳ ಹೆಚ್ಚಳದಿಂದ ತಿರಿಗಿ ಮಜೂರಿಯನ್ನು ಹೆಚ್ಚಿಸಬೇಕಾಗುವುದು—ಮಜೂರಿ ಹೆಚ್ಚಿದೊಡನೆ ಧಾರಣೆಗಳು ಪುನಃ ಏರಲು ಆರಂಭ ಇದೇ ರೀತಿಯ ಹೆಚ್ಚಳ ಅವ್ಯಾಹತವಾಗಿ ನಡೆಯುತ್ತಾ ಇದೆ ಧಾರಣೆಗಳಿಗೆ ಏರಿದ ಈ ಕಾವು ಇಳಿಯುವ ಸೂಚನೆಯೇ ತೋರುವುದಿಲ್ಲ ಮಧ್ಯಮ ವರ್ಗದವರು ಮತ್ತು ಬಡವರು ಜೀವನ ನಿರ್ವಹಣೆಕ್ಕೆ ಬೇರೆ ಉಪಾಯ ಕಾಣದೆ ಕಣ್ಣು ಬಾಯಿ ಬಿಡುವಂತಾಯಿತು.

ಅಸಂತುಷ್ಟಿಯ ಕಾಲ

ಈ ತಿಳಿಗೆ ಸುಮಾರು ವರ್ಷದ ಹಿಂದೆ ಇದ್ದ ಮತ್ತು ಈಗಿನ ಧಾರಣೆಗಳ ಅಂಕೆ ಸಂಖ್ಯೆಗಳನ್ನು ಸಂಗ್ರಹಿಸಿ ಕೊಡಲಾಗಿದೆ ಇಕೆಯ ಸುಮಾರು ೭೦ ವರ್ಷಗಳಿಂದ ಈ ರೀತಿಯ ಅಸಂತುಷ್ಟಿಯ ಕಾಲ ಕಂಡು ಬಂದುದಿಲ್ಲ ರೂಪಾಯಿಗೆ ೪೦ ಸೇರು ಗೋಧಿ, ೬೦ ಸೇರು ಧಾನ್ಯ, ೫೦ ಸೇರು ತುಪ್ಪ ಸಿಗುವ ಕಾಲ ಒಂದಿತ್ತು. ಈಗ ಅದು ಕೇವಲ ಕಲ್ಪನೆಯೇ ಮಾಕಾಗಿದೆ. ಈ ಕೆಳಗಿನ ಅಂಕಿಸಂಖ್ಯೆಗಳನ್ನು ಒಂದಿಷ್ಟು ಲಕ್ಷಿಸಿ ಇಂದಿನ ವಸ್ತು ಹಿಂದಿನ ಧಾರಣೆಗಳನ್ನು ತಲೆಕೆಳಗೆ ಮಾಡಿದರೆ ಜೀವನ ಮಟ್ಟ ಯಾವ ಪ್ರಮಾಣದಲ್ಲಿ ಏರಿದೆ ಎಂಬುದರ ಅರಿವಾಗುವುದು.

ಪದಾರ್ಥ	೧೯೪೫	೧೯೬೦	೧೯೪೯	೧೯೫೦ (ಜನವರಿ)
ಸಕ್ಕರೆ (ಮಣಕ್ಕೆ)	—	ರೂ ೪೦೦	ರೂ ೬೦೦	ರೂ ೫೫೦
ಶುದ್ಧ ತುಪ್ಪ ,,	ರೂ ೧೬೬೦	ರೂ ೨೫೦೦	ರೂ ೫೦೦೦	ರೂ ೪೮೦೦
ಸಾಮಿನ ಎಣ್ಣೆ ,,	ರೂ ೫೪೦	ರೂ ೪೦೦	ರೂ. ೧೧೦೦	ರೂ ೮೦೦
ಗೋಧಿ ,,	ರೂ ೧೦೦	ರೂ ೧೧೨೦	ರೂ. ೨೨೦	ರೂ ೨೦೦ರಿಂದ ೩೦೦
ಅಕ್ಕಿ ,,	ರೂ ೧೦೦	ರೂ ೨೦೦ರಿಂದ ೪	ರೂ ೩೮೦ರಿಂದ ೧೨	ರೂ ೨೮೦ರಿಂದ ೩೫
ಕಾಳು (ಸೇರಿಗೆ)	ರೂ ೦೦೯	ರೂ ೦೧೦	ರೂ ೦೨೦	ರೂ. ೦೧೪೦
ಬಟಾಣಿ ,,	ರೂ —	ರೂ ೦೦೯	ರೂ. ೧೧೬	ರೂ ೦೧೪೦
ಸೀರೆ (೧ ತುಂಡಿಗೆ)	ರೂ ೦೧೦೦	ರೂ. ೧೦೦	ರೂ. ೨೪೦	ರೂ ೬೦೦
ಜೋಡಿ ,,	ರೂ. ೦೬೦	ರೂ ೪೦೦	ರೂ ೧೪೦	ರೂ. ೬೦೦

ಕೊಡಗಿನ ಮದಾಜನರಲ್ಲಿ ಮದಪ್ಪುರ ಕುಞಾರಾಮು ಮೇನೇಜರ ವಿನಂತಿ.

ಕೊಡಗಿನಲ್ಲಿ ಕೆಲವು ಕಡೆಯಲ್ಲಿ ಕೆಲವು ಜನರು ತಮ್ಮ ಸ್ವಂದಾನಿ ಮುತ್ತಪ್ಪ ದೇವರ ಹೆಸರಿನಿಂದ ಉತ್ಸವಹಗೆಗಳನ್ನು ನಡೆಸುತ್ತಿರುವದರ ನನ್ನ ಅವಗಾಹನೆಗೆ ಬಂದಿರುತ್ತದೆ ಹೀಗೆ ಅವರು ಗಳು ನಡೆಸಲು ಆದಿಸ್ಥಳದಿಂದ ಯಾವ ಹುಕ್ಕೆಂ ಪಡೆದಿರುವುದಿಲ್ಲ ಅಲ್ಲದೇ ಅವುಗಳು ಆಧಿಸ್ಥಳಕ್ಕೆ ಸಂಬಂದ ಪಟ್ಟವು ಸುದಿಲ್ಲ ಆದುದರಿಂದ ಹೀಗೆ ನಡೆಸುವ ಉತ್ಸವಗಳಿಗಾಗಲೀ, ಅಥವಾ ದೇವರ ಹೆಸರಿನಲ್ಲಿ ಒಂದು ಯಾರಾದರು ಹುಂಡಿ ಕಾಣಿಕೆಗಳನ್ನು ಕೇಳಿದರಾಗಲಿ ಕೊಡ ಬೇಕಾದ ಕಂಬಂದ ಇರುವುದಿಲ್ಲ ಎಂಬ ಸಂಗತಿಯನ್ನು ಈ ಮೂಲಕ ಸರ್ವ ಮಹಾ ಜನರಿಗೆ ತಿಳಿಸುವುದಾಗಿದೆ

ಪಿ ಯಂ. ಕುಞಾರಾಮು,
ಮೇನೇಜರ್,
12-5 ಪದಪ್ಪುರ.

ರಘುಲಾಲ್ & ಕಂಪನಿ,
ಔಷಧ ವ್ಯಾಪಾರಿಗಳು, ಮೈಸೂರು.
ಕರ್ನಾಟಕದಲ್ಲೆಲ್ಲಾ ಚೆನ್ನಾಗಿ ಸಂಸ್ಥಿತವಾದ ಮತ್ತು ವಿಶ್ವಾಸ ಪೂರಿತವಾದ ಔಷಧಿ ಅಂಗಡಿ
Also at:
೭೦ ಆರ್ಕಾಟ್ ಶ್ರೀನಿವಾಸಚಾರ್ ಬೀದಿ,
ಬೆಂಗಳೂರು ೨.
26-2
RAGULAL & CO., CHEMISTS, MYSORE.

ನಾಸಿಕ ಕಾಂಗ್ರೆಸ್ಸಿನ ಸಿದ್ಧತೆ. ಪ್ರಾಣಿ ಸಂರಕ್ಷಣಾ ಸಮ್ಮೇಳನ.

ಕಾಂಗ್ರೆಸ್ಸಿನ ಅಧ್ಯಕ್ಷರ ಚುನಾವಣೆ ನಡೆದಾಯ್ತು. ಕಾಂಗ್ರೆಸಿನ ಸಭೆಯು ಶಾ ೨೦, ೨೧ರಲ್ಲಿ ನಡೆಯಲಿರುವ ಕೆ ಬೇಕಾದ ಸಿದ್ಧತೆಗಳು ನಡೆದಿವೆ. ಈ ವರೆಗೂ ಕಾಂಗ್ರೆಸು ತನ್ನ ಅಧಿವೇಶನಗಳ ನ್ನು ಇಡೆಸುವಾಗ ಗ್ರಾಮೀಣ ಜನರ ಸಂಪ ರ್ಕ ಬೆಳೆಸುವ ದೃಷ್ಟಿಯಿಂದ ಗ್ರಾಮಾಂತ ರಗಳಲ್ಲೇ ಅಧಿವೇಶನ ಜರಗಿಸುತ್ತಿತ್ತು. ನಾಸಿಕದಿಂದ ೧೫೦ ಮೈಲಿ ದೂರವಿರುವ ಪೈಜ ಪುರದಲ್ಲಿ ಈ ಪದ್ಧತಿ ಪ್ರಾರಂಭವಾ ವಾಗಿ ಮುಂದೆ ಹರಿಪುರ, ತ್ರಿಪುರಿ, ರಾಮ ಗಡ ಮೊದಲಾದೆಡೆ ನಡೆಯಿತು. ಮುಂ ಬರುವ ಅಧಿವೇಶನವು ಆ ಗ್ರಾಮಾಂ ಮನೋವೃತ್ತಿಯನ್ನು ಬಿಟ್ಟು ಪುನಹ ನಗರ ದಲ್ಲಿ ನಡೆಯಲಿದೆ. ಹಿಂದಿನ ಆ ಗ್ರಾ ವಿಂ ಅಧಿವೇಶನಗಳಲ್ಲಿ ಸಾಮಾನ್ಯ ಜನರು ಕಾಂಗ್ರೆಸಿನ ಶಕ್ತಿಯನ್ನು, ಅದು ಮಾಡು ತ್ತಿರುವ ಕೆಲಸವನ್ನು ತಿಳಿದುಕೊಳ್ಳುವದ ಲ್ಲದೆ ತಮ್ಮ ಮುಂದಾಳುಗಳ ಪರಿಚಯ ಮಾಡಿಕೊಳ್ಳಲು ಅನುವಾಗುತ್ತಿತ್ತು. ಆ ದ್ದರಿಂದ ಅಂಥಾ ಸಮ್ಮೇಳನಗಳಿಗೆ ಸಾ ಮಾನ್ಯ ಜನರು ಪ್ರೇಕ್ಷಕರಾಗಿ ಬಿಲಿಯ ಗಟ್ಟಲೆ ಬರುತ್ತಿದ್ದರು. ಆದರೆ ಈ ಸಾ ರಿಯ ಕಾಂಗ್ರೆಸ್ ಅಧಿವೇಶನ ಹಾಗಲ್ಲ. ನಗರದಲ್ಲಿ ನಡೆಯುವದೊಂದೇ ಅಲ್ಲ; ನಿ ಶ್ಚಿತ ಸಂಖ್ಯೆಯ ಪ್ರತಿನಿಧಿಗಳಿ, ಮಂತ್ರಿ ಸ್ವಾಗತ ಸಮಿತಿಯ ಸದಸ್ಯರಿಗೆ ಮಾತ್ರ ಅ ನುವಿದೆ. ಅಧಿವೇಶನಕ್ಕೆ ಸೇರಬಹುದಾದ ಜನಸಂಖ್ಯೆ ೫೦೦೦ಕ್ಕಿಂತ ವಿುರಲಾರದು.

ಗಾಂಧೀಜಿಯವರಿದ್ದಾಗ ಕಾಂಗ್ರೆಸ್ ಸಾಮಾನ್ಯ ಜನರು ಬರಲು ಅವಕಾಶವಾ ಗುವಂತೆ ಅಧಿವೇಶನಗಳು ಜನರಿಗೆ ಕೆಲಸ ವಿರಲಾರದ ಭೆಬ್ರವರಿ, ಮಾರ್ಚ್ ತಿಂಗಳು ಗಳಲ್ಲಿ ನಡೆಯಬೇಕೆಂದು ಎನ್ನುತ್ತಿದ್ದರು. ಇಂಥಾ ಗ್ರಾಮ ಅಧಿವೇಶನಗಳಿಗೆ ಹತ್ತು ಲಕ್ಷಕ್ಕೆ ಏರಿ ಜನರು ಬರುತ್ತಿದ್ದರು. ಸಾಮಾನ್ಯ ಜನರು ತಮ್ಮ ಕೆಲಸಗಳಲ್ಲಿ ನಿ ರತರಾಗಿರುವ ಸೆಪ್ಟೆಂಬರ್ ತಿಂಗಳಲ್ಲಿ ಈ ಅಧಿವೇಶನ ನಡೆಯಲಿದೆ. ಮೇಲಾಗಿ ಪ್ರೇಕ್ಷಕರಿಗೆ ಅಸ್ಪದವಿಲ್ಲದಂತೆ ವಿರ್ಪಾ ಡು ಆಗಿದೆ.

ಆದ್ದರಿಂದ ಸ್ವಾಗತ ಸಮಿತಿಯವರು ಕೇವಲ ೫೦೦೦ ಜನರಿಗೆ ಯೋಗ್ಯವಾದ ವಿರ್ಪಾಡು ಮಾಡಿರುವರು. ೨೫೦ ಟೆಂಟ್ ಷಾಂಕ್‌ಗಳನ್ನು ಉಪಯೋಗಿಸಿ ಯೋಗ್ಯ ಚಪ್ಪರ ಹಾಕಲಾಗಿದೆ. ಈ ಟ್ಯಾಂಕ್-ಶೀಟುಗಳನ್ನು ಅಧಿವೇಶನದ ಹೆ ಸರನಲ್ಲಿ ಬ ವ್ಯಾಂತದ ಜಪ್ಪರಿಗೆ ಹಂಚ ಲಾಗುವದಂತೆ.

ಅಧಿವೇಶನ ನಡೆಯಲು ವಿರ್ಪಾಡಾಗಲ್ಪ ಟ್ಟಿರುವ ಈ ಗಾಂಧೀ ನಗರವು ಗೋದಾ ವರಿ ನದೀತೀರದಲ್ಲಿ ಚಿರಿತ್ರಾರ್ಹವಾದ ಸಂಜೀವಿಯಿಂದ ನಾಲ್ಕು ಮೈಲು ಅಂತ ರದಲ್ಲಿದೆ. ಇಲ್ಲಿಯೇ ರಾವಣನು ಸೀತೆ ಯೊಡನೆ ಜನವಾಸ ಮಾಡುತ್ತಿದ್ದನೆಂದೂ ಇಲ್ಲಿಂದಲೇ ರಾವಣನು ಸೀತೆಯನ್ನು ಅಪಹರಿಸಿದನೆಂದೂ ಹೇಳಲಾಗುತ್ತದೆ. ಕಾಂಗ್ರೆಸ್ ಅಧಿವೇಶನ ಸ್ಥಳದಿಂದ ೫೦ ಮೈಲು ದೂರದಲ್ಲಿ ತ್ರಿಯಂಬಕ್ ಎಂಬ ಸ್ಥಳವಿದೆ. ಅಲ್ಲಿ ಗೋದಾವರಿ ನದಿಯು ದನದ ಬೃಹದಾಕಾರ ಮರ್ತಿಯೊಂದರ ಬಾಯೊಳಗಿಂದ ಹರಿದು ಬರುವದು!

ಗಾಂಧಿ ನಗರದ ಪ್ರವೇಶದ್ವಾರವು ಹಿಂಗಡೆ ಕೋಟೆಯ ಬಾಗಿಲಿನಂತೆ ನಿ ರ್ಮಿಸಲ್ಪಟ್ಟಿದೆ. ಈ ಹಿಂಗಡೆ ಕೋಟೆಯೇ ಲೋಕಮಾನ್ಯ ಬಾಲಗಂಗಾಧರ ತಿಲಕರ ಬೇಸಿಗೆಯ ನಿವಾಸವಾಗಿತ್ತು. ಸು ಮಾರು ೫೦೦ ಜನರು ಕೂಲಿಯ ವಿರ್ತಾವಾ ದ ನೇಮಕೆಯನ್ನು ಕಲ್ಪಿಸಿಕೊಟ್ಟಿದೆ. ಈ ಹಿಂದಿನಂತೆ ಪ್ರತಿನಿಧಿಗಳನ್ನು ನೆಲದ ಲ್ಲಿ ಕೂರುವಂತೆ ಮಾಡದೆ ಈ ಸಾರಿ ಪ್ರತಿ ನಿಧಿಗಳಿಗೆ ಮೇಜು ಕುರ್ಚಿಗಳ ವಿರ್ಪಾ ಡಿಹೆ.

ಗಾಂಧಿನಗರಕ್ಕೆ ಮುಖ್ಯ ದ್ವಾರದ ಕೆಲವೆ ಗಜ ದೂರದಲ್ಲಿ ೫೬ನೇ ಅಧಿವೇ ಶನದ ಸಂಕೇತವೆಂಬಂತೆ ೫೬ ಅಡಿ ಎತ್ತ ರದ ಧ್ವಜಸ್ತಂಭ ಹೆಡಲ್ಪಟ್ಟಿದೆ. ವಿರ್ಪ ಟ್ಟಿರುವ ಪ್ರದರ್ಶನ ವಿಭಾಗವು ಸರ್ವ ಗ್ರಾಸಿಯೊಗಿದೆ. ಸರ್ವೋದಯ ಸಮಾ ಜದ, ಪ್ರಪಸಾದು, ಗುಡಿಕೈಗಾರಿಕೆ, ಖಾ ಧಿ ಮತ್ತು ಗ್ರಾಮೋದ್ಯೋಗಿಗಳಿಗಳ ಪ್ರದರ್ಶ ನ ವಿರ್ಪಟ್ಟಿದೆ. ಪ್ರತಿನಿಧಿಗಳ ವಾಸಕ್ಕೆ ವಿರ್ಪಟ್ಟ ಸ್ಥಳವು ಗಾಂಧಿ ಉಪನಗರವೆಂ ದು ಕರೆಯಲ್ಪಟ್ಟಿದೆ. ಏಲ್ಲಾ ಪ್ರತಿನಿಧಿ ಗಳಿಗೂ ಸಾರ್ವತ್ರಿಕವಾದ ಊಟದ ವ್ಯ ವಸ್ಥೆ ಇದೆ. ಎಲ್ಲರೂ ಸಸ್ಯಾಹಾರ. ಒ ಮ್ಮೆಗೆ ೧೫೦೦ ಜನರು ಕೂತು ಊಟ ಮಾಡಬಹುದಾಗಿದೆ. ೫೦೦೦ ಜನರಿಗೆ ರೀಕ್ಷಣನ್ನು ಸ್ವಾಗತ ಸಮಿತಿಯು ಪಡೆಡಿ ದೆಯಲ್ಲದೆ ದಿವಸಕ್ಕೆ ೭೫,೦೦೦ ಗೆಲನ್ ನೀ ರು ಸರಬರಾಯಿಯ ವ್ಯವಸ್ಥೆ ಮಾಡಿದೆ

ಯೂರೋಪಿನ ಪೌರ್ ಪಟ್ಟಣದಲ್ಲಿ ಕಳೆದ ವಾರ ಪ್ರಾಣಿ ಸಂರಕ್ಷಣಾ ಜಗತ್ ಸಂಘದ ಸಮ್ಮೇಳ ನಡೆಯಿತು. ಜಗತ್ತಿ ನ ವಿವಿಧ ರಾಷ್ಟ್ರಗಳ ಸುಮಾರು ನೂರು ಅಂತರ್‌ರಾಷ್ಟ್ರೀಯ ಸಂಘಗಳ ಪ್ರತಿನಿಧಿಗ ಳಾಗಿ ಮುನ್ನೂರು ಜನರು ಈ ಸಮ್ಮೇಳ ನದಲ್ಲಿ ಭಾಗವಹಿಸಿದ್ದರು. ಮಾನವ ಸ ಮಾಜವು ಪ್ರಾಣಿಗಳ ಮಟ್ಟಕ್ಕೆಳಿದು ಪರ ಸ್ಪರರನ್ನು ಶುಲಿದು, ಕೊಂಡು ಜೀವನ ನ ಡೆಸುತ್ತಿರುವ ಇಂದಿನ ಪರಿಸ್ಥಿತಿಯಲ್ಲಿ ಪ್ರಾ ಣಿ ಸಂರಕ್ಷಣಾ ಈ ಸಮ್ಮೇಳನವು ಅಭಾ ಸವೆಂದು ತೋರಬಹುದು. ಆದರೂ ಈ ಸಮ್ಮೇಳನದ ಸೂಕ್ಷ್ಮತೆ ಮತ್ತು ಮಹತ್ವ ನು ಭೂತದಯಾಪರರಾಗಿ ಸಕಲಜೀವಜಂ ತುಗಳನ್ನು ಕರುಣೆಯಿಂದ ನೋಡುವ ಅ ವಶ್ಯಕತೆಯನ್ನು ಯಾರೂ ಅಲ್ಲಗಳೆಯಲಾ ರರು.

ಪ್ರಾಣಿ ಸಂರಕ್ಷಣೆ ಎಂದಾಗ ಎಲ್ಲ ರೂ ಸಸ್ಯಾಹಾರಿಗಳಾಗಬೇಕೆಂಬುದು ಈ ಸಮ್ಮೇಳನದ ಅಭಿಮತವಲ್ಲ. ಬದಲು ಮನುಷ್ಯನು ತನ್ನ ಆಹಾರಕ್ಕಾಗಿ ಯಾ ವುದೇ ಪ್ರಾಣಿಗೆ ಅದನ್ನು ಉಪಯೋಗಿ ಸಲು ಹಿಂಜರಿಯಬೇಕು. ತನ್ನ ಕಣ್ಣಿನ ಅಂದಕ್ಕಾಗಿ ಇಲ್ಲವೇ ಬೇರೆ ಕಾರಣಕ್ಕಾಗಿ ವರ್ಷಗಟ್ಟಲೆ ಪ್ರಾಣಿಯನ್ನೋ ಪಕ್ಷಿಯ ನ್ನೋ ಪಂಜರದಲ್ಲಡಗಿಸಬಾರದು.

ಈ ದೃಷ್ಟಿಯಿಂದಲೇ ಹೇಗ್ ಸಮ್ಮೇ ಳನವು ಪ್ರಾಣಿಗಳ ಹಕ್ಕು ಬಾಧ್ಯತೆಯ ತತ್ವವನ್ನು ಎತ್ತಿ ಹಿಡಿದು ಪಾಸು ಮಾಡಿಸಿತ್ತಿ ದೆ. ಪ್ರಾಣಿಗಳು ನಮ್ಮೊಡನೆ ಸಹ ಭಾಗಿಗಳಾಗಿ ನಮ್ಮ ಜವಾಬ್ದಾರಿಯನ್ನು ತಾವೂ ಹೊತ್ತು ನೂರಾರು ವಿಧಾನದಲ್ಲಿ ನಮಗೆ ಸಹಾಯ ಮಾಡುತ್ತವೆ. ಸೂ ಕ್ಷ್ಮವಾಗಿ ಪರಿಶೀಲಿಸಿದರೆ ನಿಸರ್ಗದಲ್ಲಿ ನಿರುಪಯೋಗಿಯೂದ ಯಾವುದೇ ಪ್ರಾಣಿ ಇಲ್ಲ. ಜಗತ್ತಿನಲ್ಲಿ ಪ್ರಾಣಿ ಪಕ್ಷಿಗಳು ಇರುವದು ಕೇವಲ ಮಾನವನ ಹಿಂಗದ ಒಡಲಿಗೆ ಬಲಿಯಾಗಲಿಕ್ಕಲ್ಲ. ಜಗತ್ತಿನ ಹಿತರಕ್ಷಣೆಯಲ್ಲಿ ಅವುಗಳ ಪಾಲೂ ಇವೆ. ಹೀಗಿರುವಾಗ ಅವುಗಳ ರಕ್ಷಣೆ, ಪೋಷ ಣೆಯ ಬಗ್ಗೆ ಮಾನವ ವರ್ಗವು ಸಹಾನು ಭೂತಿಪರವಾಗಿ ವರ್ತಿಸುವುದು ತೀರಾ ಅವಶ್ಯ. ಕೆಲಸ ಮಾಡಲು ಶಕ್ತಿ ಇಲ್ಲದ ಮೃ ವಯಸ್ಸಾದಾಗ ಅವನ್ನು ಜೀವಾಸಿ ಸಾಕಬೇಕು. ಬಡಕಲಾಗಿದ್ದಾಗ ವಿ ಶ್ರಾಂತಿ ಕೊಡಬೇಕು. ಕಾಯಿಲೆ ಕಸಾ ಲೆ ಬಂದಾಗ ಎಚ್ಚರ ವಹಿಸಬೇಕು. ಮೂಕ ಪ್ರಾಣಿಗಳ ಕಷ್ಟಸುಖಗಳನ್ನರಿ ಯದೆ ತಕ್ಕ ಸ್ವಾತಂತ್ರ್ಯ ಹೆಂಬಲದಲ್ಲಿ ಅವು ಗಳಿಗೆ ಯನುಕೂತನೆಯನ್ನು ಕೊಡುವ ದು ನಿಲ್ಲಬೇಕು.

ಪ್ರಕಟಣೆ.

1950–51 ರಲ್ಲಿ ಕಾಂಪೋಸ್ಟ್ ಗೊಬ್ಬರ ತಯಾರಿಕೆ ಮತ್ತು ಬಹುಮಾನ ಹಂ ಚುವಿಕೆ–

ಕೊಡಗಿನಲ್ಲಿ ಮುಖ್ಯವಾಗಿ ಉತ್ತರ ಕೊಡಗಿನಲ್ಲಿ ಅನೇಕ ರೈತರಿಗೆ ಕಾಂಪೋಸ್ಟ್ ಗೊ ಬ್ಬರದ ತಯಾರಿಕೆಯೇ ಇನ್ನೂ ಚೆನ್ನಾಗಿ ತಿಳಿಯದಿರುವದು ವ್ಯವಸಾಯ ಇಲಾಖಾ ಅ ಧಿಕಾರಿಗಳ ಅವಗಾಹನೆಗೆ ಬಂದಿದೆ. ವ್ಯವಸಾಯ ಇಲಾಖೆಯು ಈ ಗೊಬ್ಬರ ತಯಾರಿಸುವ ಕ್ರಮ ಮತ್ತು ಉಪಯೋಗಿಸುವ ವಿಧಾನಗಳನ್ನು ಈಗ ಮೂರು ವರ್ಷಗಳಿಂದ ಒಂದೇ ಸಮನಾಗಿ ತನ್ನ ಸಿಬ್ಬಂದಿಗಳ ಮೂಲಕವಲ್ಲದೆ ಅನೇಕ ಪ್ರಕಟಣೆ ಮತ್ತು ಹತ್ತಾರು ಕೆಗಳ ಮೂಲಕವಾಗಿಯೂ ಮತ್ತು ಅನೇಕ ಸಹಕಾರ ಕೂಟಗಳಲ್ಲಿಯೂ ಸಹ ಪ್ರಚಾ ರ ಮಾಡುತ್ತಾ ಬಂದಿದ್ದರೂ ಕೂಡ ರೈತರು ಇದನ್ನು ತಿಳಿದುಕೊಳ್ಳಲು ತಕ್ಕ ಪ್ರಯತ್ನ ಮಾಡದಿರುವುದು ಬಹಳ ವಿಷಾದಕರ. ಕಳೆದ ವರ್ಷ ತಕ್ಕ ಕ್ರಮವನ್ನು ಅನುಸರಿ ಸದೆ ಮಂಡಿಯಲ್ಲಿದ್ದ ಗುಂಡಿಯಲ್ಲಿ ಗೊಬ್ಬರ ಮಾಡಿದವರಿಗೂ ಕೂಡ ಬಹುಮಾನ ದೊ ರೆತಿರುವುದಾಗಿ ತಿಳಿದುಬಂದಿದೆ. ಆದರೆ ಈ ವರ್ಷ ಕೊಡಗಿನಲ್ಲಿ 150,000 ಟನ್ನು ಕಾಂ ಪೋಸ್ಟ್ ಗೊಬ್ಬರವನ್ನು ತಯಾರಿಸಬೇಕೆಂದು ಇಂಡಿಯಾ ಸರಕಾರದ ನಿರ್ದಿಷ್ಟ ಗುರಿ ಇರುವುದರಿಂದ ಬಹುಮಾನ ಹಂಚುವುದರಲ್ಲಿ ಒಳ್ಳೆ ನಿಶ್ಚಿತ್ತನ್ನು ಅನುಸರಿಸಲಾಗುವುದು. ಆದ್ದರಿಂದ ಶಾಸ್ತ್ರೀಯ ರೀತಿಯಲ್ಲಿ ಈ ಕೆಳಗೆ ಹೇಳಿದ ಕ್ರಮದಲ್ಲಿ ಉತ್ತಮವಾದ ಗೊ ಬ್ಬರವನ್ನು ತಯಾರಿಸುವವರಿಗೆ ಮಾತ್ರ ಬಹುಮಾನವು ಕೊಡಲ್ಪಡುವುದು. ಈ ವಿಷ ಯವನ್ನು ಸಮಸ್ತ ರೈತರು ಗಮನದಲ್ಲಿಡಬೇಕಾಗಿದೆ.

ಗೊಬ್ಬರ ಸಂಗ್ರಹಿಸುವವರು ಗುಂಡಿಗಳನ್ನು ಈ ಕೆಳಗಿನ ಫೀನಪರಮಾಣದ ಅಳ ತೆಯಲ್ಲಿ ತಮ್ಮಲ್ಲಿರುವ ದನಗಳ ಲೆಕ್ಕಾಚಾರದ ಮೇಲೆ ತೋಡತಕ್ಕದ್ದು.

ದನಗಳ ಸಂಖ್ಯೆ	ಗುಂಡಿಯ ಉದ್ದ	ಅಗಲ	ಆಳ
2ರಿಂದ 5ರ ವರೆಗೆ	4 ಅಡಿ	3 ಅಡಿ	2½ ಅಡಿ
6ರಿಂದ 10ರ ವರೆಗೆ	15 ಅಡಿ	3½ ಅಡಿ	3 ಅಡಿ
11ರಿಂದ 20ರ ವರೆಗೆ	30 ಅಡಿ	4 ಅಡಿ	3½ ಅಡಿ
20 ಕ್ಕಿಂತ ಹೆಚ್ಚು	30 ಅಡಿ	5 ಅಡಿ	3½ ಅಡಿ

ಅಧಿಕ ಸಂಖ್ಯೆಯ ಕಾಲ್ನಡೆ ಇರುವವರು ಒಂದಕ್ಕಿಂತ ಹೆಚ್ಚು ಗುಂಡಿಗಳನ್ನು ಮೇ ಲಿನ ಅಳತೆಯಲ್ಲಿ ತೆಗೆಯಬಹುದು. ದನಗಳ ಸೆಗಣಿ ಮತ್ತು ಗಂಜಳ ತರಗೆಲೆ, ಹಸಿ ಕಲೆ, ಕಜ್ಜಿಡ ಮತ್ತು ಮನೆಯ ಕಸ– ಇವುಗಳನ್ನು ಮೇಲೆ ಹೇಳಿದ ಗುಂಡಿಗಳಲ್ಲಿ ಪದ ರು ಪದರಾಗಿ ಹಾಕಿ ತಯಾರಿಸಿದ ಗೊಬ್ಬರವು ಅತ್ಯುತ್ಕೃಷ್ಟವಾದ ಕಾಂಪೋಸ್ಟ್ ಗೊ ಬ್ಬರವಾಗಿ ಪರಿಣಮಿಸುವುದು. ಈ ರೀತಿ ಗೊಬ್ಬರ ತಯಾರುಮಾಡುವವರು ಮಾತ್ರ ಬಹುಮಾನಹೊಂದಲು ಅರ್ಹರಾಗಿರುವರು.

ವ್ಯವಸಾಯ ಇಲಾಖಾಧಿಕಾರಿ.

For purchase.

Wanted a house or a house site within the Municipality limit of Mercara or of Virajpet.

Apply to :—

K. M. Kushalappa,
Attikan P. O. Via Mysore.

ಕೊ ಡ ಗು

ತಾ ೮-೯-೧೯೫೦ನೇ ಶುಕ್ರವಾರ

ದುಃಖಿತ ಆಸಾಮ್.

ಆಗಸ್ಟ್ ತಿಂಗಳಿನಲ್ಲಿದರಂದು ಇಡೀ ಹಿಂದೂದೇಶವು ಸ್ವಾತಂತ್ರ್ಯ ಉತ್ಸವದ ಸಂತೋಷದಲ್ಲಿ ನಲಿದಾಡುತ್ತಿರಲು ದು ರ್ಭಾಗ್ಯ ಆಸಾಮ ಪ್ರಾಂತಕ್ಕೊದಗಿದ ವಿ ತ್ತು ಹೃದಯವಿದ್ರಾವಕವಾದುದು ಹಿಂ ದೆ ಎಂದಿಗೂ ಆಗದಂಥ ಉಗ್ರತನುವಾದ ಭೂಕಂಪವು ಆಸಾಮನ್ನು ನಡುಗಿಸಿತು. ಮೊದಲೇ ಶ್ವಾನುವಿಂದ ಕಷ್ಟಪಡುತ್ತಿದ್ದ ಆಸಾಮವು ಈ ಸೈವೀ ಪ್ರಕೋಪದಿಂದ ತತ್ಕಂಪಿಸಿಹೋಗಿದೆ. ಈ ಭೂಕಂಪದಿಂದ ಆದ ನಷ್ಟದ ಪೂರ್ಣವಿವರಗಳು ಇನ್ನೂ ದೊರೆತಿಲ್ಲ. ದೊರೆತಿರುವ ವರೆಗಂತೂ ಸಾವಿರಾರು ಜನರು ವ್ಯತಕಾಗಿದ್ದಾರೆ. ಲಕ್ಷಗಟ್ಟಲೆ ಜನರು ಮನೆ ಪರಿ, ಆಸ್ತಿ ವಾಸ್ತಿ ಕಳಕೊಂಡು ನಿರ್ಗತಿಕರಾಗಿದ್ದಾರೆ. ಕೋಟ್ಯಂತರ ರೂಪಾಯಿಯ ಫಸ್ಟವಾಗಿದೆ.

ಮಾನವನ ಹಿಡಿತಕ್ಕೆ ಮೀರಿದ ಈ ಪ್ರ ಚಂಡ ಅನಾಹುತವು ಹಣ್ಣಿನ ಮೇಲೆ ಬ ರೆ ಎಳೆದಂತೆ ಆಗಿದೆ. ಆಸಾಮ್ ಪ್ರಾಂ ತದ ಜೀವದ ಜೀವಾಳವಾಗಿ, ಜನತೆಯ ಕಣ್ಮಣಿಯೊಗಿಸಿದ್ದ ಪ್ರಧಾನ ಮಂತ್ರಿಗೋ ಪಿನಾಥ ಬಾರ್ಡೋಲಾಯಿಯವರು ನಿಧನ ರಾಗಿ ಆಸಾಮ್ ಜನತೆಯು ಸುರಿಸಿದ ಕಂಬನಿ ಬತ್ತಿರಲಿಲ್ಲ ಆಪ್ತರಲ್ಲಿ ಈ ಅನರ್ಥ ಕಾರಿ ಭೂಕಂಪವು ಜಪತೆಯನ್ನು ನಿರ್ಗ ತಿಕರನ್ನಾಗಿ ಮಾಡಿತು ಭೂಕಂಪದ ವಿ ವರಗಳು ಹೃದಯವಿದಾರಕವಾಗಿದ್ದು ಎಂ ಥಾ ಕಲ್ಲೆದೆಯವರನ್ನೂ ಕಳಮಳಗೊಳಿಸ ದಿರದು ಆಸಾವು ಬೆಟ್ಟಗುಡ್ಡಗಳ ನಾಗು ಈ ಗಿರಿಕಂದರಗಳಲ್ಲಿಯೂ ದರಿ ಪ್ರದೇಶಗಳಲ್ಲಿಯೂ ಎ ಜೀವಿಸುತ್ತಿದ್ದ ಜ ನರು ಕ್ಷಧನು ಭೂಕಂಪದಿಂದಲೇ ಗತಿ ಹೀನರಾದರೂ ಅದರಿ ಭೂಕಂಪ ಪಶ್ಚ ಲ್ಲೇ ಕಮನಗೊಳ್ಳಲಿಲ್ಲ ನೀಲಿಂದ ಮೇಲೆ ಭೂಕಂಪ ನಡೆಯಿ ತ ಈ ಗಲೂ ನಡೆಯುತ್ತಿದೆ ದಿನ ದಿ ತಕ್ಕೆ ಉಗ್ರವಾಗಿ ಭೂಕಂಪದ ಈ ಉ ಗ್ರ ಅಲ ಗಾಟದಲ್ಲಿ ಪರ್ವತಗಳು ಹುಡಿ ಯಾ ದವು ನದಿಗಳು ತಮ್ಮ ದಾ ರಿಯನ್ನು ಬಿಟ್ಟು ಹಳ್ಳ, ನ ಗರಗಳಿಗೆದೆ ನುಗ್ಗಿ ಕ್ಕಿದೆ ಧ ಮಂತಿದವು ಕೆರೆ ಕಾಲವೆಗಳು ಹೊರಚೆಲ್ಲಿ ಸಿಕ್ಕಿಸಿಕ್ಕಿದನ್ನೂ ಕೊಚ್ಚಿ ಕೆಡ ವಿಬವು ಕೆಲವೆಡೆ ಸರ್ವನಾಶ ಒತ್ತಿ ಹೋಗಿ ಜನರಿಗೆ ಉಡಿಯಲು ನೀರಿಲ್ಲ ಹಾಯಿತು. ದವಕರುಗಳೂ, ಸ್ಥಾಣಿ ಪಕ್ಷಿಗಳೂ, ಮರ ಕಾಡುಗಳೂ ಕೊಚ್ಚಿ ನಿನ ರ್ನಾಮವಾದವು ನಿಸರ್ಗದೇವತೆ ಯೇ ಕೆದರಿ ಕೆಂಗಣ್ಣಿನವಳಾಗಿ ವರಬಲಿ ಗೆ ತಯಾರಾದರೆ ತಡೆಯುವವರಾರು?

ಪಿನ್ನೂ ಪರಿಸ್ಥಿತಿ ಶುದ್ಧಾರಿಸಿಲ್ಲ ಪ ಥಪಟ್ಟಿವ ಪ್ರಕೃತ್ಯತ್ಪಾದಂಥಾ ಗಂಡು ನದಿಯು ಸಿಕ್ಕಿಸಿಕ್ಕಿದೆಡೆಸ್ಟು ಕೊಚ್ಚಿಕೊಂಡು ಹೊಯುತ್ತಿದೆ ಕೊಚೀ ನದಿಯು ಒಳ ದ ಮಾರ್ಗದಲ್ಲಿ ಅನಾಹ ತವಾಗುತ್ತಿದೆ ಈ ರೀತಿ ಹುಚ್ಚುಹುಚ್ಚಾಗಿ ಹರಿಯುವ ನದಿಗಳಿಗೆ ನಾರ್ಗ ಮಾಡಿಕೊಡಲು ವಿ ಮಾನಗಳಿಂದ ಬಾಂಬು ಹಾಕಿ ಇದ್ದ ಎಡ ಗುಗಳನ್ನು ನಿವಾರಿಸಿ ನದಿಯು ಶ್ವಾಭಾ ಕೈ ಅನುಕೂಲ ಮಾಡಲಾಗುತ್ತಿದೆ! ಆ ಸಾಮ್ ಜನರ ಆರ್ತನಾದವು ಜಗತ್ತ ನ್ನೇ ಆತ್ತ ದೃಷ್ಟಿ ಹರಿಸುವಂತೆ ಮಾಡಿದೆ ಪಂಡಿತ ನೆಹರೂರವರು ಈ ದಃಖಿತ ಭಾ ಗವನ್ನು ಸಂದರ್ಶಿಸಿ ಬಂದರು ಸಂ ಯುಕ್ತ ರಾಷ್ಟ್ರಸಂಘದ "ಯುನೆಸ್ಕೊ" ಸಮಿತಿಯು ಸಹಾಯ ಮಾಡಲು ಬಂದಿದೆ ಭಗತ ಖಂಡದ ಉದ್ದಗಲಕ್ಕೂ ಆಸಾಮಿನ ಸಹಾಯಕ್ಕೆ ನಿಧಿಸಂಗ್ರಹ ವ ಸ್ತುಸಂಗ್ರಹ, ಆಹಾರ ಸಂಗ್ರಹ ಕಾರ್ಯ ಗಳು ನಡೆಯುತ್ತಿವೆ ದುಃಖಿತ ಆಸಾ ಮಿನ ಸರಕಾರವು ತನ್ನ ಸರ್ವ ಪ್ರಯತ್ನ ವನ್ನು ನಿರಾಶ್ರಿತರಿಗಾಗಿ ಮಾಡುತ್ತಿದೆ ಕೇಂದ್ರ ಸರಕಾರವೂ ಶಕ್ತಿವಿಧಾ ಸಹಾಯ ಇತ್ತಿದೆ ಅದೇ ರೀತಿ ಕೊಡ ಗಿನ ಚೀಫ್ ಕಮಿಷನರು ಒಂದು ಸಾರ್ವ ಜನಿಕ ಸಭೆ ಕರೆಸಿ ಕೊಡಗಿನಿಂದ ನಿರಾಶ್ರಿ ತರಿಗೆ ಸಹಾಯ ಸಂಗ್ರಹಿಸಿ ಕಳುಹಿಸುವ ವ್ಯವಸ್ಥೆ ಮಾಡಲಿದ್ದಾರೆ

ಕೊಡಗಿನಲ್ಲೂ ಸಂಪನ್ನರಿದ್ದಾರೆ ಪ್ರತಿದ್ದಾರೆ ಇನ್ನೊಬ್ಬರ ಕಷ್ಟಕ್ಕೆ ಮರುಗ ವವರಿದ್ದಾರೆ ಕೊಡಗಿನ ಪ್ರತಿ ಯೊಬ್ಬ ವ್ಯಕ್ತಿಯೂ ಈ ನಿರ ಶ್ರಿತರಿಗಾಗಿ ತವ ಕೈಲಾದ ಸಹಾಯ ಮಾಡುವುದು ಸಾಧ್ಯವಿದೆ ಈ ಹಿಂದೆ ಅನೇಕ ಸಂದ ರ್ಭಗಳಲ್ಲಿ ಕೊಡಗು ತನ್ನ ಉದಾರತೆಯ ನ್ನು ವ್ಯಕ್ತಮಾಡಿದೆ. ಈ ಸಂದರ್ಭದ ಲ್ಲೂ ಅದು ತನ್ನ ಕೊಡ ಗೈತನವನ್ನು ತೋರಿಸಿ ದ ಬಿತ ಬಾಂಧವರ ನರವಿಗೆ ಬರುವುದೆಂದು ಆತಿಶಲಂಗಿದೆ

ವರ್ತಮಾನ.

ಬಿ ಬಿ ಎಂಡ್ ಸಿ ಐ ರೈಲ್ವೆಗೆ ಎಸ್ ಎಸ್ ಎಲ್ ಸಿ ಪಾಸಾಗಿ ಮ್ಯಾಯ ರಿಂದ ೫೫ರ ವಳಗೆ ಇರುವ ಯುವಕರು, ಟಿಕೆಟ್ ಕಲೆಕ್ಟರ್, ಟ್ರಾಫಿಕ್ ಸಿಗ್ನ ಲ್ಸ್ ಪತ್ತು ಟೈಪಿನ್ ಕ್ಲಾರ್ಕ್ ಕೆಲಸ ಕ್ಕೆ ಟೀಕಾಗಿರುವರು ಕೂತೂಹಲವುಳ್ಳ ಯುವಕರು ಹೆಚ್ಚಿನ ವಿವಯ ಗಳನ್ನು ಮಡಿಕೇರಿ ಡಿಸ್ಟ್ರಿಕ್ಟ್ ಎಂಪ್ಲಾಯಿಮೆಂಟ್ ಆಫೀಸಿನಿಂದ ಕಿಳದುಕೊಳ್ಳಬಹುದು

ಕಾರೀಕ. ೩-೯-೫೦ ನೇ ಆದಿವಾರ ದಿನ ಕಡಗದಾಳು ಗ್ರಾಮಸ್ಥರು ಕೈಲ್ ಮೂಹೂರ್ತ ಹಬ್ಬದ ಸಂಬಂಧಕರ ಕ್ರೀ ಆಂಬಲದಲ್ಲಿ ಶ್ರೀ ಕೊರವಂಡ ಚೆರಪಣ್ಣ ನವರ ಅಧ್ಯಕ್ಷತೆಯಲ್ಲಿ ಸಭೆಸೇರಿ ತೆಂಗಿನ ಕಾಯಿಗೆ ಗುರಿಹೊಡೆಯುವುದು ಪತ್ರು ಆಟ ಓಟಗಳ ಸ್ಪರ್ಧೆ ನಡಿಸಿ ಜಯಶೀಲ ರಿಂದವರಿಗೆ ಬಹುಮಾನವನ್ನು ಹಂಚಿ ದರು

ಮಡಿಕೇರಿಯಲ್ಲಿ ವೆಟರಿನರಿ ಇನ್ಸ್ಪೆಕ್ ಟರ್ ಸರ್ಜನಂಗಾದ್ದ ಶ್ರೀ ಜೆಂಬಾಂಡ ಕಾಳಪ್ಪನವರನ್ನು ಹೈರಿ ಡೆವಲಪ್‌ಮೆಂ ಟ್ ಆಫೀಸರ್-ಗಿ ನೇಮಕ ಮಾಡಿರುವ ರು ಅವರ ಬದಲು ವ ಡಿಕೇರಿಗೆ ಡಾ ಕ್ಟರ್ ವಾಲೇಕಂಡ ಕುಂಬಯ್ಯನವರ ನ್ನೂ, ಸೋಮವಾರಪೇಟೆಗೆ ಡಾಕ್ಟರ್ ವೀರಪ್ಪಗೌಡರನ್ನೂ, ಫೌಜ್‌ದಾರ್‌ಪೇಟೆಗೆ ಶ್ರೀ ಸಿ. ಎಲ್ ರಾವ್‌ರವರನ್ನ ವರ್ಗ ಮಾಡಿರುವರು

ಭೂಕಂಪದಿಂದ ಕಷ್ಟಕ್ಕೆ ಗುರಿಯಾಗಿ ರುವ ಅಸ್ಸಾಮಿನ ಜನರಿಗೆ ಸಹಾಯವ ನ್ನು ಒದಗಿಸುವ ಸಲುವಾ ಗಿ ತಕ್ಷಣ ವೆರ್ಪಾ ಡು ಮಾಡಲು ಚೀಫ್ ಕಮಿಷನರು ೮-೯-೫೦ ರಲ್ಲಿ ಮಡಿಕೇರಿಯಲ್ಲಿ ಒಂದು ಸಾರ್ವಜನಿಕ ಸಭೆ ವೆರ್ಪಾಡಿಸಿರುವರ

ತನಿವಾರಸಂತೆಯಲ್ಲಿ ವಾರಂಪತ್ತೆಗಾ ರರಾಗಿದ್ದ ಶ್ರೀ ಕಾಳಮಾಡ ಚಿಟ್ಟಿಯಪ್ಪ ನವರನ್ನು ಮಡಿಕೇರಿ ಚೀಫ್ ಕಮಿಷನರ ಆಫೀಸಿಗೆ ವರ್ಗ ಮಾಡಿರವರ

ಕಾರೀಕ ೧೯-೯-೫೦ ರಿಂದ ತಾ ೫-೯-೫೦ ರವರೆಗೆ ವ ಡಿಕೇರಿಯಲ್ಲಿ ೯ ಇಂಚು ೮೫ ಸೆಂಟು ಮಳೆಯಾಗಿದೆ ಈ ವರ್ಷ ಒಟ್ಟು ಈ ವರೆಗೆ ವ ಡಿಕೇರಿಗೆ ೧೧೧ ಇಂಚು ೧೧ ಸೆಂಟು ಮಳೆಯಾಗಿದೆ ಕಳೆದ ವರ್ಷ ಇದೆ ಅವಧಿಯಲ್ಲಿ ೯೫ ಇಂ ಚು ೧೪ ಸೆಂಟು ಮಳೆಯಾಗಿತ್ತು

ಶ್ರೀಮಂಗಲ ನಾಡು ಕಾಫೀರರು ಹೈ ಯರ್ ಎಲಿವೆಂಟರಿ ಶಾಲಾ ಹೊ ಕ ಟ್ಟಡ ತೆರೆಯುವ ಉತ್ಸವವು ಈ ತಾ ೬ರ ಲ್ಲಿ ಕೊಡಗಿನ ಚೀಫ್ ಕಮಿಷನರಾದ ಲೆ|| ಕ್ಕಿ ಡಿ ಎಸ್ ಬೇಡಿಯ ಪರಿಂದ ಪ ರೆಸಲ್ಪಟ್ಟಿತ

ಕಳೆದ ತಾ ೩೦ರಲ್ಲಿ ನಡೆದ ಕೊಡ ಗು ವಿದ್ಯಾಧಿವೇತನ ಸಮಿತಿಯ ವಿ ಟಂಗಿನಲ್ಲಿ ಶ್ರೀ ಮೇಕೇರಿರ ಎಂ ಸಂಪತ್ ವರ್ತ ಪಟ್ಟಡಯ ಸರೋಜ ಇವರ ಗಳಿಗೆ ಪೆಡಿಕಲ್ ಸ್ಕಾಲರ್‌ಶಿಪ್ಪುಗಳನ್ನೂ, ಶ್ರೀ ಬಿಟ್ಟಿಯಂಡ ಎ ಪೊನ್ನಪ್ಪ, ಪಾ ಲೇಕಂಡ ಎಂ ಮೇದಪ್ಪ, ಬಲ್ಲಚಂಡ ಬಿ ಅಪ್ಪಯ್ಯ, ಮತ್ತು ಕೋಗಾಂಡ ಸಿ ಗಣಪತಿ, ಇವರ ಗಳಿಗೆ ಇಂಜಿನಿಯರಿಂಗ್ ಸ್ಕಾಲರ್‌ಶಿಪ್ಪುಗಳನ್ನೂ, ಶ್ರೀ ಕ ಜಿಕಂಡ ಟಿ ಸಬ್ಬಯ್ಯನವರಿಗೆ ಪೆಟ್ರೋನ್ಸ್ ಸ್ಕಾಲ ರ್‌ಶಿಪ್ಪನ್ನೂ, ಶ್ರೀ ಬೆ.ಎಸ್ಕೇರಿಯಂಡ ಎಂ ಪೊನ್ನಪ್ಪನವರಿಗೆ ಎಗ್ರಿಕಲ್ಚರಲ್ ಸ್ಕಾಲ ರ್‌ಶಿಪ್ಪನ್ನೂ, ಶ್ರೀಮತಿ ಸೋಮೆಯಂಡ ಟಿ ಕಾವೇರಿಯವರಿಗೆ ಬಿ ಎ ಸ್ಕಾಲರ್ ಶಿಪ್ಪನ್ನೂ, ಶ್ರೀ ಕಳೆಯಂಡ ಕಿ ಕರುಂ ಬಯ್ಯ, ಸಿ ಆರ್ ಪ್ರಾಣಿವಾರಿರವ್ ಕೋಟೆರ ಎಂ ಕಟ್ಟಯ್ಯ, ಪತ್ರ ಡ ಟ್ಟಿ. ಎಸ್ ಕುಂವರ್ ಇವರುಗಳಿಗೆ ಇ ಟರ್ ವಿಂಡಿವೆಂಟ್ ಸ್ಕಾಲರ್‌ಶಿಪ್ಪು ಗಳನ್ನೂ, ಬಿ ಎಸ್‌ಸಿ (ಬಕ್ಸ್‌ಟಿಯ ಲ್) ಯಲ್ಲಿ ಓದುತ್ತಿರುವ ಶ್ರೀ ಕಟ್ಟಿಂಡ ಎ ಪೂಚಯ್ಯನವರಿಗೆ ಖಾಲಿ ಇರುವ ಮೆಡಿಕಲ್ ಸ್ಕಾಲರ್‌ಶಿಪ್ ಒಂದನ್ನು ಆ ಥವಾ, ಚಾಮರಾಜ ಟೆಕ್ನಿಕಲ್ ಇನ್ಸ್ ಟಿಟ್ಯೂಟ್ ಸ್ಕಾಲರ್ ಶಿಪ್ಪನ್ನ ಕೊಡು ವಂತೆ ಚೀಫ್ ಕಮಿಷನರಿಗೆ ಶಿಫಾರಸ್ಸು ಮಾಡಿರುವರೆಂದು ತಿಳಿಯಬರುತ್ತದೆ ಹೈಸ್ಕೂಲು ಮತ್ತು ಇತರ ಶಾಲೆಗಳ ಫೀಸಿಪ್ ಮತ್ತು ಸ್ಕಾಲರ್ ಶಿಪ್‌ಗಳನ್ನು ನಿಶ್ಚಯಿಸಲು ಈ ತಾ. ೧೫ರಲ್ಲಿ ಈ ಸ ಮಿತಿಯ ಮಿಟಿಂಗು ಇದೆ

ಕೃತಜ್ಞತಾ ವಂದನೆ.

ನನ್ನ ಪತ್ನಿಯ ಆಕಾಲ ಮರಣದಿಂ ದ ನನಗುಂಟಾದ ದ ಖದ ಸಮಯದಲ್ಲಿ ನನಗೆ ಪತ್ರ ಮತ್ತ ತಂತಿಯ ಮೂಖಾಂ ತರ ಮತ್ತು ಖ ದ್ದಾಗಿ ಬಂದು ತವ್ಮ ಸಂತಾಪವನ್ನು ಸೂಚಿಸಿ ನನ್ನ ದ ಖದ ಲ್ಲಿ ಭಾಗಿಗಳಾದ ನವ್ಮ ಬಂಧು ಮಿತ್ರರಿಗೆ ಈ ಮೂಲಕ ನನ್ನ ಕೃತಜ್ಞತೆಯನ್ನು ಅರ್ಪಿಸ ತ್ತೇನೆ

ಎ ಎ ರೊಡ್ರಿಗ್ಸ್
ಪಿಲಿಬೆಟ್ಟ ತೋಟ, ಅಮ್ಮತ್ತಿ

ಕೃತಜ್ಞತಾ ವಂಬನೆ.

ತನ್ನ ಪ್ರಿಯ ತಂದೆಯವರ ಮರಣ ದಿಂದ ನನಗೂ, ಟಾದ ದ ಖದ ಸಮ ಯದಲ್ಲಿ ನನಗೂ ನನ್ನ ಕಹೋದರರಿಗೂ ಪತ್ರ ಬರೆದು ಮತ್ತು ಖುದ್ದಾಗಿ ಬಂದು ತವ್ಮ ಸಂತಾಪವನ್ನು ಸೂಚಿಸಿ ನನ್ನ ದುಃಖದ ಲ್ಲಿ ಭಾಗಿಗಳಾದ ಸರ್ವ ಬಂಧು ಮಿತ್ರರಿಗೆ ಈ ಮೂಲಕ ನವ್ಮ ಕೃತಜ್ಞತೆಯನ್ನು ಅರ್ಪಿಸ ತ್ತೇನೆ

ನೆಲ್ಲಿಮಕ್ಕಡ ದೇವಯ್ಯ,
ವ ನಾರ್ತಾಡು

ನೋಟೀಸು.

ದಕ್ಷಿಣ ಕೊಡಗು ತ ಲೋಕು ಪೊನ್ನಂಪೇಟೆನಾಡು ಈಚೂರು ಗ್ರಾಮದ ಒಕ್ಕಲಿಗರ ಪೌತಿ ಕಂಣಪ್ಪನವರ ಮಗಳು ಕಾವೇರಮ್ಮನು ಈ ಮೂಲಕ ತಿಳಿಯ ಪಡಿಸುವುದೇನೆಂದರೆ

ನವ್ಮ ತಂದೆಯವರು ಆವ್ಮನಾಡು ಕೊಳತ್ತಡ ಬೈಗೋಡು ಗ್ರಾನಂದ ಒ ಕ್ಕಲಿಗರ ಪೌತಿ ಚನ್ನಿಪ್ಪನವರ ಮಗ ದೇವಣ್ಣನವರಿಗೆ ೧೯೩೬ನೇ ಇಸವಿಯಲ್ಲಿ ನನ್ನನ್ನಲ್ಲಗ ಮಾಡಿಕೊಟ್ಟರು ನನ್ನ ಪತಿ ತುಂಬಾಮೊಡಂಡ ಇವರಿಗೆದ್ದೇವಿಕ್ಕೆಭೂ ಮಿ ಮತ್ತುಜಪ್ತಿ ಎಸ್ಟೇಜಾಗವನ್ನು ಪದ್ರಿನಾ ಡು ಹಾಳೂರು ಗ್ರಾಮದ ಕೊಳ್ಳಂಡ ಶೀ ಮೇದಪ್ಪನವರ ಪ ಗ ಬೆಳ್ಳಿಪ್ಪನವರು ನನಗೂ ನನ್ನ ವ ಕ್ಕಲಗ ತಿಯಂದೆ ನಂಬಿಸಿ ಗುಟ್ಟಿನಲ್ಲಿ ಕ್ರಯ ಪತ್ರವನ್ನು ೧೯೪೪ನೇ ಇಸವಿಯಲ್ಲಿ ಬಗಸಿ ಕೊಂಡಿ ರುತ್ತಾರೆ ಈ ಪಿತಾರ್ಜಿತ ಸೊತ್ತುವಿ ಗಾಗಿ ವೆಳ್ಳಂಡ ಬೆಳ್ಳಪ್ಪನವರ ಮೇ ಲೆ ನನ್ನ ಮತ್ತು ನನ್ನ ಮಕ್ಕಳ ವ್ಯಾಜ್ಯ ಮುಂದೆ ಸಡೆಯಲಿರುವುದು ಇದು ಕಂ ಡ ಬೆಳ್ಳಪ್ಪನವರು ಸೂತ್ತನ್ನ ಬರಾ ಧೀನ ಮಾಡಲು ಪ್ರಯತ್ನಿಸುತ್ತುದಾಗಿ ತಿಳಿದು ಬರುತ್ತದೆ. ಆದ್ದರಿಂದ ಈ ಸೊತ್ತುವನ್ನುಯಾರಿಂದರೂ ಗಿರ್ವಿ ಭೋಗ್ಯ ಕೋ ಕ್ರಯಕ್ಕೆ ಕೊಂಡು ಕೊಳ್ಳು ವುದಾಗಲೀ ಸಹಕರಿಸಲ್ಲಾ ವಂದೆ ಬರಾ ವ ಕಷ್ಟ ನಷ್ಟಕ್ಕೆ ಅವರೇ ಗರಿಯಾಗತಕ್ಕ ದೆಂದು ಈ ಮೂಲಕ ತಿಳಿಸಲಾ ಗಿದೆ

ವಿ ಕಾವೇರಮ್ಮ,

ಓರಿಯಂಟ್ ಕ್ಯಾಷ್ಯೂ ಪ್ರೋಡೆಕ್ಟ್ಸ ಅಂಡ್ ಇಂಡಸ್ಟ್ರೀಸ್, ಲಿಮಿಟೆಡ್.

ವ ವ್ಯ ಖಿಜೀರಿ —ಮದರಾಸು ಕಾರ್ಖಾನೆ —ಟಿಲಿಚೇರಿ

ಪದ್ಧತಿಲ್ಲಿಯೇ ನವ್ಮ ವೆಳ್ಳಂಡ ಕಂಪೆನಿಯ ಟಂಬರ್ ಕೊಳ್ಳವ ಡಿಸ್ಟೋವ ನ್ನು ವೀರಾಜಪೇಟೆಯಲ್ಲಿ ತೆರೆಯಲ ಗುವುದು ಅವುಗಳಿಂದ ಬೆಂಕಿಪಟ್ಟಿಗೆಗೆ ಮತ್ತ ಬೆಂಕಿ ಕಡ್ಡಿಗಳಿಗೆ ಆಗುವ ಮರಗಳನ್ನಾಗಲೀ ಅಥವಾ ಇಂಥಾ ಮರ ಗಳನ್ನು ಕೊಯ್ದಗಳನ್ನಾಗಲೀ ಮಾರಲು ಬಯಸುವವರು ಈ ಕೆಲಗೆ ಕಂಡ ಅಡ್ರ ಸಿಗೆ ಪ್ರವಹರಿಸಬೇಕಾಗಿ ಕೋರುತ್ತೇನೆ

Local Agent,
C/o The Canara Banking Corporation,
VIRAJPET

4-1

ಬಡರೈತನ ಪುಕಾರು ಕೇಳುವವರಿಲ್ಲ

ವೀರಾಜಪೇಟೆಗೆ ೭೮ ಮೈಲಿ ಸಕ್ಕರೆ ಬರುತ್ತದೆಯೆಂಬ ವರ್ತಮಾನವಿದೆ. ಸಕ್ಕರೆ ಯಾರ ಪಾಲಿಗೆ ಹೋಗುತ್ತದೆ, ಯಾರು ಲಾಭಬಡಕರು ಎಂದು ಗೊತ್ತಾಗುವುದಿಲ್ಲ. ಕಂದಾಯ ಪೆರುತ್ತಿರುವ ರೈತರ ಮೇಲೆ ಸರಕಾರಕ್ಕೆ ದಯೆಯಿಲ್ಲವೆಂದು ಹೇಳಿದರೆ ತಪ್ಪು ಆಗಲಾರದು. ಮೂರು ತಿಂಗಳಿಗೆ ಒಮ್ಮೆಯಾದರು ಅರ್ಧ ಸಂಚೇರು ಸಕ್ಕರೆ ಸಿಕ್ಕುವುದು ಕಷ್ಟ. ಪರ್ಮಿಟ್ ಹುಡಿ ಕಾಣಲಿಕ್ಕೆ ಸಿಕ್ಕುವುದೇ ಇಲ್ಲ. ಆಂಗಡಿ ವ್ಯಾಪಾರಿಗಳಲ್ಲಿ ಕೊಟ್ಟು ಮೂರಾಟ ಮಾಡಿಸುವುದರಿಂದ ಅವರಿಗೆ ಲಾಭ ಸಿಕ್ಕಬಹುದಲ್ಲದೆ ಬೇರೆಯವರಿಗೆ ಸಿಕ್ಕುವುದಿಲ್ಲ. ಸಕ್ಕರೆ ಮತ್ತು ಹುಡಿ ಬಂದು ಮೂರಾಟಕ್ಕೆ ಹೊಗುಂ ಕೊಡಲಿಕ್ಕೆ ಹಗಲು ೧೨ ಘಂಟೆ ಸಾಗುತ್ತೆ. ೩ ಘಂಟೆ ಪರೆಗೆ ಜನರ ಕಿಕ್ಕಾಟ. ಬಲಹೀನರು ಹೋಗ್ಯಾರು ಗಲಾಟೆ ನೋಡಿ ನಿಲ್ಲುವುದಲ್ಲದೆ ಆಂಗಡಿಯವನನ್ನು ನೋಡುವುದು ಸಹ ಅಸಾಧ್ಯ. ಗಲಾಟೆ ತೀರಲಿ ಎಂದು ವಾರಕಾದು ೫ ಘಂಟೆ ಸಮಯಕ್ಕೆ ಹೋದರೆ ಮುಗಿದು ಹೋಯ್ತು ಏನೂಮಾಡಲಿ ಎಂಬ ಜವಾಬು ಒಂದು ಮೂಟೆ ಸಕ್ಕರೆಗೆ ೩೦ ರೂಪಾಯಿ ಕಂಪಾದನೆ ಮಾಡುತ್ತಾರೆಂದೂ ಮೂತಿದೆ! ಇದು ನಿಜವೆ? ಬಡರೈತರ ತೊಂದರೆಯನ್ನು ಯೋಚನೆ ಮಾಡಲು ಮುನಸಿಪಲ್ಟ ಉಪ್ಪೋಗದ್ದರು ಇಂಥ ಸ್ಥಳಗಳಲ್ಲಿರುವುದು ಅನ್ಯಾಯ. ರೇಷನಿಂಗ್ ಇಲಾಖೆಯಲ್ಲಿ ಆಲಗಾಯಿತಿನಿಂದ ಈ ವರೆಗೆ ಬರಿ ಇಬ್ಬರ ಮೇಹನೇಯನನ್ನು ಮಾತ್ರ ರೈತರು ಮೆಚ್ಚಿದ್ದಾರೆ! ಬೇರೆ ಯಾರಿಗೂ ಪುರಸ್ಕಾರ ಸಿಕ್ಕಿಲ್ಲ, ಕಾರಣವೇನೆ? ಮುಂದಕ್ಕಾದರೂ ಕಂಟ್ರೋಲ್ ಸಾನಾನುಗಳನ್ನ ಮೂರಾಟ ಮಾಡುವ ರೀತಿಯನ್ನು ಬದಲಾಯಿಸಬೇಕು ಈಗ ಯಾವುದೊಂದಾ ಸಿಕ್ಕಿಲ್ಲದೆ ಕೂಪನ್ ಕೊಡುತ್ತಾರೆಯೇ ಹೊರತಾಗಿ ಬೇರೆಯಲ್ಲ ಸೀವೆ ಯೆಣ್ಣೆಗೆ ಆಧ್ಯ ಸಾರಾಯಿಗೆ ಕೂಪನ್ ಕೊಡುವ ರೀತಿಯನ್ನು ಅನುಸರಿಸಿ ವೀರಾಜಪೇಟೆಯಲ್ಲಿ ಒಂದು ಡಿಪೋ ತೆರೆದರೆ ಸಿಬ್ಬಂದಿ ಖರ್ಚೂ ಹೆಚ್ಚಾಗಲಾರದು. ಪಟ್ಟಣ ಗ್ರಾಮಾಂತರ ಹೊಟೆಲುಗಳಲ್ಲಿ ಟೀ ಮಾಡುವುದನ್ನು ನುತು ಸಿಹಿ ಹಿಂಡಿ ಮಾಡುವುದನ್ನು ಖಂಡಿತ ನಿಲ್ಲಿಸಬೇಕು. ಇನದೇ ತಪ್ಪು ಕಂತೆಗೆ ಆದ ಕೊಡುವವರು. ಅಲ್ಲದೆ ವೀರಾಜಪೇಟೆಯಿಂದ ಹೊರಗಡೆ ಸಕ್ಕರೆ ಹೋಗುತ್ತಾ ಇರೆಯೆಂದು ವರ್ತಮಾನವಿದೆ. ಇದನ್ನು ಸರಕಾರ ಗನಸಿಸಬೇಕು ಒಂದು ಪಾಂಡು ಸಕ್ಕರೆಗೆ ಆಯಕಾಲು ಹೆಚ್ಚಿಸಿಯಾದರು ಸರಕಾರವೇ ಮೂರಾಟದ ಜವಾಬ್ದಾರಿಕೆ ವಹಿಸಿದರೆ ಆದರಲ್ಲಿ ನಷ್ಟವಾಗಲಾರದು. ಆರು ತಾಸಿನಂತೆ ಹೆಚ್ಚಿಸಿದರೆ ಒಂದು ಮೂಟೆ ಸಕ್ಕರೆಗೆ ೩ ಲಾಭವಾಗುತ್ತೆ. ನಮ್ಮಟೀಫ್ ಕಮಿಷನರರವರು ಇದನ್ನು ತಮ್ಮ ಘನ ಚಿತ್ತಕ್ಕೆ ತೆಗೆದುಕೊಂಡಾದೆ ಬಡ ರೈತನನ್ನು ಸಲ್ಲಿಸಿದಂತಾಗಿ ಭಗವಾಬಿನಲ್ಲಿ ಕಷ್ಟ ಸುಖಗಳನ್ನು ವಿಚಾರಿಸಿದಂತೆಯೂ, ಲಾಭ ಬಡಕರ ದುರಾಲೆಯನ್ನು ಅಡಗಿಸಿದಂತೆಯೂ ಆಗುವುದು.

P. A. N.

ಓದುಗರ ಓಲೆಗಳು.

ವಿಜಯ ಕ್ಲಬ್

'ವಿಜಯ ಕ್ಲಬ್' ಎಂಬ ಹೆಸರಿನ ಕ್ಲಬ್ ಪ್ರಾರಂಭವಾಗಿದೆ. ಅಲ್ಲಿ ನಡೆಯುವವನ್ನು ನೋಡಿದರೆ ವಿಷಾದವಾಗುತ್ತದೆ ಕ್ಲಬ್ಬಿಗೆ ಒಂದೆರಡು ಪತ್ರಿಕೆಗಳು ಬರುತ್ತವೆ. ಆದರೆ ಅವುಗಳನ್ನು ಓದುವವರಿಲ್ಲ ಆದರೆ ಸಾಯಂಕಾಲ ೫ ಗಂಟೆಯಿಂದ ಇಸ್ಪೀಟು ಆಡಲು ಕುಳಿತರೆ ಇಡೀ ರಾತ್ರಿ ಇಸ್ಪೀಟಿನಲ್ಲಿ ಕಾಲ ಕಳೆಯುವ ಅಭ್ಯಾಸ ಇಕ್ಕಿತ್ತ ಬಲವಾಗುತ್ತಿದೆ. ಕ್ಲಬ್‌ಗಳಲ್ಲಿ ಇಸ್ಪೀಟು ಆಡುವುದು ಮನೋರಂಜನೆಗಾಗಿ. ಇದು ಬಿಟ್ಟು ದುಡ್ಡಿಟ್ಟು ಆಟ ನಡೆಯುತಿದ್ದು ಅದು ವಿಪರೀತಕ್ಕೆ ಏರಿ ಜುಗಾರಿಯು ಮಟ್ಟಿಗೆ ತಲಪಿದೆ. ಇದು ಕ್ಲಬ್ಬಿನ ಪರಿಣಾಮವಾದರೆ ನಮ್ಮ ನೆರೆ ಊರಿನ ಶಾಲೆಯೇ ಕ್ಲಬ್ಬಾಗಿದೆಯೆಂದು ವರ್ತಮಾನ. ಶಾಲೆಯಲ್ಲಿ ಅಧ್ಯಾಪಕರೂ ಇತರ ಕೆಲವು ಸಾರ್ವಜನಿಕರು ಸೇರಿ ಹಗಲಿರುಳು ದುಡ್ಡಿಟ್ಟು ಇಸ್ಪೀಟು ಆಡುತ್ತಿರುವರೆಂಬ ಶಾಲೆಗಳಲ್ಲಿ ಈ ರೀತಿಯ ನೀತಿಯು ಮಕ್ಕಳ ಮೇಲೆ ಪುಕ್ಕರಿಣಾಮವನ್ನು ಬೀರದಿರದು ಆದ್ದರಿಂದ ವಿದ್ಯಾ ಇಲಾಖೆಯವರೂ, ಪೋಲೀಸ್ ಇಲಾಖೆಯವರೂ ಈ ರೀತಿಯ ಜುಗಾರಿ ನಡೆಯದಂತೆ ಎಚ್ಚರಿಕೆಯಿರಬೇಕು

—ವಿಚಾರಿ.

ಜಿಲ್ಲಾ ಬೋರ್ಡ್ ಉಪಾಧ್ಯಾಯರ ಮತ್ತು ಶಾಲಾ ಸಂಚಾಯಿತರ ಮೀಟಿಂಗು.

ತಾರೀಕು ೧೮-೮-೩೮ರಲ್ಲು ನೀರಾಜಪೇಟೆಯಲ್ಲಿ ಉಪಾಧ್ಯಾಯರ, ಪಂಚಾಯಿತಿ ಸೆಂಬರರು, ಸ್ಕೌಟ್ಸ್‌ಕರು ಸೇರಿ ಸಾರ್ವಜನಿಕರಿಂದ ಕೂಡಿದ ಒಂದು ವಿಚಿತ್ರವನ್ನು ನೋಡಿದೆವು ಶಾಲೆ ಗೊಬ್ಬ ಪಂಚಾಯಿತರಾದರೆ ಇನ್ನೂ ಜಿಚ್ಚು ಜನರಿರಬೇಕಾಗಿತ್ತು. ಇದರಿಂದ ಎಲ್ಲಾ ಶಾಲೆಯ ಜನರು ಸಹಕರಿಸಿದಂತೆ ಕಾಣಲಿಲ್ಲ ಸಾರ್ವಜನಿಕರೆಲ್ಲಾ ಶಾಲೆಯ ಮುಖ್ಯ ಧ್ಯೇಯರಿಂದ ಆಸಿ ಕಳುಹಿಸಿದವರೆಂಬ ಅಲ್ಲಿಯ ಅಭಿಪ್ರಾಯದಿಂದಲೂ ಉಪಾಧ್ಯಾಯರ ಸಂಸ್ಥೆಯ ಇವಿಟಿಯುಸರಿಂದಲೂ ತಿಳಿಯುಲಯಿತು. ಉಪಾಧ್ಯಾಯರೂ ಆಸಿಕಳುಹಿಸಿದ್ದಾ ಪಂಚಾಯತ್ತಿಂಗ ಉಪಧ್ಯಾಯನಿಗೆ ಒಕ್ಕಣೆಯ ಅಭಿಪ್ರಾಯ ಸಿಕ್ಕಿರುವದಲ್ಲದೆ ಎಲ್ಲಾ ಪತಿನಿ ಜನರ ಅಭಿಪ್ರಾಯ ಸಿಕ್ಕಿದಂತಾಗುವುದಿಲ್ಲ ವಿಚಿಂಗನಲ್ಲಾದರೋ ಪಂಚಿ ಅಂಥ ವಾದ ಸಂಬಳವನ್ನು ಹೆಚ್ಚಿಸುವ ಅದಕ್ಕೆ ಹಣವನ್ನು ಕಂಡುಕೊಳ್ಳುವ ವಿಷಯವನ್ನು ಆಲೋಚಿಸುವುದರ ಬದಲು ಸಂಸ್ಥೆಯ ಪೆಸಿಡೆಂಟರು ಹಿಂದೆ ಬೋರ್ಡಿನ ವೈಸ್ ಪೆಟರ ಹುದ್ದೆಗೆಯ ಪ್ರಯತ್ನವನ್ನು ಟೀಕಿಸಿ ಇಲ್ಲದ ಕಲ್ಲದ ತಪ್ಪು ಅಭಿಪ್ರಾಯಗಳನ್ನು ಹೇಳುತಿದ್ದರು. ಸಭೆಯಲ್ಲಿ ಕೆಲವರು ಅಪಕ್ಕೆ ವಿರೋಧಿಸಿದ್ದರಿಂದ ಅಂಥ ಮಾತನ್ನು ಜಾಕೆ ಮಾಡಿದರು. ಉಪಾಧ್ಯಾಯರ ಸಂಬಳವನ್ನು ನ್ಯಾಯ ರೀತಿ ಹೆಚ್ಚಿಸಲು ದೇಶದಲ್ಲಿ ಎಲ್ಲರೂ ಒಪ್ಪುವ ದಾದರೂ ಡಿಸ್ಟ್ರಿಕ್ಟ್ ಬೋರ್ಡಿನ ಬೊಕ್ಕಸದಲ್ಲಿ ಹಣದ ಆಭಾವದಿಂದಾಗಿ ಅದು ಕೈಗೂಡದಿರುವದಲ್ಲದೆ ಬೇರೆತರದಲ್ಲಾ ಗಿರಲಿಕ್ಕಿಲ್ಲ ಇದನ್ನು ಸರಿಪಡಿಸಲು ರೈತಾಪಿಜನರ ಮೇಲೆ ತೆರಿಗೆಯು ಬಂದೇ ಬರುವುದೆಂಬ ಸಂಶಯವು ನನಗಿದೆ. ಪರಿಸ್ಥಿತಿ ಹೀಗಿದ್ದರೂ ಕೆಲವು ಜನರು ನನ್ನ ಮಗ ಯೂ ನನ್ನ ನೆಂಟರಿಷ್ಟರಾಗಿರುವ ಉಪಾಧ್ಯಾಯರುಗಳಿಗೆ ಹೆಚ್ಚು ಸಂಬಳ ಸಿಕ್ಕಿಕೊಳ್ಳಲಿ ಮತ್ತು ಸಂಸ್ಥೆಯ ಭವ್ಯವೂ ನನಗೆ ದೊರೆಯಬೇಕೆಂಬ ಆಸೆಗೆ ಒಳಪಟ್ಟು ಉಪಾಧ್ಯಾಯರು ಹೇಳಿದಂತೆ ಕೇಳುವುದು ಸಮಂಜಸವಲ್ಲ' ಇಂಥಾ ವಿಚಾರವನ್ನು ನಾಡು ನಾಡುಗಳಲ್ಲಿ ವಿಚಿಂಗು ಮಾಡಿ ಅಲ್ಲಿಯ ಬಹುಮತ ಪಕ್ಷದ ಪ್ರತಿನಿಧಿಗಳಿಂದ ಸರಿಯಾದ ಅಭಿಪ್ರಾಯ ಪಡೆಯಬೇಕು ಈಗಿನ ಪರಿಸ್ಥಿತಿಯಲ್ಲಿ ಉಪಾಧ್ಯಾಯರ ಜೀವನವು ನಾಡುಗಳಲ್ಲಿ ಒಡಕನ್ನುಂಟುಮಾಡುತ್ತದೆ ಎಂಬುದಕ್ಕೆ ಸಂಶಯ ವಿಲ್ಲ. ಉಪಾಧ್ಯಾಯರೂ ಕೂಡ ಪಾರ್ಟಿ ಸಂಗಡದ ಬಲಿಗೆ ಬೀಳಬಾರದು. ಸರಕಾರವು ಸಹ ಈ ವಿಚಾರ ಎಚ್ಚರಿಕೆ ವಹಿಸಬೇಕು.

ಕಡೆಗೆ ಆ ಸಭೆಯಿಂದ ಕೆಲವರು ಸಭಾತ್ಯಾಗ ಮಾಡಿದರು ಅಂತೂ ಆ ದಿನದಲ್ಲಾ ಮುಖ್ಯರದ ಮಾತನ್ನು ಜಾಕಿ ಮಾಡಿ ಒಂದು ನವ ತಿಯನ್ನು ಎರ್ಪಡಿಸಿ ಸಮ್ಮೇಳನದಟ್ಟ ಅಧಿಕಾರಿಗಳನ್ನು ಭೇಟಿ ಮಾಡಿ ವೇತನದ ಕೂಗನ್ನು ಬಗೆಹರಿಸಲು ಏರ್ಪಡಿಸಿದ್ದು ಶ್ಲಾಘನೀಯವಾಗಿರುತ್ತದೆ.

B P. B.

"ಪುಂಡುಗಾರಿಕೆ?"

ಈ ಶೀರ್ಷಿಕೆಯಲ್ಲಿ ಕಳೆದ ವಾರದ 'ಕೊಡಗು' ಪತ್ರಿಕೆಯಲ್ಲಿ ಒಂದು ಓಲೆಯನ್ನು ಓದಿ ವ್ಯಸನವೂ ಆಶ್ಚರ್ಯವೂ ಆಯಿತು. ಲೋಕನೇ ಬದಲಾಗಿರುವ ಈ ಸಮಯದಲ್ಲಿ ತಿಂಗಳಿಗೆ ೫೦ ರೂಪಾಯಿಂ ಮೇಲಿನವರಿಗೆ ಅಷ್ಟು ಉತ್ತಮ ಮನೆಯನ್ನು ಮುನಿಸಿಪಲಿಟಿಯವರು ಏಕೆ ಕಟ್ಟಿರುವರೆಂಬ ಆಭಿಪ್ರಾಯವು ಲೇಖಕರಿಗೆ ಉಂಟಾಗಿರಲು ಕಾರಣವೇನೋ ತಿಳಿಯದು ಆದರೆ ಮುನಿಸಿಪಲಿಟಿಯವರು ಉಪಾಧ್ಯಾಯರಿಗೆ ಮಾತ್ರ ಮನೆ ಕಟ್ಟಿಸಿಕೊಡುವುದಾಗಿ ಹೇಳಿಲ್ಲ ಅಂಥಾ ಪರಿಸ್ಥಿತಿಯಲ್ಲಿ ಬೇಕೆಂದು ಯಾರೂ ಹೇಳುವುದಿಲ್ಲ. ಅಂಥಾ ಪರಿಸ್ಥಿತಿಯಲ್ಲಿ ಬೇಕೆಂದು ಪುರಸಿಭೆಯವರಿಗೆ ಅರ್ಜಿ ಬರೆದುಕೊಂಡದ್ದು ಈ ಪುಡಾನಿಯಂಗೆ ತಿಳಿದಿಲ್ಲವೆಂದು ತೋರಲಿಕ್ಕೆ ಮತಿರೀಯಲ್ಲಿ ಮೋಟು ಉಮ್ಮಿಕರವಹನಿಗಳ ಪಹವಾಟು ಹೆಚ್ಚಾಗಿದ್ದು ಈಗಿರುವ ಚೌಕಿಯಲ್ಲಿ ೪ ಅಸಾಲಿಕೆ ಕಸ್ಟಮರುತ್ತಿರುವವನ್ನು ಮಂಡಿಯವರು ನೋಡಿರಲಿಕ್ಕಿಲ್ಲ. ಈ ವರ್ಷದ ನಿರ್ಣಯವನ್ನು ಕಲವು ವರ್ಷಗಳ ಹಿಂದೆಯೇ ಮುನಿಸಿಪಾಲಿಟಿಯವರು ಒಪ್ಪಿದ್ದರೂ ಹಣದ ಅಭಾವದಿಂದ ಈ ವರೆಗೆ ಮಾಡಿಲ್ಲ. ಈಗಲಾದರೂ ಇದನ್ನು ಮಾಡುವದು ಆವಶ್ಯಕವಿದೆ. ಮುನ್ಸಿಪಾಲಿಟಿಯವರು ನೀರಿಗೆ ತಕ್ಕ ವ್ಯವಸ್ಥೆ ಮಾಡಿದ್ದಾರೆ, ಮಾಡುತ್ತಲೂ ಇದ್ದಾರೆ. ಬೀದಿಯ ದೀಪದ ವಿಚಾರದಲ್ಲಿ ಇದು ಸ್ಥಳೀಯ ಸರಕಾರದ ಕೈಯಲ್ಲಿರುವ ಕಾರಣ ಮುನ್ಸಿಪಾಲಿಟಿಯು ಏನೂ ಮಾಡಲು ಸಾಧ್ಯವಿಲ್ಲದಾಗಿದೆ. ಮುನ್ಸಿಪಾಲಿಟಿಯು ಎಲ್ಲಿಂದಾದುದು ನೆಚ್ಚಮಾಡುತ್ತಿಲ್ಲ. ಸರಕಾರವು ನಿಷ್ಕಾರಣವಾಗಿ ತೊಡರು ಹಾಕುವ ಇಂಥಾ ಲೇಖನಗಳಿಗೆ ಗಮನಸವಿಡಬಾರದು.

ಕೆ. ಶಿವಾಜಿರಾವ್,
ಎಸ್., ಇದ್ದಿನಬ್ಬ.

ಪಾನನಿಯಂತ್ರಣದ ಆರ್ಥವೇನು?

ಕೊಡಗಿನಲ್ಲಿ ಮದ್ಯ ಪಾನವನ್ನು ಸಂಪೂರ್ಣ ನಿಲ್ಲಿಸಬೇಕೆಂಬ ತತ್ವವನ್ನು ಸರಕಾರವೂ, ಜನತೆಯೂ ಒಪ್ಪಿದರೂ ಕೆಲವೊಂದು ಕಾರಣದಿಂದ ಅದನ್ನು ಈಗ ಜಾರಿಯಲ್ಲಿ ತರುವದು ಹಿತವಲ್ಲವೆಂದು ಈಗಿರುವ ನಿಯಂತ್ರಣವನ್ನು ತಂದಿದ್ದಾರೆ ಈಗಿರುವ ನಿಯಂತ್ರಣವು ದಕ್ಷರೀತಿಯಿಂದ ನಡೆಯುತ್ತಿಲ್ಲವೆಂದು ಕೂಗು ಇದೆ. ಕಪ್ಪುಸಂತೆ, ಲಾಭ ಬಡಕತನಗಳಿಗೆ ಇದು ಆಸ್ಪದ ಕೊಟ್ಟಿದೆ. ಆದರೆ ಜೊತೆಗೆ ಕರುಣಾ ಹೃದಯದ ಸರಕಾರವು ವಿಶೇಷ ಹಬ್ಬಗಳ ಸಂದರ್ಭದಲ್ಲಿ ಪರ್ಮಿಟ್ಟುದಾರರಿಗೆ ಒಂದು ಕುಪ್ಪಿ ಬೆಟ್ಟಿನ ಸಾರಾಯಿ ಕೊಡುವ ಉದಾರತೆಯನ್ನು ತೋರಿದೆ. ಇದರ ಅನಿಷ್ಟ ಪರಿಣಾಮದಿಂದ ಲಾಭ ಬಡಕತನ ಇನ್ನೂ ಹೆಚ್ಚಾಗಿದೆ. ಆದ್ದರಿಂದ ಸರಕಾರದವರು ಈ ರೀತಿ ಹುಟ್ಟುಗಳಿಗೆಂದು ಹೆಚ್ಚಿನ ಸಾರಾಯಿ ಸರಬರಾಯಿ ಮಾಡುವದನ್ನು ಖಡ್ಡಾಯವಾಗಿ ನಿಲ್ಲಿಸಬೇಕು. ಹಾಗೆ ಮಾಡುವರೇ? ಬಿ. ಸಿ. ರಾ ಬಿ

ಕೊಟ್ಟಮುಡಿ ಸೇತುವೆಯ ಅವಶ್ಯಕತೆ.

ನಾಪೋಕ್ಲು ನಾಡಿಗೆ ಪೆಬ್ಬಾಗಿದ್ದು ಇರುವ ಕೊಟ್ಟಮುಡಿಯಲ್ಲಿ ಕಾವೇರಿ ನದಿಗೆ ಸೇತುವೆಯನ್ನು ಕಟ್ಟುವರೆಂಬ ಪಸಾದ ನಾನು ಕಾಲೆಯಲ್ಲಿ ಓದುತ್ತಿರುವ ಕಾಲದಿಂದಲೇ ಕೇಳಿಬರುತ್ತಿದೆ. ಬಗಲೂ ಅದೇ ಮಾತು. ವಿಷಯ ಕಾರ್ಯರೂಪಕ್ಕೆ ಏನೂ ನಡೆಯಿಲ್ಲ ಇಲಾಖೆಯವರು ಎನ್ನೋ ಸಾರಿ ಜಾಗ ಅಜಮಾಯಿಸಿರಿ ತ್ತಾರೆ ನಕಾಶೆ ಮಾಡಿರುತ್ತಾರೆ ಹೊಣೆ ಲೆಕ್ಕ ಹಾಕಿರುತ್ತಾರೆ ಇಷ್ಟಕ್ಕೆಲ್ಲಾ ನಿಂತ್ಹೋಗಿ ಮೆಕ್ಕೆನೆ ಒಂದು ಸಾಮಾನ್ಯ ಸಂತಸಗೆ ಸಾಕಾಗುತಿತ್ತು. ಈಗ ಕೆಲವು ವರ್ಷಗಳಿಂದ ಇನ್ನೇನು ಇಂದೋ ನಾಳೆಯೋ ಸೇತುವೆಕಲ್ಲ ಪ್ರಾರಂಭಿಸುತ್ತಾರೆ ಎಂದು ಕಲ್ಲಲ್ಲಿ ಮಾತಾಡುತ್ತಿರುವಷ್ಟರಲ್ಲಿ ಸರಕಾರವು ಸೋಜಿಗೆ ಖರ್ಚಾಗಿ ಕೆಲಸವು ಬಾಕಿಯಾಗುವಂತೆ ಕಾಣುತ್ತಿದೆ ಇದು ಈ ನಾಡಿನವರ ದುರ್ದೈವ 'ಇಲ್ಲಿಗೆ ಮುನಿಸಿಪಲಿಟಿಯಾಗಿ ೫೦ ವರ್ಷ' ಎಂಬಂತೆ ಕೊಟ್ಟಮುಡಿ ಸೇತುವೆಯ ಸ್ಥಿತಿಯಾಗಿದೆ.

ಈ ನಾಡಿಗೆ ಸಂಬಂಧ ಪಟ್ಟ ಕೌನ್ಸಿಲ್ ಮೆಂಬರುಗಳೂ, ಡಿ ಬಿ. ಸದಸ್ಯರೂ, ಸಹಕಾರಿ ಕೂಟದ ಅಧ್ಯಕ್ಷರೂ ಇದ್ದಾರೆ. ಇವರೆಲ್ಲ ತಮ್ಮ ಪೈಕಿಂದಿನ ಕಾರ್ಯಕಲಾಪಗಳಲ್ಲಿ ಮಗ್ನರಾಗಿರುವರೇ ವಿನಹ ಮುಂದಾಲೋಚನೆಯಿಂದ ನಾಡಿನ ಪ್ರಗತಿಗೆ ಪ್ರಯತ್ನಿಸುವುದು ಕಂಡು ಬರುವುದಿಲ್ಲ. ಇಲ್ಲವಾದರೆ ಇಂಥಾ ಒಂದು ಅವಶ್ಯವಾದ ಮತ್ತು ಅತುರವಾದ ಕೆಲಸದಲ್ಲಿ ಮುಂದಾಳುಗಳು ಎಡೆಬಿಡದೆ ಪ್ರಯತ್ನಿಸಿದ್ದರೆ ಸಫಲವಾಗದೆ ಇರುತ್ತಿರಲಿಲ್ಲ. ಇದೆಲ್ಲದಕ್ಕೂ ಮನಸ್ಸು ಮತ್ತು ಪ್ರಯತ್ನ ಅವಶ್ಯ ಬೇಕು.

ಸಾಧಾರಣ ಇಪ್ಪತ್ತೈದು ವರ್ಷಗಳಿಂದ ಈ ನಾಡಿನ ಜನರ ಅನುಕೂಲತೆಗಾಗಿ ಒಂದು ಸಂತೆ ನಡಿಸಬೇಕೆಂದು ಅನೇಕ ಬಾರಿ ಸರ್ಕಾರವವ್ನೂ ಕೇಳಿಕೊಂಡಿದ್ದಲ್ಲದೆ, ವ್ಯಾಪಾರಕ್ಕೆ ರನ್ನೂ ಪ್ರೋತ್ಸಾಹಿಸಲಾಗಿತ್ತು. ಆದರೆ ವರ್ಷದಲ್ಲಿ ಆರು ತಿಂಗಳು ಯಾವದೇ ವಹಿವಾಟು ಆಸಾಧ್ಯವಾದ್ದರಿಂದ ಇನ್ನೂ ನಮಗೆ ಈ ಸೌಲಭ್ಯವು ಒದಗಲಿಲ್ಲ. ಈ ಸಂತೆಯು ವಿರ್ಸಾಡು ಕೊಟ್ಟಮುಡಿ ಸೇತುವೆಯ ಮೇಲೆ ಹೊಂದಿಕೊಂಡಿದೆ. ಉತ್ತನು ಮೊರ್ಕೆಟಿನ ಮೇಲೆ ಜನರ ಆರ್ಥಿಕ ಉನ್ನತಿಯು ಅವಲಂಬಿಸಿದೆ. ಇದಿರಡೂ 'ಹುಚ್ಚು ಬಿಡದೆ ಮದುವೆ ಮಾಡಿದರೆ, ಮನಸ್ಸೆ ಆಗದೆ ಹುಚ್ಚು ಬಿಡದು' ಎಂಬ ಗಾದೆಗೆ ಸರಿಯಾಗಿದೆ. ಈಗಲಾದರೋ ನಾಪೋಕ್ಲಿನಲ್ಲಿ ಹೈಸ್ಕೂಲು ಆದ ಕಾರಣ ಈ ಊರು ಬೆಳೆಯುತ್ತಾ ಬಂದಿದೆ. ಸಂತೆಯು ಅವಶ್ಯಕತೆ ಹೆಚ್ಚಾಗಿದೆ. ಇಲ್ಲಿಯ ಸಾಮಾನುಗಳ ಕ್ರಯವು ಮೇಲೆ ಹೇಳಿದ ವಹಿವಾಟಿನ ಅನಾನುಕೂಲತೆಯಿಂದ ದುಬಾರಿಯಾಗಿದೆ. ನಮ್ಮ ಮುಂದಾಳುಗಳು ಇಂಥ ಸಾರ್ವಜನಿಕ ಒಳಿತುಕೆಲಸವನ್ನು ಒದಗಿಸಲು ಎಷ್ಟು ಪ್ರಯತ್ನಪಟ್ಟರೂ ಸಾಲದು. ತಮ್ಮ ಜನ್ಮದಲ್ಲಿ ಇಂಥ ಆಗತ್ಯವಾದ ಕಣ್ಣಿಗೆ ಕಾಣುವ ಒಂದೊಂದು ಜನೋಪಕಾರಿ ಕೆಲಸವನ್ನು ಮಾಡಿಸಿದ್ದೇ ಆದರೆ ಅವರು ತಮ್ಮ ಕರ್ತವ್ಯವನ್ನು ಮಾಡಿ ಜನರ ಮನ್ನಣೆಗೆ ಪಾತ್ರರಾಗುವದರಲ್ಲಿ ಸಂಶಯವಿಲ್ಲ.

ಬ್ರಿಟಿಷರ ವ್ಯಾಪಾರದ ಅಡಳಿತದಲ್ಲಿ ಸಿದ್ದಾಪುರ ಹಾಗೂ ಫ್ರೇಜರ್‌ಪೇಟೆಯ ಬಳಿ, ಅವರ ಹಾಗೂ ಅವರ ಅಡಳಿತ ಸ್ವಾರ್ಥತೆಯಿಂದಾಗಲೂ ಸೇತುವೆ ಕಟ್ಟಿರುವುದು ಎಷ್ಟೋ ಮೇಲು ಮತ್ತು ನಿರಂತರ ಜನೋಪಕಾರಕವಾಗಿದೆ. ಇಪ್ಪತೈದು ವರ್ಷದ ಕೌನ್ಸಿಲ್ ರಾಜ್ಯಭಾರದಲ್ಲಿ ನಮ್ಮ ಪ್ರತಿನಿಧಿಗಳಾದ ಮುಂದಾಳುಗಳು ಕೌನ್ಸಿಲ್ ಭವನದಲ್ಲಿ ಬೇಕಾದಷ್ಟು ನಿಗ್ಗ ಧ್ವನಿಗಳನ್ನು ಮಾಡಿ ಯಾವುದೊಂದೂ ಕಾರ್ಯರೂಪಕ್ಕೆ ಬಾರದೆ ಗಾಳಿಗೋಪುರಗಳು ನಿಯೇ ಉಳಿದಿರುವುದು ದೇಶಕ್ಕೇನೇ ದುರ್ಭಾಗ್ಯವು. ಇದೇ ಸಮಯದಲ್ಲಿ ವರ್ತಮಾನ ಪತ್ರಗಳನ್ನು ಓದುವ ನಮಗೆ ನೆರೆ ನಾಡುಗಳಲ್ಲಿ ಲಕ್ಷಾಂತರ ಹಣ ವ್ಯಯಿಸಿದ ಸೇತುವೆಗಳೂ, ನೀರಾವರಿ ಯೋಜನೆಗಳೂ ಕಾರ್ಯರೂಪಕ್ಕೆ ಬಂದಿರುವುದು ಗೊತ್ತಾಗಿದೆ. ಆದರೆ ಕೊಡಗಿನಲ್ಲಿ ಹೀಗಾಗಲಿಕ್ಕೆ ಬರುವ ಯಾವ ಕೆಲಸವಾಗಿದೆ? ಇನ್ನಾದರೂ ಇಂಥಾ ಅವಶ್ಯ ಮತ್ತು ಅತುರವಾದ ಯೋಜನೆಗಳಿಗೆ ಜನರ ಮುಂದಾಳುಗಳು ಮನಃಪೂರ್ವಕವಾಗಿ ಶ್ರಮಿಸಿ ಜನರಿಗೆ ಸುಖ ಸೌಲಭ್ಯ ಒದಗಿಸುವ ಕೆಲಸದಿಂದ ನಾಡಿನ ಜನರ ಕೃತಜ್ಞತೆಯನ್ನು ಸಂಪಾದಿಸಬೇಕೆಂದು ಕೇಳಿಕೊಳ್ಳುತ್ತೇನೆ. ಈಗ ನಾಪೋಕ್ಲಿನಲ್ಲಿ ಹೈಸ್ಕೂಲು ಆಗಿ ಹೊಸೆಯ ಆಚೆ ಕಡೆಯ ನಾಲ್ಕಾರೇ ಗ್ರಾಮಗಳಿಂದ ಸುಮಾರು ನೂರು ವಿದ್ಯಾರ್ಥಿಗಳಿಗಿಂತಲೂ ಹೆಚ್ಚಾಗಿ ಪ್ರತಿ ದಿನ ದೋಣಿ ದಾಟಿ ಬರಬೇಕಾಗಿದೆ. ಹೆಚ್ಚಿನ ಪ್ರವಾಹ ಕಾಲದಲ್ಲಿ ಮಕ್ಕಳ ತಂದೆ ತಾಯಿಗಳಿಗೆ ಮಕ್ಕಳನ್ನು ಶಾಲೆಗೆ ಕಳುಹಿಸುವುದು ಕೂಡ ತುಂಬಾ ಸಂಕೋಚವಾಗುತ್ತದೆ. ಆದ್ದರಿಂದ ಕೊಟ್ಟಮುಡಿ ಸೇತುವೆಯ ಕೆಲಸವನ್ನು ಒಡನೆ ಪ್ರಾರಂಭಿಸಿ ಜನರಿಗೆ ಉಪಕಾರ ಮಾಡುವುದಕ್ಕೆ ಸಂಬಂಧಪಟ್ಟ ಇಲಾಖೆಯವರು ಮನಸ್ಸು ಕೊಟ್ಟು ಜನರ ಹಳೆಯ ಆಶೆಯನ್ನು ನೆರವೇರಿಸಿ ಕೊಡುವರಾಗಿ ನಂಬುತ್ತೇನೆ.

—ನಾಡಿನ ತಳವ.

For Sale.

The Dubarry Group of Estates, Pollibetta, S, Coorg, S. India

Approximate acreges. Coffee: 176 Arabica and 135 Robusta; 175 Oranges; 30 Paddy; Pepper throughout the cultivated areas In addition 135 acres of Jungle etc. For particulars Apply to:—

'X'

C/o "Kodagu" MERCARA.

Tenders.

Sealed Tenders are invited by the Agronomist, Coffee Research Sub-station, Chethalli, P. O. Coorg for the construction of four residential staff quarters for which materials like sawn timber, tiles etc., are collected on the spot. The estimate amounts to Rs. 29,000. Particulars can be had on application. Tenders will be received upto 4 p. m. on Wednesday the 4th October, 50. The schedule and details can be had on payment of Re. 1 for each item or Rs. 2 for complete set up to 28th Sept. 1950.

ಜಪಾನಿನಲ್ಲಿ ಕ್ರಾಂತಿಯ ಭಯ

ಜಪಾನಿನಲ್ಲಿ ಆಳ್ವಿಕೆಯ ಕಮ್ಯೂನಿಸ್ಟರು ದಂಗೆ ಎದ್ದು ಅಧಿಕಾರಾರೂಢರಾಗಬಹುದೇ ಎಂಬ ಭಯವು ಇಡೀ ಜಪಾನಿನಲ್ಲಿ ತುಂಬಿದೆ. ಟೋಕಿಯೋ ಮತ್ತಿತರ ಜಪಾನಿನ ನಗರಗಳಲ್ಲಿ ಕಮ್ಯೂನಿಸ್ಟರ ಸಂಘಟನೆ ಬಲವಾಗತೊಡಗಿದೆ. ಪೂರ್ವ ವಿಷ್ಣಾದ ಗುಂಡಿನ ಯುದ್ಧದ ದ್ವಿತೀಯ ಪ್ರಾರಂಭದ ಸಮಯಕ್ಕೆ ದಂಗೆ ಏಳಲು ಈ ಕಮ್ಯೂನಿಸ್ಟರು ತಯಾರಾಗುತ್ತಿರುವರೆಂದು ಹೇಳಲಾಗುತ್ತಿದೆ. ಈ ಕಮ್ಯೂನಿಸ್ಟರ ತರಬೇತಿಯು ರಷ್ಯಾದ ವಶವಿರುವ ಶಕಾಲಿನ್ ದ್ವೀಪದಲ್ಲಿ ನಡೆಯುತ್ತಿದೆಯೆಂದೂ ಆಳ್ವಿ ಸುಸಜ್ಜಿತವಾದ ಜಪಾನಿ ಕಮ್ಯೂನಿಸ್ಟರ ಸಡೆಯೊಂದು ತಯಾರಾಗಿದೆಯೆಂದೂ ಹೇಳಲಾಗಿದೆ. ಈ ಜಪಾನೀ ಗಡುಗಡೆಗೆ ಹೋರಾಡಲಿರುವ ಸೇನೆಯಲ್ಲಿ ಯು ೫೦,೦೦೦ ದಿಂದ ೫೫೦,೦೦೦ ವರೆಗಿನ ಬಹುದೆಂದು ಅಂದಾಜು ಮಾಡಲಾಗಿದೆ.

ಜಪಾನಿನ ಹಿಂದಿನ ಮುಖ್ಯ ಮಂತ್ರಿಯಾದ ಫ್ಯೂಮಿಮರೊ ಕೊನೋಯೆಯವ ಮಗ ಫ್ಯೂಮಿತಕೋ ಕೊನೋಯೆಯವು ಈ ವಲದ ನಾಯಕನಾಗಿದ್ದಾನೆ. ೩೫ ವರ್ಷ ತ್ರಾಯುವ ಈ ತರುಣನು ಕಳೆದ ಯುದ್ಧದಲ್ಲಿ ಮಂಚೂರಿಯಾದಲ್ಲಿ ರನ್ಯಸೈನ್ಯ ಸೆರೆಯಾಳಾಗಿದ್ದನು. ರಷ್ಯಾದಲ್ಲಿ ಈತ ಳು ಇದ್ದ ಎದು ವರ್ಷಗಳಲ್ಲಿ ಈತನಿಗೆ ಪೂರ್ಣ ಕಮ್ಯೂನಿಸ್ಟ್ ತತ್ವ ಉಪದೇಶ ನೂಡಿ ಆತನು ಈಗ ಜಪಾನಿನ ಬಿಡುಗಡೆಗೆ ಹೋರಾಡಲು ಸಿದ್ಧನಾಗಿರುವನು!

ಕೊನೋಯೆ ಮತ್ತವನ ಬಿಡುಗಡೆಯ ಸೇನೆಯು ಜಪಾನ್ ದ್ವೀಪ ಕಲ್ಪದ ಉತ್ತರದ ಹೊಕ್ಕಾಯಿತೋ ಎಂಬಲ್ಲಿಗೆ ಪ್ರಥಮ ನುಗ್ಗಬಹುದೆಂದು ಊಹಿಸಲಾಗಿದೆ. ಅಲ್ಲಿ ಅವರು ಪ್ರತಿ ಸರಕಾರ ಸ್ಥಾಪನೆ ಮಾಡಿ ಅಮೇರಿಕನರ ಹಾಗೂ ಯೊಶಿಡಾ (ಜಪಾನಿನ ಈಗಿರುವ ಮಂತ್ರಿ) ಸರಕಾರದ ವಿರುದ್ಧ ದಂಗೆ ಏಳುವರೆಂದು ಊಹಿಸಲಾಗಿದೆ. ಈ ಸಂದರ್ಭದಲ್ಲಿ ಜಪಾನಿನ ಉದ್ದಗಲ ಹರಡಿರುವ ಕಮ್ಯೂನಿಸ್ಟರು ಅಲ್ಲಲ್ಲಿ ದಂಗೆ ಎದ್ದು ಅಂತರ್ಯುದ್ಧ ಕ್ರಾಂತಿಯನ್ನು ಕೆಡಿಸಿ ಮೆಕಾರ್ಥರ್ ಮತ್ತು ಯೊಶಿಡಾ ಸರಕಾರಕ್ಕೆ ಕಿರುಕುಳ ಕೊಡಬೇಕೆಂಬ ವಿರ್ಸಾಡಿದೆಯಂತೆ. ಈಗಿರುವಾಗಿನಂತೆ ಜಪಾನಿನ ಕಮ್ಯೂನಿಸ್ಟ್ ಮುಂದಾಳುಗಳೆಲ್ಲರೂ ಅಂತರ್ಗಾಮಿಗಳಾಗಿ ಕೆಲಸ ಮಾಡುತ್ತಿರುವರು ಯೋಶಿಡಾ ಸರಕಾರವು ಕಮ್ಯೂನಿಸ್ಟರನ್ನು ಕಂಡಲ್ಲಿ ಹಿಡಿಕ್ಕಿಲು ಸಕಲ ವಿರ್ಸಾಡು ಮಾಡುತ್ತಿದೆ.

ಜಪಾನಿನ ಕಮ್ಯೂನಿಸ್ಟ್ ವಾರ್ಟೆಯು ಬಲವೆತ್ತೆಂದು ನಿಶ್ಚಿತ ತಿಳಿದುಬಂದಿಲ್ಲ. ಕಮ್ಯೂನಿಸ್ಟ್ ಪಕ್ಷವು ಸದಸ್ಯರಸಂಖ್ಯೆ ಒಂದು ಮಿಲಿಯನೆನ್ನುತ್ತಿದೆ. ಸರಕಾರಿ ಅಂದಾಜಿನ ಮೇರೆ ೯೨,೩೭೫! ಸುಮಾರು ೨,೫೦,೦೦೦ ಜನರಿರುವ ಜಪಾನಿನ ಇಲೆಕ್ಟ್ರಿಕ್ ಸಂಸ್ಥೆಯ ಕೆಲಸಗಾರರೂ ಮತ್ತಿತರ ಆನೇಕ ಕೂಟಗಳೂ ಕಮ್ಯೂನಿಸ್ಟ್ ಪ್ರಭಾವಕ್ಕೊಳಗಾಗಿವೆ.

ದಿನೇ ದಿನೇ ಬೆಳೆಯುತ್ತಿರುವ ಈ ಕಮ್ಯೂನಿಸ್ಟ್ ಗುಂಡಾಂತರವನ್ನು ಹತ್ತಿಕ್ಕಲು ಜಪಾನಿನ ಇಂದಿನ ಯೋಶಿಡಾ ಸರಕಾರವು ಯತ್ನಿಸುತ್ತಿದೆ ಇದಕ್ಕೆ ಅಮೇರಿಕನರ ಬೆಂಬಲವಿದೆಯೆಂದು ಬೇರೆ ಹೇಳುವ ಆವಶ್ಯಕತೆ ಇಲ್ಲ. ಜಪಾನಿನ ಸರಕಾರದ ಉದ್ಯೋಗಗಳಲ್ಲಿ ಇತರ ಪಾಸಿಗಿ ಸಂಸ್ಥೆಗಳಲ್ಲಿದ್ದ ಕಮ್ಯೂನಿಸ್ಟರನ್ನು ತೆಗೆದು ಹಾಕಿರುವದಲ್ಲದೆ ಟೋಕಿಯೊ, ನೋರಿಕೇ ಮೊದಲಾದ ಮುಂದಾಳುಗಳ ಭೇಟಿ ನಡೆದಿದೆ. ಕಮ್ಯೂನಿಸ್ಟ್ ಮುಂದಾಳುಗಳು ತಲೆ ತಪ್ಪಿಸಿಕೊಂಡು ಉಳಿದಿದ್ದಾರೆ. ಕಮ್ಯೂನಿಸ್ಟ್ ಮುಂದಾಳುಗಳನ್ನು ಹಿಡಿದು ಕೊಟ್ಟವರಿಗೆ ೧೦೦,೦೦೦ ಎನ್‌ಗಳ್ (ಜಪಾನ್ ಕಾಣ್ಯ) ಬಹುಮಾನ ಕೊಡುವ ದಾಗಿಯೂ ಸಾರಿದ್ದಾರೆ. ಸಂಶಯ ಬಂದ ಸರ್ಕಾರನ್ನು ತಕ್ಷೀರಿಗೊಳಗು ಮಾಡಲಾಗುತ್ತಿದೆ. ಹೊರಗಿನಿಂದ ಬರುವ ಪ್ರಯಾಣಿಕರ ಮೇಲೆ ಕಟ್ಟುನಿಟ್ಟಾಗಿ ಶೋಧನೆಗಳಿವೆ.

ಕೆಲವು ದಿನಗಳಿಗೆ ಹಿಂದೆ ಜಪಾನಿನ ರೈಲ್ವೆ ಕೆಲಸಗಾರರು, ಆಧ್ಯಾಪಕರು ಮತ್ತಿತರರು ಸೇರಿ ಒಂದರೆ ೨,೫೦೦,೦೦೦ ಜನರ ಪ್ರತಿನಿಧಿಯನ್ನು ಕಮ್ಯೂನಿಸ್ಟರು ಸೆಳೆದಿದ್ದರು. ಜಪಾನ್ ಸರಕಾರವೂ ವಿರುತ್ತಿರುವ ಕಮ್ಯೂನಿಸ್ಟ್ ಪ್ರಭಾವದಿಂದ ಗಾಬರಿಗೊಂಡಿದೆ.

ANNOUNCEMENT.

The continental Oil Company, Madras, is pleased to appoint Mr. C. K. THAMAIAH as Sole agent for Coorg Province to deal with their petrol and petroleum products and kerosene. For particulars please apply to:

C K. THAMAIAH,
Prop:-**Sri Cauvery Rice Mill, Ponnampet, South Coorg.**

WANTED an accountant for an Estate with knowledge of typing & correspondence on starting salery of Rs. 60/- per month with Rs. 15/- as allowance. Free quarters with good future prospects. Only S. S L. C. passed candidates aged within thirty five need apply:-

Proprietor,
Panchakshary group of Estates, Somwarpet P. O. COORG.

ಸುಗಂಧ ದ್ರವ್ಯಗಳು.

ಮೊಗದಲ್ಲಿ ನಡೆಯುವಾಗ ಘಮ ಎಂದು ಪರಿಮಳ ಬರುತ್ತದೆ. ಆ ಮೇಲೆ ಒಂದೆರಡು ಕ್ಷಣ ಆ ಸುಗಂಧವು ಮನಸ್ಸನ್ನು ಆನಂದ ಗೊಳಿಸುತ್ತದೆ. ವ್ಯಕ್ತಿ ದೂರ ಸರಿದು ಕಣ್ಮರೆಯಾದರೂ ಮೂಗಿಗೆ ಹೊಡೆದ ಪರಿಮಳದ ಸವಿ ನೆನಪು ಅಳಿಯದೆ ಉಳಿಯುತ್ತದೆ. ಇದು ಸುಗಂಧ ದ್ರವ್ಯಗಳ ಮಹತ್ವ.

ಸುಗಂಧ ದ್ರವ್ಯಗಳು ಪುರಾತನ ಕಾಲದಿಂದಲೂ ಆಕರ್ಷಕವೆಂದು ಜನ ತಿಳಿದಿದ್ದರು. ಪ್ರಕೃತಿಯೂ ಸುಗಂಧ ಬೀರಿ ಕ್ರಿಮಿ ಕೀಟಗಳನ್ನು, ಮೃಗ ಪಕ್ಷಿಗಳನ್ನು ಹಾಗೂ ಮನುಷ್ಯರನ್ನು ಆಕರ್ಷಿಸುತ್ತಿದೆ. ಸಣ್ಣ ಹೂಗಳಲ್ಲಿರುವ ಪರಿಮಳಕ್ಕೆ ಅನೇಕ ಕೀಟಗಳು ಮುತ್ತುತ್ತವೆ. ಕ್ರೂರ ಹಾವುಗಳು ಕೂಡಾ ಸುಗಂಧಗಳಿಂದ ಆಕರ್ಷಿಸಲ್ಪಡುತ್ತವೆ. ಮನುಷ್ಯನಾದರೂ ತಿನ್ನುವ ಸತ್ತು ಮುತ್ತು ಸುಗಂಧ ಬೀರುವ ಹೂದೋಟಗಳನ್ನು ನಿರ್ಮಿಸುವನು ಮಾತ್ರವಲ್ಲ; ಹೂಗಳನ್ನು ತನ್ನ ತಲೆಯಲ್ಲಿ ಮುಡಿದುಕೊಂಡೂ ಸುತ್ತಾಡುವನು.

ಸ್ತ್ರೀಯರು ಪರಿಮಳದ ಈ ವಸ್ತುಗಳನ್ನು ಬಹಳ ಮೆಚ್ಚುತ್ತಾರೆ. ಅವರಿಗೆ ತಲೆಗೆ ಮುಡಿದುಕೊಳ್ಳಲು ಪರಿಮಳ ಭರಿತ ಹೂ ಬೇಕು. ಕೂದಲಿಗೆ ಸುಗಂಧ ತೈಲಗಳು ಬೇಕು. ವಸ್ತ್ರಗಳಿಗೆ ಪರಿಮಳ ದ್ರವ್ಯ ಹಚ್ಚಿಕೊಳ್ಳಬೇಕ. ಸೀರೆ ಕುಪ್ಪಸಗಳನ್ನು ಪರಿಮಳ ಭರಿತ ಪೆಟ್ಟಿಗೆಗಳಲ್ಲಿಟ್ಟುಕೊಳ್ಳಬೇಕು. ಮುಖಕ್ಕೆ ಪೌಡರು ಹಚ್ಚಿಕೊಳ್ಳಬೇಕು. ಇನ್ನು ಮದುವೆ ಮಂಗಲ ಕಾರ್ಯಗಳಲ್ಲಿ ಪನ್ನೀರು ಚಿಮುಕಿಸಿಕೊಳ್ಳಬೇಕು. ಹೀಗೆ ಪರಿಮಳವೆಂದರೆ ಒಂದು ಅಗತ್ಯದ ವಸ್ತು ಆವರಿಗೆ. ಆದರೆ ನಮ್ಮಲ್ಲಿ ಗಂಡಸರೂ ಏನೂ ಹಿಂದುಳಿದಿಲ್ಲ. ತಲೆಗೆ ಘಮ ಘಮಿಸುವ ಕೂದಲೆಣ್ಣೆ ಹಚ್ಚಿಮುಖಕ್ಕೆ ಲೇಪನ ತಂಗಿಸಿ ಕೈ ವಸ್ತ್ರಕ್ಕೆ 'ಸೆಂಟ್' ಹಚ್ಚಿಕೊಳ್ಳುವ ಯುವಕರು ಬಹಳ ಇದ್ದಾರೆ. ಅಂತೂ ಸ್ತ್ರೀಗೆ ಸಿಂತರೆ ಗಂಡಸರು ಈ ವಿಷಯದಲ್ಲಿ ಸೋತು ಹೋಗುವದು ಖಂಡಿತ.

ಚರಿತ್ರೆಯಲ್ಲಿ

ಚರಿತ್ರೆಯಲ್ಲಿ ನೀವು ಕೇಳಿರಬಹುದು ಭಾರತವನ್ನಾಳಿದ ಮೊಗಲಾಯಿ ಅರಸರೂ ಅವರ ಬೇಗಮರೂ ಸುಗಂಧ ದ್ರವ್ಯಗಳನ್ನು ಬಹಳ ಮೆಚ್ಚುತ್ತಿದ್ದರೆಂದು ಅತ್ತರೂ ಮಿಶ್ರಣಮಾಡಿದ ನೀರಿನಲ್ಲಿ ಅವರು ಸ್ನಾನ. ಘಮ ಘಮಿಸುವ ಜಿನಸುಗಳಿಲ್ಲದ ಆಹಾರ ರುಚಿಸದು. ಗುಲಾಬಿ ಗಿದಗಳಿಂದ ಹೂತೋಟಗಳು ಅರಮನೆ ನಂದನವನಗಳ ಸುತ್ತ ರಾರಾಜಿಸುತ್ತಿದ್ದವು. ಭಾರತದಲ್ಲಿ ಸಿಗುವ ಸುಗಂಧ ದ್ರವ್ಯಗಳು ಇಸಾಲದೆ ಮೊಗಲಾಯಿ ಬೇಗಮರು ಪರ್ಶಿಯಾ ಮೊದಲಾದವೆಡೆಗಳಿಂದ ಉತ್ತಮ ಪರಿಮಳ ದ್ರವ್ಯಗಳನ್ನು ತರಿಸುತ್ತಿದ್ದರು.

ನಮ್ಮ ಕಾಲದಲ್ಲಿ

ನಮ್ಮ ಕಾಲದಲ್ಲಿ ಪ್ಯಾರಿಸ್ ನಗರವು ಸುಗಂಧ ದ್ರವ್ಯಗಳ ತವರೂರು. ಫ್ರಾನ್ಸಿನಲ್ಲಿ ಅನೇಕಾನೇಕ ಕಾರ್ಖಾನೆಗಳು ಜಗ ಪ್ರಸಿದ್ಧ ಪರಿಮಳ ಭರಿತ ವಸ್ತುಗಳನ್ನು ತಯಾರಿಸಿ ಕಣಗಳಿಸುತ್ತಿವೆ. ಮುಖಕ್ಕೆ ಹಾಕುವ 'ಪೌಡರು' ಮುಖಕ್ಕೆ ಕೊಡುವ 'ಕ್ರೀಮ್' ಎಂಥಾ ಕಸ್ಟ ಮುಖವನ್ನಾದರೂ ಚಂದ್ರನಂತೆ ಬೆಳಗಿಸುವ ಜಿಪುಣತ್ಕಾರಿ ತಯಾರಿಕೆಗಳು, ಒಂದು ಫರ್ಲಾಂಗಿನ ವರೆಗೆ ಘಮಘಮಿಸಿ ಸುತ್ತು ಮುತ್ತಲಿನವರ ಮೂಗಿನಲ್ಲಿ ನೀರೂರಿಸುವ ಎಣ್ಣೆಗಳು ಇವರನ್ನು ಆಕರ್ಷಿಸುವ ಶೈಲಿಗಳು ಕಾಲಿನಿಂದ ತಲೆಯ ವರೆಗೆ ಚಿಮುಕಿಸುವ 'ಸೆಂಟು' ಎಲ್ಲಾ ಫ್ರಾನ್ಸ್‌ನಲ್ಲಿ ಸಿದ್ಧವಾಗುತ್ತವೆ.

ಜಗತ್ತಿನಾದ್ಯಂತ ಮಹಿಳೆಯರು ಅದರಲ್ಲೂ ಸಮಾಜದಲ್ಲಿ ಗಣ್ಯಸ್ಥಾನ ಪಡೆದವರು ಸುಗಂಧ ದ್ರವ್ಯಗಳಿಗೆ ಬಹಳ ಮಹತ್ವ ಕೊಟ್ಟಿರುವರು. ಜೀವನದಲ್ಲಿ ಸುಗಂಧ ದ್ರವ್ಯಗಳೂ ಅವಶ್ಯಕ ಎನ್ನುವ ಸ್ಥಿತಿಗೆ ಬಂದಿದೆ. ಪರಿಮಳವಿಲ್ಲದ ಸಾಬೂನು ಪೆಟ್ಟಿಗೆಯಲ್ಲಿ ಗಿರಾಕಿಯಿಲ್ಲದೆ ಕೊಳೆತು ಹೋಗಬಹುದು. ಬದಲಾಗಿ ಕೆಂಪು ಮಣ್ಣಿನಿಂದ ತಯಾರಿಸಿದ ಸಾಬೂನಾಗಲೀ ಅಪಕ್ಕೆ ಸುವಾಸನೆ ಇದ್ದಲ್ಲಿ ಹೆಚ್ಚು ಬೆಲೆಗೆ ಮಾರಿ ಬಹುದೆಂದು ಸಾಬೂನು ಕಂಪನಿಯವರು ತಿಳಿದಿದ್ದಾರೆ.

ಪಕ್ಕಿಗಳನ್ನು ಓವಾಸ ಆದಿಪ್ರಾಣಿಯ ಸುಗಂಧ ದ್ರವ್ಯಗಳವೆ-ಎಂಬ ವಿಷಯ ತಿಳಿದುಕೊಳ್ಳಬಹುದು.

ತಲೆ ಕೂದಲಿಗೆ ಎಣ್ಣೆ ಹಾಕಿಕೊಳ್ಳುವಾಗ ಪರಿಮಳವಿಲ್ಲದ ಎಣ್ಣೆ ಯಾರಿಗೂ ಪೆಚ್ಚಿಕೆಯಾಗುವುದಿಲ್ಲ. ಕೂದಲೆಣ್ಣೆಯು ಗುಣಗಳೇನೇ ಇರಲಿ, ಆಪರ ವಾಸನೆಯು ಮೇಳ ಅದರ ಉಪಯೋಗ ಹೊಂದಿಕೊಂಡಿದೆ. ಮುಖಕ್ಕೆ ಬಳೆಯುವ ಪೌಡರು ಸ್ನೋ, ಕ್ರೀಂ ಮೊದಲಾದ ಲೇಪನಗಳಲ್ಲಾ ಅವುಗಳ ಸುವಾಸನೆಯ ಮೇರೆಗೆ ಜನ ಪ್ರೀತವಾಗುತ್ತವೆ. ಇನ್ನು ಇತರ ಸೌಂದರ್ಯ ಸಾಧನಗಳೂ ಇದೇ ರೀತಿ.

ಮುನೆಯಿಂದ ಪೇಟೆಗೆ ಹೊರಡುವಾಗ ಕೊನೆಯ ಕಲಾವೆಂದರೆ ಸುಗಂಧ ವಸ್ತುಗಳನ್ನು ಹಚ್ಚಿಕೊಳ್ಳುವದು. ಮನೆಯಿಂದ ಹೊರ ಹೋದ ಮೇಲೆ ಸುತ್ತ ಮುತ್ತಲಿನ ಜನರ ಮೇಲೆ ವ್ಯಕ್ತಿತ್ವ ಛಾಪ ಉಳಿಸಲು ಪೌಡರು ಸೆಂಟುಗಳ ಪರಿಣಾಮ ಬೆಂಬಲ ಪಡೆದಿದ್ದಾರೆ ಸುಗಂಧ ದ್ರವ್ಯವನ್ನು ಉಪಯೋಗಿಸುವುದು ಹಿತ. ಇದರಿಂದ ಲೇಕಡಾ ನೂರಕ್ಕೆ ನೂರರಷ್ಟು ಇಷ್ಟ ಸಾಧನೆಯಾಗುತ್ತದೆ.

ವಾರ್ತೆಗಳು.

"ಭಾರತದಿಂದ ಗೌರ್ನರ್ ಪೂರ್ಣವಾಗಿ ತನ್ನ ಪಾಲಿಗೆ ಕಿತ್ತಂತೆ ಬ್ರಿಟಿಷರ ಅಸ್ತಿ ದಿಂದಲೂ ತಮ್ಮ ಅಧಿಕಾರ ಹಿಂದಿಗೆಯಬೇಕು. ಅದು ಆಪರ ವರ್ಚಸ್ಸನ್ನು ಹೆಚ್ಚಿಸುವುದು." ಎಂಬುದು ಬ್ರಿಟಿಷ್ ತತ್ವಜ್ಞಾನಿ ಬರ್ಟ್ರಾಂಡ್ ರಸ್ಸೆಲರ ನಿಶ್ಚಿತಾಭಿಪ್ರಾಯವಾಗಿದೆ.

ಪೆಸಿಫಿಕ್ ಸಾಗರದ ವಿಜ್ಞಾರಗಳ ಸಮ್ಮೇಳನವು ಲಕ್ನೋದಲ್ಲಿ ಆಕ್ಟೋಬರ್ ೩ ರಿಂದ ೧೫ರ ವರೆಗೆ ಲಕ್ನೋ ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ ನಡೆಯುವುದು. ಭಾರತದ ಮುಖ್ಯ ಮಂತ್ರಿ ಪಂಡಿತ ನೆಹರೂರವರು ಸಮ್ಮೇಳನದ ಆರಂಭೋತ್ಸವ ನಡೆಸುವರು. ಪೆಸಿಫಿಕ್ಕಿ ವಿಜ್ಞಾರಗಳ ಸಂಸ್ಥೆಯು ಅಂತರಾಷ್ಟ್ರೀಯವಾಗಿದೆ. ಈ ಸಮ್ಮೇಳನಕ್ಕೆ ಬ್ರಿಟಿಷ್, ಫ್ರೆಂಚ್, ಅಮೇರಿಕಾ, ಹಾಲೆಂಡ್, ಸೋವಿಯಟ್ ರಷ್ಯಾ, ಚೀನಾ, ಜಪಾನ್, ಆಸ್ಟ್ರೇಲಿಯಾ, ಭಾರತ, ಪಾಕಿಸ್ತಾನ, ಜೆಲಿಗೇಟಿರುಗಳು ಬರುವರು. ಇಂಡೋನೇಷ್ಯಾ, ಬರ್ಮಾ, ಇವುಗಳ ಪ್ರತಿನಿಧಿಗಳೂ ಬರುವರು.

ದಿಬ್ರೂಘರ್‌ನಲ್ಲಿ ತಾ. ೩ರ ರಾತ್ರಿ ೯ ಗಂಟೆಗೆ ಮತ್ತು ಮರುದಿನ ಬೆಳಿಗಿನ ಜಾವ ೧-೩೫ ಗಂಟೆಗೆ ಭಾರೀ ಭೂಕಂಪ ಗಳಾಗಿದ್ದವು. ಕೋರ್ಟು ಕಚೇರಿಗಳ ಕಟ್ಟಡಗಳ ಬಳಿ ಬ್ರಹ್ಮಪುತ್ರಾ ನದಿಯು ನೆಲವನ್ನು ಕೊರೆದು ನುಗ್ಗಿತ್ತಿದೆ. ನಿರಾಶ್ರಿತರಿಗೆ ವಿಮಾನಗಳಿಂದ ಆಹಾರವನ್ನು ರವಾನಿಸಲಾಗುತ್ತಿದೆ.

ಪ್ರಪಂಚ ಸಂಸ್ಥೆಯ ಆರ್ಥಿಕ ಮತ್ತು ಸಂಸ್ಕೃತಿ ಶಾಖೆಯವರು ಅಸ್ಸಾಂ ಭೂಕಂಪದಲ್ಲಿ ನೊಂದವರಿಗೆ ಸಹಾಯ ಮಾಡುವುದಾಗಿ ಪಂಡಿತ ನೆಹರೂರವರಿಗೆ ತಿಳಿಸಿದ್ದಾರೆ ಇನ್ನೂ ಪಂಡಿತ ನೆಹರೂ ಕೃತಜ್ಞತೆ ಸೂಚಿಸಿದ್ದಾರೆ ಎಂತ್ತು ಈ ಬಗ್ಗೆ ಯುನೆಸ್ಕೊ ಸಂಸ್ಥೆಯ ಡೈರೆಕ್ಟರ್ ಜನರಲ್ ಮಿ. ಟಾರೆಸ್ ಬೋದೆರವರಿಗೆ ತಂತಿ ಮೂಲಕ ವಂದಿಸಿದ್ದಾರೆ

ಪ್ರಪಂಚವನ್ನು ಮೋಟಾರು ಕಾರಿನಲ್ಲಿ ಪ್ರಯಾಣ ಮಾಡಲು ಜೊರಟಿರುವ ಇಬ್ಬರು ಇಂಗ್ಲಿಷಸವರೂ, ಒಬ್ಬ ಆಸ್ಟ್ರೇಲಿಯನನೂ ಕಲ್ಕತ್ತಕ್ಕೆ ಪಶ್ಚಿಮದಿಂದ ತಾ. ೧೫ರಲ್ಲಿ ಬಂದರು. ಇವರು ಜೂನ್ ೧೬ ರಲ್ಲಿ ಇಂಗ್ಲೆಂಡಿನಿಂದ ಹೊರಟು ಈಗ ೯೦೦೦ ಮೈಲಿ ಪ್ರಯಾಣ ಮಾಡಿರುತ್ತಾರೆ. ಫ್ರಾನ್ಸ್, ಆಲ್ಪರಿಯಾ, ಇರಾನ್, ಪರ್ಷಿಯಾಗಳ ಮೂಲಕ ಪ್ರಯಾಣ ಮಾಡಿ ಬಂದಿದ್ದಾರೆ. ಇವರು ಕಲ್ಕತ್ತದಿಂದ ಆಸ್ಟ್ರೇಲಿಯಾಕ್ಕೆ ಹಡಗಿನಲ್ಲಿ ಹೋಗುವರು. ಡಾರ್ವಿನ್ನಿನಿಂದ ಸಿಡ್ನಿಗೆ ಮೋಟಾರಿನಲ್ಲಿ ಪ್ರಯಾಣ ಮಾಡುವರು.

ಭಾರತದ ಪ್ರಧಾನ ಪಂಡಿತ ನೆಹರು ರವರು ತಮ್ಮ ಸ್ವಂತ ತೋಟದಲ್ಲಿ ಬೆಳೆಸಿದ ಗೋಧಿಯ ಪೈರು ಎತ್ತರಿಗೆ ೩೩ ಮಣಗಳಷ್ಟು ಉತ್ಪತ್ತಿಯನ್ನು ಕೊಟ್ಟು ಒಂದು ನೂತನ ದಾಖಲೆ ಸ್ಥಾಪಿಸಿದೆ. ಬೇಸಾಯದಲ್ಲಿ ಆಧುನಿಕ ಕ್ರಮಗಳನ್ನು ಅನ್ವಯಿಸಿದರೆ ಉತ್ಪತ್ತಿಯನ್ನು ಈ ರೀತಿ ಹೆಚ್ಚಿಸಲು ಸಾಧ್ಯವಿದೆ ಎಂದು ಪ್ರಧಾನರು ಹೇಳುತ್ತಾರೆ.

ಮನುಷ್ಯರು ಎಳೆಯುವ ರಿಕ್ಷಾಗಾಡಿಗಳನ್ನು ಇನೇ ಬರುವ ಆಕ್ಟೋಬರ್ ತಾ. ೧೫ರಿಂದ ಬಹಿಷ್ಕರಿಸಲು ಪಂಜಾಬ ಸರಕಾರವು ನಿರ್ಣಯಿಸಿರುವುದು.

ಇತ್ತೀಚೆಗೆ ಹಿಂದೂದೇಶದಲ್ಲಿ ಭೂಕಂಪ ಮತ್ತು ನೆರೆಯ ಅನಾಹುತಕ್ಕೆ ಗುರಿಯಾಗಿ ಅಪಾರ ಕಷ್ಟನಷ್ಟಗಳಿಗೆ ಗುರಿಯಾದವರ ಬಗ್ಗೆ ಪಾಕಿಸ್ತಾನವು ೧೦,೦೦೦ ಮಣ ಅಕ್ಕಿಯನ್ನು ಕೊಡಲೊಪ್ಪಿದೆ.

ಭೂಕಂಪ ಮತ್ತು ನೆರೆಯ ಹಾವಳಿಗೆ ತುತ್ತಾಗಿ ಸುಮಾರು ೫೦ ಲಕ್ಷ ಮಂದಿ ಮನೆಮಾರು ಕಳಕೊಂಡು ನಿರ್ಗತಿಕರಾಗಿರಬಹುದೆಂದು ಅಸ್ಸಾಮಿನ ಪ್ರಧಾನ ಸಚಿವರು ಅಂದಾಜು ಹಾಕಿದ್ದಾರೆ. ಸುಮಾರು ೧೭೦ ಜಿದರ ವೈಲುಗಳಷ್ಟು ಪ್ರದೇಶದಲ್ಲಿರುವ ಕಾಡುಗಳು ನೆರೆಯಿಂ ನೀರಿಗೆ ಕೊಚ್ಚಿಕೊಂಡು ಹೋಗಿವೆ.

ಶ್ರೀ. ಸಿದ್ದವ್ವನಹಳ್ಳಿ ನಿಜಲಿಂಗಪ್ಪನವರನ್ನು ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯು ಹೊಸ ವರ್ಷಕ್ಕೆ ಅಧ್ಯಕ್ಷರನ್ನಾಗಿ ಸರ್ವಾನುಮತದಿಂದ ಚುನಾಯಿಸಿದೆ.

ಕಲ್ಕತ್ತದ ಹೊಸ್ಲಿ ಬ್ಯಾಂಕಿನ ಒಂದು ಶಾಖೆಯನ್ನು ಬುಧವಾರ ದಿನ ಜನಂದಿ ಬಂಗಾಳ ತರುಣರು ನುಗ್ಗಿ ಸುಮಾರು ೫೦,೦೦೦ ಸಾವಿರ ರೂಪಾಯಿಗಳನ್ನು ಅಪಹರಿಸಿದರೆಂದು ತಿಳಿದು ಬಂದಿದೆ.

ಕೊಡಗು ಪ್ರಾಂತೀಯ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ಸಮ್ಮೆಲ್ಲಿ ಕೋವಿಗಳು, ತೋಟಿಗಳು ಮತ್ತು ಎಲ್ಲಾ ತರಹದ ಸೈನಿಕ ವ್ಯವಸಾಯದ ಜರ್ಕಾರುಗಳು ದೊರೆಯುತ್ತವೆ.

1. 32 ಸಿಸ್ಕೂಲುಗಳು (Pistols) ಕ್ರಯ ರೂ. 162 ರಿಂದ 245ರ ವರೆಗೆ.
2. 12ನೇ ನಂಬರಿನ ಒಂಟಿ ಕೊಳವಿನ ಕೋವಿ ಕ್ರಯ ರೂ. 218-0-0
3. 12ನೇ ನಂಬರಿನ ಜೋಡು ಕೊಳವಿನ ಕೋವಿ (Webley & Scott)
4. 12ನೇ ನಂಬರಿನ ಜೋಡು ಕೊಳವಿನ ಕೋವಿ (Spanish make) ಕ್ರಯ ರೂ. 627-5-0
5. 6 ಗಜದ (Hand loom) ಕೈಮಗ್ಗದ ಸೀರೆಗಳು ಕ್ರಯ ರೂ. 4-10-0.
6. 12, 16, 20ನೇ ನಂಬರಿನ ರೂಪಿನ ತೋಟಿಗಳೂ ಪಿಸ್ಟೂಲು ಮತ್ತು ರಿವಾಲ್ವರುಗಳ ತೋಟಿಗಳೂ ಸಹ ದೊರೆಯುತ್ತವೆ.

(ಅವಶ್ಯವಿರುವ ಕೋವಿಗಳಿಗೂ, ತೋಟಿಗಳಿಗೂ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಅವಶ್ಯವಾಗಿ ಬೇಕಾಗಿರುವುದು)

ಎಂ. ಎಸ್. ಸೋಮಯ್ಯ,
ಗೌರವ ಕಾರ್ಯದರ್ಶಿ.

52-52

ಮತ್ತೊಂದು ಉಜ್ವಲ ವರ್ಷ.

1948ನೇ ವರ್ಷದ ವಾರ್ಷಿಕ ವರದಿಯ ಪ್ರಾಮುಖ್ಯಾಂಶಗಳು.

ಹೊಸ ಉದ್ಯಮ	ರೂ.	6,13,00,000 ಮಿಂದೆ.
ಚಾಲ್ತಿಯಲ್ಲಿರುವ ಒಟ್ಟು ಉದ್ಯಮ	ರೂ.	27,73,00,000 ,,
ಒಟ್ಟು ನಿಧಿ.	ರೂ.	8,30,00,000 ,,
ಸಾ ವಿತವಾದಂದಿನಿಂದ ಪಾವತಿಯಾದ ಕ್ಲೈಮುಗಳು		10,96,00,000 ,,

1,28,000 ಕ್ಕೆ ಮಿಂದ ಪಟ್ಟಿ ಪಡೆದ ಪಾಲಿಸಿದಾರರು.

ಶಕ್ತಿ. ಸೇವೆ ಭದ್ರತೆ.

ಎಂಪೈರ್ ಆಫ್ ಇಂಡಿಯಾ

ಲೈಫ್ ಎಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ,—1897

ರೋಶನ್‌ಲಾಲ್, ಜನರಲ್ ಮೇನೇಜರ್.

ಶಾಖಾ ಕಛೇರಿ: ಎಂಪೈರ್ ಹೌಸ್, ಹಾರ್ನ್‌ಬಿ. ರೋಡ್, ಫೋರ್ಟ್, ಬೊಂಬೆ.

ಅಂಗ ಕಛೇರಿ: ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡರಸ್ತೆ, ಬೆಂಗಳೂರು.

ದಿ ಪ್ರೊಮಿಕರ್

ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮೇನೇಜಿಂಗ್ ಡೈರೆಕ್ಟರ್:– ಲಾಲ ಶಂಕರ್ ಲಾಲ್.

ಮುಖ್ಯ ಕಚೇರಿ:– ಹೊಸ ಡೆಲ್ಲಿ.

ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ನೋತಿಲಾಲ್ ನೆಹರು. ಎಸ್. ಶ್ರೀನಿವಾಸ ಅಯ್ಯಂಗಾರ್
ಹಕೀಮ್ ಅಜಮಲಖಾನ್. ಡಾ|| ಎಂ. ಎ. ಅನ್ಸಾರಿ.

Transacts:—Life, Fire, Motor and Marine.

ಯು. ಯು. ಅಚ್ಚಣ್ಣ, ಏಜೆನ್ಸಿ ಸುಪರಿಂಟೆಂಡೆಂಟ್, ಮಡಿಕೇರಿ, ಕೊಡಗು.

ಎಂ. ಎ. ಬೆಳ್ಯಪ್ಪ, ಬ್ರಾಂಚ್ ಸೆಕ್ರೆಟರಿ, ಹೆಂಪನಕಟ್ಟಾ, ಮಂಗಳೂರು.

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್,

ಲಿಮಿಟೆಡ್, ಮಡಿಕೇರಿ.

ಕೊ.ಅಪೆರೇಟಿವ್ ಸೊಸೈಟೀಸ್ ಆಕ್ಟ್ ಕ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ಅಧಿಕೃತ ಶೇರು ಬಂಡವಾಳ	ರೂ.	10,00,000.
ವಸೂಲಾದ ಶೇರು ಮೊಬಲಗು	ರೂ.	1,79,000.
ಕ್ಷೇಮನಿಧಿ	ರೂ.	55,000.
ಇತರ ನಿಧಿಗಳು	ರೂ.	28,000.

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದ

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಮೂಲ ಡ್ರಾಫ್ಟ್‌ಗಳ ಡಿಸ್ಕೌಂಟ್ ಮಾಡಲ್ಪಡುವುದು. ಟ್ರಸಿಟಿ ಮತ್ತು ವಾರ್ಡಸ್ ಇನ್ಶೂರೆನ್ಸ್ ಪಾಲಿಸಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಸೂಚನೆಯನ್ನು ಕೆಳಸಹಿಯಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಸಾ. ಕಾರ್ಯದರ್ಶಿ, ಕೆ. ಪಿ. ಅಪ್ಪಯ್ಯ, M. L. C. ಪ್ರೆಸಿಡೆಂಟ್ ಮತ್ತು ಮೆನೇಜರ್.

The Popular Insurance Company Ltd.

Established over 20 years ago, the Company is noted for its sound progress, careful management and efficient service to its constituents.

Agents on permanent and remunerative contracts are wanted in COORG. Apply today

Head Office: MANGALORE

K. M. Bopaiah, Esq., *Branch Secretary for Mysore & Coorg,* *85 Sultanpet, BANGALORE 2.*

26-30

Edited, Printed and Published by P. I. Bellappa at 'Kodagu Press, Mercara, for 'Kodagu' Ltd.

ಪುರುಷೋತ್ತಮದಾಸ್ ಟಾಂಡನ್.

ಕಾಂಗ್ರೆಸ್ಸಿನ ಅಧ್ಯಕ್ಷರಾಗಿ ಆರಿಸಿ ಬಂದರು.

ನಾಸಿಕದಲ್ಲಿ ಜರುಗಲಿರುವ ಅಖಿಲ ಭಾರತ ಕಾಂಗ್ರೆಸ್ಸಿನ ೬೬ನೇ ಅಧಿವೇಶನಕ್ಕೆ ಅಧ್ಯಕ್ಷರನ್ನು ಚುನಾಯಿಸುವ ಬಗ್ಗೆ ಅಖಿಲ ಭಾರತ ಕಾಂಗ್ರೆಸ್ಸಿನ ಸುಮಾರು ೮೮೦೦ ಪ್ರತಿನಿಧಿಗಳಲ್ಲಿ ೬೬೦೦ ಜನರು ತಮ್ಮ ಮತದಾನವನ್ನು ತಾರೀಕು ೯-೮ ರಲ್ಲಿ ಮಾಡಿದರು. ಮತಗಣನೆಯು ಸಪ್ಟೆಂಬರ್ ತಾರೀಕು ಒಂದರಲ್ಲಿ ನಡೆಯಿತು. ಚುನಾವಣೆಗೆ ನಿಂತಿದ್ದ ಪುರುಷೋತ್ತಮದಾಸ್ ಟಾಂಡನ್‌ರವರಿಗೆ ೧೩೬೬ ಓಟುಗಳೂ, ಆಚಾರ್ಯ ಜೆ. ಬಿ. ಕೃಪಲಾನಿಯವರಿಗೆ ೯೦೯೨ ಓಟುಗಳೂ, ಶಂಕರರಾವ್ ದೇವ್‌ರವರಿಗೆ ೩೦೨ ಓಟುಗಳೂ, ಪೊರೆತು ಮಹರ್ಷಿ ಟಾಂಡನ್‌ರವರು ಆರಿಸಿ ಬಂದಿರುವರು. ಇವರು ಅಧ್ಯಕ್ಷರಾಗಿ ಆರಿಸಲ್ಪಟ್ಟದ್ದಕ್ಕಾಗಿ ದೇಶೀಯರೆಲ್ಲರೂ ಅವರನ್ನು ಅಭಿನಂದಿಸಿರುವರು.

ಟಾಂಡನ್‌ರವರು ತಮ್ಮೊಂದಿಗೆ ಹೇಳಿಕೆಯಲ್ಲಿ ಯಾರೊಬ್ಬರನ್ನೂ ತಳಗೆ ಓಟು ಕೂಡುವಂತೆ ಕೇಳಿದ್ದರೂ ಜನರು ಅವರ ಮೇಲಿನ ಗೌರವಿಕೆಯನ್ನು ವ್ಯಕ್ತಪಡಿಸುವಂತೆ ಅವರಿಗೆ ಮಣಿಪಿತ್ತು. ಕಾಂಗ್ರೆಸ್ ಅಧ್ಯಕ್ಷ ಪದಕ್ಕೆ ಆರಿಸುವುದಕ್ಕೆ ಅವರೆಲ್ಲರನ್ನೂ ವಂದಿಸಿರುವರು. ಅವರು ಪ್ರೆಸಿಡೆಂಟರಾಗಿ ಆರಿಸಿ ಬಂದ ಕಾರಣ ಕಾಂಗ್ರೆಸ್ ನೀತಿಯಲ್ಲಿ ಯಾವುದಾದರೂ ಬದಲಾವಣೆಯಾಯಿತೇ ಎಂದು ಅವರನ್ನು ಕೇಳಿದಾಗ ಅವರು ಕಾಂಗ್ರೆಸ್ಸು ಅನೇಕ ದಶಕಗಳಿಂದ ತನ್ನದೇ ಆದ ಪರಂಪರೆಯೊಂದನ್ನು ಬೆಳೆಸಿಕೊಂಡು ಬಂದಿದೆಯೆಂದೂ ಶೀಘ್ರವಾಗಿ ಅದನ್ನೆಲ್ಲ ಮೂರ್ಖಡಿಸುವದು ಯಾವ ವ್ಯಕ್ತಿಗೂ ಅಸಾಧ್ಯವೆಂದೂ, ನಿರ್ದಿಷ್ಟ ಕಾಂಗ್ರೆಸ್ಸಿನ ತತ್ವಪ್ರಣಾಲಿಯನ್ನು ತಾನೂ ಶಿರಸಾವಹಿಸಿ ದೇಶಕ್ಕಾಗಿ ದುಡಿಯುವುದಾಗಿಯೂ ಹೇಳಿದ್ದಾರೆ.

ಬಾಬೂ ಪುರುಷೋತ್ತಮದಾಸ್ ಟಾಂಡನ್‌ರವರು ಉತ್ತರ ಪ್ರದೇಶದವರು ಇವರ ಮತ್ತು ಕಾಂಗ್ರೆಸ್ಸಿನ ಸಂಬಂಧ ಕಳೆದ ೫೦ ವರ್ಷಗಳಿಂದಲೇ ಇದೆ. ಟಾಂಡನ್‌ರವರು ಎಲ್. ಎಲ್. ಬಿ ಡಿಗ್ರಿ ಪಡೆದನಂತರ ಲಾಯರ್ ವೃತ್ತಿಯನ್ನು ಆರಂಭಿಸಿದರು. ರಾಜಕೀಯದಲ್ಲಿ ಆಸಕ್ತಿ ಇದ್ದ ಇವರು ಶೀಘ್ರ ನೇತಾರರೆ ತೊಡಗಿದರು. ಅಲ್ಲಹಾಬಾದ್ ಮುನ್ಸಿಪಾಲಿಟಿಯ ಅಧ್ಯಕ್ಷರಾದರು. ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯಲ್ಲಿ ೨೦ ವರ್ಷ ದುಡಿದರು. ನಂತರ ಕಾಂಗ್ರೆಸ್ಸಿನಲ್ಲಿ ಅವಿಶ್ರಾಂತವಾಗಿ ದುಡಿದಿದ್ದಾರೆ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಏಳುಬಾರಿ ಜೈಲಿಗೆ ಹೋದವರು. ಇವರ ಆದರ್ಶ ಜೀವನ, ನೇತೃ, ಕಪಟಾಚಾರಗಳಿಲ್ಲದ ವರ್ತನೆಗಳಿಂದಾಗಿ ಇವರು ಮಹರ್ಷಿ ಎನಿಸಿದ್ದಾರೆ. ಇವರ ಹೃದಯ ಬಡವರಿಗಾಗಿ, ದೀನ ದಲಿತರಿಗಾಗಿ ಪರಿತಪಿಸುವದು. ಕಾಂಗ್ರೆಸ್ಸಿನ ಇಂದಿನ ಅಧೋಗತಿಯನ್ನೂ, ಕಾಂಗ್ರೆಸಿಗರ ಅನಾಚಾರವನ್ನೂ ನೆನೆದು ಬಹಿರಂಗ ಸಭೆಯಲ್ಲಿ ಕಣ್ಣಿನಿಂದ ನೀರು ಮಿಡಿದಿದ್ದಾರೆ. ಅಂಥವರ ಕೈಗೆ ಈಗ ಕಾಂಗ್ರೆಸ್ಸಿನ ಕಡಿವಾಣ ಬಂದಿದೆ.

ಪುರುಷೋತ್ತಮ ದಾಸರು ಅಧ್ಯಕ್ಷರಾಗಿ ಆರಿಸಲ್ಪಟ್ಟ ಕಾರಣ ಕಾಂಗ್ರೆಸಿಗೆ ಹೊಸ ಚೇತನ ಬರಬಹುದು. ಲಂಚಗುಳಿತನ, ಲಾಭ ಬಡಕತನ, ನೇತೃ, ಅಧಿಕಾರ ಪ್ರಿಯತೆ, ಪಕ್ಷ ರಾಜಕೀಯಗಳಲ್ಲಿ ಬದ್ಧ ವಿರೋಧಿಯಾದ ಇವರು ಕಾಂಗ್ರೆಸಿನೊಳಗಿನ ಹೊಲಸನ್ನು ಹೊರದೂಡಿ ಕಾಂಗ್ರೆಸ್ಸನ್ನು ಪವಿತ್ರಗೊಳಿಸಲು ಯತ್ನಿಸಿಯಾರು. ಇವರು ಅಧ್ಯಕ್ಷ ಅವಧಿಯಲ್ಲಿ ದೇಶದ ಆಡಳಿತಗಾರರಿಗೂ ಇವರಿಗೂ ಘರ್ಷಣೆಯಾದರೂ ಆಶ್ಚರ್ಯವಿಲ್ಲ. ಏಕೆಂದರೆ ಈ ಮೊದಲೇ ಹಲವುಬಾರಿ ಸರಕಾರದ ನಿಯಂತ್ರಣ ವ್ಯವಸ್ಥೆ, ನಿರಾಶ್ರಿತರ ಸಮಸ್ಯೆಯ ಪರಿಹಾರ ಯೋಜನೆ ಇವುಗಳನ್ನು ಕಟುವಾಗಿ ಇವರು ಟೀಕಿಸಿದ್ದಾರೆ ಆದ್ದರಿಂದ ಇವರ ಅಧ್ಯಕ್ಷತೆಯದ ಕಾಲದಲ್ಲಿ ಕಾಂಗ್ರೆಸ್ಸಿನಲ್ಲಿ ಹೊಸ ಚೇತನವು ತೋರಿ ಬರದಿರದು. ಇವರ ಅಧಿಕಾರಾವಧಿಯಲ್ಲಿ ಕಳೆದುಕೊಂಡ ತನ್ನ ಘನತೆಯನ್ನು ಕಾಂಗ್ರೆಸ್ಸು ಸಂಪಾದಿಸುವಂತಾಗಲಿ

ಬೆಲೆ ನಿಯಂತ್ರಣ.

ಕೆಲವು ವಸ್ತುಗಳ ಅಧಿಕ ದರಗಳನ್ನು ಹತೋಟಿಗೆ ತಲಲು ಭಾರತ ರಿಜರ್ವ್ ಬ್ಯಾಂಕಿನ ಅಧ್ಯಕ್ಷರಾದ ಡಾ. ರಂಜೇಂದ್ರ ಪ್ರಸಾದರು ಆರ್ಡಿನೆನ್ಸ್ ರಚಿಸಿ ಜಾರಿಗೆ ತಂದಿದ್ದಾರೆ.

ಈ ಆರ್ಡಿನೆನ್ಸಿನವ್ಯಾಪ್ತಿಗೆ ಹಿತ್ತಾಳೆ, ಬೈಸಿಕಲ್ ಟೈರು, ಟ್ಯೂಬುಗಳು ಎಲೆಕ್ಟ್ರಿಕ್ ಬಲ್ಬ್‌ಗಳು, ರೇಜರ್ ಬ್ಲೇಡುಗಳು ಸೋಡ, ಕಾಸ್ಟಿಕ್ ಸೋಡ, ವ್ಯಾಟಲ್ ಬಾರ್ಕ್, ಹಸಿರಬ್ಬರು, ಕ್ಯಾಸಿನ ಗ್ಲಾಸ್ಕೊ ಹಾರ್ಲಿಕ್ಸ್, ಕೌವ್ ಅಂಡ್ ಗೇಟ್ ಮಿಲ್ಕ್ ಮೊದಲಾದ ಮಕ್ಕಳ ಆಹಾರ ಪದಾರ್ಥಗಳ ದರಗಳು ಕಳೆದ ಜೂನ್ ೧೫ ರಲ್ಲಿ ಆಥವಾ ಕೊರಿಯೂ ಯುದ್ಧ ಆರಂಭವಾಗುವ ಹತ್ತು ದಿವಸ ಮುಂಚೆ ಹೇಗಿದ್ದವೊ ಹಾಗೆ ಇವುಗಳ ಪರಮಾವಧಿ ದರಗಳನ್ನು ನಿರ್ಧರಿಸಲಾಗುವುದು. ಕಾಶ್ಮೀರ ಸಂಸ್ಥಾನ ಬಿಟ್ಟು ಭಾರತದ ಇತರ ಎಲ್ಲಾ ಸ್ಟೇಟುಗಳಿಗೆ ಈ ಆರ್ಡಿನೆನ್ಸು ಅನ್ವಯಿಸುತ್ತದೆ.

ಆರ್ಡಿನೆನ್ಸ್ ಉಲ್ಲಂಘಿಸಿದವರಿಗೆ ಮತ್ತು ನಿರ್ಧರವಾದ ದರಗಳಿಗೆ ಮಿಂದ ವ್ಯಾಪಾರ ಮಾಡಿದವರಿಗೆ ಶಿಕ್ಷೆ ವಿಧಿಸಲಾಗುವುದು. ಮೂರು ವರ್ಷಗಳ ಕಠಿಣ ಶಿಕ್ಷೆಗಳನ್ನು ವಿಧಿಸಲಾಗವುದು. ವರ್ತಕರು ಮೂಂಟೆ ಮಾಡಿದ ಮಾಲುಗಳಿಗೆ ನಗದು ಬಿಲ್ ಕೊಡಬೇಕು ಎಂದು ಪಡ್ಡಾಯವಿದೆ.

ಆರ್ಡಿನೆನ್ಸಿನ ಕಾನೂನು ಮೇಲೆ ಕೇಂದ್ರ ಸರಕಾರವು ಹತೋಟಿ ವಸ್ತುಗಳ ದರಗಳನ್ನು ನಿರ್ಧರಿಸಲಾಡುವರು. ವರ್ತಕರು ತನ್ನಲ್ಲಿರುವ ವಸ್ತುಗಳ ಸ್ವಾಧಿಸ್ಟ್ಯ ತಿಳಿಸಬೇಕು.

Reg. No. M. 1830.
'KODAGU' MERCARA, (Coorg).

ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.

ಸಂಪುಟ ೭೯ | ಶಾರೀಕಂ ೨೯-೯-೧೯೫೦ನೇ ಶುಕ್ರವಾರ | ಸಂಚಿಕೆ ೧೭

ಸದಸದ್ವಿವೇಕವೇ ನಮ್ಮ ಧೋರಣೆಯ ತಳಹದಿ.

ರಾಜ್ಯಪುನರ್ನಿಯಮ್ಸ್ಯೆಯ ನಮ್ಮ ರಾಷ್ಟ್ರವು ಜಿತ್ಕೋತವಾಗಿದೆ. ಪಾಕಿಸ್ತಾನ ಸರಕಾರಕ್ಕೆ ಇನ್ನೂ ಪರ್ಮನೆಂ ತಳಹದಿಯುಗರ ಬರಿಂತ ನವು ಈ ರೀತಿ ಸ್ಪಷ್ಟ ಪಡಿಸುವದು ಅಗತ್ಯವಿದೆ ನಮ್ಮ ರಾಜ್ಯ ಪುನರ್ನಿಗೆ ಯಾವದೇ ಧಾರ್ಮಿಕ ಗ್ರಂಥವು ಆಧಾರವಾಗಿಲ್ಲ ಅದು ಯಾವ ಧರ್ಮವನ್ನೂ ಅನುಸರಿಸುವದಿಲ್ಲ. ಪ್ರತಿಯೊಬ್ಬ ನಾಗರಿಕನಿಗೆ ಅವನು ಯಾವದೇ ಜಾತಿ ಪಂಗಡಕ್ಕೆ ಸೇರಿರಲಿ; ಸಮಾನ ಹಕ್ಕುಗಳು ಅಭಿಸುವವು. ನಮ್ಮ ದೇಶದ ಬುದ್ಧಿಯು ನೀಡಿದ ಪರಿಹಾರದಿಂದ ಮತ್ತು ನಿರಾಶ್ರಿತರಲ್ಲಿ ಕಷ್ಟಸಹಿಷ್ಣುತೆಯಿರುವದರಿಂದ ಈ ಸಮಸ್ಯೆಯು ತೀಕ್ಷ್ಣತೆ ಕತಿನೆಯೂ ದಂತೆ ತೋರುತದು. ಕೇಂದ್ರ ಸರಕಾರವು ಇನ್ನೂ ಹೆಚ್ಚು ಶ್ರಮವಹಿಸಿ ಈ ಸಮಸ್ಯೆಯನ್ನು ತೀಗಿಸಬೇಕಾಗಿದೆ.

ಭಾರತದಲ್ಲಿಯು ಮುಸ್ಲಿಂ ಜಾಂಧವರ ಬಗ್ಗೆ ಹೇಳಬೇಕಾದರೆ ನಮ್ಮ ರಾಜ್ಯಪುನರ್ನಿಯು ಜಾತ್ಯತೀತವಿರುವದರಿಂದ ಜಾತಿ ಪಂಗಡಗಳ ಭೇದವೆಣಿಸದೆ ಎಲ್ಲರಿಗೂ ಸಮಾನ ಹಕ್ಕುಗಳನ್ನು ದಯಪಾಲಿಸಲಾಗಿದೆ. ಪಾಕಿಸ್ತಾನವು ಇದೇ ಧೋರಣೆ ಅನುಸರಿಸಿದ್ದರೆ ಹಿಂದುಗಳು ಅಲ್ಲಿಂದ ಓಡಿ

ಕಾಂಗ್ರೆಸ್ಸಿನಲ್ಲಿರುವ ಸ್ವಾರ್ಥಿಗಳ ಉಚ್ಚಾಟನೆ ಮಾಡಬೇಕು.

ನಾಸಿಕ ಕಾಂಗ್ರೆಸ್ಸಿನಲ್ಲಿ ಅಧ್ಯಕ್ಷ ಟಾಂಡನರ ಭಾಷಣ.

ವಂತೆಕಿ ಹಾಗು ದೂರದರ್ಶಿತ್ವಕ್ಕೆ ಇದೇ ಸಾಕ್ಷಿ. ವಿಭಜನೆಯ ನಂತರ ಈ ದೇಶ ಪ್ರಜೆಗಳ ಸಂಖ್ಯೆಯು ಉಳಿದ ಪ್ರಜೆಗಳ ಸಂಖ್ಯೆಗಿಂತಲೂ ಹೆಚ್ಚಿದೆ. ಕೆಲ ಹಿಂದುಗಳು ಪಾಕಿಸ್ತಾನದಲ್ಲಿಯು ಘಟನೆಗಳನ್ನು ನೋಡಿ ಈ ದೇಶದಲ್ಲಿಯೂ ಹಿಂದು ಸರಕಾರ ಕಲೆಯೆತ್ತಬೇಕೆಂದು ಇಚ್ಛಿಸುತ್ತಿರಬಹುದು. ಜನಾನಾವಳಿಯು ಕಾಲದಲ್ಲಿ ಈ ಕೂಗು ಕೇಳಿಬರಬಹುದು. ಈ ಬಗ್ಗೆ ನನ್ನ ಅಭಿಪ್ರಾಯಗಳನ್ನು ಮುಂದಿಟ್ಟು ಎಚ್ಚರಿಕೆಯನ್ನು ಕೊಡಬಯಸುವೆ.

ಶತಮಾನಗಳ ಹಿಂದೆ ಹಿಂದುಸ್ತಾನದಲ್ಲಿಯು ಅಧಿಕಾರವು ಓರ್ವ ವ್ಯಕ್ತಿಯಲ್ಲಿ ಕೇಂದ್ರೀಕೃತವಾಗಿತ್ತು. ಆಡಳಿತೆಯು ಅವನ ಇಚ್ಛೆಯೆ ಅವನ ಮಂತ್ರಿಗಳ ಹಕ್ಕೋ ಟೆಯಲ್ಲಿತ್ತು. ಆಡಳಿತೆಯು ರೂಢಿ ಪರಂಪರೆಗಳನುಗುಣವಾಗಿ ನಡೆಯುತ್ತಿತ್ತು. ಆಡಳಿತೆಗೆ ಸಂಬಂಧಪಟ್ಟ ಗ್ರಂಥಗಳ ಸಹಾಯವನ್ನು ಅಗಿಂದಾಗ್ಗೆ ಪಡೆಯುವಾಗುತ್ತಿತ್ತು. ಆದರೆ ಯಾವ ಕೆಲಸಕ್ಕೂ ಒಂದೇ ಗ್ರಂಥವೇ ಆಧಾರವಾಗಿದ್ದಿಲ್ಲ. ಭಾರತಕ್ಕೆ ಮೂಲಭೂತವಾಗಿ ಸದಸದ್ವಿವೇಕ ಹಾಗು ಬುದ್ಧಿಗಳಲ್ಲಿ ನಂಬಿಕೆ ಇದೆ. ಗ್ರಂಥಗಳ ಪರ್ಚನ್ನು ವಿಶೇಷವಾಗಿದ್ದರೂ ಸದಸದ್ವಿವೇಕಕ್ಕೆ ಹೆಚ್ಚು ಪ್ರಾಮುಖ್ಯ ಕೊಡುತ್ತ ಬರಲಾಗಿದೆ.

ಜಾತೀಯ ದೃಷ್ಟಿಕೋನದಿಂದ ಈ ರಾಷ್ಟ್ರದ ಆಡಳಿತೆ ನಡೆಸಬೇಕೆಂಬ ರಾಜ ಕಾರಣಿಗಳು ಈ ಮಹಾಭೂಮಿಯಲ್ಲಿ ಭಿನ್ನ ಭಿನ್ನ ಆಚಾರ ವಿಚಾರಗಳು ಹಾಗು ರೂಢಿಪರಂಪರೆಗಳಿರುವವೆಂಬುದನ್ನು ಲಕ್ಷದಲ್ಲಿಡಬೇಕು. ಇಲ್ಲಿ ಯಾವದೊಂದು ನಿಶ್ಚಿತ ರೂಢಿ ಇಲ್ಲವೆ ಧಾರ್ಮಿಕ ಗ್ರಂಥದ ಆಧಾರದ ಮೇಲೆ ಆಡಳಿತೆ ನಡೆಸಲಾಗದು.

ನಮ್ಮಲ್ಲಿಯು ಅಂತರಿಕ ವೈಮನಸ್ಸುಗಳನ್ನು ಹೆಚ್ಚಿಸಲು ಇಲ್ಲವೆ ಆಡಳಿತೆಯನ್ನು ಸಡಲಿಸಲು ಈ ಬಗೆಯ ವಿಚಾರ ಸರಣಿಯೊಂದೇ ಸಾಕು. ಈ ವಿಷಯದಲ್ಲಿ ನಾವು ಪಾಕಿಸ್ತಾನದಿಂದ ಏನನ್ನೂ ಕಲಿಯಬೇಕಾಗಿಲ್ಲ. ನಮ್ಮ ಕೈತಿಗಳಲ್ಲಿ ನಾವು ಸದಸದ್ವಿವೇಕದಿಂದ ನಡೆದುಕೊಳ್ಳುವದರಿಂದಲೆ ಜಾತೀಯತೆಯನ್ನು ನಾವು ತಿರಸ್ಕರಿಸಿದಂತಾಗುವದು.

ಹಿಂದೀ ಭಾಷೆ.

ಹಿಂದೀ ಭಾಷೆಗೆ ಸರಕಾರಿ ಭಾಷೆಯ ಸ್ಥಾನವನ್ನು ನಮ್ಮ ರಾಜ್ಯಪುನರ್ನಿಯು ಕೊಟ್ಟು ರಾಷ್ಟ್ರದ ಏಕ್ಯವನ್ನು ಪ್ರತಿಪಾದಿಸಿದೆ ಬೇರೆ ಭಾಗಗಳ ನಿಜಾರಗಳಲ್ಲಿ ಏಕ್ಯ ಹಾಗು ಪರಸ್ಪರ ಪ್ರೇಮವನ್ನು ಸಾಧಿಸುವದರಲ್ಲಿ ಇದು ನೆರವಾಗುವದು ಸಂಸ್ಕೃತವೆ ನೂಡಿದ ಮಹಾಸಾಂಸ್ಕೃತಿಕ ಕಾರ್ಯವನ್ನು ಹಿಂದೀ ಭಾಷೆಯು ಮುಂದೆ ವಿಂಗಲಿದೆ. ರಾಜ್ಯಪುನರ್ನಿಯು ಈಗ ಇಂಗ್ಲಿಷ್ ಭಾಷೆಗೆ ಗಿಳ ವರ್ಷಗಳ ಅವಧಿಯನ್ನು ಕೊಟ್ಟಿದೆ ಈ ಅವಧಿಯು ಮುಗಿಯುವದರೊಳಗೆ ಹಿಂದೀ ಭಾಷೆಗೆ ಹೆಚ್ಚಿನ ಪುರ್ಣಾಧಿಕೆಯನ್ನು ಕೊಡುವದು ನಮ್ಮನ್ನೇ ಕಾಡಿದೆ.

ರಾಜ್ಯಪುನರ್ನಿಯ ಬಗ್ಗೆ ನನಗೆ ಪೂಜ್ಯ ಭಾವವಿದೆ ರಾಜ್ಯಪುನರ್ನಿಯನ್ನು ವಿರೋಧಿಸುವದು ಅತ್ಯಹಸ್ಯ ಮೂಡಿಕೊಂಡಷ್ಟೆ ಪಾಪವೆಂದು ನಾನು ಎಣಿಸುವೆನು.. ಸಾಮೂಹಿಕ ಮತ ಹಾಗು ಅಕಾಂಕ್ಷೆಗಳ ಜಿಹ್ವೆಯೆಂದು ಇದನ್ನು ಎಲ್ಲರೂ ಆರಾಧಿಸಬೇಕು. ಆದರೂ ನನಗೆ ಬದಲಾವಣೆಯ ತತ್ವಸಲ್ಲಿ ಅಚಲ ವಿಶ್ವಾಸವಿದೆ. ಸಮಯವು ಬದಲಿಸಿದಂತೆ ಕರ್ತವ್ಯವೂ ಬದಲಿಸುವದು ಎಂಬ ಅಭಿಪ್ರಾಯ ನನ್ನದಾಗಿದೆ ಈ ಬದಲಾವಣೆಗಳನ್ನು ತರಂವಾಗಲೂ ಶಿಸ್ತನ್ನು ಪಾಲಿಸುವದು ಅಗತ್ಯ. ಅರಾಜಕತೆಗೆ ಎಡೆಕೊಡಬಾರದು ಘಟನಾತ್ಮಕ ಮಾರ್ಗದಿಂದಲೆ ನಾವು ಬದಲಾವಣೆಗಳನ್ನು ತರತಕ್ಕದ್ದು.

ವಿದೇಶ ನೀತಿ.

ಇಂದು ಜಗತ್ತಿನಲ್ಲಿರುವ ಎರಡು ಬಣಗಳಲ್ಲಿ ಒಂದಕ್ಕೂ ಸೇರಬಾರದೆಂಬ ಭಾರತದ ಸ್ಥಿಪ್ರಧಾನ ಮಂತ್ರಿ ಪಂ. ಜವಾಹರಲಾಲ ನೆಹರೂರವರ ವಿದೇಶ ನೀತಿ ನನಗೆ ಒಪ್ಪಿಗೆಯಾಗಿದೆ. ಈ ನೀತಿಯನ್ನು ಅನುಸರಿಸುವದರಿಂದ ಕೆಲ ಮಟ್ಟಿಗೆ ಅನುಕೂಲತೆಗಳಿವೆ ಮತ್ತು ಪ್ರತಿಕೂಲತೆಗಳಿವೆ. ಅನುಕೂಲತೆಯೆಂದರೆ ಭಾರತವು ಜಗತ್ತಿನ ರಾಷ್ಟ್ರಗಳ ಮುಂದೆ ನ್ಯಾಯ ಸಭ್ಯತೆಗಳ ಆದರ್ಶಗಳನ್ನು ಇಡಬಹುದಾಗಿದೆ. ಮತ್ತು ಇಂಥಾ ಮಾರ್ಗವನ್ನು ಅನುಸರಿಸುವದರಿಂದ ಜಾಗತಿಕ ಸರಕಾರದ ಆದರ್ಶವನ್ನು ಸಾಧಿಸುವದು ಸುಲಭವಾಗುವದರಿಂದ ಈ ಬಗ್ಗೆ ಇತರ ರಾಷ್ಟ್ರಗಳನ್ನು ಒತ್ತಾಯಪಡಿಸುವ ಸಾಮರ್ಥ್ಯವು ಭಾರತಕ್ಕೆ ಬರುತ್ತದೆ. ಇನ್ನು ಈ ನೀತಿಯಲ್ಲಿರುವ ಪ್ರತಿಕೂಲತೆಯೆಂದರೆ ಜಗತ್ತಿನ ಎರಡು ಪ್ರಬಲ ಬಣಗಳಲ್ಲಿ ಯಾರೂ ಭಾರತವನ್ನು ತನ್ನ ಮಿತ್ರನೆಂದು ಬಗೆಯುವದಿಲ್ಲ. ಹೀಗಾಗಿ ಇದರ ಪ್ರತಿಕ್ರಿಯೆಯು ಭಾರತ-ಪಾಕಿಸ್ತಾನಗಳಿಗೆ ಸಂಬಂಧಿಸಿದ ಅನೇಕ ಸಮಸ್ಯೆಗಳ ಮೇಲೆ ಆಗದಿರದು. ಕಾಶ್ಮೀರ ಪ್ರಶ್ನೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಪಾಕಿಸ್ತಾನವು ನಮ್ಮ ವಿರುದ್ಧ ಅಪಪ್ರಚಾರ ನಡೆಸಿದೆ. ಭಾರತವು ರಶಿಯಾಮೂಡನ ಮೈತ್ರಿಯಿಂದಿದೆಯೆಂದೂಹೇಳತೊಡಗಿದೆ ಕಾಶ್ಮೀರವನ್ನು ಆಂಗ್ಲ ಅಮೇರಿಕನ್ನರ ಮಿತ್ರನೆಂದು ಎಲ್ಲರೂ ಒಗೆಯಬೇಕೆಂಬುದೇ ಪಾಕಿಸ್ತಾನದ ಉದ್ದೇಶವಾಗಿದ್ದು ಇಂಥ ಪ್ರಚಾರದಿಂದ ತನಗೆ ಆಂಗ್ಲ ಅಮೇರಿಕನ್ನರ ಬೆಂಬಲ ಸಿಗುವದೆಂದು ಅದು ನಂಬಿದಂತಿದೆ. ಕೆಲ ರಾಷ್ಟ್ರಗಳು ಸ್ವಾರ್ಥಿಗಳಾಗಿ ಪಾಕಿಸ್ತಾನವೇ ತಮ್ಮ ಮಿತ್ರನೆಂದು ಬಗೆದು ಅದರ ಬಗ್ಗೆ ಪಕ್ಷಪಾತಿಗಳಾಗಬಹುದು.

ಪೊನ್ನಂಪೇಟೆ ಕಾನೂರು ರಸ್ತೆಯನ್ನು ೧೯೫೦-೫೧ರೊಳಗೆ ಕಲ್ಲು ಹಾಕಿ ರಿಪೇರಿ ಮಾಡಲು ತಕ್ಕ ವಿಸ್ತಾರ ಮಾಡಬೇಕೆಂಬ ಶ್ರೀ ಪಿ. ಎಂ ನಾಣಮ್ಮಯ್ಯನವರ ರಾವವನ್ನು ಸೂಚಿಸಲಿಲ್ಲ.

ಕಾನೂರು -ಕಾರ್ಮಾಡು - ಮೂರ್ಕಲ್ ಫಾರೆಸ್ಟ್ ರಸ್ತೆಗಳನ್ನು ಸಾರ್ವಜನಿಕ ಉಪಯೋಗಕ್ಕೆ ಬಿಡುವ ವಿಸ್ತಾರ ಮಾಡಬೇಕು ಎಂಬ ರಾವವನ್ನು ಶ್ರೀ ಪಿ ಎಂ. ನಾಣಮ್ಮಯ್ಯನವರು ಸೂಚಿಸಿದರು. ರಾವು ಪಾಸಾಯಿತ.

ಕೊಡಗಿನ ವಿದ್ಯಾ ಸಂಸ್ಥೆಗಳಿಗಾಗಿ ೧೯೪೫ ರಲ್ಲಿ ಖೈನಾನ್ಸು ಕವಿ ಟಿಯು ಸಿಫಾರಸು ಮಾಡಿದ ಗ್ರಾಂಟುಗಳನ್ನು ಈ ವರ್ಷ ಕೊಡಬೇಕು ಎಂಬ ಶ್ರೀ ಕೆ ನಲ್ಲಪ್ಪನವರ ರಾವು ಪಾಸಾಗಲಿಲ್ಲ

೧೯೫೦-೫೧ರ ಸಾಲಿಗೆ ಖೈನಾನ್ಸು ಸವಿತಿಯು ವಿದ್ಯಾಸಂಸ್ಥೆಗಳಿಗೆ ಶಿಫಾರಸ್ಸು ಮಾಡಿದ ಹಣವನ್ನು ಮಂಜೂರ್ಮಾಡಿ ಈ ವರ್ಷ ಕೊಡಬೇಕೆಂಬ ಶ್ರೀ ಕೆ ನಲ್ಲಪ್ಪನವರ ರಾವವನ್ನು ಸರಕಾರವು ಒಪ್ಪಿಕೊಂಡಿತು.

ಈ ವರ್ಷದ ಬಡ್ಜೆಟ್ಟಿನಲ್ಲಿ ಪೆರಾಜೆ ಶಾಲಾ ಕಟ್ಟಡಕ್ಕಾಗಿ ರೂ. ೫೫,೦೦೦ ಇಡಬೇಕು ಎಂಬ ಶ್ರೀ ಎನ್ ಸೋಮಂಣನವರ ರಾವು ಚರ್ಚೆಯ ನಂತರ ಹಿಂತೆಗೆದು ಕೊಳ್ಳಲ್ಪಟ್ಟಿತು

ಕಾನೂರು ಶಾಲಾ ಕಟ್ಟಡದ ಖರ್ಚಿನಲ್ಲಿ ಶೇಕಡ ೫೦ ರಷ್ಟನ್ನು ಸರಕಾರವು ಕೊಡಬೇಕು ಎಂಬ ಶ್ರೀ ಎನ್. ಸೋಮಂಣನವರ ರಾವಿನ ಬಗ್ಗೆ ಬರವ ವರ್ಷ ಹಾಗೆ ಕೊಡಲಾಗುವದೆಂಬ ಭರವಸೆ ಇತ್ತ ಕಾರಣ ರಾವು ಹಿಂತೆಗೆಯಲ್ಪಟ್ಟಿತು.

ನಿಡ್ತ ಶಾಲಾ ಕಟ್ಟಡದ ಖರ್ಚಿನ ಶೇಕಡ ೫೦ ನ್ನು ಸರಕಾರ ಕೊಡಬೇಕು ಎಂಬ ಶ್ರೀ ಎನ್ ಸೋಮಂಣನವರ ರಾವಿಗೆ ಒರುವ ವರ್ಷ ಕೊಡಲಾಗುವದೆಂದು ಸರಕಾರ ಹೇಳಿದ ಕಾರಣ ರಾವು ಹಿಂತೆಗೆಯಲ್ಪಟ್ಟಿತು.

ಪೊನ್ನಂಪೇಟೆ ಹೈಸ್ಕೂಲಿಗೆ ಸೇರ್ಪಡೆಯಾಗಿ ವಿದ್ಯಾರ್ಥಿ ನಿವಾಸಗೃಹವನ್ನು ಕಟ್ಟಲು ಈ ಬರವ ಬಡ್ಜೆಟ್ಟಿನಲ್ಲಿ ಯೋಗ್ಯ ವಿಸ್ತಾರು ಮಾಡಬೇಕು ಎಂಬ ರಾವವು ಸರಕಾರಿ ಭರವಸೆ ಮೇರೆ ಶ್ರೀ ಕೆ ಪಿ. ಕರುಂಬಯ್ಯನವರಿಂದ ವಾಪಾಸು ತೆಗೆದು ಕೊಳ್ಳಲ್ಪಟ್ಟಿತು

ಜಾತಿ, ಮತ, ಧರ್ಮವನ್ನು ಲೆಕ್ಕಿಸದೆ ಮಡಿಕೇರಿ ಶಾಲಾ ಎಂಡೋಮೆಂಟ್ ಪ್ಲಾಂಟೇಶನ್ ಫಂಡು ಎಲ್ಲಾ ವಿದ್ಯಾರ್ಥಿಗಳಿಗೂ ಇನ್ವೈಯಿಸುವಂತೆ ವಿಸ್ತರಿಸಬೇಕೆಂಬ ರಾವವನ್ನು ಶ್ರೀ ಕೆ. ಮಲ್ಲಪ್ಪನವರು ಸೂಚಿಸಿದರು. ಈ ವಿಚಾರ ಪರಿಶೀಲಿಸಲಾಗುವದೆಂದು ಸರಕಾರಿ ಸದಸ್ಯರು ಹೇಳಿದ ಕಾರಣ ರಾವು ಹಿಂತೆಗೆಯಲ್ಪಟ್ಟಿತು

ಕೊಡಗು ಸರಕಾರವು ಕೊಡುವ ಸಯಿನ್ಸ್ ಮತ್ತು ಆರ್ಟ್ಸ್ ವಿದ್ಯಾರ್ಥಿ ವೇತನಗಳನ್ನು ಅಂಥಾ ವಿಷಯಗಳನ್ನು ಕಲಿಸುವ ಮಡಿಕೇರಿಯಲ್ಲಿರುವ ಸರಕಾರಿ ಕಾಲೇಜಿನಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೇ ಕೊಡಬೇಕೆಂಬ ರಾವಿನ ಬಗ್ಗೆ ಉರಿತಿ ಸರಕಾರವು ಈಗಾಗಲೇ ಆಜ್ಞಾಪಿಸಿರುವ ಕಾರಣ ಸೂಚಕರಾದ ಶ್ರೀ ಕೆ ಪಿ ಸರಂಬಯ್ಯನವರು ರಾವವನ್ನು ಹಿಂತೆಗೆದು ಕೊಂಡರು

ಇಡೀ ಕೊಡಗನ್ನು ಮಲೆನಾಡು ಪ್ರದೇಶವೆಂದು ಪರಿಗಣಿಸಿ ಆ ತಕ್ಕಜಿಯಲ್ಲಿ ಅಭಿವೃದ್ಧಿಯ ಯೋಜನೆ ಮಾಡಬೇಕೆಂದು ಕೇಂದ್ರದಿಂದ ನಿಯೋಜಿಸಲ್ಪಟ್ಟಿರುವ ಮಲನಾಡು ಸಮಿತಿಯನ್ನು ಕೇಳಬೇಕೆಂಬ ಶ್ರೀ ಕೆ ವಲ್ಲಪ್ಪನವರ ರಾವು ಚರ್ಚೆಯ ನಂತರ ಹಿಂತೆಗೆಯಲ್ಪಟ್ಟಿತ.

ಮಡಿಕೇರಿ, ವೀರಾಜಪೇಟೆಗಳಲ್ಲಿ ವಿಸ್ತರಿಸಿರುವಂತೆ ಕೊಡಗು ರಾಷ್ಟ್ರ ಸಭೆಯು ಉದ್ಯೋಗಸ್ಥರಲ್ಲದ ಸದಸ್ಯರ ಬಸ್ ಮತ ವಿರುವ ಒಂದು ಪೂಸುದ್ಧಾರಣಾ ಸಮಿತಿಯನ್ನು ನೇಮಿಸಬೇಕು ಎಂಬ ಶ್ರೀ ಎನ್ ಸೋಮಣ್ಣನವರ ರಾವು ಪಾಸಾಗಲಿಲ್ಲ.

ಸಂಪಿಗೆಗಳಿಂದ ಸಾಲ ಪಡೆಯುವವರಿಗೆ ಶೇಕಡ ೬½ ದರದಲ್ಲಿ ಸಾಲದೊರೆಯಲು ನುವಾಗುವಂತೆ ಸಂಘಗಳಿಗೆ ಬ್ಯಾಂಕು, ಕಡಿವೆ ದರದಲ್ಲಿ ಸಾಲಕೊಡುವಂತೆ ಸೂಚನೆಯನ್ನು ಸರಕಾರವು ಪ್ರಾಂತೀಕ ಬ್ಯಾಂಕಿಗೆ ಕೊಡಬೇಕೆಂದು ಶ್ರೀ ಸೋಮಂಣನವರ ರಾವು ಚರ್ಚೆಯನಂತರ ಹಿಂತೆಗೆಯಲ್ಪಟ್ಟಿತ.

ಪ್ರಾಂತೀಕ ಬ್ಯಾಂಕಿನಿಂದ ಗ್ರಾಮ ಸಹಕಾರಿ ಸಂಘಗಳಿಗೆ ಕೊಡುವ ಸಾಲದ ಬಡ್ಡಿಯ ದರವನ್ನು ½ರಿಂದ ೫ಕ್ಕೂ ಬಿನ್ ಪಕ್ಕಿನ ಸಂಘಗಳಿಗೆ ಕೊಡುವ ಸಾಲದ ಬಡ್ಡಿಯ ದರವನ್ನು ೫½ರಿಂದ ೪ಕ್ಕೂ ಕೊಟ್ಟು ಪಕ್ಕಿನ ಸಂಘಗಳಿಂದ ಶೇಕಡ ೨ರಂತೆ ಮತ್ತು ಬಿನ್ ಪಕ್ಕಿನ ಸಂಘಗಳಿಂದ ಶೇಕಡ ೧೫ರಂತೆ ಬಡ್ಡಿ ಬರುವಹಾಗೆ ಬೇಕೆಂಬ ರಾವನ್ನು ಚರ್ಚೆಯನಂತರ ಶ್ರೀ ಕೆ. ಕೆ ಬೆಳ್ಳಪ್ಪನವರು ವಾಪಾಸು ತೆಗೆದು ಕೊಂಡರು

ಭೂಸೊತ್ತಗಳ ಬೆಲೆ ಆಗ ವಿಪರೀತ ಏರಿರುವದರಿಂದ ಅವಕ್ಕನ ಗಣನಾಗಿ ರ್ಗಣಿತ ರಲ್ಲಿ ಭೂಮಿಯ ತರಂವಾರು ಬೆಲೆಯಂತೆ ಸಂಬಂಧ ಕೊಡಲು ನಿಶ್ಚಯಿಸಿದ ನಿಯಮಗಳನ್ನು ಮಾರ್ಪಾಡು ಮಾಡಬೇಕು ಎಂಬ ರಾವವನ್ನು ಪರ್ಯಾಲೋಚಿಸಲಾಗುವದೆಂಬ ಸರಕಾರಿ ಭರವಸೆ ಮೇರೆ ಸೂಚಕರಾದ ಶ್ರೀ ಕೆ ಕೆ ಬೆಳ್ಳಪ್ಪನವರು ವಾಪಾಸು ತೆಗೆದುಕೊಂಡರು.

ವೈಸೂರು ಹೈಕೋರ್ಟನ್ನು ಕೊಡಗಿನ ಹೈಕೋರ್ಟ ಗಿ ಮಾಡುವ ದೃಷ್ಟಿಯಿಂದ ಕಾರ್ಗ್ ಕೋರ್ಟ್ಸ್ ಅಕ್ಟನ್ನು ಆ ದಕ್ಕನುಸಾರ ತಿದ್ದುಪಡಿ ಮಾಡಬೇಕು ಎಂಬ ಶ್ರೀ. ಎನ್ ಸೋವಣ್ಣನವರ ರಾವಿಗೆ ಪರವಾಗಿ ೫ ಜನರೂ ವಿರೋಧವಾಗಿ ನಾಲ್ಕು ಜನರೂ ಓಟು ಮಾಡಿ ಸರಕಾರಿ ಸದಸ್ಯರು ತಟಸ್ಥ ಕೆಳಿತ ಕಾರಣ ರಾವು ಪಾಸಾಯಿತ.

ಕಾರ್ಯಕ್ರಮ ಪಟ್ಟಿಯಲ್ಲಿದ್ದ ರಾವುಗಳು ಮಗಿದಿರಲಿಲ್ಲ ಉಳಿದಿದ್ದ ೧೯ ರಾವುಗಳನ್ನು ಸಂಬಂಧಿಸಿಟ್ಟು ತಾರೀಕು ೨೨ ರಲ್ಲಿ ವಿಷಯಿಂಗು ಮಾಡ್ಯಾಯಿಗೊಂಡಿತು

ಪ್ರಕಟಣೆ.

ವೀರಾಜಪೇಟೆನಾಡು ವೈತಾಡಿ ಗ್ರಾಮದಲ್ಲಿರುವ ಒಕ್ಕಲಿಗರ ನಿಂಗೇಗೌಡರ ಮಗ ಒಂದನೆ ವೆಂಕಟೆಗೌಡರು ಸದ್ರಿ ಮನೆ ಲಿಂಗೇಗೌಡರ ಮಗ ಎರಡನೆ ತಿಮ್ಮಯ್ಯನಿಗೆ ಸಲ್ಲಿ ಈ ಮೂಲಕ ಸರ್ವಸ್ತ ಜನರಿಗೆ ತಿಳಿಯಿ ಪಡಿಸುವುದೇನೆಂದರೆ –

ಸದ್ರಿ ವೈತಾಡಿ ಗ್ರಾಮದಲ್ಲಿರುವ ಪಟ್ಟೆನಂಬರು (38) ರ ಆಸ್ತಿಯು ಮೇಲ್ಕಂಡ ಒಂದನೆ ವೆಂಕಟೆಗೌಡನಾದ ನನ್ನೆ ಹೆಸರಿನಲ್ಲೇ ಜಮಾಬಂದಿ ನಡೆದು ಬರುವುದಲ್ಲದೆ ಈ ಎರಡು ಜನರ ಆಸ್ತಿಗಳಿಗೆ ನಾನೇ ಪಟ್ಟೇದಾರನಾಗಿರುತ್ತೇನೆ ಮೇಲ್ಕಂಡ ಆಸ್ತಿಗಳು ಲಗಾಯಿತಿನಿಂದ ಸಮ್ಮನಮ್ಮ ಅನುಭವ ಸಾಗುವಳಿಯಲ್ಲಿ ರುವುದಲ್ಲದೆ ಕಂದಾಯ ಸಹ ನಾವೇ ಕಟ್ಟುವುದಾಗಿರುತ್ತದೆ.

ತಾರೀಕು 3-11-50ರ 'ಕೊಡಗು' ಪತ್ರಿಕೆಯ ಲ್ಲಿ ಪ್ರಕಟಿಸಿರುವ ಬೋರೆಯ್ಯನಿಗೆ ಮೇಲ್ಕಂಡ ಆಸ್ತಿಗಳ ಮೇಲೆ ಯಾವ ತರದ ಹಕ್ಕು ಬಧ್ಯತೆ ಇರುವುದಿಲ್ಲವಾದ ರೂ ಮೇಲ್ಕಂಡ ಆಸ್ತಿಗಳನ್ನ ಕ್ರಯಕ್ಕೆ ತೆಗೆದುಕೊಳ್ಳುವ ಜನರಿಗೆ ಹೆದರಿಸಲೋಸ್ಕರ ವೈನೆರು ಮಕ್ಕಳುಬರೆಂದು ಆಕಸ್ಮಿಕಾರ ಮಾಡಿರ ವುದಲ್ಲದೆ ಅವನಿಗೆ ಈ ಆಸ್ತಿಗಳ ಮೇಲೆಯಾವ ತರದ ಹಕ್ಕು ಬಾಧ್ಯತೆಯಿರುವುದಿಲ್ಲವೆಂಬುದಾಗಿ ಈ ಮೂಲಕ ತಿಳಿಸುತ್ತೇನೆ. ಮೇಲ್ಕಂಡ ಆಸ್ತಿಗಳ ಎಂದರೆ 235 ಬಟ್ಟು ಭೂಮಿ ಮಂಗಳೂರು ಹಂಚುಹಾಕಿರುವ ಮನೆ, ಕಾಫಿ, ಕೆತ್ತಳೆ, ಬಾಳೆಗಳಿಂದೊಡಗೂಡಿದ ತೋಟ ಮತ್ತು ಬಿ ಲಿಜಾಗ ಸೇರಿ 6 ಏಕ್ರೆ ಜಾಗ ಸೂರಾಟ್ಕೆ ಇರುತ್ತದೆ ಆಯಸ್ಕಾರರು ಇವುಗಳ ಬೆಲೆಯನ್ನು ಈ ಕೆಳಗಿನ ವಿಳಾಸದವರಿಂದ ತಿಳಿಸಿಕೊಳ್ಳತಕ್ಕದ್ದು.

ವಿ. ಟಿ. ಯಂಗಟಪ್ಪ,
18-12-50 ವಿ. ಯಲ್. ತಿಮ್ಮಯ್ಯ
2-2

ಮುನಿಸಿಪಲ್ ಓಟರುಗಳಿಗೆ

ಈ ಪೊದಲೇ ಓಟರುಗಳ ಕರ್ತವ್ಯವನ್ನು ಕರಿತ. ಸೂಚನೆಗಳು ಕೊಡಲ್ಪಟ್ಟಿವೆ ಓಟಿನ ಹಕ್ಕು ಒಪಿಳ ಅವಾಲವಾದದ್ದು ಈ ಹಕ್ಕನ್ನು ಬಹಳ ಆಲೋಚನೆಯಿಂದಲೂ ದಕ್ಷತೆಯಿಂದಲೂ ಉಪಯೋಗಿಸಿದರೆ ಯೋಗ್ಯರಾದ ಉಮೇದವಾರರು ಚುನಾಯಿ ಗಲ್ಪಟ್ಟು ಪುರದ ಕಾರ್ಯಕಲಾಪಗಳು ಸುಸೂತ್ರವಾಗಿ ನಡೆಯಲು ಅನುಕೂಲವಾಗುತ್ತೆ.

ಹತ್ತು ಹದಿನೈದು ವರ್ಷಗಳಿಂದ ಪುಂಬರಾಗಿರುವವರಿಗೆ ಪುನಃ ಪುನಃ ಓಟು ಕೊಡುವುದರಿಂದ ಆಗುವ ಕಾರ್ಯಕಲಾಪಗಳು ಯಿಂತಿತ ಅಭಿವೃದ್ಧಿ ಹೊಂದುವುದಿಲ್ಲ ಹೊಸ ಹೊಸ ಮೆಂಬರುಗಳ ಚಿಂತನೆಯು ಸಲ್ಲುವುದರಿಂದ ಹೊಸ ಹೊಸ ಉಪಾಯಗಳಿಂದ ಪಟ್ಟಣದ ಕೆಲಸಗಳು ನೇರವಾಗಿ ನಡೆಯಲ್ಪಡುತ್ತವೆ

ಓಟರುಗಳು ಉತ್ಸಾಹಗಳಿಂದ ಒಡಹೊಗಜನರನ್ನು ಇತರ ಹಿಂಜರಿಕೆದ ಪಂಗಡವು ನಿಲ್ಲಿಸಿದ ಹಿಂಗಳನ್ನು ಅಕ್ಕಿ ಅಭಿಪ್ರಾಯವನ್ನು ತಿಳಿಸಿ ಕಪ್ಪಿಸಿದಾದ ಗಿಯೂ ಆಕ್ಷಿ ಕರಿಸಿದರೆ ತಪ್ಪಿಗೆ ಬೆಲೆ ಕೊಡಬೇಕೆಂಬುದಾಗಿಯೂ ಒಕ್ತಯು ಮಾಡುವುದು ನನ್ನ ಅಪೇಕ್ಷೆಯನ್ನೆಗೆ ಒಂದಿಗೆ ನಮ್ಮ ಸಹೋದರಿಯರು ಮತ್ತು ಎಂದಿಗೂ ಮನಸ್ಸು ಕೆಡಬಾರದು ಇವರುಗಳು ಕ್ಷೌರಿಕರಿಗೆ ನ್ಯಾಯವಲ್ಲದ ಶಿಂಪಿಗೆ ಪೂರೈಸಿದ್ದಲ್ಲದೆ (ಅದಾ ನಿಶ್ಚಿತವಾಗಿರಲಿಲ್ಲ) ಬೇರೆ ಯಜಮಾನರುಗಳನ್ನು ನೋಡಿರುವುದಿಲ್ಲ ಏಕೆಂದರೆ ವೈದ್ಯಾನವ ವಿಷಯಗಳನ್ನು ಪೂರಪಿಸಿಕೊಳ್ಳುವುದಕ್ಕೆ ಕೆಲವು ಪ್ರತಿನಿಧಿಗಳು ಆ ಕಮಿಷನರ್ ಸಾಹೇಬರ ಬಂಗ್ಲೆಗೆ ಹೋದ ದ್ದು ಸರಿಯಷ್ಟೆ ನಾವುಗಳು ಅಲ್ಲಿಗೆ ಹೋದ ಕೂಡಲೆ ಸಾಹೇಬರವರು ನನ್ನುನ್ನು ಮಾರ್ಯದೆಯಿಂದ ಸ್ವಾಗತಿಸಿ ನಾವುಗಳ. ಹೇಳಿದ ಕಾರ್ಯದಲ್ಲೇ ಕಾವು ಒಂದು ವಾರದಿಂದ ಪೊಪಲೇ ನಿರಂತರವಾಗಿ ಪ್ರಯತ್ನ ಮಾಡಿದ್ದಾಗಿಯೂ ತಮ್ಮ ನಾಕರಿಗೆ ಹುತ್ತಿ ರಜ ಸಹಾ ಕೊಡದೆ ಹೋಗಲ್ಕು ದಿಕ್ಕಿಗೂ ಆಕ್ಕಿ ಜನೂಯಿಸಲು ಕಳ್ಳಹಿಸಿರುವುದಾಗಿಯೂ ತಿಳಿಸಿದ್ದಲ್ಲದೆ ಕಾವುಕಹಾ ಇದೇ ಉದ್ದಿಶ್ಯದಿಂದ ಕಾಮಡೆಲೆ ಹೊರಹಾಯವದ ಗಿ ತಿಳಿಸಿದರು ಆಲ್ಲದೆ ಕಳೆದ ಮೂರು ತಿಂಗಳಿನ ಹೆಗಾ ಮಿಬ್ಬಾಗಿ ಪ್ರವಾಸಕ್ಕೆ ಬಹು ಜನಗಳು ಮಂಡಿಕೊಂಗೆ ಬಂದವ್ದರಿಂದ ಈ ಬಾಜು ಮೂಗಿ ಅಕ್ಕಿ ಬಿಗಿಸಬೇಕಾಗಿ ಬಂದು ಕಾಪತ್ರಗ್ ಕ್ಕೆ ಕಾಲಾವಾಯಿ ತಿಂಗಳ ತಿಳಿಸಿದರು ಅಲ್ಲಿ ಇನ್ನು ಒಂದು ವಾರ ಅಥವ ಹತ್ತು ದಿನಗಳ ಪರೆಗೆ ಕೊಂಚ ತೊಂದರೆಯಾಗ್ತೆ. ನಂತರ ಸಾ ಬೀತಿ ತೊಂದರೆಯಾಗ ಪ್ರತಿಕ್ಷಣವಿರ್ಪಾಡುಮಾಡಿರವುದಾಗಿ ಹೇಳಿದರು. ಈ ವಿಷಯಗಳನ್ನು ನಮಗೆ ತಿಳಿಸಿ ಕೊಂಡು ಪ್ರಯತ್ನದಿಂದ ಅಕ್ಕಿ ಬಂದರೆಗಳು ಲಿಯಲು ಸರಕಾರದ ರೇಷನ್ ಆಫೀಸರ್ ಗಳು ಕಾರ್ಯನಿರ್ವಹಿಸುತ್ತಿರುವುದನ್ನು ತೋರಿಸಿದ್ದರ ಫಲವಾಗಿ ಅಕ್ಕಿ ಬಿದಗಿತೆಂಬುದು ಸ್ಪಷ್ಟವಾಗಿತ್ತು. ಈ ವಿಷಯವನ್ನೆಲ್ಲ ಓಟರುಗಳಿಗೆ ತಿಳಿದುಕೊಂಡು ತಮ್ಮ ಓಟುಗಳನ್ನು ಸರಿಯಾಗಿ ಉಪಯೋಗಿಸಬೇಕಾಗಿ ವಿನಂತಿ

ಕೆಲವು ವಾರ್ಡುಗಳಲ್ಲಿ ಕೆಲವು ಉಮೇದುವಾರರು ಓಟರುಗಳನ್ನು ಪ್ರಲಾಭಯಿಸಿ ಇಂಥವರಿಗೆ ಓಟು ಕೊಡಬೇಕೆಂದು ಕಾಗದಕ್ಕೆ ಸಹಿಹಾಕಿಸಿಕೊಂಡು ಹೋಗಿದ್ದಪದಾಗಿ ತಿಳಿಯಬಂದಿದೆ ಇದು ನಿಜವಾದರೆ ಇದು ಕೆಟ್ಟ ಕಾರ್ಯವೆಂದು ಖಂಡಿತ ಹೇಳಬಹುದು ಇದರಿಂದ ನಮ್ಮ ಮ್ಮ ವಾ ಗಿ ಪ್ರಜಾ ಉ ವೇಗುವಾರರಲ್ಲಿ ಮೂರಂಕಾಸಿನ ತಿರುಳು ಇಲ್ಲವೆಂದು ಸ್ಪಷ್ಟಪಡುತ್ತೆ. ನ್ಯಾಯವಾಗಿ ಕೆಲಸ ಮಾಡುವವರು ಇಂಥಾ ಹೀಯವಾದ ಕಾರ್ಯಕ್ಕೆ ಕೈಹಾಕುವುದಿಲ್ಲ ಈ ಕಾರ್ಯದಿಂದ ಓಟರುಗಳು ತಿಳಿಯಬೇಕಾದ ವಿಷಯವೆಂದರೆ ಓಟು ಈ ಕಾಲಸ ಮಾಡಿದ್ದಾಗಿ ತಿಳಿದುಕೊಂಡು ಹಾಗೆ ನಡಿಸಿ ಉಮೇದುವಾರರಿಗೆ ಓಟು ಕೊಡದಿರುವುದೇ ಪ್ರಾಯಶ್ಚಿತ್ತವಾಗಿದೆ

ತ್ರಂಬಾ ಜನರಿಗೆಂದು ಮೆಂಬರುಗಳಾಗಿರುವ ಕೆಲವರು ಮುನ್ಸಿಪಾಲಿಟಿ ಕೆಲಸ ಪ್ರತಿಕೂಲ ತಮಗೆ ಸಮಯ ದೊರೆಯುವದಿಲ್ಲವಾಗಿ ಹೇಳುತ್ತಾರೆ ಆದರೂ ಪುನಃ ನಿಂಬರುತನಕ್ಕೆ ಉಮೇದುವಾರರಾಗಿ ನಿಂತಿರುವದು ದಾರಿ ತಯಿಂದಲ್ಲವೆ? ರಿಕಾರ್ಡ್ ನೋಡಿದಲ್ಲಿ ಇತರ ವಷಯಗಳಲ್ಲಿ ಬಹಳ ವಿಷಯಗಳಲ್ಲಿ ಸೈರ ಹಾಜರಿ ಕೊಟ್ಟಿಲ್ಲ ಮೆಂಬರುಗಳು ಉಳಿಸಿಕೊಳ್ಳುವದಕ್ಕೆ ಮೂರು ವಿಷಯಗಳಿಗೆ ಒಂದಾವರ್ತಿ ಹಾಜರಾಗಿ ತ್ತಿದ್ದರೆಂದು ಹೊರ ಪಡುತ್ತದೆ ಈ ಕಾರಣದಿಂದ ಇವರಿಗೆ ಓಟು ಕೊಡುವರಿಂದ ಪುರವಾಸಿಗಳಿಗೆ ಯಾವ ಫಲವೂ ದೊರೆಯುವದಿಲ್ಲ ಇದನ್ನು ಓಟರುಗಳು ಗಮನದಲ್ಲಿಡಬೇಕು

ಈಗಿನ ಪ್ರೆಸಿಡೆಂಟರ ಅಧಿಕಾರದಲ್ಲಿ ಮುನ್ಸಿಪಲ್ ಹಣ ಪಡಿತವಿಲ್ಲವೆಂಬ ರೀತಿ ಬಿಚಾರಿಸಿದರೆಯೆಂದು ಪತ್ರಿಕೆಗಳಲ್ಲಿ ಹಲವು ಬಾರಿ ಪ್ರಕಟವಾಗಿತ್ತು. ಬ್ರಾಹ್ಮಣಾಬೀದಿ, ಗಾಳಿಬೀದಿಗಳಲ್ಲಿ ಯೋಗ್ಯ ಕೆಲಸಗಳು ಮಾಡಿಸಬೆಕೆಂಬ ಕೆಳಗಿನ ವಿಚಾರಿಸಿದ ಕೆಳಗಿನ ಕೆಲಸಗಳು ಪೂರ್ತಿಯಾಗಿದೆ ಮಹದೇವಪ್ಪನವರ ಬೀದಿಯಲ್ಲಿ ಕೆಲಸಕ್ಕೆ ಬಾರದ ಕ್ಯಾಯರ್ ಮಾಡಲು ಅಂದಾಜು ಅರ್ಧ ಲಕ್ಷರೂಪಾಯಿ ಖರ್ಚು ಮಾಡಲು ಈ ಆಡಳಿತ ಸೊಂಟ ತಟ್ಟಿದೆ. ಇಂಥಾದ್ದನ್ನು ಓಟರುಗಳು ಲೆಕ್ಕಿಸಿ ಪರ್ಯವಲೆಕ್ಷಿಸಬೇಕು

ಕೆಲವು ಉಮೇದವಾರರ ತಮಗೆ ನೀತಪಿತ್ತ ಹೆರಿಜನರಿಗೆ ಒಂದೊಂದು ರೂಪಾಯಿ ಬಹುಮಾನ ಕೊಡುವ ಆಪೆಯ ಮಾಡಿರುವುದನ್ನು ಕೇಳಿ ತ್ತಿರಬಹುದು ಅವರು ತಮ್ಮ ಮನೆಗಳಲ್ಲಿ ಕೆಲಸ ಮಾಡುವವರನ್ನು ಬಲಾತ್ಕಾರ ಮಾಡುತ್ತಿರುವಂತೆ ಕಂಟ್ರಾಕ್ಟು ಕೆಲಸ ಮಾಡುವ ಕೂಲಿಗಳನ್ನು ಹೆದರಿಸಿ ಓಟು ಕೊಡದಿದ್ದರೆ ಕೆಲಸಗಳಿಗೆ ಕಂಟ್ರಾಕ್ಟು ಕೊಡಿಯಲಾರ ವೆಂದು ಬೆದರಿಸಿದ್ದಾರೆಂಬ ಸುದ್ದಿಯು ನಿಜವಾಗಿದ್ದಲ್ಲಿ ಪ್ರಜಾಪ್ರಭುತ್ವ ಪದ್ಧತಿಗೆ ವಿರುದ್ಧವಾದ ಪ್ರವರ್ತನೆಯಾಗಿದೆ ಪ್ರಜಾಪ್ರಭುತ್ವ ಪದ್ಧತಿಗೆ ವಿರುದ್ಧವೆ ತೀರಿಸಲು ಸಾಧ್ಯವಾದಾಗ ಪ್ರಜೆಗಳೇ ಅಹರಿಗಾಗಬೇಕು ಕಪಟ ನಿದ್ರೆಯಲ್ಲಿರುವ ಸೈನಿಕರು, ಇವರು ಹಣಗರರ, ಆನಂದಪಕ್ಷದವರೆಂದು ತಮ್ಮ ಆತ್ಮಸಂತೃಪ್ತಿಗಾಗಿ ಆ ಹೆಸರಿನಿಂದ ಕೊಡದೆ ಪುರದ ಹಿತಚಿಂತನೆಯಿಂದ ಯೋಗ್ಯ ಕೆಲಸಗಾರರಿಗೆ ಮಾತ್ರ ಕೊಡಬೇಕಾಗಿದೆ.

ದೇಶಬಂಧು

ಅಪ್ಪರ್ ಪಾರ್ಲಿಮೆಂಟಿಗೆ ಕೊಡಗಿನ ಪ್ರತಿನಿಧಿಯ ಆಯ್ಕೆ.

ಕಾರೀಕು ಚಿರಲ್ಲಿ ಕೇಂದ್ರ ಶಾಸನ ಸಭೆಯಲ್ಲಿ ಸಿ ಭಾಗದ (ಕೇಂದ್ರದಿಂದ ನೇರವಾಗಿ ಆಳಲ್ಪಡುವ ಚೀಫ್ ಕಮಿಷನರ ಪ್ರಾಂತಗಳು.) ಪ್ರಾಂತಗಳಿಂದ ಮೇಲಿನ ಜನತಾ ಸಭೆಗೆ (ಅಪ್ಪರ್ ಛೇಂಬರ್ ಆಫ್ ಪಾರ್ಲಿಮೆಂಟ್) ಪ್ರತಿನಿಧಿಗಳನ್ನು ಆರಿಸುವ ಮಸೂದೆಯು ಅಂಗೀಕೃತವಾಯಿತು. ಆ ಸಂದರ್ಭದಲ್ಲಿ ಮುಖ್ಯ ಮಂತ್ರಿ ಸಂಡಿತ ನೆಹರೂರವರು ಸಿ ಭಾಗದ [illegible] ಪ್ರತಿನಿಧಿಯನ್ನು ಕೊಡುವ ಪ್ರಶ್ನೆಯನ್ನು ನೀಳ್ದು ಪರಿಶೀಲಿಸಲಾಗವದೆಂದರು. ಪ್ರತಿ ಪ್ರಾಂತಗಳ ವಿಚಾರವನ್ನು ಪ್ರತ್ಯೇಕವಾಗಿ ಮಾಡಲಾಗುವದೆಂದೂ ಶರಕಾರವೇ ಆ ಪ್ರಶ್ನೆಯನ್ನು ಹೊಸದಾಗಿ ಪರಿಶೀಲಿಸಿ ಅವಶ್ಯವಿದ್ದರೆ ಅದಕ್ಕೆ ಪ್ರತ್ಯೇಕ ಒಂದು ಸಮಿತಿಯನ್ನು ಆರಿಸಲಾಗುವದೆಂದೂ ಹೇಳಿದರು. ಜನ ಸ್ವಾತಿನಿಧಿಗಳ ಅಭಿಪ್ರಾಯವನ್ನು ತಿಳಿದುಕೊಂಡೆ ಅವನ್ನು ನಡೆಸುವದಾಗಿಯೂ ಹೇಳಿದರು.

ಈ ತಿದ್ದು ಪಡಿ ಮಸೂದೆಯ ಪ್ರಕಾರ ಆಜಮೀರ್, ಬೋಪಾಲ್, ಬಿಲಾಸ್ ಪುರ, ಹಿಮಾಚಲ ಪ್ರದೇಶ, ಕಚ್, ಮಣಿಪುರ, ತ್ರಿಪುರ ಮತ್ತು ವಿಂದ್ಯಾಪ್ರದೇಶದ ಜನರು ಜನತಾ ಸಭೆಯ ಮೇಲಿನ ಭವನಕ್ಕೆ ತಮ್ಮ ಪ್ರತಿನಿಧಿಗಳನ್ನು ಪೌಥ ಮತದಾನ ಪದ್ಧತಿಯಂತೆ ವರ್ಗಪಡಿಸುವ ಚುನಾವಣಾ ಕ್ಷೇತ್ರಗಳಿಂದ ಆರಿಸಲ್ಪಟ್ಟ ಪ್ರತಿನಿಧಿಗಳು ಆರಿಸುವರು ಕೊಡಗಿನಲ್ಲಿ ಪ್ರತಿನಿಧಿಯನ್ನು, ಕೊಡಗು ಶಾಸನ ಸಭೆಯ ಚು. ನಾಯಿತ ಸದಸ್ಯರು ಆಯ್ಕೆಯವರು. ಪೆಲ್ಲಿಮು ಸದಸ್ಯರನ್ನು ಜನತಾ ಸಭೆಯಲ್ಲಿನ ಪೆಲ್ಲಿಮು ಸದಸ್ಯರು, ಪಲ್ಲಿ ಚೀಫ್ ಕಮಿಷನರ ಎಲಹಾಸಮಿತಿಯಲ್ಲಿರುವ ಉದ್ಯೋಗದವರಲ್ಲದ ಸದಸ್ಯರು, ಅಲ್ಲಿನ ಕಂಟೋನ್ಮೆಂಟ್ ಬೋರ್ಡು, ಬೆಲ್ಲಾ ಬೋರ್ಡ ಮುನಿಸಿಪಲ್ ಮತ್ತು ನೋಟಿಫೈಡ್ ಏರಿಯಾ ಸಮಿತಿಗಳ ಉದ್ಯೋಗದಲ್ಲಿರುವ ಸದಸ್ಯರು ಸೇರಿ ಆರಿಸುವರು ಆ ಜಮೋರ್ ಬೋಜಲ್, ಕಚ್, ಮಣಿಪುರ ಮತ್ತು ತ್ರಿಪುರಗಳಲ್ಲಿ ಪ್ರತಿಯೊಂದಕ್ಕೆ ಒಂದೆಂತೆ ಬಿಲಾಸ್‌ಪುರ, ಹಿಮಾಚಲ ಪ್ರದೇಶವಲ್ಲಿ ಮೂರು ಸದಸ್ಯರುಗಳು ಮತ್ತು ವಿಂದ್ಯಾಪ್ರದೇಶದಲ್ಲಿ ಏಂಟು ಸದಸ್ಯರಿಂದ ಕೂಡಿರುವ ಇಲೆಕ್ಟರಲ್ ಕಾಲೇಜುಗಳು ಈ ಜನಾಂಗಗಳಿಗಾಗಿ ಏರ್ಪಡುವವು.

ಸ್ಕೂಲ್ ಫೈನಲ್ ಪಬ್ಲಿಮೆಂಟರಿ ಪರೀಕ್ಷೆಯ ಫಲಿತಾಂಶ.

ಇದರ ತಾತ್ಪರ್ಯವೆಂದರೆ ಕೊಡಗಿನಲ್ಲಿ ಮಡಿಕೇರಿ ಕಾಲೇಜಿನಲ್ಲಿ ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ಕೂತ ಒಟ್ಟು ವಿದ್ಯಾರ್ಥಿಗಳಲ್ಲಿ ಈ ಕೆಳಗಿನ ೩೫ ಜನರು ಪಾಸಾಗಿರುವರು

ಶ್ರೀಗಳಾದ ಬಡುವಂದ ಬಿ. ಮುದ್ದಪ್ಪ, ಮೇಕೇರಿರ ಎಂ. ಕುಬ್ಬನಾಣಿ, ಟಿ. ಆರ್ ಮಂಜುನಾಥ, ಎಂ ಎಸ್ ನಾರಾಯಣ, ಬಡಚಿಟ್ಟಿರ ಚಿಂಗಪ್ಪ, ಮಚಿಮಂಡ ಕಾಳಪ್ಪ, ಜಿ ಎಂ. ಅಪ್ಪಣ್ಣಯ್ಯ, ಅಳಮೇಂಗಡ ಸಿ. ಮುತ್ತಣ್ಣ, ಚೊಟ್ಟೆಂಗಡ ಸಿ ಚಿಣ್ಣಪ್ಪ, ಬೊವ್ವೇರಿಯಂಡ ಬಿ ಗಣಪತಿ, ಪಟ್ಟಡಯು. ತಮ್ಮಯ್ಯ, ಹೆಮ್ಮಚ್ಚಿಮನೆ ಸುಂದರ ಮ್ಮಯ್ಯ, ಎಸ್ ಎಂ ನಂಜುಂಡಪ್ಪ, ಶಿವರಾಮಮಲ್ಲಿ, ಮೂಕಂಡ ಎ ಪೂವಯ್ಯ, ಬಿ. ಎನ್. ಬಂಗಾರಿಯ್ಯ, ಕೆ. ಆರ್. ಶ್ರೀಪತಿ, ತೆಕ್ಕಡ ಸಿದ್ದಾರ್ಥ, ಚೆಪ್ಪುಡೀರ ಎಂ ಕುಶಾಲಪ್ಪ, ಕೊಡಂದೆರ ಕೆ ಉತ್ತಯ್ಯ, ಪುಚ್ಚಿಮನೆ ಎಸ್. ಮುತ್ತಣ್ಣ, ಚೆಟ್ಟಿಮಾಡ ಟಿ. ಪೂವಯ್ಯ, ಟಿ ಆರ್ ಸುಬ್ರಹ್ಮಣ್ಯಂ, ಬಿ ಎ ಅಪ್ಪಚ್ಚ, ಬಿದ್ದಂಡ ಎಂ ನಂಜಪ್ಪ, ಕೊಕ್ಕಲೆರ ಎಸ್ ಕುಶಾಲಪ್ಪ, ಪಿ ಎನ್ ಬೆಳಿಟರವ್, ಅಪ್ಪಚ್ಚಂಡ ಸಿ ಅಪ್ಪಯ್ಯ, ಬಿ ಬಿ ಜೋಡದರ ಇವರಿಗೆ ನಮ ತ್ತ ಶ್ರೀಮಹಿಳಾ ರಂದ ಕೂಳಂಬೆರ ಜಿ. ಸುಶೀಲ, ಕೆ ಎ ಬೆಳ್ಳಿಯಪ್ಪ, ಮಾಳೆಯಂಡ ಡಿ. ನೀಲಮ್ಮ, ಕೊಂಗೇರ ಟಿ. ಪಾರ್ವತಿ ನವಿಕೆಂಯಂಡ ಎ ಲಕ್ಷ್ಮಿ ಪಂಡ್ಯಂಡ ಬಿ. ಕಮಲ ಇವರುಗಳು.

FOUND

One Golden Cock Bitch Anyone claiming Please refer-P S. BUCKNALL Peremboo-Colly, Chethalli P O.

Coorg Forest Department,
TIMBER SALE NOTICE
Mercara the 26th December 50

About two lakhs oft of Teak and other hardwood timbers will be [illegible]ly auction at the Coorg Forest Depots, Hunsur, on 17-1-51 at 10-30 A. M

C. M. KUSHALAPPA,
Chief Forest Officer, Coorg.

Notice.

THE COORG GENERAL INDUSTRIES, LIMITED, FRASERPET COORG.

Mr. K K Thimmaya has resigned his Managing Directorship and Mr G M Manjanathaya has been appointed Managing Director. Mr K K Thimmaya has agreed to continue to be a Director of the Company.

For the Coorg General Industries Ltd.
Sd. G M. Manjanathaya,
Chairman

ಕೊಡಗಿನ ಮಾಜಿ ಸಿಪಾಯಿಗಳೇ!

ಮಡಿಕೇರಿಯಿಂದ ವೀರರಾಜಪೇಟೆ ಮಾರ್ಗವಾಗಿ ತಲಚೇರಿಗೆ ಹೋಗುವ ನಿಮ್ಮದೇ ಆದ ಬಸ್ಸು ಲೈನೊಂದನ್ನು ಘನ ಸರಕಾರದವರು ಕೊಡಗಿನ ಮಾಜಿ ಸಿಪಾಯಿಗಳಿಗಾಗಿ ಮಂಜೂರು ಮಾಡಿರುತ್ತಾರೆ. ಇದು ಬಹಳ ಲಾಭಕರವಾದ ಲೈನಾಗಿದೆ. ಬಸ್ಸನ್ನು ಆದಷ್ಟು ಜಾಗ್ರತೆ ಓಡಿಸಲು ಎಲ್ಲಾ ಸಿದ ತೆಗಳನ್ನು ಅತೀ ಚುರುಕಿನಿಂದ ಮಾಡತೊಡಗಿದೆ.

ಈ ಕಾರ್ಯಕಲಾಪವು ಹಣಗಾರರಾದ ಕೆಲವು ಮಾಜಿ ಸಿಪಾಯಿಗಳ ಹಕ್ಕಾಗಿರದೆ ಪ್ರತಿಯೊಬ್ಬ ನೂಜಿ ಸಿಪಾಯಿಗೂ ಪಾಲುದಾರನಾಗಿ ಭಾಗವಹಿಸುವ ಹಕ್ಕಿರಬೇಕೆಂಬ ದೊಡ್ಡ ಆಶೆ ಕಾರ್ಯನಿರ್ವಾಹಕ ಮಂಡಲಿಯ ವತಿಗೆ ಇದೆ. ಆದುದರಿಂದ ದೇಶೀಯ ಪತ್ರಿಕೆಗಳಲ್ಲಿ ಈ ವಿಷಯವನ್ನು ಪ್ರಕಟಿಸಿ ನೀವೆಲ್ಲರೂ ಇಂಥಾ ಸುಯೋಗವನ್ನು ಕಳಕೊಳ್ಳಬಾರದೆಂದು ಈ ಮೂಲಕ ತಿಳಿಸುತ್ತೇವೆ

ಶೇರುಗಳನ್ನು ಈ ಕೆಳಗೆ ನಮೂದಿಸಿರುವ ಆಯಾಯಾ ಠೇಂದ್ರದ ಕವಿ.ಟೆ ಮೆಂಬರುಗಳಿಂದಲಾಗಲೀ, ಅಥವಾ ಆದಿ ಪೈಸಿಡೆಂಟ್, ಎಕ್ಸ್ ಸರ್ವಿಸ್ ಮೇನ್ಸ್ ಸೊಸೈಟಿ, ಮಡಿಕೇರಿ. ಈ ವಿಳಾಸಕ್ಕಾಗಲೀ ಬರೆದು ಹೊಂದಿಕೊಳ್ಳಬಹುದು, ಪ್ರತಿ ಶೇರಿನ ಮೊಬಲಗು ಹತ್ತು ರೂಪಾಯಿ ಮತ್ತು ದಾಖಲಾತಿ ಫೀಜು ಒಂದು ರೂಪಾಯಿ ಒಟ್ಟಾಗಿ ಹನ್ನೊಂದು ರೂಪಾಯಿ ಆಗಿರುತ್ತೆ. ಯಾರೇ ಆದರೂ ನೂರು ಶೇರುಗಳಿಗಿಂತ ಹೆಚ್ಚಿಗೆ ಪಡೆಯ. ಕೂಡದೆಂಬ ನಿರ್ಬಂಧವಿದೆ. ಆದಷ್ಟು ಜಾಗ್ರತೆ ಶೇರು ಹಣವನ್ನು ಸಂಗ್ರಹಿಸಬೇಕಾಗಿರುವುದರಿಂದ ಪ್ರತಿಯೊಬ್ಬ ಕೊಡಗಿನ ಮಾಜಿ ಸಿಪಾಯಿಯೂ ತಾವೇಕಂ ೩೧-೧೨-೧೯೫೧ರ ಒಳಗಾಗಿ ಶೇರುಗಳನ್ನು ಹೊಂದಿಕೊಳ್ಳತಕ್ಕದ್ದು. ಮೇಲ್ಕಂಡ ತಾರೀಕಿನ ನಂತರ ಶೇರುಗಳನ್ನು ಪಡಕೊಳ್ಳಲು ಅವಕಾಶವಿಲ್ಲ. ಎಲ್ಲರೂ ಆದಷ್ಟು ಜಾಗ್ರತೆ ಭಾಗವಹಿಸಿ ಈ ಕಾರ್ಯವನ್ನು ಜಯಪ್ರದವಾಗಿ ಮಾಡಬೇಕೆಂದು ಹಾರೈಸಿದೆ

ಕಮಿಟಿಮೆಂಬರುಗಳು.

ಮಡಿಕೇರಿ:—ಶ್ರೀ ಗಳಾದ ಕೂಡಂದೆರ ಎಸ್. ಅಪ್ಪಚ್ಚು, ಎಂ. ಎ. ಕೃಷ್ಣಮೂರ್ತಿ, ಬಿ. ಎ. (ಡಿಸ್ಟ್ರಿಕ್ಟ್ ಎಂಪ್ಲಾಯಿಮೆಂಟ್ ಆಫೀಸರು.) ಬಿ. ಐ. ಗಣಪತಿ, ಎಸ್. ಟಿ. ಪೊನ್ನಪ್ಪ, ಪಟ್ಟಮಾಡ ಚಿಟ್ಟಚ್ಚ, ಬಿ. ಟಿ. ಗೋವಿಂದಯ್ಯ, ಮುಕ್ಕಾಟಿರ ಜೆ. ಅಪ್ಪಣ್ಣ, ಕೋದಂಡ ನಾಣಯ್ಯ, ಕೆ. ಕೆ. ಅಪ್ಪಯ್ಯ.

ವೀರಾಜಪೇಟೆ:—ಶ್ರೀ ಗಳಾದ ಎನ್. ಬಿ. ಉತ್ತಪ್ಪ, ಎ. ಬಿ. ಏಯಣ್ಣ, ಪಿ. ಎಂ. ಪೊನ್ನಪ್ಪ, ಬಿ. ಎ ಕೆ. ಶೆಟ್ಟಿ, ಕೆ ಎಂ. ಮಾದಯ್ಯ

ನಾಪೋಕ್ಲು:—ಶ್ರೀ ಗಳಾದ ತಿರೋಡಿರ ಮಂದಣ್ಣ, ಕೆ. ಎಂ. ಕಾಳಪ್ಪ, ಕಲಿಯಂಡಮಂದಣ್ಣ.

ಸೋಮವಾರಪೇಟೆ:-ಶ್ರೀಗಳಾದ, ಡಿ. ಎನ್. ರಾಮಪ್ಪ, ಬಿ. ಎಂ. ಬೆಳ್ಯಪ್ಪ.

ಸುದಿಕೇರಿ:—ಶ್ರೀ ಕೆ. ಯನ್. ಉತ್ತಪ್ಪ.

ಪೊನ್ನಂಪೇಟೆ:—ಶ್ರೀ. ಸಿ. ಜೆ ಬೆಳ್ಯಪ್ಪ.

ಆಮ್ಮತ್ತಿ:—ಕ್ಯಾಪ್ಟನ್ ಕೆ. ಎ. ಪೊನ್ನಣ್ಣ.

ಸಿದ್ದಾಪುರ:—ಮೇಜರ್ ಎ. ಎಂ. ವೆಬ್.

ಗೋಣಿಕೊಪ್ಪ:—ಶ್ರೀ. ಕೆ. ಪಿ. ಬಿದ್ದಪ್ಪ.

ಪ್ರೆಸಿಡೆಂಟ್,
4-4 ಮಾಜಿ ಸಿಪಾಯಿಗಳ ಸೊಸೈಟಿ.

ದಿ ಟ್ರಾಪಿಕಲ್

ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮೇನೇಜಿಂಗ್ ಡೈರೆಕ್ಟರ್:— ಲಾಲ ಶಂಕರ್ ಲಾಲ್.
ಮುಖ್ಯ ಖಚೇರಿ:— ಹೊಸ ದೆಲ್ಲಿ.
ಸ್ಥಾಪಿಸಿದ ಡೈರೆಕ್ಟರರು:

ಗಂಡಿಕೆ ಮೋತಿಲಾಲ್ ಶೆಹರು. ಎಸ್. ಶ್ರೀನಿವಾಸ ಅಯ್ಯಂಗಾರ್
ಹಕೀಮ್ ಅಜಮಲಖಾನ್. ಜಾ|| ಎಂ. ಎ. ಅನ್ಸಾರಿ.

Transacts:—Life, Fire, Motor and Marine.

ಟಿ. ಯು. ಅಚ್ಚಣ್ಣ, ಎಂ. ಎ. ಬೆಳ್ಯಪ್ಪ
ವಿಮೆನ್ಸಿ ಸುದರ್ಶನ್ ಡೆಂಟೊ, ಬ್ರಾಂಚ್ ಸೆಕ್ರೆಟರಿ,
ಮಡಿಕೇರಿ, ಕೊಡಗು. ಹಂಪನಕಟ್ಟಾ, ಮಂಗಳೂರು.

ವಾರ್ತೆಗಳು.

ಇನ್ನು ಮುಂದೆ ಭಾರತದ ರಾಷ್ಟ್ರೀಯರಾಗಿರುವ ಗೂರ್ಖಾ ಜನರನ್ನು ಬ್ರಿಟಿಷ್ ಸೈನ್ಯಕ್ಕೆ ಸೇರಿಸಿಕೊಳ್ಳುವುದಿಲ್ಲವೆಂದು ಬ್ರಿಟಿಶ್ ಸರಕಾರದ ಅಶ್ವಾಸನ ಬಂದಿದೆಯೆಂದು ಸಂಸತ್ತಿನಲ್ಲಿ ತಿಳಿದುಬಂದಿತು.

ಡಿಫೆನ್ಸ್ ಮಿನಿಸ್ಟರ್. ಕೆ ಸಿದ್ಧಾಪ್ಪ ಇವ್ಯಕ್ತಿಯವರಿಂದ ನಡೆದ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಆ ಭಾ ಪರಿಷತ್ತಿನಲ್ಲಿ ಮಂಡಿಸಿ ಪಾಲಿಟಿ ಮೊದಲಾದ ಕಾರಣಗಳಿಗಾಗಿ ರದ್ದುಗೊಳಿಸುವ ರಾಜ್ಯ ಸರಕಾರಗಳ ಬಲವನ್ನು ಖಂಡಿಸಿ ಆಡಳಿತ ಸಮರ್ಪಕವಿಲ್ಲದಿದ್ದರೆ ಹೊಸ ಚುನಾವಣೆಗಳನ್ನು ನಡೆಸುವುದೇ ಯೋಗ್ಯ ಮಾರ್ಗವೆಂದು ಸೂಚಿಸಲಾಯಿತು.

ಮದ್ರಾಸಿನ ಕೆಲ ಮುಂಬ್ರಿಗಳ ಮೇಲೆ ಆರೋಪ ಹೊರಿಸಿ ಶಾಸನ ಸಭೆಯು ವಿಚಾರಣಾ ಸಮಿತಿಯನ್ನು ನೇಮಿಸಬೇಕೆಂಬ ಉದ್ದೇಶದಿಂದ ಶ್ರೀ ಟಿ. ಪ್ರಕಾಶಂ ಅವರು ಶಾಸನ ಸಭೆಯಲ್ಲಿ ಮಂಡಿಸಿದ ಗೊತ್ತುವಳಿ ಬಹುಮತದಿಂದ ತಿರಸ್ಕೃತವಾಯಿತು. ಕಾಂಗ್ರೆಸ್ಸಿನ ಆದೇಶ ಮೀರಿ ಈ ಗೊತ್ತುವಳಿ ಮಂಡಿಸಿದ್ದಕ್ಕೆ ಅವರ ಮೇಲೆ ಶಿಸ್ತಿನ ಕ್ರಮ ಕೈಕೊಳ್ಳುವ ಎತ್ತುಗಡೆ ನಡೆದಿದೆ.

ಈಚೆಗೆ ರಾಮಬಾಣ ಔಷಧಿಯೆಂದು ಯಾವುದೋ ವನಸ್ಪತಿಯನ್ನು ಪುಕ್ಕಟೆಹಂಚಿ ಫನರೋಗಗಳನ್ನು ಗುಣಪಡಿಸುವುದಾಗಿ ಹೇಳಿ ತೊಡಗಿದ್ದ ನೇಪಾಲಿ ಬಾಬಾ ಎಂಬ ಹಸ್ಸೆಂಡು ವರ್ಷದ ಹುಡುಗನ ಮೂತಿಗೆ ಮಸಿಬಳಿದು ರಂಗತಲಾಯಿಯೆಂಬ ಗ್ರಾಮದಲ್ಲಿ ಕ್ಷಯದಿಂದ ಕುಷ್ಟದವರೆಗಿನ ನಾನಾವ್ಯಾಧಿಗ್ರಸ್ತರು ಸಂವಿರಗಟ್ಟಲೆಯಲ್ಲಿ ದೂರದೂರದಿಂದ ಬಂದು ಕೂಗುತಿದ್ದರು ಬರಿಸಾ ಸರಕಾರದವರೂ ಪತ್ರಿಕಾ ಪ್ರತಿನಿಧಿಗಳೂ ಈ ಔಷಧದ ಪರಿಣಾಮವನ್ನು ಪರೀಕ್ಷಿಸಿ, ವಿಚಾರಿಸಿ ಹುಡುಗನ ಹೇಳಿಕೆಯಲ್ಲಿ ಏನೂ ತತ್ವವಿಲ್ಲೆಂದು ಪ್ರಕಟಿಸಿದರೂ ಕೇಳದೆ ಜನರು ಇನ್ನೂ ಮುಂಬೀಳುತ್ತಿರುವುದರಿಂದ ಅಲ್ಲಿ ಕಾಲಾರ ಬೇನೆ ಹಬ್ಬಿ ಐದಂ ದಿನದಲ್ಲಿ ಮೃತರಾದರು. ಸರಕಾರಿ ಔಷಧಾಧಿಗಳನ್ನು ಜನಜಂಗುಳಿಯನ್ನು ಹೊರಗೆ ಹಾಕಲು ಪ್ರಯತ್ನಿಸುತ್ತಿದ.

ಜಬ್ಬಲ್ಪುರಕ್ಕೆ ಸಮೀಪದ ಜಬ್ಲಾಲಾ ಎಂಬಲ್ಲಿ ಕಡೆ ತಲೆಗೆಯೊಬ್ಬಳು ಗಂಡಸತ್ತುಮೇಲೆ ಏರಹವನ್ನು ತಾಳಲಾರದೆ ಅತಿ ಶವ ಉರಿಯುತ್ತಿದ್ದ ಚಿತೆಗೇನೆ ಧುಮುಕಿ ಪ್ರಾಣಬಿಟ್ಟಳು.

ಲಂಡನ್ನಿನಿಂದ ಬೊಂಬಾಯಿಗೆ ವಿಮಾನದಲ್ಲಿ ಹೊರಡಬೇಕೆಂದು ಬಂದಿದ್ದ ಒಬ್ಬ ಗಂಡಸು ಮತ್ತು ತರುಣಿಯೊಬ್ಬಳನ್ನು ಲಂಡನ್ನಿನ ಕಸ್ಟಮ್ಸ್ ತಪಾಸಿಯವರು ಶೋಧಿಸಿದಾಗ ಸೀರೆಯೊಳಗೆ ಚಿನ್ನದ ಗಟ್ಟಿಗಳು ಇದ್ದವು ಕಂಡುಬಂದಿತು. ಆಕೆಯನ್ನು ಕಸ್ಟಮ್ಸ್ ತಪಾಸಿಯವರು ಬಹಳ ಹೊತ್ತು ನಿಲ್ಲಿಸಿ ಕೊಂಡಿದ್ದ ಕಾರಣ ಅವರು ಹೊಂಡಬೇಕಾಗಿದ್ದ ವಿಮಾನ ಅವರಹ್ನು ಬಿಟ್ಟೇ ಹೋಯಿತು.

ಬೊಂಬಾಯಿಗೆ ಸಮೀಪದಲ್ಲಿರುವ ಮದನಪುರದಲ್ಲಿ ಶೇಕ್‌ಬಾಬು ಎಂಬುವನು ಮಹಮ್ಮದಾಲಿ ಎಂಬ ವನನ್ನು ಚಾಕುವಿನಿಂದ ಇರಿದು ಕೊಂದನು. ಮಹಮ್ಮದಾಲಿಯು ಸಾಯುವ ಮುಂಚೆ ಪೋಲೀಸರಿಗೆ ತನ್ನನ್ನು ಇರಿದ ಆರೋಪಿಯು ತನ್ನ ಪತ್ನಿಯೊಡನೆ ಸ್ನೇಹದಿಂದ ಇದ್ದನು ಎಂಬುದಾಗಿ ತಿಳಿಸಿದ್ದಾನೆ. ಪೋಲೀಸರು ಮುಂದಿನ ಕ್ರಮ ಜರಗಿಸುತ್ತಿದ್ದಾರೆ.

ಅಖಿಲ ಭಾರತ ಹರಿಜನ ಸಂಘವು ಸ್ವತಂತ್ರದಾಗಿ ಮುಂದಿನ ಚುನಾವಣೆಯಲ್ಲಿ ಸ್ಪರ್ಧಿಸುವುದಕ್ಕಿಂತ ಕಾಂಗ್ರೆಸ್‌ಅಭ್ಯರ್ಥಿಗಳಿಗೆ ವೋಟರಿಗೆ ಬೆಂಬಲ ಕೊಡುವುದೇ ಲಸ್ಸೂಕಾಲವೆಂದು ನಿರ್ಧರಿಸಿದೆ.

ಕರಾಚಿಗೆ ಅಕ್ಕಿಯ ವಾಗಿ ಚಿನ್ನವನ್ನು ಸಾಗಿಸಲು ಪ್ರಯತ್ನಿಸಿದ ನಾಲ್ವರು ಅರಬರಿಂದ ಸುಮಾರು ರೂ. ಬೆಲೆಯ ಚಿನ್ನವನ್ನು ಕರಾಚಿ ಕಸ್ಟಮ್ಸ್ ಶಾಖೆಯವರು ಮುಟ್ಟುಗೋಲು ಹಾಕಿಕೊಂಡಿದ್ದಾರೆ. ಚಿನ್ನವು ಉಕ್ಕಿನ ಪಟ್ಟಿಗಳು ತಳದಲ್ಲಿ ಇನ್ನೊಂದು ತಳದಂತೆ ಇಡಲ್ಪಟ್ಟಿತ್ತು.

ಮೂರಾಟಕ್ಕಿದೆ.

ಮಡಿಕೇರಿ ಸೆಂಟ್ರಲ್ ಹೈಸ್ಕೂಲು ಬಳಿ ಇರುವ 50 ಸೆಂಟು ವಿಸ್ತೀರ್ಣದ ಜಾಗ ಮತ್ತು ಅದರಲ್ಲಿರುವ ಹಂಚು ಹಾಕಿದ ಎಂಡು ವಾಸದ ಮನೆಗಳು, ಹಂಚಿನ ಮೂರು ಕೊಟ್ಟಿಗೆಗಳು, ಮತ್ತು ಕಲ್ಲು ಕಟ್ಟಿದ ಸದಾ ನೀರಿರುವ ಭಾವಿ ಸಹಾ ಕ್ರಯ: ರೂ 16,000/- ಅಥವಾ ಅದರ ಸಮೀಪದ ಮೊಬಲಗು ಕೊಂಡುಕೊಳ್ಳಲು ಆಪೇಕ್ಷೆ ಇರುವವರು ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿ.

ಪಿ ಚೋಟಾ ಸಿಂಗ್,
ಸೆಂಟ್ರಲ್ ಹೈಸ್ಕೂಲ್ ರೋಡ್
ಮಡಿಕೇರಿ.

ಔಷಧ ಪೆಟ್ಟಿಗೆ.

ಸಾಮಾನ್ಯವಾದ ಎಲ್ಲಾ ಖಾಯಿಲೆಗಳನ್ನು ಉಪಚರಿಸಲು ಎಂಟು ಔಷಧಿಗಳಿಂದ ಕೂಡಿದ ಪ್ರತಿ ಮನೆಗೂ ಅತ್ಯವಶ್ಯವಾದ ಇದು ಸಂಪೂರ್ಣ ಅಸ್ತ್ರಶಸ್ತ್ರವಾಗಿದೆ.

ಕಡಿಗೆ ಕ್ರಯ ರೋಗದ ರೂಪು ತಾಳಬಲ್ಲ ದೈನಂದಿನದ ಸಾಮಾನ್ಯ ರೋಗಗಳಿಗೆ ಅತೀ ಉಪಯುಕ್ತವಾದ ಔಷಧಗಳು. ಈ ಪೆಟ್ಟಿಗೆಯಲ್ಲಿ ಎಂಟು ಔಷಧಗಳಿದ್ದು ಅವುಗಳನ್ನು ಪ್ರತ್ಯೇಕವಾಗಿ ಇಲ್ಲವೇ ವಿವಿಧ ರೀತಿಯಲ್ಲಿ ವಿಶ್ವಪೂಡಿ ಉಪಯೋಗಿಸಬಹುದು. ತಪ್ಪಾಗಿ ಉಪಯೋಗಿಸಿದರೂ ಯಾವ ತೊಂದರೆಯೂ ಆಗಲಾರದು.

ಬೆಲೆ ರೂ. ೨|೮ ಮತ್ತು ದೊಡ್ಡ ಸೈಜಿನವು.

J. & J. Dechane
Hyderabad Deccan.
ಏಜಂಟರು—
ಜ್ಯೋತಿ ಹೋಮಿಯೋ,
6-6 ಭಾರ್ಯೆಸಿ, ಮಡಿಕೇರಿ.

= ಗಾಂದೀತತ್ವ ವಿಮುಖತೆಯಿಂದ ವಿಶ್ವದ ವಿನಾಶ =

ಲೇಖಕರು:–ಶ್ರೀ ಭಗವಾನ್‌ನಾರಾಯಣ ಜಾರ್ಗವರು.
(ಖಾದಿ-ವಿಶಾಲ ಭಾರತ ಸಂಸ್ಥೆಯ ಅಧ್ಯಕ್ಷರು ಮತ್ತು ಶ್ರೀ ಸರ್ವೋದಯ ಪತ್ರಿಕೆಯ ಸಂಪಾದಕರು)

(ಕಳೆದ ಸಂಚಿಕೆಯಿಂದ ಮುಂದುವರಿದದ್ದು)

ಪ್ರತಿಯೊಬ್ಬ ಮನುಷ್ಯನೂ ಪೂರಾ ಭರತ ಭೂಮಿಯ ಪೂರ್ಣ ದೇಶದ ಉದ್ಧಾರಕ್ಕೆಯು ಭಂಗವಿಲ್ಲದ ಸ್ವಯಂಭೂ ವ್ಯಕ್ತಿಯ ಸುಧಾರಣೆಯು ಮೇಲೆಯೇ ಇದವೆಂದು ಮಹಾತ್ಮರು ಹೇಳುತ್ತಿದ್ದರು ನಾವಾದರೂ ಬೇರೆಯವರ ಸುಧಾರಣೆ ಅಂದರೆ ಬೇರೆಯವರ ತಪ್ಪು ವಿಕಸಿಯಲ್ಲಿಯೇ ನಮ್ಮ ಪೂರ್ತಿ ಶಕ್ತಿಯನ್ನು ಹಾಕಿರುತ್ತೇವೆ. ತಮ್ಮ ತಪ್ಪು ಹೀನತೆಗಳನ್ನು ದೋಷಗಳನ್ನು ನೋಡಲಿಕ್ಕೂ ಸಹ ಸಮಯವೇ ಸಿಕ್ಕುವುದಿಲ್ಲ. ಎನ್ನಿಯ ವರೆಗೆ ನಾವು ಆತ್ಮ ಶುದ್ಧಿ ಮತ್ತು ಆತ್ಮಸುಧಾರಣೆಯ ಮೇಲೆ ಅಂದರೆ ನಮ್ಮನ್ನು ನಾನೇ ತಿದ್ದಿಕೊಳ್ಳುವ ವಿಷಯಕ್ಕೆ ಮನಸುಕೊಡುವುದಿಲ್ಲವೋ ಅಲ್ಲಿಯ ವರೆಗೆ ದೇಶದ ಅಥವಾ ಸಮಾಜದ ಸುಧಾರಣೆಯೂ ಆಗುವುದಿಲ್ಲ. ಪ್ರಪಂಚವು ನೈತಿಕ ದೃಷ್ಟಿಯಿಂದ ಅತ್ಯಂತ ಹೀನಸ್ಥಿತಿಗೆ ಬಂದು ಬಿಟ್ಟಿದೆ. ಈಗ ಪ್ರಪಂಚದ ಮೇಲೆ ನಾಲ್ಕಾರು ಕಡೆಗಳಿಂದ ವಿಪತ್ತುಗಳು ಬಂದೊದಗಿವೆ. ಭಾರತ ಭೂಮಿಯನ್ನೂ ಈ ವಿಪತ್ತುಗಳು ಬಿಟ್ಟಿಲ್ಲ. ಯಾರಿಗೆ ದೇವರ ಮೇಲೆ ಅಥವ ದೇವರ ನಡವಳಿಕೆಗಳ ಮೇಲೆ ನಂಬಿಕೆ ಇಲ್ಲವೋ ಅವರು ಪ್ರಕೃತಿಯ ಕೋಪದಿಂದ ಹೀಗೆಲ್ಲಾ ಆಗುತ್ತದೆ ಎನ್ನುತ್ತಾರೆ. ಕಂಬಿಗಳನ್ನು ಕತ್ತರಿಸಿದ್ದರಿಂದ ಜಂಬಾ ಜನ ಹಾನಿ ಧನಹಾನಿ ಆಗುತ್ತಿರುವುದು ಪ್ರಕೃತಿಯ ಲೀಲೆಯೇ? ಅಲ್ಲಲ್ಲಿ ಘೋರ ಅಂಟುರೋಗಗಳಿಂದ ಜನರು ಸಂಖ್ಯೆಕ್ಕಿಂದ ಎನ್ನೋ ರೀತಿಗಿಳಿದ ಜನ, ಧನಹಾನಿ ಯಾಗುತ್ತಿದೆ. ಆದರೆ ಏಕೆ ಹೀಗೆ ಆಗುವುದು? ಮಹಾತ್ಮ ಗಾಂಧಿಯವರ ಸಿದ್ಧಾಂತಗಳನ್ನು ನೆನಪಿಗೆ ತಂದುಕೊಂಡರೆ ಇವೆಲ್ಲ ಸಾಮಾಜಿಕ ದುಷ್ಕರ್ಮಗಳಿಂದಲೇ ಆಗುತ್ತಿವೆಯೆನ್ನಬೇಕಾಗಿದೆ. ಬೇಹಾರದಲ್ಲಿ ದೊಡ್ಡ ಭೂಕಂಪದಿಂದ ಜನ ಮತ್ತು ಸಂಪತ್ತಿನ ನಾಶವಾದಾಗ ನಮ್ಮ ಅಸ್ಪೃಶ್ಯರ ಮೇಲೆ ನಾವು ನಡೆಸಿದ ಅತ್ಯಾಚಾರದಿಂದಲೇ ಈ ಕಷ್ಟ ನಷ್ಟಗಳು ಉಂಟಾದವೆಂದು ಮಹಾತ್ಮ ಗಾಂಧಿಯವರು ಹೇಳಿದ್ದು ನನಗೆ ನೆನಪಿದೆ. ಮಹಾತ್ಮರ ಈ ಮಾತಿನ ಮೇಲೆ ಈಗಲೂ ಜನರು ಹಾಸ್ಯ ಮಾಡುತ್ತಾರೆ. ಜನರಿಗೆ ಈ ತತ್ವದ ಮೇಲೆ ನಂಬಿಕೆ ಇನ್ನೂ ಬಂದಿಲ್ಲ. ಮನುಷ್ಯನು ಯಾವ ಕೆಲಸ ಮಾಡಿದರೂ ಅದರ ಪರಿಣಾಮ ಉಂಟಾಗಿಯೇ ತೀರುತ್ತದೆಯೆಂದು ವಿಜ್ಞಾನವು ಸಹ ಇಂದು ಹೇಳುತ್ತಿದೆ. ಕೈಯಿಗೆ ಪ್ರತಿಕ್ರಿಯೆ ಬಿಂಬಿತವಾಗಿ ಉಂಟಾಗುತ್ತದೆ ನಮ್ಮ ನಡತೆಯು ಹಠಾತ್ತಾಗಿ ಮಾಡಲು ಪ್ರಯತ್ನಿಸುತ್ತೇವೆ. ಆದರೆ ಪ್ರಕೃತಿಯು ಇನ್ನೊಂದು ಕಡೆಯಿಂದ ತನ್ನ ವಿಕರಾಳ ರೂಪಧಾರಣೆ ಮಾಡಿ ಎಲ್ಲವನ್ನೂ ನುಂಗಿಬಿಡುತ್ತದೆ. ನಾವು ಮುಖನೋಡುತ್ತಾ ನಿಲ್ಲಬೇಕಾಗುತ್ತದೆ.

ಇದನ್ನೆಲ್ಲಾ ಯೋಚಿಸಿದರೆ ಮಹಾತ್ಮ ಗಾಂಧಿಯವರ ಸಿದ್ಧಾಂತಗಳನ್ನು ಅದವರ ಮನುಷ್ಯರ ಹಿತ ಬಯಸಿ ಸರ್ವಜೀವ ಜಂತುಗಳ ಹಿತಬಯಸುವ ಶರ್ತಗಳನ್ನು ಅನುಸರಿಸಿರೋಣ ಶಾಶ್ವತವಾದ ಸುಖವನ್ನು ಹೊಂದಬಹುದು ಪ್ರಪಂಚದಲ್ಲಿ ಶಾಂತಿ ಇರಬೇಕಾದರೆ ಭರತಖಂಡದ ಎಂಬ ಧರ್ಮಕ್ಕನುಸಾರವಾಗಿ ನಡೆಯುವ ಉಪಾಯಗಳಿಂದಲೇ ಸಾಧ್ಯವೆಂತಲೂ ಅವರು ತೋರಿಸಿಕೊಟ್ಟಿದ್ದಾರೆ. ರಾಜನೀತಿಯಿಂದ ಧರ್ಮವನ್ನು ಬೇರ್ಪಡಿಸಿದರೆ ರಾಜನೀತಿಯನ್ನು ಕೂಡಾ ದಂತೆಯೇ ಎಂದು ಮಹಾತ್ಮರು ಹೇಳುತ್ತಿದ್ದರು. ಕ್ರಿಶ್ಚಿಯನ್ ಗ್ರಂಥಗಳಿಂದ ಆಗಲೇ ಯೂರೋಪ ಮತದ ಧರ್ಮ ಗ್ರಂಥಗಳಿಂದಾಗಲೀ ಮಹಾತ್ಮ ಗಾಂಧಿಯವರು ತೋರಿಸಿಕೊಟ್ಟು ಮಾನವ ಧರ್ಮವನ್ನೇ ನಾವು ಅನುಸರಿಸಬೇಕು. ಮಹಾತ್ಮ ಗಾಂಧಿಯವರು ಎಲ್ಲಾ ಮತಗಳ ಸಾರ್ವಧರ್ಮವನ್ನು ಮಾಡಿಸುತ್ತಿದ್ದರು. ಆದರೆ ಈಗ ಅವರ ಶರೀರ ಈ ಪ್ರಪಂಚದಲ್ಲಿ ಇಲ್ಲದ್ದರಿಂದ ಸಾರ್ವಜನಿಕ ಮತ್ತು ಸರ್ವಮತ ಸಮನ್ವಯದ ಪ್ರಾರ್ಥನೆಗಳೇ ಇಲ್ಲವಾಗಿವೆ. ಇಂಥಾ ಪ್ರಾರ್ಥನೆಗಳಿಂದ ಆತ್ಮಶಕ್ತಿ ಮತ್ತು ಆತ್ಮಶಾಂತಿ ದೊರಕಿತ್ತಿದೆಯೆಂದು ಮಹಾತ್ಮರು ಹೇಳುತ್ತಿದ್ದರು. 'ಭೋಜನಕ್ಕಿಂತ ಪ್ರಾರ್ಥನೆಯು ಕೋಟಿಪಾಲು ಹೆಚ್ಚು ಪ್ರಯೋಜನಕರವಾದದ್ದಾಗಿದೆ. ಊಟವಾದರೂ ಬಿಡಬಹುದು ಪ್ರಾರ್ಥನೆಯನ್ನು ಎಂದೂ ಬಿಡಬಾರದು. ಪ್ರಾರ್ಥನೆಯು ಆತ್ಮದ ಭೋಜನವಾಗಿದೆ. ದಿನವೆಲ್ಲಾ ದೇವರನ್ನು ನೆನೆಸಿಕೊಳ್ಳಲು ಸಾಧ್ಯವಿದ್ದರೆ ಬಹಳ ಒಳ್ಳೆದು. ಅದು ಸಾಧ್ಯವಿಲ್ಲದಿದ್ದರೆ ದಿವಸದಲ್ಲಿ ಕೆಲವು ಸಮಯವಾದರೂ ಈಶ್ವರ್ಸ್ಮರಣೆ ಮಾಡಬೇಕು. ಪ್ರಾರ್ಥನೆ ಮಾಡುವುದರ ಉದ್ದೇಶವೇನೆಂದರೆ ದೇವತಾಸಾಂಗ ಸಂಘಾತನೆಮಾಡುವುದು. ಅಂತರಾತ್ಮದ ಪರಿಶುದ್ಧಿಗೆ ಪ್ರಕಾಶವೆಮಾಡುವುದು ಆಗಿದೆ ಎಂತ ಮಹಾತ್ಮರು ಬರೆದಿದ್ದಾರೆ. ಮಹಾತ್ಮರ ಕಡಾವು ವೈಗೆರೆ ಸಾಮಾನುಗಳನ್ನು ಅವರ ಪೂರ್ವಕ ನೋಡುತ್ತೇವೆ. ಆದರೆ ಏನು ಪ್ರಯೋಜನ. ಇವುಗಳನ್ನೆಲ್ಲಾ ರಹಸ್ಯವನ್ನು ತಿಳಿಯದೆಯೇ ನಾವು ಹಾಗೆ ಮಾಡುತ್ತೇವೆ. ನಾವು ತಿಳುವಳಿಕೆಯಿಲ್ಲದೆ ಹಾಗೆ ಮಾಡುವುದರ ಬದಲು ರಹಸ್ಯವನ್ನು ತಿಳಿದುಕೊಂಡು ಮಾಡಿದ್ದರೆ ಎಲ್ಲಾ ಮುಖ್ಯ ಸ್ಥಳಗಳಲ್ಲೂ ಪ್ರಾರ್ಥನೆಗಳು ಕಾಡುಬರಬೇಕಾಗಿತ್ತು. ನಮ್ಮ ದೇಶದಲ್ಲಿ ಮಾತ್ರವಲ್ಲ, ಪ್ರಪಂಚದ ಮೂಲೆ ಮೂಲೆಗೆಲ್ಲೂ ಪ್ರಾರ್ಥನಾವಂದಿಗಳು ಇರುತ್ತಿದ್ದವು. ಅವುಗಳ ದೈನಿಕ ಪ್ರಾರ್ಥನೆಯ ಶುಭಧ್ವನಿ ಕೇಳಿಬರುತ್ತಿತ್ತು. ದೇಹಾಭಿಮಾನವನ್ನು ನಾವು ಗಾಂಧಿಯವರಂತೆ ಬಿಟ್ಟುಬಿಡಬೇಕು. ಆವರಂತೆಯೇ ಆತ್ಮದ ಮೇಲೆ ಅಭಿಮಾನವನ್ನು ಇಡಬೇಕು. ದೇಹವು ನಶ್ವರವೆಂತಲೂ ಶರೀರದ ಪಾಲನೆ ಪೋಷಣೆಯಲ್ಲೂ ಮತ್ತು ಅದರ ಸುಖದಲ್ಲೂ ಜೀವನವನ್ನು ಕಳೆಯುತ್ತಲೇ ಇದ್ದು ಮಹಾತ್ಮ ಗಾಂಧಿಯವರ ಸಿದ್ಧಾಂತಗಳನ್ನು ನಿರ್ಲಕ್ಷ್ಯಗಳನ್ನು ತಿರಸ್ಕರಿಸುತ್ತಾ ಹಿಂದೆರೆ ಪ್ರಪಂಚದ ನಾಶದ ಸನ್ನಿಯ ದೂರವಿಲ್ಲವೆಂತ ನನಗೆ ದೃಢವಿದೆ.

ಮಹಾತ್ಮ ಗಾಂಧಿಯವರು ತನ್ನ ಬಳಕ್ಕೆ ಏನೂ ಬೆಲೆ ಕೊಡದೆ ರಾಮನಾಮದ ಬಲವೇ ಸರ್ವವೂ ಎಂತ ಎಣಿಸಿದ್ದರು. 'ನಿರ್ಬಲರ ಬಲ ರಾಮ' ಎಂಬ ಹಾಡನ್ನು ಹಾಡಿಸಿ ಕೇಳಿ ಆದರಲ್ಲಿ ಮಗ್ನರಾಗಿ ಬಿಡುತ್ತಿದ್ದರು–ಉಪಸಂಹಾರವನ್ನು ಈ ಮಾತುಗಳಿಂದ ನಿಂದಿಸಿದ್ದಾರೆ:–

'ಅಹಂಕಾರಿಗೆ ಅಶಕ್ತನೆಂದು ತೋರಿದ ಮಾತ್ರೆ, ಏನೂ ಕೆಲಸವು ಶಿಶುವಿಗೆ ಬಹಳ ಸರಳವಾಗಿ ತೋರುತ್ತದೆ. ಸತ್ಯದ ತೋಳಿಕೆನಿಗೆ ಒಂದು ಧೂಳಿನ ಕಣದಿಂದಲೂ ಸಣ್ಣವನಾಗಬೇಕಾಗಿದೆ. ಧೂಳಿನ ಕಣವನ್ನು ಸಮಸ್ತ ಪ್ರಪಂಚವೂ ಕಾಲಿನ ಅಡಿಯಲ್ಲಿ ತುಳಿಯಬಹುದು. ಆದರೆ ಸತ್ಯದ ಉಪಾಸಕನಿಗೆ ಒಂದು ಧೂಳಿನಕಣ ಸಮಪ ತವನ್ನು ಅಡಗಿಸಬಹುದಿಂಬಷ್ಟು ಸಾಮರ್ಥ್ಯವನಾಗದಿದ್ದರೆ ಸತ್ಯದ ಹಸಿವೆ ಕಣಿವೆ ದುಸಾಧ್ಯವಾಗಲಾರದು.,,

ಸೂರದಾಸ, ತುಲಸೀದಾಸ, ಏಸೂರಾಬಾಯಿ ಮುಂತಾವವರ ಹಾಡುಗಳಿಂದ ಮಹಾತ್ಮರಿಗೆ ಎಷ್ಟು ಆನಂದವಾಗುತ್ತಿತ್ತು, ಆ ಕಾಲದಲ್ಲಿ ಜವಶುದೇವರ ನಾಡಿಸಲ್ಲಿ ಸೇರುತ್ತಿದ್ದರೆಂಬುದು ಅವರ ಬಗ್ಗೆ ಕಥಾನಕಗಳಿಂದಲೂ ಲೇಖನಗಳಿಂದಲೂ ಸ್ಪಷ್ಟವಾಗಿದೆ. ಒಂದು ಕಡೆ ಅವರ ಉದ್ಗಾರ ತೋರಿಬರುತ್ತದೆ. ಇನ್ನೊಂದು ಕಡೆದೇವರು, ಧರ್ಮ ಮತ್ತು ಪ್ರಾರ್ಥನೆಯಿಂದ ದೂರಾಡಿದವ ಜವರ ಅನುಯಾಯಿಗಳೆನ್ನುವ ನಾವು! ಈಗಲಾದರೂ ನಾವು ಚೇತರಿಸಿಕೊಂಡು ಗಾಂಧಿಜೀಯವರನ್ನು ಮರೆಯದೆ ಅವರ ಹೆಜ್ಜೆಯಲ್ಲಿ ಹೆಜ್ಜೆ ಇಟ್ಟು ನಡೆದರೆ ಕಷ್ಟಗಳೆಲ್ಲಾ ಪರಿಹಾರವಾದೀತು.

ಪ್ರಕಟಣೆ.

ಉತ್ತರ ಕೊಡಗು ತಾಲೂಕು, ಶನಿವಾರಸಂತೆ ಹೋಬಳಿ, ಆವರದಾಳು ಗ್ರಾಮದಲ್ಲಿ ಶನಿವಾರಸಂತೆ ಕೊಡ್ಲಿಪೇಟೆ ಜೈಕೋಡಿಗೆ 2 ಫರ್ಲಾಂಗ್ ದೂರವಲ್ಲಿ ಡಿಸ್ಟ್ರಿಕ್ಟ್ ಬೋರ್ಡ್ ರಸ್ತೆ ಪಕ್ಕದಲ್ಲಿ ಇರುವ ಒಳ್ಳೆ ಸ್ಥಿತಿಯಲ್ಲಿರುವ ಕಿತ್ತಳೆ ತೋಟ 30 ಎಕ್ರೆ, ತೋಟದ ಮಧ್ಯದಲ್ಲಿರುವ ನೀರಾವರಿ ಶರ ಜಮೀನು 15 ಎಕ್ರೆ, ಹಿಂದೆ ಕಾಫಿ ಹಾಕಲ್ಪಟ್ಟದ್ದು, ಈಗ ಕಾಫಿ ಮತ್ತು ಕಿತ್ತಳೆಗೆ ಯೋಗ್ಯವಾದ ಒಣಿನೆಲ್ಲರುವ, ಪೂರ್ವ ಬೇಳನ ಇಳಿಜಾರು ಪ್ರದೇಶ 32 ಎಕ್ರೆ, ಮಧ್ಯದಲ್ಲಿ ವಾಸದ ಮನೆ, ಕೂಲಿ ಲೈನು, ವಿಶಾಲವಾದ ಕಣ ಇರುತ್ತದೆ. ಅಪೇಕ್ಷಿಯುಳ್ಳವರು ಈ ಕೆಳಗಿನ ವಿಳಾಸದಾರರಲ್ಲಿ ಹೆಚ್ಚಿನ ವಿವರ ತಿಳಿದುಕೊಳ್ಳಬಹುದು. ರೂ. 35,000/-ಆಥವಾ ಸಮಿಪದ ಬೆಲೆ.

ಎ. ಕೆ. ಮುಹಮ್ಮದ್ ಕುಟ್ಟಿ,
3-3 ಕೊಡ್ಲಿಪೇಟೆ.

ಕೊ ಡ ಗು

ಕಾ. ೭೯–೧೨–೧೯೫೦ನೇ ಶುಕ್ರವಾರ

ಕೊಡಗಿಗೆ ಸುಧಾರಣೆ.

ಹಿಂದೂದೇಶಕ್ಕೆ ಸ್ವಾತಂತ್ರ್ಯವು ದೊರೆತ ಕೂಡಲೇ ಕೇಂದ್ರ ಸಚಿವ ಪ್ರಾಂತೀಯ ರಾಜ್ಯಾಂಗ ರಚನೆಯನ್ನು ತಯಾರಿಸಲು ರಾಜ್ಯಪುನರ್ವಿಮರ್ಶನ ಸಮಿತಿಯ ನೇಮಕವಾಯಿತು. ಆದರೆ ಅದು ಕೇಂದ್ರದಿಂದ ನೇರವಾಗಿ ಆಳಲ್ಪಡುವ ಚೀಫ್ ಕಮಿಷನರ್ ಪ್ರಾಂತಗಳಿಗಿರುವ ಆಡಳಿತ ರಚನೆಯನ್ನು ತಯಾರಿಸಿಲ್ಲ. ಪಾರ್ಲಿಮೆಂಟ್ ಸಭೆಯು ಈ ವಿಷಯದಲ್ಲಿ ಉದಾಸೀನವಾಗಿತ್ತು. ಇದರಿಂದ ಸಂಬಂಧಿಸಿದ ಪ್ರಜೆಗಳ ಅತೃಪ್ತಿಯನ್ನು ಪುಷ್ಕಳಗೊಳಿಸಿದ್ದರು. ಇವನ್ನು ಶಮನಿಸಲು ಪ್ರಧಾನಮಂತ್ರಿ ಪಂಡಿತ ನೆಹರೂರವರು ಈ ವಿಚಾರವನ್ನು ಮಂತ್ರಿ ಸರಕಾರವು ಕೂಡಲೇ ಅರ್ಯಾಲೋಚಿಸುವುದೆಂದೂ, ಪ್ರತಿಯೊಂದು ಪ್ರಾಂತಪ್ರದೇಶವನ್ನು ಪ್ರತ್ಯೇಕ ಪ್ರತ್ಯೇಕ ಆಲೋಚಿಸಲಾಗುವುದೆಂದೂ, ಸರಕಾರವು ಇದನ್ನು ಆಲೋಚಿಸಿದನಂತರ ಅವಶ್ಯವಿದ್ದಲ್ಲಿ ಚಿಕ್ಕ ಸಮಿತಿಯೊಂದನ್ನು ನೇಮಿಸಲಾಗುವುದೆಂದೂ ಈ ವಿಚಾರ ಜನರ ಪ್ರತಿನಿಧಿಗಳನ್ನು ಪ್ರತ್ಯೇಕ್ಷ ಯಾ ಅಪ್ರತ್ಯಕ್ಷವಾಗಿ ಆಲೋಚನೆಗೆ ಎಳೆಯಲಾಗುವುದೆಂದೂ ಹಿಂದೂಸ್ಥಾನದ ಉಳಿದ ಭಾಗಗಳೆಲ್ಲವೂ ರಾಜ್ಯವನ್ನು ಕನ್‌ಸ್ಟಿಟ್ಯೂಶನ್ ರೂಪಾಗ್ಗೆ ಈ ಪ್ರದೇಶಗಳನ್ನು ಅಲಕ್ಷಿಸುವುದು ತನಗೆ ಯೋಗ್ಯವಲ್ಲವೆಂದೂ ತಾ. ೨೨ರಲ್ಲಿ ಪಾರ್ಲಿಮೆಂಟಿನಲ್ಲಿ ಹೇಳಿದರು. ಈ ಹೇಳಿಕೆಯಿಂದ ಜನರಲ್ಲಿ ಕಳೆದ ಸ್ಫೂರ್ತಿಯು ಸ್ವಲ್ಪ ಮಟ್ಟಿಗೆ ಕಡಿಮೆಯಾಗ ಬಹುದಾದರೂ ಇದನ್ನು ಜಾರಿಗೆ ತಂದ ವಿನಾ ಸಂಬಂಧಪಟ್ಟ ಜನರು ಪುಷ್ಕಳ ನಿರಾಶರಾಗಲಾರರೆಂಬುದು ಖಂಡಿತವಾದುದು. ಈ ಪ್ರದೇಶಗಳ ಜನರು ದೊಡ್ಡ ಪ್ರಾಂತಗಳ ಪ್ರಜೆಗಳಂತೆಯೇ ಸ್ವರಾಜ್ಯ ಹೋರಾಟದಲ್ಲಿ ತಮ್ಮ ಸೇನೆಯನ್ನು ಸಲ್ಲಿಸಿರುವರು. ಅಂದ ಮೇಲೆ ಎಲ್ಲರ ಸಹಿಷ್ಣುತೆ ಹಕ್ಕಾದಂತಾ ಸ್ವರಾಜ್ಯ ಆಡಳಿತ ರಚನೆಯ ಸ್ಥಾಪನಾ ಸಮಿತಿಯು ಮಾಡಬಹುದಾದ ಅವರ ಕರ್ತವ್ಯ ಶೂನ್ಯತೆಯೆನ್ನಬಹುದು. ಸಾರ್ವಜನಿಕ ಚುನಾವಣೆ ಬೇಗನೆ ಬರುವುದಿದೆ ಜವಾಬ್ದಾರಿಗೆ ಚೀಫ್ ಕಮಿಷನರ್ ಪ್ರಾಂತಗಳಿಗೂ ಕೂಡಲೇ ಯೋಗ್ಯವಾದ ಆಂದರೆ ಆಯಾಯ ಸ್ಥಾನಿಕಕ್ಕೆ ಶಕ್ಯವಾದಷ್ಟು ಆಡಳಿತ ರಚನೆಯನ್ನು ಅಲ್ಲಿಯ ಜನರ ನ್ಯಾಯವಾದ ಪ್ರತಿನಿಧಿಗಳ ಆಲೋಚನೆ ಕೇಳಿ ವಿಧಿಸಿರುವುದು ಆಗಲ್ಯವಾಗಿದೆ.

ವರ್ತಮಾನ.

ಕೊಡಗಿನ ಚೀಫ್ ಕಮಿಷನರು ತಾ. ೨೮ ರಲ್ಲಿ ನಾಗರಹೊಳೆಗೆ ಹೋಗಿ ೧–೧೨–೫೦ ರಲ್ಲಿ ಮಡಿಕೇರಿಗೆ ಬರುವರು.

– ನ್ಯಾಮತಿಗಳಿಂದ ಬರುವ ಕಾಯಿ ಲಾರಿಗೆ ಅನುಕೂಲವಾಗುವಂತೆ ತಾಲ್ ೧–೧೨–೫೦ ರಿಂದ ಸೋಮವಾರ, ಬುಧವಾರ ಮತ್ತು ಶುಕ್ರವಾರಗಳಲ್ಲಿ ದಿನಕ್ಕೆ ೧೧ ಗಂಟೆಯಿಂದ ಮಧ್ಯಾಹ್ನ ೧ ಗಂಟೆಯವರೆಗೆ ಎಕ್ಸ್‌ರೇ ಪರೀಕ್ಷೆ ಮಾಡುವ ವ್ಯವಸ್ಥೆಯನ್ನು ಮಡಿಕೇರಿ ಆಸ್ಪತ್ರೆಯಲ್ಲಿ ಮಾಡಲಾಗಿದೆ.

ಇಂಡಿಯನ್ ರೆಡ್‌ಕ್ರಾಸ್ ಸಂಘದ ಆಶ್ರಯದಲ್ಲಿ ಮಡಿಕೇರಿಯಲ್ಲಿ ತಾ ೧೫–೧೧–೫೦ ರಲ್ಲಿ ಶಿಶುಗಳ ಪ್ರದರ್ಶನ ನಡೆಯುವುದು. ಉತ್ತಮ ಹೂತೋಟ ಮಾಡಿದವರಿಗೆ ಬಹುಮಾನ ಕೊಡಲ್ಪಡುವುದು. ಹೂತೋಟ ಸ್ಪರ್ಧೆಯಲ್ಲಿ ಭಾಗವಹಿಸುವವರು ತಾ ೧೫–೧೧–೫೦ ರೊಳಗೆ ಮಡಿಕೇರಿ ರೆಡ್‌ಕ್ರಾಸ್ ಶಾಖೆಗೆ ಎರಡು ರೂಪಾಯಿ ಪುನೇಶ ಧನವೊಂದಿಗೆ ಬರೆದುಕೊಳ್ಳಬಹುದು.

ತಾಲೂಕು ೧೬–೧೨–೫೦ ರಲ್ಲಿ ಮೂನಾಡಿನಲ್ಲಿ ಕರ್ದಾರ ಪಠೇಲರ ನಿಧನದ ಬಗ್ಗೆ ಹುದಿಕೇರಿ ಆಚರಿಸಿ ಪಾಂಡಣಿಯಂದು ಸಾರ್ವಜನಿಕ ಸಭೆಯೇರ್ಪಡಿಸಿತ್ತು. ಶ್ರೀಗಳವ ಎಂ.ಸಿ ದೇವಯ್ಯ, ಪಿ ಎಂ. ಮುದ್ದಪ್ಪ, ಕೆ. ಎಂ. ಮೋಣಪ್ಪ ಮತ್ತು ಕೆ. ಎಂ. ದೇವಯ್ಯ ಇವರುಗಳು ಪಠೇಲರ ಗುಣಗಾನ ಮಾಡಿದರು. ಸಂತಾಪ ಸೂಚನಾ ಠರಾವನ್ನು ಪೌನ ಪ್ರಾರ್ಥನೆಯಿಂದ ಅಂಗೀಕರಿಸಲಾಯಿತು.

ತಾರೀಕು ೩೧ನೇ ಭಾನುವಾರ ಪೊನ್ನಂಪೇಟೆಯ ಶ್ರೀ ಶಾರದಾಶ್ರಮದ ಆವರಣದಲ್ಲಿ ಶ್ರೀ ಶಾರದಾ ದೇವಿಯವರ ಜನ್ಮೋತ್ಸವನ್ನು ಆಚರಿಸಲಾಗುವುದು.

ಕೇಂದ್ರದಿಂದ ನೇರವಾಗಿ ಆಳಲ್ಪಡುವ ಚೀಫ್ ಕಮಿಷನರ ಪ್ರಾಂತಗಳ ಮೈಕಿ ದೆಲ್ಲಿಯ ಆದಾಯವು ರೂ. ೨,೧೫,೩೬,೪೪,೦೦೦ ಖರ್ಚು ೨,೧೫,೩೬,೪೪,೦೦೦ ಆಜಮೀರಿನ ಆದಾಯ ೩೪,೦೭,೦೦೦ ಖರ್ಚು ೩೪,೦೭,೦೦೦, ಕರ್ಜ್ಜನ ಆದಾಯ ೨೬,೬೬,೦೦೦ ಖರ್ಚು ೨೧,೫೫,೦೦೦, ಅಂಡಮಾನ್ ನಿಕೋಬರ್ ದ್ವೀಪಗಳ ಆದಾಯ ೧.೦೧,೨೬,೦೦೦ ಖರ್ಚು ೧,೪೬,೧೮೫,೦೦೦ ಎಂದು ಕೌನ್ಸಿಲಿನಲ್ಲಿ ಕೇಳಿದ ಪ್ರಶ್ನೆಯೊಂದಕ್ಕೆ ಉತ್ತರ ಕೊಡಲಾಗಿದೆ.

ಮಡಿಕೇರಿ ಮುನ್ಸಿಪಾಲಿಟಿ ವಾರ್ಡ್ ನಂಬರು ೧೨ ರಲ್ಲಿ ಚೆ.ನಾವಜೆಗೆ ತಮ್ಮ ಉಮೇದುವಾರಿಕೆಯನ್ನು ಹಾಕಿದ್ದ ಶ್ರೀ. ಬಿದ್ದಂಡ ಕರುಂಬಯ್ಯನವರು ತಮ್ಮ ಉಮೇದುವಾರಿಕೆಯನ್ನು ವಾಪಾಸು ತೆಗೆದು ಕೊಂಡಿರುವುದಾಗಿ ತಿಳಿಸಿದ್ದಾರೆ.

ಶ್ರೀ. ಎಚ್. ಬಿ. ಸಿದ್ದಯ್ಯ ಸಾರ್ವಜನಿಕ ಹಾಕಿಕಪ್ಪಿನ ಪಂದ್ಯಾವಳಿಯು ತಾರೀಖಿನಲ್ಲಿ ನಡೆದು ಕಡೇ ಆಟಕ್ಕೆ ನಿಂತ ವೀರಾಜಪೇಟೆ ಬಲಮೂಜಿ ಟೀಮಿನವರನ್ನು ಪೊನ್ನಂಪೇಟೆ ಸಾರ್ವಜನಿಕ ಟೀಮಿನ ಸೋಲಿಸಿ ಕಪ್ಪನ್ನು ಗೆದ್ದಿತು. ಶ್ರೀ. ಕುಪ್ಪಂಡ ಬಿ. ಪೊನ್ನಪ್ಪನವರು ಜಯಶೀಲರಿಗೆ ಬಹುಮಾನವನ್ನು ಕೊಟ್ಟರು.

ತಾರೀಕು ೨೭ ರಲ್ಲಿ ವೀರಾಜಪೇಟೆಯಲ್ಲಿ ರೀಡಿಂಗ್ ರೂಮ್ ಎನ್ನುವಂಗಡಿಯ ಶ್ರೀ ಮೊಣ್ಣಂಡ ಚಂಗಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಸಾರ್ವಜನಿಕ ಸಭೆಯನ್ನು ಏರ್ಪಡಿಸಲಾಗಿತ್ತು. ಆ ಸಭೆಯಲ್ಲಿ ಬ್ರಹ್ಮದ ಪ್ರಯತ್ನ ಮತ್ತು ಸಂಗ್ರಹದ ವಿಚಾರ ದೈತರ ಅಭಿಪ್ರಾಯವನ್ನು ಸೇರಿದಾ ತೇಲಲಿಕ್ಕಾಗಿ ಬರುವ ತಾರೀಕು ೩೧ನೇ ಬುಧವಾರ ಬೆಳಿಗ್ಗೆ ೧೧ ಗಂಟೆಗೆ ನಡೆಯುವ ಕೊಡಗಿನ ಬತ್ತ ಬೆಳೆಗಾರರ ಸಾರ್ವಜನಿಕ ಸಭೆಗೆ ಚೀಫ್ ಕಮಿಷನರು ದಯಮಾಡಿಸಬೇಕಾಗಿ ಅವರನ್ನು ಈ ಸಭೆಯು ವಿನಯ ಪೂರ್ವಕ ಕೇಳಿಕೊಳ್ಳುತ್ತದೆ, ಎಂಬ ಠರಾವು ಸರ್ವ ಸಮ್ಮತದಿಂದ ಪಾಸಾಯಿತು.

ವ್ಯವಸಾಯ ಆದಾಯ ತೆರಿಗೆ ವಸೂಲಿಯ ಸಬ್ ಕಮಿಟಿಯವರ ವರದಿಯು ಆಚ್ಚಾಗಿ ಇನ್ನೂ ದೊರೆಯದ ಕಾರಣವೂ ಅದಕ್ಕೆ ಇಂಡಿಯಾ ಸರಕಾರದ ಅನುಮತಿ ದೊರೆಯದ್ದರಿಂದಲೂ ಈ ವಾಹುದೆಯನ್ನು ಮೊನ್ನೆ ನಡೆದ ಕೌನ್ಸಿಲ್ ಮೀಟಿಂಗಿನಲ್ಲಿ ಹೆಚ್ಚಿಸಲಿಲ್ಲ. ಇದು ದೊರೆತ ಕೂಡಲೇ ಬರುವ ಕೌಂಗಳಲ್ಲಿ ಇಗಕ್ಕೆ ವಿಶೇಷ ಸಭೆಯೊಂದನ್ನು ನಡೆಸಲಾಗುವುದೆಂದು ತಿಳಿಯ ಬರುತ್ತದೆ.

ಮೂರಾಟದ ಬತ್ತ ಸಂಗ್ರಹ.

ಕೌನ್ಸಿಲ್ ಹೊಟಂಗಿನ ಮೂಂನೇ ದಿನ ಪ್ರಶ್ನೋತ್ತರಗಳು ಮುಗಿದ ಮೇಲೆ ಉಳುವರ ಬತ್ತ ಸಂಗ್ರಹದ ವಿಷಾಡುಗಳನ್ನು ಕರಿಸು ಮೆಂಬರುಗಳ ಅಭಿಪ್ರಾಯ ಸೂಚಿಸಲು ಅಧ್ಯಕ್ಷರು ಆವಕಾಶಕೊಟ್ಟಿದ್ದರು. ಆಗ್ಗೆ ಮೆಂಬರುಗಳು ಕೊಟ್ಟ ಅಭಿಪ್ರಾಯದ ಸಾರಾಂಶವನ್ನಿಲ್ಲಿ ಕೊಡಲಾಗಿದೆ. ಶ್ರೀ. ಕೆ. ಎಂ. ಕುಶಾಲಪ್ಪ ನವರು:–ಕಳೆದ ವರ್ಷ ಸಬ್ ವಿಜಂಟರು ಗಳು ಕಪ್ಪು ಸಂತೆಗೆ ಅನುಮತಿಯ ಸಂದರ್ಭಗಳಿಲ್ಲ. ಹಾಗೆಂದು ಬರೀ ಮಿಲ್ಲಿನವರಿಗೆ ಸಂಗ್ರಹದ ಕಾರ್ಯವನ್ನು ಬಿಟ್ಟದ್ದಾದರೆ ಅಲ್ಲಿಯೂ ಕಳ್ಳವ್ಯಾಪಾರಕ್ಕೆ ಅವಕಾಶಕೊಟ್ಟಂತಾಗುವುದು. ಕಳ್ಳಸಂತೆಯನ್ನು ನಿವಾರಿಸಲು ಸರಕಾರದವರು ಯೋಗ್ಯ ವಿಷಾಡು ಮಾಡಬೇಕಾಗಿದೆ. ಕಾಫಿಕೋಟೆದ ನೂಲೀಕರು ತಮಗೆ ಬೇಕಾದ ಬತ್ತ ಸಂಗ್ರಹ ಮಾಡಲು ಸಾಕಷ್ಟು ಸಮಯ ಕೊಡಬೇಕು. ಶ್ರೀ. ಎನ್. ಸೋಮಣ್ಣನವರು:–ಸಬ್ ವಿಜಂಟರುಗಳಲ್ಲಿಸಿ ಚೀಫ್ ಕಮಿಷನರು ಯೋಚಿಸಿರುವ ಸಂಗ್ರಹದ ವಿಷಾಡು ಉತ್ತಮವಾದ ದಾಗಿದೆ. ಕಳೆದ ವರ್ಷದ ಸಬ್ ವಿಜಂಟರುಗಳು ಈಗಾಗಲೇ ನಿಶ್ಚಿತ ಬೆಲೆ ಗಿಂಥಾ ಹದಿನೆ ಯೊಗ ಒಪ್ಪಂದಮಾಡಿ ರೈತರಿಗೆ ಮುಂಗಡ ಹಣ ಕೊಟ್ಟಿರುವರು. ಇವರನ್ನೇನಾ ಇಟ್ಟುಸೂಂಡದ್ದಾದರೆ ರೈತರಿಗೆ ಕಡಮೆ ಬೆಲೆ ಕೊಟ್ಟು ಕಮ್ಮಿ ಲಾಭಕ್ಕಾಗಿ ಕಳ್ಳಸಂತೆಯಲ್ಲಿ ಹೆಚ್ಚಿನ ಬೆಲೆಗೆ ಮಾರಲು ಅವಕಾಶಕೊಟ್ಟಂತಾಗುವುದು. ಇದನ್ನು ಖಂಡಿತವಾಗಿ ನಿವಾರಿಸಬೇಕು. ಶ್ರೀ. ಪಿ ಎಂ. ನಾಣಮ್ಮಯ್ಯನವರು:–ಚೀಫ್ ಕಮಿಷನರ ಯೋಚನೆಯಂತೆ ಸಬ್ ವಿಜಂಟರ್‌ಗಳಿಗೆ ಮಿಲ್ಲಿನವರು ಮತ್ತು ತೋಟದವರು ಬತ್ತ ಕೊಂಡುಕೊಳ್ಳುವ ವಿಷಾಡು ಮಾಡಿದರೆ ಕಳ್ಳಸಂತೆಗೆ ಅವಕಾಶವಿಲ್ಲ. ರೇಶನ್ ಆಂಗಡಿಗಳನ್ನು ವಿಸ್ತರಿಸುವುದರಿಂದ ನಡೆಸುವದು ಯೋಗ್ಯ. ಶ್ರೀ. ಕೆ. ಬೆಳ್ಯಪ್ಪನವರು:–ಹೊಸ ಯೋಜನೆಯಂತೆ ಸಬ್ ವಿಜಂಟರು ಇಲ್ಲದಿದ್ದರೂ ಸಂಗ್ರಹದ ಕಮಿಷನ್ನಿಲ್ಲವನ್ನು ರೈತರಿಗೇ ಕೊಡುವದು ಒಳ್ಳೇದು. ಕಳೆದ ವರ್ಷದ ಕಳ್ಳಸಂತೆ ನಿಲ್ಲಿಸಬೇಕು. ಸಬ್ ವಿಜಂಟರ್‌ಗಳಿಲ್ಲದೆ ಸಂಗ್ರಹ ಕೆಲಸವು ಹೇಗೆ ನಡೆದು ತೆರಿಗೆ ತೆರೆಯದು. ಹೊಸ ವಿಷಾಡಿನಲ್ಲಿ ಬತ್ತ ಸೂರುವವರಿಗೆ ಅನಾವಶ್ಯ ತೊಂದರೆ ಉಂಟಾಗಬಾರದು. ಉಳುವರಿ ಬತ್ತವನ್ನು ಅಂದಾಜು ಮಾಡುವದು. ಯಜಮಾನ್ಯ ಸಂಗ್ರಹಕ್ಕಾಗಿ ನಿರ್ದಿಷ್ಟ ಭಾಗಗಳನ್ನು ವಿಂಗಡಿಸಿ ಒಬ್ಬೊಬ್ಬರಿಗೆ ಬಿಟ್ಟು ಕೊಡಬಾರದು. ಶ್ರೀ. ಕೆ. ಎಂ. ದೇವಯ್ಯನವರು:–ಸಬ್ ವಿಜಂಟರುಗಳ ಕಳೆದ ವರ್ಷದ ಪತನದಿಂದ ಆವರ ಹೆಸರೇ ತಿರಿಗೆ ಕಠೋರವಾಗಿ ಕೇಳುತ್ತಿದೆ ಅವರಿಂದ ರೈತರಿಗೆ ತೊಂದರೆ ತೊಂದರೆ ಉಂಟಾಗಿದೆ. ಬತ್ತ ಬೆಳೆಸುವ ರೈತರೇ ಅವರ ಉಳುವರಿ ಬತ್ತ ಎನ್ನು ಸಂಗ್ರಹ ಮಾಡಿ ಲಾಂಗಳಿಗೆ ಪಂಬ ಕೊಡುವಂತಾಗಬೇಕು. ಹೊಸಯೋಜನೆಯ ನ್ನು ಜಾರಿಗೆ ತರುವುದು ಉತ್ತಮ. ಶ್ರೀ. ಕೆ. ಪಿ ಕರುಂಬಯ್ಯನವರು:–ಕಳೆದ ವರ್ಷ ಸಬ್ ವಿಜಂಟರುಗಳಿಂದ ರಗಳಿಸಂತೆ ನಡೆಸಂತೆಯೇ ಏಲ್ ಮೂಲೀಕರಿಂದಲೂ ತೋಟದವರಿಂದಲೂ ಆಗಿದೆ ಏಲ್‌ಮೂಲೀಕರು ಬತ್ತಕ್ಕೆ ಕೆ.ಟ್ಟಿನಂತೆ ನಗದು ಹಣ ಕೊಡದೆ ಪಾಂಬ ತೊಂದರೆ ಉಂಟಾಗ ತಿತ್ತು. ಪುನಹ ಅಂಥಾ ತೊಂದರೆಗೆ ಅವಕಾಶ ಮಾಡದೆ ಯೋಗ್ಯ ವಿಷಾಡು ಮಾಡಬೇಕಾಗಿದೆ. ಶ್ರೀ. ಪಿ. ಐ. ಬೆಳ್ಯಪ್ಪನವರು :– ಹೊಸ ಯೋಜನೆ ಪ್ರಕಾರ ಉಳುವರಿ ಬತ್ತವನ್ನು ಗುರುತಾಗಿ ಅಂದಾಜು ಮಾಡುವುದು ಕಷ್ಟವಾಗಿದೆ. ಆದರೆ ಸರಕಾರಿ ಸಿಬ್ಬಂದಿಯಿಂದ ಉಳುವರಿ ಬತ್ತ ಸಂಗ್ರಹವಾಗಲಾರದು ಕಳೆದ ವರ್ಷದಂತೆ ಏಲ್ ಮೂಲೀಕರು, ತೋಟದ ಮಾಲೀಕರು, ಸಬ್ ವಿಜಂಟರುಗಳು, ಪೂರಾಟ ಮಾಡಿದವರು ಸಹಭಾಗಿಗಳಾಗಿ ನಿಂತರೂ ಇವನ್ನು ಸರಕಾರದವರು ತಡೆಯಲು ಯೂಂನ್ನೂ ತಿಳಿಸಲಿಲ್ಲ. ಕಳ್ಳಸಂತೆಯನ್ನು ತಡೆಯಲು ಈ ಮೊದಲು ನಡೆಸುತ್ತಿದ್ದಂತೆ ಲೈಸೆನ್ಸ್‌ದಾರ ಯೋಗ್ಯ ಸಬ್ ವಿಜಂಟರನ್ನಿಟ್ಟು ಸರಕಾರಿ ಇನ್ಸ್‌ಪೆಕ್ಟರ ಸಮಕ್ಷಮದಲ್ಲಿ ಬೋರ್ಡಿಂಗ್ ಸೆಂಟರುಗಳಲ್ಲಿ ಕೋಟೆದವರೆಗೆ ಯೂ ಏಲ್ ಮೂಲೀಕರಿಗೆ ಬತ್ತವನ್ನೂರಿ ಅಲ್ಲಿಯೇ ನಗದು ಹಣ ಕೊಡುವ ವಿಷಾಡು ಮಾಡುವದು ಅತ್ಯವಶ್ಯ. ನಿಶ್ಚಿತ ಸ್ಥೈರ್ಯಗಳನ್ನು ಸಂಗ್ರಹಕ್ಕಾಗಿ ವಿಂಗಡಿಸಿ ಮಿಲ್ ಮಾಲೀಕರಿಗಾಗಲೀ ತೋಟಗಳವರಿಗಾಗಲೀ ಹಂಚುವುದರಿಂದ ಬತ್ತ ಮೂರಾವವರೆಗೆ ಬಹುಮಟ್ಟಿನ ತೊಂದರೆ ಉಂಟಾಗುವದು. ಹಲವು ಪ್ರಾನ್ಷಜನಿಕ ಸಭೆಗಳಲ್ಲಿ ರೈತರು ತಮ್ಮ ತೊಂದರೆಗಳನ್ನು ನಿವೇದಿಸಿರುವರು. ಆವರ ಪ್ರತಿನಿಧಿಗಳೊಂದಿಗೆ ಚರ್ಚಿಸಿ ಯೋಗ್ಯ ವಿಷಾಡು ಮಾಡಿದ ವಿನಹ ವ್ಯವಸಾಯಗಾರರಿಗೆ ತೃಪ್ತಿ ಉಂಟಾಗ ಲಾರದು. ಶ್ರೀ ಕೆ. ಮಲ್ಲಪ್ಪನವರು:–ಸಬ್ ವಿಜಂಟರುಗಳನ್ನು ತೆಗೆದು ಹಾಕಿ ಹೊಸ ಯೋಜನೆಯಂತೆ ಬತ್ತ ಕೊಂಡು ಕೊಳ್ಳುವವರೇ ಸಂಗ್ರಹ ಮಾಡುವಂತೆ ಬಿಡಬೇಕು. ಇಲ್ಲವಾದರೆ ಕಳ್ಳ ಸಂತೆಯನ್ನು ತಡೆಯಲು ಕಷ್ಟವಾದೀತು. ಸಂಗ್ರಹದಲ್ಲಿ ಸ್ಥೈರ್ಯಗಳಿಗೆ ಅವಕಾಶವಿರಬಾರದು. ಸಾರ್ವಜನಿಕ ಸಭೆಗಳನ್ನು ಕೆಲವು ಸಬ್ ವಿಜಂಟರುಗಳು ನಡೆಸಿದ್ದಾರೆ.

ಅಖಿಲ ಕೊಡಗು ಉಪಾಧ್ಯಾಯರ ಸಮ್ಮೇಳನ.

ಈ ತಾರೀಕು ೨೪ ರಲ್ಲಿ ಅಖಿಲ ಕೊಡಗು ಉಪಾಧ್ಯಾಯರ ಹದಿನಾಲ್ಕನೇ ಸಮ್ಮೇಳನವು ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನಲ್ಲಿ ನಡೆಯಿತು. ಬೆಳಿಗ್ಗೆ ೮ ಗಂಟೆಯಿಂದ ೧೨ ಗಂಟೆಯವರೆಗೆ ಆಟೋಟಗಳ ಸ್ಪರ್ಧೆಯು ನಡೆಯಿತು. ಈ ವರ್ಷ ಸ್ಪರ್ಧೆ ನಡೆಸಿದ ವ್ಯವಸ್ಥೆಯು ಜೆನ್ನಾಗಿತ್ತು. ಆದರೆ ಅಖಿಲ ಕೊಡಗಿನ ದೃಷ್ಟಿಯಿಂದ ಆ ಟೋಟಗಳಲ್ಲಿ ಭಾಗವಹಿಸಿದವರ ಸಂಖ್ಯೆ ಸಾಕಷ್ಟಿರಲಿಲ್ಲವೆನ್ನಿಸಿತು.

ಮಧ್ಯಾಹ್ನ ೨.೩೦ ಗಂಟೆಗೆ ಮಡಿಕೇರಿ ಹೈಸ್ಕೂಲಿನ ಜೆನ್ನೇಸಿಯಮ್ ಹಾಲಿನಲ್ಲಿ ಸಭೆ ಸೇರಿತು. ಸಮ್ಮೇಳನದ ಆಸ್ಥಾನವನ್ನು ನೈಸರ್ಗಿಕ ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ಇವರಾದ ಶ್ರೀ ಗುರುದತ್ತಾರವರು ನಹಿಸಿದ್ದರು. ಪ್ರಾರ್ಥನೆಯ ನಂತರ ಸ್ವಾಗತ ಸಮಿತಿಯ ಅಧ್ಯಕ್ಷರಾದ ಶ್ರೀ ಡಿ ಎನ್. ಕೃಷ್ಣಯ್ಯನವರು ಸ್ವಾಗತ ಭಾಷಣ ಮಾಡುತ್ತಾ ಕೊಡಗಿನ ವಿದ್ಯಾಪ್ರಗತಿ, ಯಾವ ರೀತಿಯಲ್ಲಿ ವಿದ್ಯಾನೆಚ್ಚವು ಕೆಲವು ವರ್ಷಗಳಿಂದ ಹೆಚ್ಚುತ್ತಾ ಬಂದು ಇಂದು ಹತ್ತು ಲಕ್ಷಕ್ಕೂ ಮಿಂಚಿದೆ ಎಂಬುದನ್ನೆ ವಿವರಿಸುತ್ತಾ ಜಿಲ್ಲಾ ಬೋರ್ಡು ಉದ್ಯೋಗಿಗಳಲ್ಲಿರುವ ಆತೃಪ್ತಿ, ಅದನ್ನು ಬಗೆಹರಿಸಬೇಕಾದ ಅವಶ್ಯಕತೆ ವಿದ್ಯಾರ್ಥಿಗಳಲ್ಲಿ ಹೆಚ್ಚಾಗುತ್ತಿರುವ ಅಶಿಸ್ತು, ಶಾಲಾ ವಿಚಾರಗಳಲ್ಲಿ ಕೈಹಾಕುತ್ತಿರುವ ಇತರ ಬಾಹ್ಯ ಶಕ್ತಿಗಳು, ಕೊಡಗಿನಲ್ಲಿ ವಿದ್ಯೆದೊರೆಯದೆ ಅನಕ್ಷರಸ್ಥರಾಗಿಯುಳಿಯುತ್ತಿರುವ ಸುಮಾರು ಹದಿನೇಳು ಸಾವಿರ ವಿದ್ಯಾರ್ಥಿಗಳ ಅವಸ್ಥೆ, ಇದ್ದರಿಂದ ಖಡ್ಡಾಯ ಪ್ರಾಥಮಿಕ ಶಿಕ್ಷಣದ ಅವಶ್ಯಕತೆ ಮೊದಲಾದುವನ್ನು ವಿವರಿಸಿ ಎಲ್ಲರಿಗೂ ಸುಸ್ವಾಗತವನ್ನಿತ್ತರು.

ಚೀಫ್ ಕಮಿಷನರ ಭಾಷಣ.

ಸಮ್ಮೇಳನವನ್ನು ತೆರೆಯಲು ನಿಯೋಜಿತರಾಗಿದ್ದ ಲೆ. ಕ. ದಯಾಸಿಂಗ್ ಬೇಡಿಯವರು ಮಾತಾಡುತ್ತಾ ಸ್ವಾಗತ ಅಧ್ಯಕ್ಷರಅಭಿಪ್ರಾಯಗಳಿಗೆ ಉತ್ತರ ರೂಪದಲ್ಲಿ ಹೀಗೆ ಹೇಳಿದರು. 'ಸ್ವಾಗತಾಧ್ಯಕ್ಷರು ಹೇಳಿದ ವಿಚಾರಗಳಿಗೆ ನೇರವಾಗಿ ಉತ್ತರ ಹೇಳುವದು ಸೂಕ್ತವೆನಿಸದಿದ್ದರೂ ಕೆಲವು ವಿಚಾರ ಹೇಳಬೇಕಷ್ಟಿ. ಕೊಡಗಿನ ವಿದ್ಯಾಪ್ರಗತಿಗೆ ಅವಶ್ಯವಾದ ಸರ್ವಪ್ರಯತ್ನಗಳನ್ನೂ ಕೊಡಗು ಸರಕಾರವು ಮಾಡುವದು. ವಿದ್ಯೆ ದೊರೆಯದೆ ಅನಕ್ಷರಸ್ಥರಾಗಿಯಾರೂ ಉಳಿಯಬಾರದು. ಆದ್ದರಿಂದಲೆ ಖಡ್ಡಾಯ ಪ್ರಾಥಮಿಕ ಶಿಕ್ಷಣ ಕಮಟ್ಟು ಜಾರಿಗೆ ತರುವ ಅಭಿಪ್ರಾಯ ಸರಕಾರದಲ್ಲಿದೆ. ಕೊಡಗಿನ ವಿದ್ಯಾರ್ಥಿಗಳಲ್ಲಿ ಅಶಿಸ್ತು ಹೆಚ್ಚಾಗಲು ಹೊರಗಿನ ಶಕ್ತಿಗಳು ಕಾರಣವೆಂಬುದನ್ನು ನಾನೆನ್ನಲಾರೆ. ಕೊಡಗು ಹಳ್ಳಿಯ ನಾಡು. ಕೊಡಗಿನಲ್ಲಿ ಇತರ ಕಡೆಗಳಂತೆ ಹೆಚ್ಚಿನ ಸಿನಿಮಾ, ಇತರ ಅಕರ್ಷಣೆಗಳಿಲ್ಲ. ಹಾಗಿರುವಾಗ ವಿದ್ಯಾರ್ಥಿಗಳ ಅಶಿಸ್ತಿಗೆ ಕಾರಣವಾಗುವ ವಸ್ತುಗಳು ಹೊರಸ್ಪದೇಶಗಳಿಗಿಂತಾ ಕೊಡಗಿನಲ್ಲಿ ಕಡಿಮೆ. ಹಾಗೆ ಕೊಡಗಿನಲ್ಲಿ ಶಿಕ್ಷಣ ಕಡಿಮೆಯೆಂದಾಗಿದ್ದರೆ ಅದಕ್ಕೆ ಉಪಾಧ್ಯಾಯರ ವರ್ತನೆಯಲ್ಲಿ ಯಾವ ದೋಷವೂ ಇಗಬೇಕು. ನಾನಂಗೆ ಬೇಕಾದ ನೇತನ ಸವಲತ್ತುಗಳನ್ನು ಕೊಡಿ, ಇಲ್ಲದಿದ್ದರೆ ನಾವು ಪಾಠ ಹೇಳಲಿಮುಷ್ಕಗಳ ಮಾಡುತ್ತೇವೆ ಎಂಬ ಭಾವನೆಯನ್ನು ಉಪಾಧ್ಯಾಯರೇ ಪ್ರಕಟಿಸಿದರೆ ವಿದ್ಯಾರ್ಥಿಗಳೂ ಆ ಮಾರ್ಗವನ್ನು ಅನುಸರಿಸಿ ಶಿಸ್ತಿಗೆ ಭಂಗಕರುವದರಲ್ಲಿ ಆಶ್ಚರ್ಯವಿಲ್ಲ. ಯಾವ ಉಪಾಧ್ಯಾಯರೇ ಆಗಲೀ ಆ ಜವಾಬ್ದಾರಿಯನ್ನು ಹೊರುವಾಗಲೇ ಅದರಲ್ಲಿರುವ ಕಷ್ಟ ತ್ಯಾಗಗಳನ್ನು ಪರಿತೀಲಿಸಿ ಸೇರಬೇಕು. ಸೇರಿದನಂತರ ಅತೃಪ್ತಿಯಿಂದಿದ್ದು ಕರ್ತವ್ಯನಿರ್ವಹಿಸದಿರುವದು ದ್ರೋಹಾತ್ಮಕವಾದುದು. ಈ ರೀತಿ ಅತೃಪ್ತಿಯಿಂದಿರತಕ್ಕವರು ಇಲಾಖೆಯನ್ನು ಬಿಟ್ಟು ಬೇರೆಯವರಿಗೆ ಅನುಮಾಡಬೇಕು. ಜಿಲ್ಲಾ ಬೋರ್ಡು ಉಪಾಧ್ಯಾಪಕ ಕೇಳಿಕೆಯ ಬಗ್ಗೆ ಇನ್ನೂ ವಿಚಾರ ವಿನಿಮಯ ನಡೆಯುತ್ತಿದೆ. ನಾನು ಮಂಚ್ಚುಮಲೆಯಲ್ಲುದೆ ಸ್ಪಷ್ಟವಾಗಿ ಗುಂಡ್ಲಲಿಯನ್ನು ಗುಂಡ್ಲಲಿ ಎಂದೇ ಕರೆದಿರುವೆನು. ಆದರೂ ನಾವು ನಿಮ್ಮೆಲ್ಲರ ಮಿತ್ರನೆಂದು ಭಾವಿಸಿ, ಸ್ವಾಗತಾಧ್ಯಕ್ಷರು ಸೂಚಿಸಿದ ವಿಚಾರಗಳನ್ನು ಯೋಗ್ಯ ಮಾರ್ಗದಲ್ಲಿ ಸರಕಾರದ ಮುಂದಿಟ್ಟರೆ ಸಾಧ್ಯವಾದಂದನ್ನು ಮಾಡಲು ಸರಕಾರವು ಹಿಂಜರಿಯದು.'

ಅಧ್ಯಕ್ಷರ ಪ್ರಾರಂಭಿಕ ಭಾಷಣ.

ಅಧ್ಯಕ್ಷರು ತಮ್ಮ ಪ್ರಾರಂಭಿಕ ಭಾಷಣ ಮಾಡುತ್ತಾ 'ನಾನು ಪ್ರಥಮ ಉಪಾಧ್ಯಾಪಕನಾಗಿ ಸರ್ವಿಸಿಗೆ ಸೇರಿದವನು. ಕೃಷಿಮಶ: ಅದನ್ನು ಬಿಟ್ಟು ಬೇರೆ ಮಾರ್ಗಹಿಡಿದೆನು. ಹಾಗೆ ಮಾಡಿದುದರಿಂದ ಇಂದು ಹೆಚ್ಚಿನ ಸಂಪನ್ನಸ್ಥಿತಿಯಲ್ಲಿರಬಹುದೆಂದು ಹೇಳಬಹುದು. ನಾನು ವಿದ್ಯಾರಂಗದ ಇತರಿತ ಕೆಲಸಗಾರನಲ್ಲ. ಹಲವಾರು ಇಲಾಖೆಗಳನ್ನು ಸುತ್ತಿ ಪುನಹ ವಿದ್ಯಾಇಲಾಖೆಗೆ ಬಂದವನು. ಕೊಡಗಿನ ಚೀಫ್ ಕಮಿಷನರು ನಮ್ಮ ಸೈನಿಕ ರೀತಿಯಲ್ಲಿ ಹೇಳಿದ ಮಾತುಗಳು ನೇರವಾದುವು. ಯಾರೇ ಆಗಲಿ ಉಪಾಧ್ಯಾಪಕ ವೃತ್ತಿಯನ್ನು ಆರಿಸಿ ಅದರೊಳಗೆ ಸೇರಿದನಂತರ ಅದಕ್ಕೆ ಕಳಂಕಬಾರದಂತೆ ನಡೆಯಬೇಕು. ತಮ್ಮ ಕರ್ತವ್ಯವನ್ನು ಸರ್ವಪಕವಾಗಿ ಸಲ್ಲಿಸಿ ತಮ್ಮ ಬೇಡಿಕೆಗಳನ್ನು ಮುಂದಿಡಬೇಕು. ನವ್ಯ ದೃಷ್ಟಿ ಕೇವಲ ಭೌತಿಕದಾದುದೇ ಆಗಿರಬಾರದು. ಇಂದಿನ ಜಗತ್ತಿನ ವಿಪತ್ಸ್ಥಿತಿಗೆ ಈ ಭೌತಿಕ ದೃಷ್ಟಿಯೇ ಕಾರಣವೆನ್ನಬಹುದು. ಪಾಶ್ಚಿಮಾತ್ಯ ರಾಷ್ಟ್ರಗಳನ್ನು ಸುತ್ತಿ ಪೌರ್ವಾತ್ಯ ದೇಶಗಳ ಪರಿಚಯ ಮಾಡಿಕೊಂಡು ಕೆಲವು ದಿನಗಳ ಹಿಂದೆ ವೈಸ್‌ರಾಯಿಗೆ ಬಂದಿದ್ದ ಪಾಶ್ಚಾತ್ಯವಿದ್ಯಾಧುರೀಣರೊಬ್ಬರು ಸಭೆಯೊಂದರಲ್ಲಿ ಮಾತಾಡುತ್ತಾ ಪೌರ್ವಾತ್ಯ ದೇಶಗಳ ಭಾಷೆಯಲ್ಲಿ Precision ಎಂಬ ಶಬ್ದಕ್ಕೆ ಸಮಾನಾರ್ಥಕವಾದ ಶಬ್ದವೇ ಇಲ್ಲ. ಹಾಗಿರುವಾಗ ಅಮೆರಿಕ ಜಗತ್ತಿನ ಸರ್ವಸ್ವವಾದ ಶಿಕ್ಷಣ, ಸಮಯಪರಿಪಾಲನೆ, ಸಕಾಲದಲ್ಲಿ ಯೋಗ್ಯವಾದುದನ್ನು ಮಾಡುವ ಗುಣವನ್ನು ಪೌರ್ವಾತ್ಯರು ಹೇಗೆ ಕಲಿಯಲು ಸಾಧ್ಯ? ಎಂದರು. ಸಭೆಯು ಅಧ್ಯಕ್ಷತೆ ವಹಿಸಿದ ನಾನು ಮಾತಾಡುತ್ತಾ ಮಹಾ ಪರಿಶ್ರಮದಿಂದ ಪಶ್ಚಿಮದ ದೇಶಗಳ ೩೭ ಭಾಷೆಗಳಲ್ಲಿ ಪೂರ್ಣ ದೇಶಗಳ 'ಧರ್ಮ', ಎಂಬ ಶಬ್ದಕ್ಕೆ ಸಮಾನ ಅರ್ಥಕೊಡುವ ಶಬ್ದವಿಲ್ಲ. ಹಾಗೆನ್ನುವಾಗ ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ಧರ್ಮದ ಪರಿಜ್ಞಾನವಿಲ್ಲವೆನ್ನೋಣವೇ? ಎಂದು ಕೇಳಿದೆ. ಜಗತ್ತಿನಲ್ಲಿ ಎರಡು ಶಕ್ತಿಗಳ ತಿಕ್ಕಾಟವಿದೆಯೆಂದಿದೆ. ಭೌತಿಕವಾನಕ್ಕೆ ಮೂರು ಹೋಗಿ, ವಿಜ್ಞಾನದ ಸಹಾಯದಿಂದ ಮಹಾಸಾಧನೆಗಳನ್ನು ಸಾಧಿಸಿ ಪಾಶ್ಚಿಮಾತ್ಯ ಸಂಸ್ಕೃತಿಯು ಬೆಳೆದು ಇಂದು ಹೊಸ ನಾಗರಿಕತೆಯೆಂದು ಜಗದ ಸರ್ವ ಎಲೆಗೂ ಕೈಚಾಚುತ್ತಿದೆ ಅದರ ಸುಖಗುರಿ ಸಾಧನೆ. ಈ ಸಾಧನೆಯಲ್ಲಿ ಅದು ರಕ್ತದ ಓಕುಳಿಯಾಡಿ, ರಂಜಗಳ ಜೊಂಡಾಡಿ ರುದ್ರ ಮಾರ್ಗದಲ್ಲಿ ಸಾಗಿದೆ. ಅದರ ಜೀವಾಳವೆಂದರೆ ಶಿಸ್ತು, ಸಂಘಟನೆ, ವಕ್ತ್ಯ ಕೆ. ಒಟ್ಟಾರೆ Precision. ಪೌರ್ವಾತ್ಯ ದೇಶಗಳ ಮಾರ್ಗವೇರೆ. ಅದು ಶಕ್ತಿದ, ಶೀಲದ, ನೀತಿಯ ಪಥ. ಅದರ ಗುರಿ ಕೃಷಿಕವಾದ ಸುಖ ಯಾ ಅಧಿಕಾರವಲ್ಲ. ಅದರ ಗುರಿ ಧರ್ಮ. ಆದ್ದರಿಂದ ಪಾಶ್ಚಿಮಾತ್ಯ ನಾಗರೀಕತೆ ಹುಲಿಯಂತಾರೆ ಪೌರ್ವಾತ್ಯ ನೀತಿ ಹಸುವಿನಂತೆ! ಇವೆರಡರಲ್ಲಿ ಯಾವುದು ಬೇಕೆಂದು ಕೇಳಿದರೆ ಜರತಕುಂಡವು ಇಂದೂ ಕೂಡ ಹಸುವನ್ನೇ ಆರಿಸೀತು. ಆದ್ದರಿಂದಲೇ ಭಾರತೀಯರು ಹಸುವನ್ನು ಪೂಜೆ ಮಾಡುತ್ತಾರೆ. ಹಸುವು ಸಾಧು ವ್ಯಾಜಿ. ಸಾಧುಭಾವನೇ ಸಾಧನೆಯ ಮೂಗ. ಈ ಭಾವನೆಯ ಸಕ್ತಿಯ ಅವಶ್ಯಕತೆ ಇಂದಿನ ಜಗತ್ತಿಗೆ ತುಂಬಾ ಇದೆ. ಆ ಗುರಿಯಿಂದ ಕೆಲಸಮಾಡುವದು ಸರ್ವರ ಕರ್ತವ್ಯವಾಗಿದೆ.

ನಂತರ ವಿಸೆಸ್ ಬೇಡಿಯವರು ಆಟೋಟಗಳಲ್ಲಿ ಗೆದ್ದವರಿಗೂ ಕಾಮನ್ಸ್ ಎಂಟ್ರೆನ್ಸ್ ಪರೀಕ್ಷೆಯಲ್ಲಿ ಕೊಡಗಿನಲ್ಲಿ ಪ್ರಥಮ ಬಂದವರಿಗೂ ಬಹುಮಾನ ವಿತರಣೆ ಮಾಡಿದರು.

ಶ್ರೀ. ಬಿ. ಎಸ್. ಕುಶಾಲಪ್ಪನವರು.

ಕೊಡಗು ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ ಬಿ. ಎಸ್. ಕುಶಾಲಪ್ಪನವರು ಮಾತಾಡುತ್ತಾ 'ಮಕ್ಕಳನ್ನು ಪೋಷಿಸಿ ಯೋಗ್ಯರಾಗಿ ಬೆಳೆಸುವ ಜವಾಬ್ದಾರಿ ಪೋಷಕರದು. ಅಧ್ಯಾಪಕರ ಜವಾಬ್ದಾರಿ ಕೇವಲ ಕಡಿತೆ. ಮಗುವು ಚಿಕ್ಕಂದಿನಲ್ಲಿರುವಾಗಲೇ ತನ್ನ ಜೀವನದ ಗುಣಗಳನ್ನು ರಂಗುಹಿಸುವ ಕಾರಣ ಚಿಕ್ಕಂದಿನಲ್ಲಿ ಹಲಿಕೆದೇ ಮುಂದೆ ದೊಡ್ಡವರಾದಾಗ ವಿಕಾಸಗೊಳ್ಳುತ್ತದೆ. ಆದ್ದರಿಂದ ಪಸಕ್ಕಳ ಪ್ರಪ್ರಥಮ ವರ್ಷ ಪೂರ್ವಶಯ ಅತೀ ಪ್ರಾಮುಖ್ಯವಾದುದು. ಆ ಪೋಷಕತೆಯ ಭಾರವು ಪೋಷಕರ ಮೇಲಿರುವ ಕಾರಣ ಅವರು ಎಚ್ಚರಿಕೆಯಿಂದ ವರ್ತಿಸಬೇಕು. ಚಿಕ್ಕ ಮಗುವಿನ ಚಲನೆ ವಲನಗಳನ್ನು, ಸ್ವಭಾವ ಶೀಲಗಳನ್ನು ಗಮನಿಸಿ ಕಲಿಗಳಿಗೆ ಯೋಗ್ಯ ಮಾರ್ಗದರ್ಶನ ಮಾಡಬೇಕು. ಚಿಕ್ಕ ಮಕ್ಕಳು ಅಸಾಧ್ಯ ಅನುಕರಣಶಕ್ತಿಯುಳ್ಳವರು. ಆದ್ದರಿಂದ ಉತ್ತಮ ಆದರ್ಶವನ್ನೇ ಆವರಿಸುವಂತಿರಬೇಕು. ಪೋಷಕರು ತಮ್ಮ ಪ್ರೀತಿಯಿಂದ ಮಕ್ಕಳನ್ನು ಕೆಡಿಸುತ್ತಾರೆ. ತಮ್ಮ ಗೌರವ ಹೆಗ್ಗಳಿಕೆಯಿಂದ ಮಕ್ಕಳನ್ನು ಕೆಡಿಸುತ್ತಾರೆ. ಅನುಚಿತ ಕರಿಣ ಧೋರಣೆಯಿಂದಲೂ ಮಕ್ಕಳನ್ನು ಹಾಳು ಮಾಡುತ್ತಾರೆ. ವೇರೆಯರಿಯುದ ಪ್ರೀತಿಯು ಹೇಗೆ ಜಾನಿಕಾರಕವೋ ಹಾಗೆಯೇ ಹಿಡಿತವಿಲ್ಲದ ಬಿಟ್ಟು ಹಾನಿಕರ. ಕೆಲವು ತಂದೆ ತಾಯಿಗಳು ತಮ್ಮ ಮಕ್ಕಳ ಸ್ಥೈರ್ಯ ಸಮದೃಷ್ಟಿಯಿಂದ ನೋಡುತ್ತಾರೆ. ಕೆಲವರನ್ನು ತುಂಬಾ ಪ್ರೀತಿಯಿಂದಲೂ ಕೆಲವರನ್ನು ಕಠೆಗಣಿಸಿಯೂ ನೋಡುತ್ತಾರೆ. ಈ ರೀತಿಯ ಕಾರಣಗಳಿಂದ ಮಕ್ಕಳಲ್ಲಿ ಅಸಾಧ್ಯ ಬದಲಾವಣೆ ಮೂಡಿ ಮುಂದೆ ಸಮಾಜಕ್ಕೆ ಹಾನಿಕಾರಕ ವ್ಯಕ್ತಿಗಳನ್ನು ಕೊಡುತ್ತಾರೆ. ಬಿಟ್ಟುನಿಂದ ಮಕ್ಕಳನ್ನು ಹೊಡೆಯುವದೂ ಕೆಲವೊಮ್ಮೆ ವರ್ತಿಸುವದು ಮಕ್ಕಳಲ್ಲಿ ಗೂತಾಪಿತರ ಬಗ್ಗೆ ಜಿಗುಪ್ಸೆ ಹುಟ್ಟಿಸಿ ಕಡೆಗೆ ಸಮಾಜಕ್ಕೆ ಅಹಿತ ವ್ಯಕ್ತಿಗಳನ್ನು ತಯಾರಿಸಲು ಸಹಾಯಕವಾಗುತ್ತದೆ. ಮಕ್ಕಳು ತುಂಬಾ ಕಲಿಯಬೇಕು, ಯೋಗ್ಯರಾಗಬೇಕೆಂಬ ಹುಚ್ಚಿನಲ್ಲಿ ಇಲ್ಲದ ಬೋಧನೆ, ಉಪದೇಶಗಳಿಂದ ಮಕ್ಕಳು ಪಲಾಯನಗೈಯುತ್ತಾರೆ. ಸಮ್ಯ ದೃಷ್ಟಿಯಿಂದ ನಾವು ನೋಡುವೆವೇ ವಿನಾ ಮಕ್ಕಳ ದೃಷ್ಟಿಯಿಂದ ನಾವು ವರ್ತಿಸುವದಿಲ್ಲ. ಸ್ವಾಭಾವಿಕವಾಗಿ ಮಕ್ಕಳಲ್ಲಿ ಪ್ರಶ್ನೆ ಕೇಳುವ ಪವೃತ್ತಿಯ ಹೆಚ್ಚು. ಇಂಥಾ ಪ್ರಶ್ನೆಗಳಿಗೆ ಮಕ್ಕಳಿಗೆ ಅರ್ಥವಾಗುವ ರೀತಿ ಉತ್ತರ ಹೇಳಬೇಕು. ಅನೇಕ ವೇಳೆ ಲೈಂಗಿಕ ವಿಚಾರಗಳಲ್ಲೂ ಅವು ಪ್ರಶ್ನೆ ಕೇಳುತ್ತವೆ ಆ ಕಾಲಕ್ಕೆ ಯಾವುದೇ ಸಂಕೋಚಪಡದೆ ಯುಕ್ತ ಉತ್ತರವಿಯಬೇಕು. ಲೈಂಗಿಕ ವಿಚಾರದಲ್ಲಿ ಅನಾವಶ್ಯಕ ಮುಚ್ಚುಮರೆ ತೋರಿ ಮಕ್ಕಳ ಬಾಲ್ಯವನ್ನು ಹಾಳುಗೆಡಿಸುವ ಸ್ವಭಾವ ನಮ್ಮಲ್ಲಿ ಹೆಚ್ಚು. ಮಕ್ಕಳನ್ನು ಹದೆದು ಮಕ್ಕಳನ್ನು ಸರಿಯಾಗಿ ಪೋಷಿಸಿ ಸಮಾಜಕ್ಕೆ ಹಿತವಾಗುವ ವ್ಯಕ್ತಿಗಳನ್ನು ತಯಾರಿಸಲಾರದೆ ತಂದೆ ತಾಯಿಗಳಿಗೆ ಗುರುತರವಾದ ಜವಾಬ್ದಾರಿಯಿದೆ. ಎಲ್ಲಾ ವಿಚಾರಗಳಲ್ಲೂ ನಾವು ಪರೀಕ್ಷೆ ಯಾ ನಿಯಂತ್ರಣಕ್ಕೆ ಒಳಗಾಗಿರುವೆವೆ. ಮಮತೆಯು ವಿಚಾರದಲ್ಲೂ ಇದು ಅವಿಚಾರ್ಯ ವೇಕಾಗಿದೆ. ಕೆಲವೊಂದು ಸೂಕ್ಷ್ಮ ಪರೀಕ್ಷೆಯಲ್ಲಿ ತೇರ್ಗಡೆಯಾದವರೇ ಮದಮೆಯೊಗಬೇಕು. ಹಾಗಾದರೆ ಉತ್ತಮ ಸಮಾಜ ಯಾ ಜನಾಂಗ ರಚನೆಗೆ ಅಸ್ಪದವಾಗುವದು.

ಶ್ರೀ. ಸಕ್ಕತ್ತೋಧಾಚಾರ್ಯರ್ಯರು.

'ನೈಸರ್ಗಿಕ ಅಧ್ಯಾಪಕ ತರಬೇತು ಶಾಲೆಯ ಶ್ರೀ. ಸಕ್ಕತ್ತೋಧಾಚಾರ್ಯರ್ಯರು ಮಾತಾಡುತ್ತಾ, 'ನಾನೂ ಅಧ್ಯಾಪಕನೇ ಆಗಿರುವ ಕಾರಣ ಅಧ್ಯಾಪಕರ ಸ್ಥಿತಿಯು ಪರಿಚಯ ಜೆನ್ನಾಗಿದೆ ಎಲ್ಲಾ ಕಡೆಯೂ ಉಪಾಧ್ಯಾಪಕರಿಗೆ ಒಡೆತ ಒಡೆತಗಳು ಕಾಡಿದೆ. ವಿದ್ಯಾರ್ಥಿಗಳು ಶಿಸ್ತಿಯಾಗಿರದಿದ್ದರೆ ಅಧ್ಯಾಪಕರೇ ಕಾರಣ. ಅವರಿಗೆ ಕಾಯಿಲೆಯಾದರೆ ಅಧ್ಯಾಪಕರೇ ಕಾರಣ. ಅವರು ಪರೀಕ್ಷೆಯಲ್ಲಿ ನೋತರೆ

ರಘುಲಾಲ್ & ಕಂಪೆನಿ,

ಔಷಧ ವ್ಯಾಪಾರಿಗಳು, ಮೈಸೂರು.

ಕರ್ನಾಟಕದಲ್ಲೆಲ್ಲಾ ಚೆನ್ನಾಗಿ ಸಂಗ್ರಹಿತವಾದ ಮತ್ತು ವಿಶ್ವಾಸಪೂರಿತವಾದ ಔಷಧಿ ಅಂಗಡಿ

Also at:

೭೦ ಆರ್ಕಾಟ್ ಶ್ರೀನಿವಾಸಾಚಾರ್ ಬೀದಿ,

26-14 ಬೆಂಗಳೂರು ೨.

RAGHULAL & CO., CHEMISTS, MYSORE.

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ಅಧಿಕೃತ ಶೇರು ಭಂಡವಾಳ	ರೂ.	10,00,000.
ವಸೂಲಾಪ್ತ ಶೇರು ಮೊಬಲಗು	ರೂ.	1,79,000.
ಸ್ಟೇಮಸಿಧಿ	ರೂ.	55,000.
ಇತರ ನಿಧಿಗಳು	ರೂ.	28,000.

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯೂ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರೆಸಿಟಿ ಮತ್ತು ವಾರ್ಡನ್ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಸಾ. ಕಾರ್ಯದರ್ಶಿ,

ಕೆ. ಪಿ. ಅಪ್ಪಯ್ಯ, M. L. C. ಪ್ರಸಿಡೆಂಟ್ ಮತ್ತು ಖಜಾಂಚಿ.

ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ನಮ್ಮಲ್ಲಿ ಕೋವಿಗಳು, ತೋಟಿಗಳು ಮತ್ತು ಎಲ್ಲಾ ಶರಹದ ಹೃಪಸಾಯದ ಹತ್ಯಾರುಗಳು ದೊರೆಯುತ್ತವೆ.

1. 32 ಪಿಸ್ತೂಲುಗಳು (Pistols) ಕ್ರಯ ರೂ. 162 ರಿಂದ 245ರ ವರೆಗೆ.
2. 12ನೇ ನಂಬರಿನ ಒಂಟಿ ಹೊಳವಿನ ಕೋವಿ ಕ್ರಯ ರೂ. 320-0-0
3. 12ನೇ ನಂಬರಿನ ಜೋಡು ಹೊಳವಿನ ಕೋವಿ (Webley & Scott)
4. 12ನೇ ನಂಬರಿನ ಜೋಡು ಹೊಳವಿನ ಕೋವಿ (Spanish make)
5. ೬ ಗಜದ (Hand loom) ಕೈಮಗ್ಗದ ಸೀರೆಗಳು ಕ್ರಯ ರೂ. 4-10-0.
6. .32 ಪಿಸ್ತೂಲು ಮತ್ತು ರಿವಾಲ್ವರುಗಳ ತೋಟಿಗಳೂ ಸಹ ದೊರೆಯುತ್ತವೆ.
7. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪೈಮಾಡುವ ಪಂಪುಗಳು (Spraing Pumps)
8. ½" ಮತ್ತು ¾" ಕಬ್ಬಿಣದ ಸಲಾಕೆಗಳು.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟಿಗಳಿಗೂ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಪಡೆದವರಿಗೆ ಮಾತ್ರ ದೊರೆಯುವದು)

ಎಂ. ಎಸ್. ಸೋಮಯ್ಯ, ಗೌರವ ಕಾರ್ಯದರ್ಶಿ.

52-14

Edited, Printed and Published by P. I. Belliappa at 'Kodagu' Press, Mercara, for 'Kodagu' Ltd.

ಅಧ್ಯಾಪಕರೇ ಕಾರಣ. ಪಾಸಾದರೂ ವಿದ್ಯಾರ್ಥಿ ಬುದ್ಧಿವಂತನಾಗಿದ್ದನೆಂದು ಹೇಳುವರೇ ವಿನಾ ಅಧ್ಯಾಪಕರಿಗೆ ಯಾರೂ ಗೌರವ ಕೊಡರು. ಮಕ್ಕಳ ಹಿತಬಂತ ನೆಯಿಟ್ಟಿ ಕೇವಲ ಅಧ್ಯೆಪಕರೇ ಪಿತಕ್ಕರ ಲ್ಲ. ನನ್ನ ಮೊದಲು ಮಾತಾಡಿದವರು ಹೇಳಿದಂತೆ ಪೋಷಕರೂ ಜವಾಬ್ದಾರರು. ಮಕ್ಕಳ ಪ್ರಥಮ ಏಳು ವರ್ಷಗಳ ಜೀವನವು ಬಹು ಪ್ರಾಮುಖ್ಯವಾದುದು. ಈ ಏಳು ವರ್ಷಗಳಲ್ಲಿ ಮಕ್ಕಳನ್ನು ಸರಿಯಾಗಿ ಸಾಕಿದರೆ ಮುಂದೆ ಅವು ಹಾಳಾಗವು. ಈ ಏಳುವರ್ಷಗಳಲ್ಲಿ ಮಕ್ಕಳ ಪೋಷಕರು ಅವರನ್ನು ಹಾಳುಗೆಡಹಿ ಅವರನ್ನು ನಂತರ ಸರಿಪಡಿಸಲು ಅಧ್ಯಾಪಕರ ವಶಕ್ಕೊಪ್ಪಿಸುವರು. ಇದರಿಂದ ಹೆಚ್ಚು ಪ್ರಯೋಜನವಿಲ್ಲ. ಆದ್ದರಿಂದಲೇ ಫ್ರೌಢ ಶಾಲೆಗಳಿಗಿಂತಾ ಶಿಕ್ಷಣವಿಹಾರಗಳು ಭಾವೀ ಜನಾಂಗದ ಹಾಗೂ ಸರಕಾರದ ದೃಷ್ಟಿಯಿಂದ ಪ್ರಾಮುಖ್ಯವಾದವುಗಳು. ಹಾಗೆಂದಾಗ ಅಧ್ಯಾಪಕರಿಗೆ ಜವಾಬ್ದಾರಿ ಇಲ್ಲವೆಂದಲ್ಲ. ಶಾಲೆಯಲ್ಲಿ ಮಕ್ಕಳಿಗೆ ಓದುಬರಹ ಕಲಿಸುವದೇ ಅಧ್ಯಾಪಕರ ಚರಮ ಗುರಿಯಲ್ಲ. ಪೋಷಕರೂ ಕೂಡ ಮಗುವು ಬರೆಯಲೂ ಓದಲು ಎತ್ತ ಕಲಿತಿದೆಯೆಂಬ ಅಳತೆಗೋಲಿನಿಂದಲೇ ವಿದ್ಯೆಯನ್ನು ಅಳೆಯಬಪದಲ್ಲ ಶಾಲೆಗೆ ಬರುವ ಮಗುವು ಶುಚಿಯಾಗಿರುವಂತೆ, ನೀತಿ ನಡತೆಯಲ್ಲಿ ಆದರ್ಶವಾಗಿರುವಂತೆ ಕಲಿತಿದ್ದರೆ ಮಗುವು ಹೆಚ್ಚು ಅಪ್ಪರ ಜ್ಞಾನವಿಲ್ಲದಿದ್ದರೂ ಯೋಗ್ಯ ಮಾರ್ಗದಲ್ಲಿ ಸಾಗುತ್ತಿದೆಯೆನ್ನಬಹುದು. ಶಾಲೆಗಳೆಂದಾಗ ಮಕ್ಕಳನ್ನು ಬಾಯಿ ಬಿಡದಂತೆ ನಿಶ್ಶಬ್ದರಾಗಿ ಕುಳ್ಳರಿಸಿ, ಕೋಲಿನ ಭಯದಿಂದ ನಡೆಗುಂತೆ ಮಾಡುವದಲ್ಲ. ಶಾಲೆಯು ಆವರಣದಲ್ಲಿ ಆಟ ಓಟ, ಸಂಗೀತ ಕಲೆಗಳಲ್ಲಿ ನಿರತರಾಗಿ ತನ್ಮಯರಾಗಿರುವ ವಿದ್ಯಾರ್ಥಿಗಳನ್ನು ನೋಡಿ ಸಂದರ್ಶಕರು ಬೇರೆಯವುದೇ ಪರಿಶೀಲನೆ ಮಾಡದೆ ಶಾಲೆ ಚೆನ್ನಾಗಿ ನಡೆಯುತ್ತಿದೆಯೆಂಬ ತೃಪ್ತಿಯಿಂದ ಹೋಗಬಹುದು. ಮಕ್ಕಳನ್ನು ಕೇವಲ ಗೊಂಬೆಗಳಂತೆ ಕುಳ್ಳರಿಸಿ ಕಣ್ಣು ಮಿಟುಕಿಸುವ ಪರಿಸ್ಥಿತಿಯಲ್ಲಿಟ್ಟು ನಿಶಬ್ದ ವಾತಾವರಣ ವಿರ್ಪಡಿಸಿದ ಶಾಲೆಯು ಸ್ಮಶಾನದಂತೆ! ಮಕ್ಕಳ ಚೇತನ ಉಕ್ಕಬೇಕು. ಉಕ್ಕಿದ ಚೇತನಕ್ಕೆ ಸೂಕ್ತ ಪಥದರ್ಶನ ಮಾಡಿ ಮಕ್ಕಳು ನಕ್ಕುನಲಿದು ಅರಿತು ಕಲಿವಂತೆ ವರ್ಪಡಿಸಬೇಕು.

ಡಾಕ್ಟರ್ ಹಾಲ್ ಇವರು

ಕಳೆದ ೫೫ ವರ್ಷಗಳಿಂದ ಅಮೇರಿಕಾ, ಜರ್ಮನಿ, ಡೆನ್ಮಾರ್ಕ್‌ಗಳಲ್ಲಿ ಇದ್ದು ಈಗ ಮದ್ರಾಸಿನ ಕ್ರಿಶ್ಚಿಯನ್ ಕಾಲೇಜಿನಲ್ಲಿ ಲೆಕ್ಚರರಾಗಿರುವ ಡಾ. ಸಾಲ್ ಇವರನ್ನು ಕೆಲವು ಮಾತಾಡಬೇಕೆಂದು ಅಧ್ಯಕ್ಷರು ಕೇಳಿಕೊಂಡ ಮೇರೆ ಅವರು ಹದಿನೈದು ನಿಮಿಷಗಳ ವರೆಗೆ ಮಾತಾಡುತ್ತಾ, "ಕೊಡಗಿಗೆ ಬರುತ್ತಿದ್ದಾಗ್ಗೆ ಕೊಡಗಿನ ಪ್ರಕೃತಿ ಸೌಂದರ್ಯವನ್ನು ನೋಡಿ ಕೊಡಗಿನ ಜನರು ಹೇಗಿರಬಹುದೆಂದು ತವಕಗೊಂಡಿದ್ದೆ. ಕೊಡಗಿನಲ್ಲಿ ನಾನು ಬಂದಿಳಿಯಕೊಂಡಿರುವ ಗೃಹಸ್ಥರ ಆದರ ದಯ ಅತಿಥಿ ಸತ್ಕಾರವು ನನಗೆ ಇಲ್ಲಿಯ ಜನರ ಹೃದಯ ಪರಿಚಯ ಮಾಡಿಕೊಟ್ಟಿದೆ. ನಿಮ್ಮಲ್ಲಿ ವಿಶಿಷ್ಟವಾದ ಸಂಸ್ಕೃತಿಯಿದೆ. ಅದನ್ನು ಹಾಳುಗೆಡಹದಂತೆ ರಕ್ಷಿಸಿಕೊಳ್ಳಬೇಕು. ನಿಮ್ಮ ದೇಶವು ಆಧುನಿಕ ನಾಗರಿಕತೆಗೆ ಇನ್ನೂ ಬಲಿಯಾಗಿಲ್ಲ. ಇಲ್ಲಿಯ ಸುಂದ ಸೌಂದರ್ಯವೂ, ಶಾಂತ ವಾತಾವರಣವೂ ಇದನ್ನು ಒಂದು ಆಶ್ರಮವಂತೆ ಮಾಡಿದೆ. ಇಂಥಾ ಪ್ರದೇಶಗಳಲ್ಲಿರುವ ಸಂಸ್ಕೃತಿಯನ್ನು ಬೆಳೆಸಬೇಕು. ನಿಮ್ಮ ಹೆಂಗಸರ ಉಡುಪು ಹಳೇ ರೀತಿಯಾದರೂ ತುಂಬಾ ಅಕರ್ಶಣೆಯವಾಗಿದೆ. ಇದನ್ನೆಲ್ಲಾ ಉಳಿಸಿಕೊಳ್ಳಬೇಕು ನಿಮ್ಮಲ್ಲಿ ಕಾಲೇಜು ಯೂ ಫ್ರೌಢಶಿಕ್ಷಣದ ಹುಚ್ಚು ಹೆಚ್ಚಿದೆ ಇಲ್ಲಿಯ ಹೈಸ್ಕೂಲುಗಳನ್ನು ಡೆನ್ಮಾರ್ಕಿನ ಸ್ಪೋರ್ ಹೈಸ್ಕೂಲುಗಳಂತೆ ಮಾರ್ಪಡಿಸಿ ಆ ಮೂಲಕ ಸಾಮಾನ್ಯ ಜನತೆಯನ್ನು ಆಕರ್ಶಿಸಿ ಅವರ ಸೇವೆ ಮಾಡುತ್ತಾ ಈ ದೇಶವನ್ನು ಬಹು ಎತ್ತರಕ್ಕೆ ಮುಂದೆ ತರಬಹುದು. ಡೆನ್ಮಾರ್ಕಿನಂತೆಯೇ ಕೊಡಗು ಸರ್ವ ಸಂಪನ್ನವಾಗಬಹುದು." ಎಂದರು.

ಅಧ್ಯಕ್ಷರ ಸಮಾರೋಪ ಭಾಷಣ.

ಅಧ್ಯಕ್ಷರು ಜೇಫ್ ಕವಿಯಪ್ಪನವರ ಹಾಗೂ ನಂತರದ ಭಾಷಣಕಾರರ ಮಾತುಗಳ ಮೇಲೆ ತಮ್ಮ ಧನ್ಯವಾದವನ್ನು ವ್ಯಕ್ತ ಮಾಡುತ್ತಾ, ಅವರೆಲ್ಲರನ್ನು ಸಭೆಯ ಪರವಾಗಿ ವಂದಿಸಿದರು. ಮುಂದರಿಸುತ್ತಾ "ನಾನು ಮಂಗಳೂರಿನಲ್ಲಿ ಹುಟ್ಟಿದವನು. ಮೈಸೂರಿನಲ್ಲಿರುವವನು. ಈ ರೀತಿ ಕೊಡಗನ್ನು ಸುತ್ತುವರಿದಿರುವೆನು. ಕೊಡಗು ಚಿಕ್ಕ ಪ್ರದೇಶವಾದರೂ ತನ್ನ ವ್ಯಕ್ತಿತ್ವವನ್ನು ಉಳಿಸಿಕೊಂಡಿದೆ ಜನರಲ್‌ಗಳಿಗಾಗಲೆ. ಕರ್ನಲುಗಳಿಗೂ ಹೆಸರಾದ ದೇಶವಾದರೂ ಈ ದೇಶದ ನಿವೆಲ್ಲರ ಆದರ್ಶ, ಸತ್ಕಾರಗಳು, ಕಾರ್ಯಸಾಹಸಗಳೊಂದಿಗೆ ನಿಮ್ಮಲ್ಲಿ ನಯವಿನಯಗಳೂ ಸಮನೇಶವಾಗಿರುವದನ್ನು ಎತ್ತಿತೋರಿಸುತ್ತವೆ. ಇಂದಿನ ಪ್ರಪಂಚದಲ್ಲಿ ಸರ್ವ ಮಾರ್ಗಗಳೂ ಒಂದೇ ಗುರಿಗೆ ಸಾಗಿ ಸೂಕ್ಷ್ಮತ್ವದಲ್ಲಿಯೇ ಸ್ಥೂಲದ ಘನತೆ ಇದೆ ಎಂಬುದನ್ನು ಸಾರುತ್ತಿವೆ. ವಿಜ್ಞಾನವು ಶೋಧನೆ ಮಾಡುತ್ತಾ ಮುನ್ನಡೆದು ಅತೀ ಚಿಕ್ಕನಾದ ಪರಮಾಣುಗಳೆಂದ ಮಹಾಕಾರ್ಯಗಳಾಗುತ್ತವೆ. ಅವೇ ಸತತ ಜಲನದಿಂದ ಸರ್ವದಕ್ಕೂ ಜಾಲನೆಯನ್ನು ಕೊಡುತ್ತವೆ ಎಂದು ಕಂಡು ಹಿಡಿದಿದೆ. ಅದೇ ರೀತಿ ಇಂದು ನಮ್ಮ ಆಹಾರ ಪದಾರ್ಥಗಳಲ್ಲೂ ಶೋಧನೆ ನಡೆದು ಅತೀ ಸೂಕ್ಷ್ಮವಾದ (ವಿಟಮಿನ್) ಜೀವಶತ್ವಗಳ ಅಳತೆಯಿಂದ ಆಹಾರದ ಪೌಷ್ಟಿಕ ಶಕ್ತಿಯನ್ನು ಅಳೆಯಲಾಗುತ್ತಿದೆ. ಅದೇ ರೀತಿ ಈ ಕೊಡಗು ಪುದೇಶವು ಚಿಕ್ಕ ಅಣುವಿನಂತಾದರೂ ಚೇತನ ಪೂರಿತವಾದುದು. ಇಂದಿನ ಪ್ರಪಂಚದಲ್ಲಿ ನಿಮ್ಮ ಚೇತನವನ್ನು ಸರ್ವ ದಿಕ್ಕಿಗೆ ಹಂಚು ಬಿಟ್ಟು ಸುತ್ತು ಇರುವವರ ಮೇಲೆ ನಿಮ್ಮ ಪ್ರಭಾವಶೀಲ ಹಿಂದೂದೇಶದ ಕಲ್ಯಾಣಕ್ಕೆ ಕಾರಣರಾಗಬೇಕು,' ಎಂದರು.

ನಂತರ ಅಧ್ಯಕ್ಷರಿಗೂ ನೆರೆದಿದ್ದ ಮಹಿಳೆಯರಿಗೂ ಸಂಘದ ಪೈಸಿಮೆಂಟರಾದ ಶ್ರೀ ಪಿ. ಎಸ್. ದೇಶ್ಯುವರು ವಂದನೆಗಳನ್ನು ಅರ್ಪಿಸಿದರು ಸಮ್ಮೇಳನವು ಜಯ ಪ್ರದವಾಗಿ ರಾಷ್ಟ್ರಗೀತೆಯೊಡನೆ ಅಂತ್ಯಗೊಂಡಿತು.